ಗಳನ್ನು ಪರೀಕ್ಷೆ ಮಾಡದೆ ಕಟ್ಟಲು ಬಿಟ್ಟರೆ ನಾಳೆ ಬೇರೆ ಕಡೆಯೂ ಇಂತಹ ಅನಾಹುತಗಳಾದರೆ ಸರ್ಕಾರಕ್ಕೆ ಅದರಿಂದ ಕೆಟ್ಟ ಹೆಸರು ಬರುವುದು ಹೋಗಲಿ, ಅದರಿಂದ ಎಷ್ಟು ಜನರಿಗೆ ಪ್ರಾಣ ಹಾನಿಯಾಗಬಹುದು ? ಆದ್ದರಿಂದ ಇದರಲ್ಲಿ ರಾಜಕೀಯದ ಪ್ರಶ್ನೆ ಏನೂ ಇಲ್ಲ. ಈಗ ಈ ಕಟ್ಟಡದೊಳಗಡೆ ಎಷ್ಟು ಜನರಿದ್ದಾರೆಂಬುದನ್ನು ಖಚಿತವಾಗಿ ಹೇಳುವದಕ್ಕಾಗುವುದಿಲ್ಲ. ಏಕೆಂದರೆ, ಇದನ್ನು ನೋಡಿದವರು ಯಾರೂ ಇಲ್ಲ ಕಾಣೆಯಾದವರ ಬಗ್ಗೆ ಕೆಲವರು ಈಗ ಉಪ್ಪಾರಪೇಟೆ ಪೋಲೀಸ್ ಸ್ಟೇಷನ್‌ನಲ್ಲಿ ಅವರ ಹೆಸರುಗಳನ್ನು ರಿಜಿಸ್ಟರ್ ಮಾಡಿಸಿದ್ದಾರೆ. ಇದರ ಆಧಾರದ ಮೇಲೆ ನಾವು ಹೇಳಬಹುದೇ ಹೊರತು ಖಚಿತವಾಗಿ ನೋಡಿದವರು ಯಾರೂ ಇಲ್ಲ. ಅಲ್ಲಿ ಕೆಲಸ ನಿಧಾನವಾಗಿ ನಡೆಯುತ್ತಿದೆ ಎಂಬ ಟೀಕೆ ಜನರಿಂದ ಬಂದಿದೆ ಎಂಬುದು ನನಗೆ ಗೊತ್ತು. ಆದರೆ ಅಲ್ಲಿರುವಂತಹ ಒಂದು ಕ್ಲಿಷ್ಟತೆಯನ್ನು ಗಮನಿಸಿದಾಗ ಈಗ ಆಗಿರುವಂತಹ ಕೆಲಸ ಅಸಮಾಧಾನಕರವಾಗಿಲ್ಲ.

FINANCIAL BUSINESS

Discussion and voting on Demands for Grants 1983-84

ಅಭಿಯಾಚನೆ ಕ್ರಮಾಂಕ ೨೩—ವಾಹನ ತೆರಿಗೆ.

೧. ಶ್ರೀರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೪ರ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಾಹನ ತೆರಿಗೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨,೭೫,೯೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

೨. ಅಭಿಯಾಚನೆ ಕ್ರಮಾಂಕ ೨೪-ಪೋಲೀಸ್ ಮತ್ತು ಅಗ್ನಿಶಾಮಕ ಸೇವೆ.—

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೪ರ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪೋಲೀಸ್ ಮತ್ತು ಅಗ್ನಿಶಾಮಕ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೫೯,೭೫,೫೫ ೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

೩. ಅಭಿಯಾಚನೆ ಕ್ರಮಾಂಕ ೨೫—ಜೈಲುಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೪ರ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜೈಲುಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨,೮೩,೮೭,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

೪. ಅಭಿಯಾಚನೆ ಕ್ರಮಾಂಕ ೧೪—ವರಮಾನ ತೆರಿಗೆ, ವೃತ್ತಿಗಳು ಮಾರಾಟ ಮತ್ತು ಇತರ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೪ರ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವರಮಾನತೆರಿಗೆ ವೃತ್ತಿಗಳು ಮಾರಾಟ ಮತ್ತು ಇತರೆ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೭,೭೧,೪೪,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

೫. ಅಭಿಯಾಚನೆ ಕ್ರಮಾಂಕ-೧೫ ಖಜಾನೆ ಮತ್ತು ಲೇಖಾ ಇಲಾಖೆಗಳ ಆಡಳಿತ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೪ರ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಖಜಾನೆ ಮತ್ತು ಲೇಖಾ ಇಲಾಖೆಗಳ ಆಡಳಿತಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚ

ವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೪,೧೯,೯೫,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದರ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ,

೬. ಅಭಿಯಾಚನೆ ಕ್ರಮಾಂಕ ೧೬—ವಿಶ್ರಾಂತಿ ವೇತನ ಮತ್ತು ನಿವೃತ್ತಿ ಸೌಲಭ್ಯಗಳು ;

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೪ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂತಹ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೭೯,೧೩,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

೭. ಅಭಿಯಾಚನೆ ಕ್ರಮಾಂಕ ೧೭—ಸರಕಾರಿ ನೌಕರರಿಗೆ ಸಾಲಗಳು ಮತ್ತು ವಿವಿಧ ಸಾಲಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೪ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸರ್ಕಾರಿ ನೌಕರರಿಗೆ ಸಾಲಗಳು ಮತ್ತು ವಿವಿಧ ಸಾಲಗಳಿಗೆ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ಬಂಡವಾಳ ಖಾತೆಯಲ್ಲಿ ೩೪,೫೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

೮. ಅಭಿಯಾಚನೆ ಕ್ರಮಾಂಕ ೧೮—ಸಮಾಜ ಸುರಕ್ಷೆ ಮೇರೆಗೆ ವಿಮೆ ಮತ್ತು ವಿಶ್ರಾಂತಿ

ಶ್ರೀ/ಶ್ರೀಮತಿಯವರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೪ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಮಾಜ ಸುರಕ್ಷೆ ಮೇರೆಗೆ ವಿಮೆ ಮತ್ತು ವಿಶ್ರಾಂತಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೬,೨೧,೧೧,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ

೯. ಅಭಿಯಾಚನೆ ಕ್ರಮಾಂಕ ೪೨—ಪ್ರದೇಶಾಭಿವೃದ್ಧಿ ಮತ್ತು ಜಿಲ್ಲಾ ಮಟ್ಟದ - ಉಪ ಯೋಜನೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೪ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪ್ರದೇಶಾಭಿವೃದ್ಧಿ ಮತ್ತು ಜಿಲ್ಲಾ ಮಟ್ಟದ ಉಪ ಯೋಜನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೧,೬೦,೯೮,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೬೭,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

೧೦. ಅಭಿಯಾಚನೆ ಕ್ರಮಾಂಕ ೪,ಅ—ಮೀನುಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೪ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮೀನುಗಾರಿಕೆಗೆ ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩,೮೧,೪೬,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೬೫,೭೯,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

೧೧. ಅಭಿಯಾಚನೆ ಕ್ರಮಾಂಕ ೧೯—ವಿವಿಧ ಸಾಮಾನ್ಯ ಸೇವೆಗಳು

ರಾಜಪಾಲರ ಶಿಫಾರಸ್ಸಿನ ಮೇರೆಗೆ ೩೧. ೩-೧೯೮೪ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿವಿಧ ಸಾಮಾನ್ಯ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ ವನ್ನು ವಹಿಸಲು ಸರ್ಕಾರಕ್ಕೆ

ರಾಜಸ್ವ ಖಾತೆಯಲ್ಲಿ ೬,೭೨,೧೭,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨,೫೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

೧೨. ಅಭಿಯಾಚನೆ ಕ್ರಮಾಂಕ ೩೭—ಚುನಾವಣೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೪ರ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಚುನಾವಣೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೮೫,೦೦,೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

೧೩. ಅಭಿಯಾಚನೆ ಕ್ರಮಾಂಕ ೩೮—ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೪ರ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೭೬,೪೫,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

೧೪. ಅಭಿಯಾಚನೆ ಕ್ರಮಾಂಕ ೩೯—ಸಚಿವಾಲಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೪ರ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಚಿವಾಲಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೬,೬೭,೦೭,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

೧೫. ಅಭಿಯಾಚನೆ ಕ್ರಮಾಂಕ ೪೦—ಜಿಲ್ಲಾಡಳಿತ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೪ರ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜಿಲ್ಲಾಡಳಿತಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ರಾಜಸ್ವ ಖಾತೆಯಲ್ಲಿ ೧೦,೮೮,೭೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

೧೬, ಅಭಿಯಾಚನೆ ಕ್ರಮಾಂಕ ೪೧—ಮುಖ್ಯಮಂತ್ರಿಯವರ ವಿವಿಧ ಅಭಿಯಾಚನೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೪ರ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮುಖ್ಯಮಂತ್ರಿಯವರ ವಿವಿಧ ಅಭಿಯಾಚನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೬,೩೨,೮೨,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨,೦೦,೩೫,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

The question was p,oposed

MR. SPEAKER.—All the demands are before the House. Now the discussion to begin. Hon. Leader of Opposition Sri M. Veerappa Moily to intitiate,

† ಶ್ರೀ ಎಂ. ವೀರಪ್ಪಮೊಯ್ಲಿ (ಕಾರ್ಕಳ).—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರುವಂತಹ ಸುಮಾರು ೧೬ ಬಾಬುಗಳಲ್ಲಿ ಅಡಗಿರುವಂತಹ ಬೇಡಿಕೆಗಳನ್ನು ನಾನು ವಿಶ್ಲೇಷಣೆ ಮಾಡುವುದಕ್ಕೆ ಮೊದಲು ಈ ಎಲ್ಲಾ ಬೇಡಿಕೆಗಳನ್ನು ನಾನು ವಿನಯಪೂರ್ವಕವಾಗಿ ವಿರೋಧ ಮಾಡುತ್ತೇನೆ. ಈ ಸರ್ಕಾರದ ಎಲ್ಲಾ ಕಾರ್ಯಕ್ರಮಗಳ ಒಂದು ಅನುಷ್ಠಾನವನ್ನು ಕಂಡಾಗ ನಮಗೆ ಬಹಳ ಮರುಕವಾಗುತ್ತಿದೆ. ಸನ್ಮಾನ್ಯ ಮುಖ್ಯಮಂತ್ರಿಯವರ ಮೇಲೆ ಬಿದ್ದಂಥ ಹೊರೆಯನ್ನು ಕಂಡ ಮೇಲೆ ಮುಖ್ಯಮಂತ್ರಿಯವರ ಮೇಲೂ ಕೂಡ ನನಗೆ ಬಹಳ ಮರುಕವಾಗುತ್ತಿದೆ. ಇಷ್ಟೊಂದು ದೊಡ್ಡ ಹೊರೆಯನ್ನು ಮುಖ್ಯಮಂತ್ರಿಯವರು ಹೊರುತ್ತಿರುವುದರ ಜೊತೆಗೆ ಆರೋಗ್ಯ ಇಲಾಖೆ ಕೂಡ ಇವರ ಹೆಸರಿನಲ್ಲಿಯೇ ಇದೆ. ಇವರಿಗೆ ಸಹಾಯ ಮಾಡಲು ಒಬ್ಬರು ರಾಜ್ಯ ಮಂತ್ರಿಗಳಿದ್ದಾರೆ. ಇದನ್ನೂ ಸೇರಿಸಿಕೊಂಡರೆ ಸುಮಾರು ೧೭ ಪ್ರಮುಖ ಇಲಾಖೆಗಳ ಹೊರೆಯನ್ನು ಮುಖ್ಯಮಂತ್ರಿಗಳು ಹೊರುತ್ತಿದ್ದಾರೆ. ಈ ಪ್ರಮುಖ ಇಲಾಖೆಗಳ ಪೈಕಿ ಗೃಹ ಇಲಾಖೆ, ಅರ್ಥಶಾಖೆ, ಆರೋಗ್ಯ ಇಲಾಖೆ..........

ಶ್ರೀ ರಾಮಕೃಷ್ಣ ಹೆಗಡೆ.—ಅದು ಇಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ.—ಈ ಇಲಾಖೆ ಹೊರೆ ಸಹ ತಮ್ಮ ಮೇಲೆ ಇದೆ ತಮ್ಮ ಸಹಾಯಕ್ಕೆ ಸನ್ಮಾನ್ಯ ಸಿಂಧ್ಯ ಅವರನ್ನು ತೆಗೆದುಕೊಂಡಿದ್ದೀರಿ. ಬಹಳ ಸಂತೋಷ. ಗೃಹ ಇಲಾಖೆಯನ್ನು ನೋಡಿಕೊಳ್ಳಲು ತಾವು ಒಬ್ಬರು ಸಹಾಯಕರನ್ನು ತೆಗೆದುಕೊಂಡಿದ್ದೀರಿ. ಈ ಬಗ್ಗೆ ನಾನು ಹೇಳುತ್ತಿಲ್ಲ. ಆದರೆ ಇಷ್ಟೊಂದು ದೊಡ್ಡ ಹೊರೆಯನ್ನು ಹೊರತಕ್ಕಂಥ ಸಂದರ್ಭದಲ್ಲಿ ತಮ್ಮ ಕಡೆಯಲ್ಲಿ ಯಾರಿಗೂ ಮರುಕ ಇಲ್ಲ ಎಂದು ನಮಗೆ ಅನುಕಂಪವಾಗುತ್ತಿದೆ. ತಾವು ಈ ರಾಜ್ಯದಲ್ಲಿ ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ರೀತಿಯಲ್ಲಿ ಅಧಿಕಾರವನ್ನು ಹೊಂದಿದ್ದೀರಿ ಮತ್ತು ನಿರ್ವಹಣೆ ಮಾಡಿದ್ದೀರಿ. ಬಹಳ ಬುದ್ಧಿವಂತರು ಎಂದೂ ಕೂಡ ತಾವು ಸಾಕಷ್ಟು ಹೆಸರು ಗಳಿಸಿದ್ದೀರಿ. ಆದರೆ ಯಾವ ವ್ಯಕ್ತಿಯೇ ಆಗಲೀ ಅವರು ಎಷ್ಟೇ ಬುದ್ಧಿವಂತರಿದ್ದರೂ ಸಹ ಭೌತಿಕವಾಗಿ ಭಾರಜಾಸ್ತಿಯಾದಾಗ ಅದನ್ನು ಹೊರುವುದು ಕಷ್ಟವಾಗುತ್ತದೆ, ನಿರ್ವಹಣೆ ಮಾಡುವುದಕ್ಕೂ ಕಷ್ಟವಾಗುತ್ತದೆ ಇಷ್ಟೊಂದು ಇಲಾಖೆಗಳ ಅಧಿಕಾರವನ್ನು ಅಥವಾ ಜವಾಬ್ದಾರಿಯನ್ನು ನಿರ್ವಹಣೆ ಮಾಡುವಾಗ ಏನಾದರೂ ಲೋಪದೋಷಗಳು ಕಂಡು ಬರುವುದು ಮಾತ್ರವಲ್ಲ, ಅದರ ಒಂದು ಪರಿಣಾಮ ಇಡೀ ರಾಜ್ಯದ ಮೇಲೆ ಬೀಳುತ್ತದೆ. ಇದರ ಪರಿಣಾಮ ಇಲಾಖೆಯ ಮೇಲೆ ಬೀಳುತ್ತದೆ. ಯಾರು ಎಷ್ಟೇ ದಕ್ಷರಿದ್ದರೂ ಕೂಡ, ತಮ್ಮ ಒಂದು ದಕ್ಷತೆಯಿಂದ ಕಾರ್ಯವನ್ನು ನಿರ್ವಹಣೆ ಮಾಡಲು ಹೊರಟಾಗ ಸಾಕಷ್ಟು ತೊಂದರೆಗಳು ಖಂಡಿತವಾಗಿಯೂ ಬರುತ್ತವೆ.

ಇವತ್ತು ಈ ಕರ್ನಾಟಕ ರಾಜ್ಯ ಇಡೀ ರಾಷ್ಟ್ರದಲ್ಲಿ ತನ್ನ ಆರ್ಥಿಕ ನಿರ್ವಹಣೆ ದೃಷ್ಟಿಯಲ್ಲಿ, ಅಭಿವೃದ್ಧಿಯ ಒಂದು ನಿರ್ವಹಣೆಯ ದೃಷ್ಟಿಯಲ್ಲಿ ತನ್ನದೇ ಆದ ಉನ್ನತ ಸ್ಥಾನವನ್ನು ಹೊಂದಿದೆ ಕಾನೂನು ವ್ಯವಸ್ಥೆ ನಿರ್ವಹಣೆಯಲ್ಲಾಗಲೀ ಯಾವುದರಲ್ಲೇ ಆಗಲೀ ಸರಿಯಾಗಿ ಆಡಳಿತ ನಿರ್ವಹಣೆ ಮಾಡತಕ್ಕ ರಾಜ್ಯ, ಕರ್ನಾಟಕ ರಾಜ್ಯ. ನಾನು ಈ ಮಾತನ್ನು ಬಹಳ ಸಂತೋಷದಿಂದ ಹೇಳುತ್ತಿದ್ದೇನೆ ಅಭಿಮಾನದಿಂದ ಹೇಳುತ್ತಿದ್ದೇನೆ. ಆಡಳಿತ ಯಂತ್ರ ಆಡಳಿತ ಯಂತ್ರದಲ್ಲಿ ಕೆಲಸ ಮಾಡತಕ್ಕ ಬೇರೆ ಬೇರೆ ಕ್ಷೇತ್ರದ ಅಧಿಕಾರಿ ವರ್ಗ ಮತ್ತು ಸಿಬ್ಬಂಧಿ ವರ್ಗಯಾವುದು ಇದೆ, ಅದು ಮೇಲ್ಮಟ್ಟದ ಅಧಿಕಾರಿ ವರ್ಗ ಇರಬಹುದು, ಅಥವಾ ಕೆಳ ಹಂತದ ಅಧಿಕಾರಿಗಳ ವರ್ಗ ಇರಬಹುದು ಯಾವುದೇ ಇರಲಿ ಒಟ್ಟಿನಲ್ಲಿ ಅವರಲ್ಲಿ ಜಾಣ್ಮೆ ಇದೆ. ಅಧಿಕಾರ ನಿರ್ವಹಣೆ ಮಾಡತಕ್ಕ ಜಾಣ್ಮೆ ಅವರಲ್ಲಿ ಇದೆ ಅವರಿಗೆ ಯಾವುದೇ ಒಂದು ಜವಾಬ್ದಾರಿಯನ್ನು ಕೊಟ್ಟಾಗ ಅದನ್ನು ನಿರ್ವಹಣೆ ಮಾಡತಕ್ಕ ಒಂದು ಶಕ್ತಿ ಸಾಮರ್ಥ್ಯವನ್ನು ಅವರು ವ್ಯಕ್ತಪಡಿಸುತ್ತಾರೆಂದು ನಾನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ದೆಹಲಿಗೆ ಹೋಗತಕ್ಕ ಅನೇಕ ಸಮ್ಮೇಳನಗಳು ಇರಲಿ ಅಥವಾ ಬೇರೆ ಬೇರೆ ರೀತಿಯಾದ ಒಂದು ವಿಧೇಯಕಗಳಲ್ಲಿ ನಮ್ಮ ಅಧಿಕಾರಿಗಳು ಮತ್ತು ಸಿಬ್ಬಂಧಿ ವರ್ಗ ಆಡಳಿತ ಯಂತ್ರ ಏನಿದೆ, ಅವರ ವ್ಯಕ್ತಿತ್ವ ಏನಿದೆ ಮೇಲ್ಮಟ್ಟದ ಅಧಿಕಾರಿಗಳಿಂದ ಹಿಡಿದು ಕೆಳಮಟ್ಟ ಅಧಿಕಾರಿಗಳವರೆಗೆ ಮಾಡತಕ್ಕ ಕೆಲಸವನ್ನು ನಾವು ಕಣ್ಣಾರೆ ಕಂಡಿದ್ದೇವೆ ಕರ್ನಾಟಕ ರಾಜ್ಯದ ಪ್ರಗತಿಯನ್ನು ಮುನ್ನಡೆಯನ್ನು ಯಾವಾಗಲೂ ಅವರು ಸಾಧಿಸಬೇಕಾಗಿದೆ ಪ್ರಗತಿಯ ಹಾದಿಯಲ್ಲಿ ಹೋಗಲಿಕ್ಕೆ ಯಾವ ರೀತಿಯ ಒಂದು ಪ್ರಚೋದನೆ ಕೊಡಬೇಕೋ ಅದನ್ನು ಆಗಾಗ ಅಧಿಕಾರಕ್ಕೆ ಬರತಕ್ಕ ರಾಜಕೀಯ ಪಕ್ಷಗಳು ಕೊಡಬೇಕಾಗುತ್ತದೆ, ಇಂತಹ ಒಂದು ಉತ್ತಮ

ಆಡಳಿತ ಯಂತ್ರ ಇರತಕ್ಕ ರಾಜ್ಯದಲ್ಲಿ ಯಾರೂ ಕೂಡ ಕಡಿಮೆಯಿಲ್ಲ. ಯಾವುದೇ ಕ್ಷೇತ್ರ ತೆಗೆದು ಕೊಳ್ಳಲಿ, ಇಂಜಿನಿಯರ್‌ಗಳಾಗಲೀ ನಮ್ಮ ಪೋಲೀಸ್ ಅಧಿಕಾರಿಗಳಾಗಲೀ ನಮ್ಮ ಆಡಳಿತ ವಿಭಾಗದ ಬೇರೆ ಬೇರೆ ಹಂತದಲ್ಲಿರತಕ್ಕ ಜನರು ಒಂದು ಸವಾಲನ್ನು ಕೊಟ್ಟಾಗ, ಆ ಸವಾಲನ್ನು ಸಂತೋಷದಿಂದ ಸ್ವೀಕಾರ ಮಾಡಿಕೊಂಡು ಎಂತಹ ಪರಿಸ್ಥಿಯನ್ನು ಎದುರಿಸಿಕೊಂಡು ಹೋಗತಕ್ಕ ಚೈತನ್ಯ ನಮ್ಮ ಆಡಳಿತ ಕ್ಷೇತ್ರದಲ್ಲಿದೆ. ಆ ಒಂದು ಪರಿಸರವನ್ನು, ನಮ್ಮ ರಾಜಕೀಯ ಇಚ್ಛಾ ಶಕ್ತಿಯನ್ನು ಅರಿತುಕೊಂಡು ಸರಿಯಾದ ದಾರಿಯಲ್ಲಿ ಹೋಗುವುದಕ್ಕೆ ಅವಕಾಶವಿದೆ. ಯಾವಾಗ ರಾಜಕೀಯ ಶಕ್ತಿ ಶಿಥಿಲವಾಗುತ್ತದೆ ರಾಜಕೀಯ ಇಚ್ಛಾಶಕ್ತಿ ವಿಫಲವಾಗುತ್ತದೆ ಅಂತಹ ಸಂದರ್ಭದಲ್ಲಿ ಆಡಳಿತ ಯಂತ್ರ ಸರಿಯಾದ ದಾರಿಯಲ್ಲಿ ನಡೆದು ಅಭಿವೃದ್ಧಿಯನ್ನು ಮಾಡಲಿಕ್ಕೆ ಕಷ್ಟವಾಗುತ್ತದೆಂದು ಅಧ್ಯಕ್ಷರ ಮುಖಾಂತರ ಸದನಕ್ಕೆ ತಿಳಿಸಲಿಕ್ಕೆ ಇಚ್ಛಿಪಡುತ್ತೇನೆ. ಈಗ ಯೋಜನಾ ಕ್ಷೇತ್ರದಲ್ಲಿಯೂ ಕೂಡ ನಾವು ದಿಗ್ವಿಜಯವನ್ನು ಸಾಧಿಸಿದ್ದೇವೆ. ಅದನ್ನು ನಾನು ಪ್ರತ್ಯೇಕ ಪ್ರತ್ಯೇಕವಾಗಿ ವಿವರಿಸಲಿಕ್ಕೆ ಹೋಗುವುದಿಲ್ಲ. ಈಗ ೧೯೮೦–೮೧ ರಲ್ಲಿ ೪೧೧–೪೧ ಕೋಟಿ ರೂಪಾಯಿಗಳ ಒಂದು ಯೋಜನೆ ಇದ್ದರೆ ಒಟ್ಟು investment efforts other than plan for 1980—81. 945-07 ಕೋಟಿ ರೂಪಾಯಿಗಳು ನಮ್ಮದು ಇನ್‌ವೆಸ್ಟ್‌ಮೆಂಟ್ ಎಫರ್ಟ್ ಅದು Centrally sponsored schemes ಇದೆ, Central Plan schemes, non—plan development expenditure on revenue account, Western Ghats development, private sector investment ಕೂಡ ಇದರಲ್ಲಿ ಹಾಕಿದರೆ ಅಷ್ಟು ಇನ್‌ವೆಸ್ಟ್‌ಮೆಂಟ್ ಎಫರ್ಟ್ ಆಗಿದ್ದರೆ ೧೯೮೧—೮೨ರಲ್ಲಿ ಸ್ಟೇಟ್ ಪ್ಲಾನ್ ಔಟ್‌ಲೇ ೪೭೦–೩೩ ಕೋಟಿ ಆದಮೇಲೆ investment efforts wiht all thes accounts 1053–23 ಕೋಟಿ ರೂಗಳು ಆದಮೇಲೆ ೧೯೮೨—೮೩ರಲ್ಲಿ ೧೨೧೪ ಕೋಟಿ ರೂಪಾಯಿಗಳು ಇನ್‌ವೆಸ್ಟ್‌ಮೆಂಟ್ ಎಫರ್ಟ್ State plan outlay which was investment of 5–15 crores. ಈಗ ಎಷ್ಟರ ಮಟ್ಟಿಗೆ ನಾವು ನಮ್ಮ ಸಾಧನೆಯನ್ನು ಕೂಡ ಮಾಡಿದ್ದೇವೆಂದು ಹೇಳಿದರೆ ೧೯೮೩—೮೪ರಲ್ಲಿ details of provisions of plan schemes ಅದರ ಒಂದು ಸಮೀಕ್ಷೆಯನ್ನು ಮಾಡಿದಾಗ ನಮಗೆ ಗೊತ್ತಾಗುತ್ತದೆ. ಇದರಲ್ಲಿರತಕ್ಕ ಫಿಗರ್ಸ್ ಬಹುಶಃ ತಪ್ಪಿರಬಹುದು, ಅದನ್ನು ಸರಿಮಾಡಬೇಕೆಂದು ನನಗ ಕಾಣುತ್ತದೆ ಪುಟ–೨ ಅದರಲ್ಲಿ ರಸ್ತೆಗಳು ಮತ್ತು ಸೇತುವೆಗಳ ಅದಕ್ಕೆ ೮೭–೭೧ ಎಂದು ಕಾಣಿಸಿದ್ದೀರಿ, ಪ್ಲಾನ್ ಬುಕ್‌ನಲ್ಲೂ ಕೂಡ ೧೭–೭೧ ತಪ್ಪು ಆಗಿದೆ. I think it is better to correct it. There is a distortion both in this book and the Administrative Report of the Planning Department. ೧೯೮೧—೮೨ರಲ್ಲಿ ಏನಾಗಿದೆ ಅದನ್ನು ನಾನು ಈಗಾಗಲೇ ಹೇಳಿದ್ದೇನೆ. ಯೋಜನೆಯಲ್ಲಿ ೪೧೬–೫೮ ಕೋಟಿ ರೂಪಾಯಿಗಳು reised annual plan outlay 1982–83ರಲ್ಲಿ ೪೭೫ ಕೋಟಿ ರೂಪಾಯಿಗಳು annual ಔಟ್‌ಲೇ ಇದ್ದರೆ revised annual outlay, Of course I corrected that figure. It should be 523,90 crores. You may correct me if I am wrong. But according to me it is 523.90 crores. 523-90 ಕೋಟಿ ರೂಪಾಯಿಗಳು ಇದು ಏನಾಗಿದೆ ಎಂದರೆ ೪೧೬.೫೮ ಕೋಟಿ ರೂಪಾಯಿಗಳು ೧೯೮೧—೮೨ರಲ್ಲಿ ಆದರೆ ೫೨೩.೯೦ ಕೋಟಿ ರೂಪಾಯಿಗಳು ಎಂದರೆ ಸುಮಾರು ೧೦೭ ಕೋಟಿ ರೂಪಾಯಿಗಳ ಹೆಚ್ಚಳವನ್ನು ನಾವು ಸಾಧಿಸಿದ್ದೇವೆ. ಬರೀ ಯೋಜನೆಯಿಂದ ೧೯೮೧—೮೨ ಮತ್ತು ೧೯೮೨—೮೩ರಲ್ಲಿ ೧೦೭ ಕೋಟಿ ರೂಪಾಯಿಗಳು ಹೆಚ್ಚಳ. ಕಾವೇರಿ ಯೋಜನೆಗೆ ನಾನ್‌ಪ್ಲಾನ್‌ನಲ್ಲಿ ಒಟ್ಟು ೧೦೭ ಕೋಟಿ ರೂಪಾಯಿಗಳ ಹೆಚ್ಚಳವನ್ನು ಯೋಜನಾ ಕ್ಷೇತ್ರದಲ್ಲಿ ನಾವು ಸಾಧಿಸಿದ್ದೇವೆ. we have achieved that. ತಾವು ಯೋಜನಾ ವೆಚ್ಚದಲ್ಲಿ ೫೭೫ ಕೋಟಿ ರೂಪಾಯಿಗಳೆಂದು ಹೇಳದರೆ ೧೯೮೩—೮೪ಕ್ಕೆ ಹೇಳಿದ್ದೀರಿ. ಅದನ್ನು ಕೂಡ ಫೈನಾನ್ಸ್ ಕಮಿಷನ್ ಅಪ್ರೂವ್ ಮಾಡಿ ಅದು ಬಂದಿದ. ತಾವು ಪತ್ರಿಕಾ ಹೇಳಿಕೆ ಕೊಟ್ಟಿದ್ದೀರಿ ಏನು ಹೇಳಿಕೆ ಕೊಟ್ಟಿದ್ದಿರೀ ಎಂದು ನಾನು ಓದಿ ಹೇಳಿಲಿಕ್ಕೆ ಹೋಗುವುದಿಲ್ಲ ಬಂದೆ ೪೭೫ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೆ ನಾವು ೫೭೫ ಕೋಟಿ ರೂಪಾಯಿಗಳಿಗೆ ಏರಿಸಿದ್ದೇವೆ ಈ ವರ್ಷದಲ್ಲಿ ೧೦೦ ಕೋಟಿ ರೂಪಾಯಿಗಳ ಹೆಚ್ಚಳವನ್ನು ಯೋಜನಾ ಕ್ಷೇತ್ರದಲ್ಲಿ ಈ ವರ್ಷದಲ್ಲಿ ನಾವು ಸಾಧಿಸಿದ್ದೇವೆಂದು ಹೇಳಿ ಇವತ್ತು ಹೇಳಿಕೆಯನ್ನು ಕೊಟ್ಟಿದ್ದೀರಿ ಮುಖ್ಯಮಂತ್ರಿಗಳು ದೆಹಲಿಯಲ್ಲಿ ಇಂತಹ ಹೇಳಿಕೆಯನ್ನು ಕೊಟ್ಟಿದ್ದಾರೆ. ಇಲ್ಲಿಗೆ ಬಂದಾಗ ಹೇಳಿಕೆ ಕೊಟ್ಟಿದ್ದಾರೆ. ಕಳೆದ ಸಲ ಬಡ್ಜೆಟ್ ಮೇಲೆ ಚರ್ಚೆಯಾದಾಗ ಆ ವಿಷಯವನ್ನು ಇಲ್ಲಿ ಓದಿ ಹೇಳಿದ್ದಾರೆ. ಆಗ ರಿವೈಸ್

ಎಸ್ಟಿ ಮೇಟ್ ಸಿಕ್ಕದೆ ಇರಬಹುದು. May be revised estimate will come subsequently.

ತಾವು ಹೇಳಿದಂಥ ಒಂದು ಹೇಳಿಕೆಯ ಬಗ್ಗೆ ನಾನು ಈ ಮಾತನ್ನು ಹೇಳಬೇಕಾಗಿ ಬಂತು I think you may correct me. Afterall it is the question of figures. Neither I can like nor you can like. it ಈಗ ಒರಿಜಿನಲ್ ಪ್ಲಾನ್ ಔಟ್‌ಲೇ ಇರುವುದು. ೪೭೫ ಕೋಟಿ ರೂಪಾಯಿಗಳು. ಆದರೆ ತಾವು ಹೆಚ್ಚು ಮಾಡಿರುವುದು ಈಗ ೫೭೫ ಕೋಟಿ ರೂಪಾಯಿಗಳು ಮಾತ್ರ. ನಾವು ಹಿಂದೆ ೪೭೫ ಕೋಟಿ ರೂಪಾಯಿಗಳ ಒಂದು ಅಂದಾಜು ವೆಚ್ಚವನ್ನು ಮಾಡಬೇಕೆಂದು ಇದ್ದೆವು. ಆ ಬಗ್ಗೆ ಕೂಡ ಒಂದು ಯೋಜನೆಯನ್ನು ಕೂಡ ಹಾಕಿಕೊಂಡಿದ್ದೆವು. ಆದರೆ ತಮ್ಮ ಸರ್ಕಾರ ಬಂದ ಮೇಲೆ ರಾಜ್ಯದ ಆರ್ಥಿಕ ಪ್ರಗತಿಯ ಬಗ್ಗೆ ತಮ್ಮ ಚಕ್ರ ಬರೀ ೧೦೦ ಕೋಟಿ ರೂಪಾಯಿಗಳನ್ನು ಮಾತ್ರ ಹೆಚ್ಚು ಮಾಡಿದ್ದೀರಿ. ಆದರೆ ಇದರಲ್ಲಿ ೧೯೮೩–೮೪ನೇ ಸಾಲಿನ ಅನ್‌ಪ್ರೊಡಕ್ಟೀವ್ ಆಗಿರುವ ೫೧.೧೦ ಕೋಟಿ ರೂಪಾಯಿಗಳು ಇದೆ. ಆದ್ದರಿಂದ ಇವತ್ತು ತಾವು ಹೆಚ್ಚುವರಿ ಕೊಟ್ಟಿರತಕ್ಕಂಥ ೧೦೦ ಕೋಟಿ ರೂಪಾಯಿಗಳಿಂದ ತಮ್ಮ ಸರ್ಕಾರವನ್ನು ತೂಗಿಸುವುದಕ್ಕೆ ಕಷ್ಟವಾಗುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈಗ ಅನ್‌ಪ್ರೊಡಕ್ಟೀವ್ ೫೧.೧೦ ಕೋಟಿ ರೂಪಾಯಿಗಳಲ್ಲಿ ತಮ್ಮ ಪ್ರಗತಿಯ ಚಕ್ರ ಹಿಂದೆ ತಿರುಗಿ ಬಿದ್ದಿದೆಯೆಂದು ನಮಗೆ ಗೊತ್ತಾಗುತ್ತಿದೆ. ತಾವು ಹಾಕಿಕೊಂಡಿರತಕ್ಕಂಥ ಯೋಜನೆಗಳು ಇದರಿಂದ ಎಲ್ಲಾ ಹಿಮ್ಮುಖವಾಗುತ್ತಿವೆಯೆಂದು ನಾನು ಹೇಳಬಯಸುತ್ತೇನೆ. ಕರ್ನಾಟಕದ ಜನತೆ ಜನತಾ ಸರ್ಕಾರದ ಮೇಲೆ ಇಟ್ಟುಕೊಂಡಿರತಕ್ಕಂಥ ಎಲ್ಲಾ ಆಶೋತ್ತರಗಳನ್ನು ತಾವು ಈಡೇರಿಸುವುದಕ್ಕೆ ಆಗುವುದಿಲ್ಲ ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತೇನೆ. ತಾವು ಇವತ್ತು ಗ್ರೋತ್ ರೇಟ್‌ನ್ನು ಮೂಲಭೂತವಾಗಿ ಸುಧಾರಣೆ ಮಾಡಬೇಕಾಗುತ್ತದೆ, ಆ ಒಂದು ಸುಧಾರಣೆಯನ್ನು ಮಾಡುವುದಕ್ಕೂ ಕೂಡ ಜನತಾ ಸರ್ಕಾರದಿಂದ ಜನರಿಗೆ ಕಾಣುತ್ತಿಲ್ಲ. ಇವತ್ತು ರಾಜ್ಯದ ನಾನಾ ಯೋಜನೆಗಳಲ್ಲಿ ಹಣದ ಕೊರತೆಯಿಂದ ಪ್ರಗತಿಯನ್ನು ಕಾಣದೆ ನಿರಾಶಾದಾಯಕವಾದಂಥ ವಾತಾವರಣವನ್ನು ನಾವು ಕಾಣುತ್ತಿದ್ದೇವೆ. ಆದರೆ ತಾವು ಹೇಳಬಹುದು, ನಾವು ಅಧಿಕಾರಕ್ಕೆ ಬಂದು ಕೇವಲ ಒಂದು ವರ್ಷ ಕೂಡ ಆಗಿಲ್ಲ. ಯಾವ ರೀತಿಯಲ್ಲಿ ಸುಧಾರಣೆಯನ್ನು ಮಾಡುವುದಕ್ಕೆ ಆಗುತ್ತದೆಂದು. ಆದರೆ ತಮ್ಮ ಒರಿಜಿನಲ್ ಪ್ಲಾನ್ ಔಟ್‌ಲೇ ಇದ್ದುದು ೪೭೫ ಕೋಟಿ ರೂಪಾಯಿಗಳು. ಆದರೂ ಕೂಡ ಇನ್ನೂ ೧೦೦ ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಖರ್ಚು ಮಾಡಿದ್ದೀರಿ. ಆದರೆ ಇದರಿಂದಲೇ ತಮ್ಮ ಯೋಜನೆಗಳು ಪ್ರಗತಿದಾಯಕವಾಗಿ ಕಾಣುತ್ತಿಲ್ಲ. ತಮ್ಮ ಯೋಜನೆಗಳು ಪೂರ್ಣಗೊಳ್ಳುತ್ತವೆ ಎನ್ನತಕ್ಕಂಥ ಶುಭ ಸೂಚಕ ಕೂಡ ನಮಗೆ ಕಾಣುತ್ತಿಲ್ಲ. ಆ ಒಂದು ಶುಭಲಕ್ಷಣ ಕೂಡ ತಮ್ಮಲ್ಲಿ ಕಾಣುತ್ತಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ತಾವು ಒರಿಜನಲ್ ಪ್ಲಾನ್ ಔಟ್‌ಲೇನಲ್ಲಿ ಬರೀ ೧೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಕೂಡ ಅದು ಒಂದು ದೊಡ್ಡ ಕೆಲಸವಲ್ಲ. ತಾವು ೨೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಕೂಡ ಅದು ಕೂಡ ಕಷ್ಟಸಾಧ್ಯ ಎನ್ನತಕ್ಕಂಥ ಮಾತನ್ನು ನಾನು ಹೇಳಬಯಸುತ್ತೇನೆ, ಆದರೆ ಮಾನ್ಯ ಮುಖ್ಯಮಂತ್ರಿಗಳು ಹೋದ ಕಡೆಯಲ್ಲಿ ಎಲ್ಲಾ ಹೇಳಿದ್ದಾರೆ. ನಾವು ಅಧಿಕಾರಕ್ಕೆ ಬಂದ ಮೇಲೆ ಅನೇಕ ಪ್ರಗತಿದಾಯಕವಾದಂಥ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ ಎಂದು ಮತ್ತೆ ರೈತರಿಗೆ ನಾವು ವಿಶೇಷವಾದಂಥ ಸವಲತ್ತುಗಳನ್ನು ಒದಗಿಸಿಕೊಟ್ಟಿದ್ದೇವೆಂದು ಪತ್ರಿಕೆಗಳಲ್ಲಿ ಮತ್ತು ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ. ಆದರೆ ತಾವು ರೈತರಿಗಾಗಿ ಖರ್ಚು ಮಾಡಿರತಕ್ಕಂಥ ಹಣವನ್ನು ಲೆಕ್ಕಾಚಾರ ಮಾಡಿ ನೋಡಿದರೆ ಬರೀ ೩೧.೭೨ ಕೋಟಿ ರೂಪಾಯಿಗಳು ಮಾತ್ರ. ಈ ಹಣ ಏನೇನು ಸಾಲದು ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಮತ್ತೆ ಕಮ್ಯೂನಿಟಿ ಡೆವಲಪ್‌ಮೆಂಟ್‌ಗೆ ನಾವು ೧.೨೪ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಆದರೂ ಅದು ೧೯೮೨–೮೩ನೇ ಸಾಲಿನಲ್ಲಿ ನಾವು ಕೊಟ್ಟಿದ್ದು. ತಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಈ ಒಂದು ಕಮ್ಯೂನಿಟಿ ಡೆವಲಪ್‌ಮೆಂಟ್ ಕೊಟ್ಟಿರುವ ಹಣ ಕೇವಲ ೦.೩೭ ಕೋಟಿ ರೂಪಾಯಿಗಳು ಮಾತ್ರ. ಆದರೆ ನಾನು ಒಂದು ಮಾತನ್ನು ಮಾತ್ರ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಏನೆಂದರೆ ಈ ರಾಜ್ಯದ ಎಲ್ಲಾ ವಿಷಯಗಳು ಕೇವಲ ೩ ಜನರ ಮಂತ್ರಿಗಳ ಕೈಯಲ್ಲಿ ಮಾತ್ರ ಇದೆ.

ಶ್ರೀ ಎಸ್. ಸೂರ್ಯನಾರಾಯಣರಾವ್.— ಆ ಮೂರು ಜನ ಪವರ್‌ಫುಲ್ ಮಿನಿಸ್ಟರ್ ಯಾರು ಸ್ವಾಮಿ?

SRI. M. VEERAPPA MOILY.—They are all my well wishers and best friends, for your kind information. At that time I wished.

A MEMBER Chief Minister...

SRI M. VEERAPPA MOILY.—When the present Chief Minister was not in picture, I really wished one of them would be the Cheif Minister.

SRI. V. S. ACHARYA.—One 'Power Minister' is there. Now you say there are Powerful Ministers.

SRI. M. VEERAPPA MOILY.—of course you must have worked I really wished that one of them would become Chief Minister.

ಶ್ರೀ ಎಂ. ರಘುಪತಿ.— ಮಾನ್ಯ ಸದಸ್ಯರಾದಂತ ಶ್ರೀಮಾನ್ ಬಂಗಾರಪ್ಪನವರು ಇಲ್ಲಿ ಇಲ್ಲ ಎಂದು ತಾವು ಆ ಮಾತನ್ನು ಹೇಳುತ್ತಿದ್ದೀರಾ? ಅವರ ನೆನಪಾದರೂ ನಿಮಗೆ ಇದೆಯಾ?

ಶ್ರೀ ರಾಮಕೃಷ್ಣ ಹೆಗಡೆ.— ಅವರು ಅಲ್ಲಿ ಇಲ್ಲದಿದ್ದರೆ ಇವರು ಆ ರೀತಿ ಮಾತನಾಡುತ್ತಿರಲಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.— ನಾನು ನಿಮ್ಮ ಒಳ ವ್ಯವಹಾರದಲ್ಲಿ ಕೈ ಹಾಕುವುದಕ್ಕೆ ಹೋಗುವುದಿಲ್ಲ. Why should I set one against another?

ಶ್ರೀ ರಾಮಕೃಷ್ಣ ಹೆಗಡೆ.— ಅದಕ್ಕೆ ತಮಗೆ ಅವಕಾಶವಿಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ.— ಅವಕಾಶವಿದ್ದಗೂ ಕೂಡ ನಾನು ಆ ಕೆಲಸ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ನೀವೇ ಅದನ್ನು ಬಯಸಿದರೆ ನಾನು ಏನು ಮಾಡುವುದಕ್ಕೆ ಆಗುತ್ತದೆ. ಅದು ನಿಮ್ಮ ಹಣೆ ಬರಹ.

ಶ್ರೀ ಎಸ್. ಆರ್. ಬೊಮ್ಮಾಯಿ.— ನೀವು ಇನ್ನೂ ಕನಸು ಕಾಣುತ್ತಿದ್ದೀರಿ.

ಶ್ರೀ ಎಂ. ವೀರಪ್ಪಮೊಯ್ಲಿ.— ಕನಸು ಕಾಣಬೇಕಾದಂಥ ಅವಶ್ಯಕತೆ ನಮಗೆ ಇಲ್ಲ. ನಾವು ನಿಮ್ಮ ಒಳ ವ್ಯವಹಾರದಲ್ಲಿ ತಲೆ ಹಾಕುವುದಿಲ್ಲ, ಅದು ನಮಗೆ ಬೇಡವೂ ಬೇಡ. ಮಾನ್ಯ ಅಧ್ಯಕ್ಷರೇ ಇನ್ನು ನಮ್ಮ ಕೈಗಾರಿಕಾ ಮಂತ್ರಿಗಳು ಹೋದ ಕಡೆಗಳಲ್ಲಿ ಹೇಳಿದ್ದಾರೆ ನಾನು ಈ ವರ್ಷ ೧೦೦೦ ಹೊಸ ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತೇನೆಂದು I confine only to the plan provision. ಇದನ್ನು ಸಾಧನೆ ಮಾಡಬೇಕೆಂದು ಹೊರಟಿದ್ದಾರೆ. ಇದಕ್ಕೆ ಸುಮಾರು ೪೦೦ ಕೋಟಿ ರೂಪಾಯಿಗಳು ಬೇಕಾಗುತ್ತದೆ.

ಈಗ ಎಷ್ಟು ಕೊಟ್ಟಿದ್ದೀರಿ ? ಒಂದು ಸಾವಿರ ಕೈಗಾರಿಕೆಗಳನ್ನು ಪ್ರತಿ ತಾಲ್ಲೂಕಿನಲ್ಲೂ ಮಾಡಬೇತು, ಕೈಗಾರಿಕಾ ಮೇಲ್ಮೈಯನ್ನು ತಾವು ಸಾಧನೆ ಮಾಡಬೇಕೆಂದು ಹೇಳಿ ಈಗ ಕೊಟ್ಟಿರತಕ್ಕದ್ದು ೧೮.೯೫ ಕೋಟಿ ರೂಪಾಯಿಗಳು ಮಾತ್ರ. ಹಿಂದೆ ೨೯ ಕೋಟಿ ರೂಪಾಯಿಗಳನ್ನು ನಾವು ಕೊಟ್ಟಿದ್ದೆವು. ಎಂದರೆ ಸುಮಾರು ೧೧ ಕೋಟಿ ರೂಪಾಯಿಗಳನ್ನು ತಾವು ಕಡಿಮೆ ಕೊಟ್ಟಿದ್ದೀರಿ. ಆದರೆ ಈ ಹಣವನ್ನು ಇಟ್ಟುಕೊಂಡು ಏನು ಮಾಡುತ್ತೀರಿ ? ನಿಮ್ಮ ಒಂದು ಸಾವಿರ ಕೈಗಾರಿಕಾ ಘಟಕಗಳಲ್ಲಿ, ನಿಮ್ಮ ಸಾರ್ವಜನಿಕ ಕ್ಷೇತ್ರದಲ್ಲಿ ಕೈಗಾರಿಕೆಗಳು ಏನು ಮಾಡಬೇಕು ಅಥವಾ ಕೆಎಸ್‌ಐಡಿಸಿ ಮುಖಾಂತರ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಏನು ಮಾಡುತ್ತೀರಿ ? ಅಥವಾ ಗಂಗಾರಾಂ ಮಹಡಿ ಕುಸಿದು ಬಿದ್ದ ಹಾಗೆ ತಮ್ಮ ಯೋಜನೆ ಕುಸಿದು ಬಿದ್ದಿದೆಯೋ ? ಅದರ ಅಡಿಯಲ್ಲಿ ನಮ್ಮ ನಿರುದ್ಯೋಗಿ ವಿದ್ಯಾವಂತರು ಬಿದ್ದು ತೊಳಲಾಡುತ್ತಿರುವ ಹಾಗಾಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ವಿರೋಧ ಪಕ್ಷದ ನಾಯಕರಿಗೆ ಈ ಬಗ್ಗೆ ನನ್ನ ಬೇಡಿಕೆಗಳು ಬಂದಾಗ ಒಂದು ಸಾವಿರ ಕೈಗಾರಿಕೆಗಳನ್ನು ಯಾವ ರೀತಿ ಸಾಧನೆ ಮಾಡುತ್ತೇನೆಂದು ಹೇಳುತ್ತೇನೆ. ಅದನ್ನು ಕೇಳಿದ ಮೇಲೆ ತಾವು ಬೇಕಾದರೆ ಶ್ಲಾಘನೆ ಮಾಡಬಹುದು. ಅದನ್ನು ಟೀಕೆ ಮಾಡಬಹುದು. ಅದನ್ನು ನಾನು ಸ್ವಾಗತ ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ಸೀಡ್‌ಮನಿ ಕೊಡದಿದ್ದರೆ ಹೇಗೆ ? ಬ್ಯಾಂಕ್‌ನಿಂದ ಹೇಗೆ ಹಣ ದೊರೆಯುತ್ತದೆಂಬುದನ್ನು ನಾನು ಹೇಳುತ್ತೇನೆ. The total additional mobilisation of resources by all the banks in Karnataka itself is Rs. 300 crores approximately. ಬ್ಯಾಂಕ್‌ನವರು ಒಟ್ಟು ಮಾಡಿದ ಹಣವನ್ನೆಲ್ಲ ತಮ್ಮ ಕೈಗಾರಿಕೆಗಳಿಗೆ ಕೊಟ್ಟರೆ ಅವರ ಬ್ಯಾಂಕ್ ಮುಚ್ಚಬೇಕೇ ? ಅಥವಾ ಅವರು ಹೇಗೆ ಕೆಲಸ ಮಾಡಬೇಕೇ? ಮಾತಿನಲ್ಲಿ ಹೇಳುವುದು ಸುಲಭ ಆದನ್ನು ಕೃತಿಯನ್ನು ಇಳಿಸುವುದು ಕಷ್ಟ.

ಶ್ರೀ ಎಸ್. ಆರ್. ಬೊಮ್ಮಾಯಿ.—ನನ್ನ ಬೇಡಿಕೆಗಳು ಬಂದಾಗ ತಮಗೆ ಮನವರಿಕೆ ಮಾಡಿ ಕೊಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—Every thing is dry. How do you identify a drop of water in the river. It is a totally dry. ಮರುಭೂಮಿಯಲ್ಲಿ ಸಸಿ ನೆಡುತ್ತೇವೆಂದು ತಾವು ಹೇಳಿದ ಹಾಗೆ ಆಯಿತು. ತಾವುಗಳು ಬೇರೆ ಇಶ್ಯೂನಲ್ಲಿ ಜಗಳ ಮಾಡುತ್ತಿದ್ದೀರೆಂದು ಕೇಳಿದ್ದೇನೆ. ಹಾಗೆ ಈ ಇಶ್ಯೂ ಮೇಲೆ ನೀವು ಜಗಳ ಮಾಡಿ ಜಾಸ್ತಿ ಹಣ ತೆಗೊಳ್ಳಬೇಕು. Once when you are committed for certain programmes the commital should be to fight for the cause. You were one of the best Leaders of the opposition. ಆದರೆ ಅಲ್ಲಿ ಹೋದ ಮೇಲೆ ಕುರ್ಚಿಯಲ್ಲಿ ಏಕೆ ಕುಸಿದು ಬಿದ್ದಿರಿ. ಇದು ಕುರ್ಚಿ ಪ್ರಭಾವವೋ ಅಥವಾ ಅದರ ಪ್ರಭಾವವೋ ತಿಳಿಸಬೇಕು ?

ಶ್ರೀ ಎಸ್. ಆರ್. ಬೊಮ್ಮಾಯಿ.—ದಯವಿಟ್ಟು ಮಾನ್ಯ ವಿರೋಧ ಪಕ್ಷದ ನಾಯಕರು ಕೈಗಾರಿಕೆ ಬಗ್ಗೆ ಮಾತನಾಡಬೇಕು. ಅದು ಬಿಟ್ಟು ಕುರ್ಚಿ ಬಿದ್ದುಹೋಗಿದೆ, ಹಣವಿಲ್ಲವೆಂದು ಹೇಳುವುದು ಸರಿಯಲ್ಲ.

SRI M. VEERAPPA MOILY.—I believe that you will fight for it. I wish you have the courage to fight for this cause. We will also help you.

ಶ್ರೀ ಎಸ್, ಆರ್. ಬೊಮ್ಮಾಯಿ.—ನಮ್ಮನ್ನು ತಾವು ಮನಸ್ಸಿನೊಳಗೆ ಅಪ್ರಿಷಿಯೇಟ್ ಮಾಡುತ್ತಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ಏಕೆ ಹೇಳಿದೆನೆಂದರೇ ಈಗ ಅಂತರ ಬಹಳವಿದೆ. ೨೯ ಕೋಟಿ ರೂಪಾಯಿಗಳು ಎಲ್ಲಿ ? ೧೮ ಕೋಟಿ ರೂಪಾಯಿಗಳೆಲ್ಲಿ ? Of course, ಗ್ರಾಮೋದ್ಯಮ, ಮೈನಿಂಗ್, ಜಿಯಲಾಜಿಕಲ್ ಕ್ಷೇತ್ರಗಳಿಗೆ ಜಾಸ್ತಿ ಕೊಟ್ಟಿದ್ದಾರೆ. ಕಳೆದ ವರ್ಷ ೪೮.೬೨ ಕೋಟಿ ಯಾದರೆ ಈ ವರ್ಷ ಕೈಗಾರಿಕಾ ಕ್ಷೇತ್ರದಲ್ಲಿ ಮೈನಿಂಗ್ ಎಲ್ಲಾ ಸೇರಿ ೪೯.೫೮ ಕೋಟಿಯಿದೆ. ಇದು ಏನೂ ಸಾಲದು. ಇದರಲ್ಲಿ ಏನು ಸಾಧಿಸಿದ ಹಾಗೆ ಆಗುತ್ತದೆ ? ತಮ್ಮ ಜನತಾಪಕ್ಷದ ಪ್ರಣಾಳಿಕೆಯಲ್ಲಿ ತಾವು ಏನು ಹೇಳಿದ್ದಿರಿ ? ಆಗ ತಾವು ಆ ಪಕ್ಷದ ಅಧ್ಯಕ್ಷರಾಗಿದ್ದಿರಿ, praty is more than the post you occupy–ತಾವು ಅಧ್ಯಕ್ಷರಾಗಿ ಚುನಾವಣಾ ಪ್ರಣಾಳಿಕೆಯನ್ನು ತಯಾರು ಮಾಡುವಾಗ ಏನು ಹೇಳಿದ್ದೀರಿ ? ಈ ಚುನಾವಣಾ ಪ್ರಣಾಳಿಕೆಯನ್ನು ಬೇರೆ ಬೇರೆ ರೀತಿ ವಿಶ್ಲೇಷಣೆ ಮಾಡುತ್ತೇನೆ. Apart from implementing the object of manifesto in other fields. ತಮ್ಮ ಇಲಾಖೆಯಲ್ಲಿ ತಾವು ತಮ್ಮ ಶಕ್ತಿಯನ್ನು ತೋರಿಸದೆ ಇದ್ದರೆ ಬಾಕಿಯವರ ರಕ್ಷಣೆ ಯಾರು ಬರಬೇಕು. ಅಧ್ಯಕ್ಷರೇ, ಅವರ ಇಲಾಖೆಯಲ್ಲಿ ಅವರಿಗೆ ಕೆಲಸ ಮಾಡುವುದಕ್ಕೆ ವಿಫಲವಾದರೆ ಹೇಗೆ ? ಬಹುಶಃ ಇಡೀ ಸರ್ಕಾರದ ಮೇಲೆ ಪ್ರಭಾವ ಬೀರತಕ್ಕ ಶಕ್ತಿಯನ್ನು ಹೊಂದಿರುವವರು ಇವರು, ಅದನ್ನು ಇವರು ಸಾಧಿಸಬಹುದು ಮನಸ್ಸು ಮಾಡಿದರೆ. ಆದರೆ ಇವೊತ್ತು ಕೊಟ್ಟಂಥ ಯೋಜನಾ ಕ್ಷೇತ್ರದ ಹಣ ನೋಡಿದರೆ ಅದನ್ನು ಮಾಡತಕ್ಕಂಥ ಲಕ್ಷಣವೇನೂ ಕಾಣುತ್ತಿಲ್ಲ–ಎಂದು ಹೇಳುತ್ತೇನೆ. ಆದರ ಮಟ್ಟಿಗೆ ಸನ್ಮಾನ್ಯ ಸಚಿವರಾದಂಥ ದೇವೇಗೌಡರನ್ನು ಒಪ್ಪಬಹುದು. ತಾವು ಇದರ ಇಲಾಖೆಯ ಅಂಕಿ ಸಂಖ್ಯೆಗಳನ್ನು ನೋಡಿದರೆ ಗೊತ್ತಾಗುತ್ತದೆ. Sri Devegowda is more powerful than any other Ministers. I cannot help but expressing it...ಕಾಂಪ್ಲಿಮೆಂಟ್ ಮಾಡುವಾಗ ಎಲ್ಲವನ್ನೂ ಹೇಳಬೇಕಾಗುತ್ತದೆ.

SRI M. S. KRISHNAN,—Is that Sri Devegowda more powerful or most powerful ?

SRI M. VEERAAPPA MOILY.—I think he is a most powerful Minister.

ಶ್ರೀ ಎಂ. ಎಂ. ಖಾರ್ಗೆ.—ಅವರು Defacto Chief Minister ಎಂದು ಹೇಳಬಹುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಡೀಜ್ಯೂರೆಯೂ ಆಗಬಹುದು, ಆಗಲಿ ಅದನ್ನು ನಾವು ಆಶಿಸೋಣ.

ಶ್ರೀ ಎಸ್. ಆರ್. ಬೊಮ್ಮಾಯಿ.—ತೊಂದರೆಯಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅವರು ಡಿಜ್ಯೂರೆಯಾದಾಗ ಇವರು ಡಿಫ್ಯಾಕ್ಟೋ ಆಗುತ್ತಾರೆ. After all it is a cycle–ಇದು ಒಂದು ಕಡೆ ನಿಲ್ಲಬಾರದು. ಅಧಿಕಾರದಲ್ಲಿ ಚಲನೆಯಾದಾಗ ಮಾತ್ರ ಒಳ್ಳೆಯ ಸುವ್ಯವಸ್ಥಿತವಾಗಿ ಆಡಳಿತ ಬರುತ್ತದೆ. ಅಧ್ಯಕ್ಷರೇ ಇವೊತ್ತು ಏನಾಗಿದೆ ೧೭.೭೧ ಕೋಟಿ ರೂಪಾಯಿಗಳು ಕಳೆದ ವರ್ಷ ಖರ್ಚಾಗಿದ್ದರೆ, ೨೪.೧೦ ಕೋಟಿ ರೂಪಾಯಿಗಳನ್ನು ರೋಡ್ಸ್ ಅಂಡ್ ಬ್ರಿಡ್ಜ್‌ಸ್‌ಗೆ ಒದಗಿಸಿದ್ದಾರೆ, ಎಂದರೆ ಸುಮಾರು ೭ ಕೋಟಿ ರೂಪಾಯಿಗಳ ಹೆಚ್ಚಳ–ಅವರ ಇಲಾಖೆಯಲ್ಲಿ ಅವರು ಸಾಧನೆ ಮಾಡಿದ್ದಾರೆ. ಅದು ದೊಡ್ಡ ಸಾಧನೆ. That shows he has demonstrated will. ಏಕೆಂದರೆ ಅವರ ಇಲಾಖೆಯಲ್ಲಿ ಕೆಲಸವಾಗಲೇಬೇಕೆಂದು ಹೋರಾಟ ಮಾಡಿ ಸಂಪನ್ಮೂಲಗಳನ್ನು ರೂಪಿಸುವವರು ಇವರು. ಇಲ್ಲದಿದ್ದರೆ ತೇರು ಮುಂದೆ ಹೋಗುವುದಿಲ್ಲ. ತೇರು ಮುಂದಕ್ಕೆ ಹೋಗಬೇಕಾದರೆ ಅದಕ್ಕೆ ಬೇಕಾದ ಹಣವನ್ನು ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿ ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ, ಮಾನ್ಯ ಅಧ್ಯಕ್ಷರೆ, ದೇವೇಗೌಡರಿಗೆ ಬಹುಶಃ ಕ್ಲರ್ಕ್, ಸೆಕ್ರೆಟರಿಗಳು, ಅಧೀನ ಕಾರ್ಯದರ್ಶಿಗಳು, ಎಲ್ಲರೂ ಹೆದರಿಬಿಟ್ಟು ೧೭.೭೧ ಕೋಟಿ ರೂಪಾಯಿಗಳ ಬದಲು ೮೭.೭೧ ಕೋಟಿ ಹಾಕಿಬಿಟ್ಟಿದ್ದಾರೆ. ಇದು ಪ್ರಿಂಟರ್ಸ್ ಡೆವಿಲೋ ಏನೋ ಗೊತ್ತಿಲ್ಲ. ಪ್ರಿಂಟರ್ ಡೆವಿಲ್ ಕೂಡ ದೇವೇಗೌಡರಿಗೆ ಹೆದರುತ್ತದೆಂದು ಅರ್ಥವಾಗುತ್ತದೆ.

ಇವತ್ತು ರೋಡ್ ಟ್ರಾನ್ಸ್‌ಪೋರ್ಟ್ ಬಹಳ ಪ್ರಾಮುಖ್ಯವಾದಂತಹ ಇಲಾಖೆಯಾಗಿದೆ. ಮಾನ್ಯ ಸದಸ್ಯರಾದ ಶ್ರೀ ಎಂ. ಎಸ್. ಕೃಷ್ಣನ್ ಅವರು ಆಗಾಗ್ಗೆ ಮಾತನಾಡುತ್ತಿದ್ದರು. ಇದಕ್ಕೆ ಹಣ ಕೊಟ್ಟಿದ್ದೇ ಆದರೆ— There was legacy when Government never used to give money to the K. S. R. T. C. ಯಾವಾಗ ಹಣ ಕೊಡುವುದಕ್ಕೆ ಪ್ರಾರಂಭ ಇವರು ಮಾಡಿದರೋ ಆಗ ರೋಡ್ ಟ್ರಾನ್ಸ್‌ಪೋರ್ಟ್ ಹೆಚ್ಚು ಪ್ರಗತಿಯನ್ನು ಗಳಿಸಲಿಕ್ಕೆ ಪ್ರಯತ್ನ ಮಾಡಿತು. ಕಳೆದ ವರ್ಷ ೧೭.೩೧ ಕೋಟಿ ರೂಪಾಯಿಗಳನ್ನು ರಸ್ತೆ ಸಾರಿಗೆಗೆ ಕೊಟ್ಟಿದ್ದರೆ. ಈ ವರ್ಷ ೧೪.೩೧ ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಯಾವ ಯಾವ ಪ್ರಾಮುಖ್ಯವಾದಂತಹ ಕ್ಷೇತ್ರಗಳಿವೆ, ಪ್ರಾಮುಖ್ಯವಾದಂತಹ ಇಲಾಖೆಗಳಿವೆ ಅವುಗಳಿಗೆ ನಾವು ಮಹತ್ವವನ್ನು, ಆದ್ಯತೆಯನ್ನು ಕೊಡಬೇಕಾದ ಪರಿಸ್ಥಿತಿ ನಮ್ಮ ವ್ಯಾಪಕವಾದ ಅರ್ಥವ್ಯವಸ್ಥೆಯಲ್ಲಿ, ಯೋಜನಾ ವ್ಯವಸ್ಥೆಯಲ್ಲಿ ಖಂಡಿತವಾಗಿಯೂ ಮಾಡಬೇಕಾಗಿದೆ, ಏಕೆಂದರೆ ನಿಮ್ಮ ಸರ್ಕಾರದಲ್ಲಿ, ಈ ವಿಚಾರದಲ್ಲಿ ಪ್ಲಾನಿಂಗ್ ಕಮೀಷನ್‌ಗೆ ಹೋದಾಗ ಕೂಡ ರೋಡ್ ಟ್ರಾನ್ಸ್‌ಪೋರ್ಟ್, ಇರಿಗೇಶನ್, ಪವರ್, ಇಂಡಸ್ಟ್ರಿ ಇದರ ಬಗ್ಗೆ ಸರಿಯಾಗಿ ನೋಡಿ ಕೊಂಡಿಲ್ಲವೆಂದು ನಾನು ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಾಮಾನ್ಯ ಶಿಕ್ಷಣದ ಬಗ್ಗೆ ಕೂಡ ಹೇಳಬೇಕಾದರೆ, ಕೊಠಡಿಗಳು ಇಲ್ಲ, ಏಕೋಪಾಧ್ಯಾಯ ಶಾಲೆಗಳು ಇನ್ನೂ ಬಹಳ ಇವೆ. ನೀವು ಪ್ಲಾನ್‌ನಲ್ಲಿ ಹಣ ಕೊಡದೇ ಇದ್ದರೆ— If you could only increase the money in the non-plan, than, you are only rising the Heads of bureaucracy. ನಾನ್‌ಪ್ಲಾನ್‌ನಲ್ಲಿ ಜಾಸ್ತಿ ಮಾಡಿದ್ದೀರಿ. ಆದರೆ ಸಾಮಾನ್ಯ ಶಿಕ್ಷಣಕ್ಕೆ ಕಡಿಮೆ ಕೊಟ್ಟಿದ್ದೀರಿ. ಹೀಗಾದರೆ ಯೂನಿವರ್ಸಲ್ ಎಜುಕೇಶನ್‌ಗೆ ಯಾವ ಯೋಜನೆಯನ್ನು ಮಾಡುತ್ತೀರಿ ? ಮಿಡ್ಡೇ ಮಿಲ್ ಪ್ರೋಗ್ರಾಂ ಕೂಡ ನಿಮ್ಮ ಮೆನಿಫೆಸ್ಟೋದಲ್ಲಿ ಹೇಳಿದೆ. ಇದನ್ನೆಲ್ಲಾ ಮರೆತು, ಕಳೆದ ವರ್ಷ ಸಾಮಾನ್ಯ ಶಿಕ್ಷಣದಲ್ಲಿ ೧೮.೯೮ ಕೋಟಿ ಖರ್ಚು ಮಾಡಿದ್ದರೆ, ಈ ವರ್ಷ ೧೪.೭೪ ಕೋಟಿ ಮಾತ್ರ ಕೊಟ್ಟಿದ್ದೀರಿ. ಇದರಿಂದ ಗ್ರಾಮಾಂತರ ಪ್ರದೇಶದ ಬಡಮಕ್ಕಳ ವಿದ್ಯಾಭ್ಯಾಸ ದೃಷ್ಟಿಯಲ್ಲಿ ಯಾವ ರೀತಿಯ ಕಳಕಳಿ

ನಿಮಗೆ ಇದೆಯೆಂದು ಸ್ಪಷ್ಟವಾಗಿ ಕಾಣುತ್ತಿದೆ, ನಾಲ್ಕು ಕೋಟಿ ರೂಪಾಯಿಗಳನ್ನು ಇವತ್ತು ಸಾಮಾನ್ಯ ಶಿಕ್ಷಣ ಇಲಾಖೆಯಲ್ಲಿ ಕಡಿತ ಮಾಡಿದ್ದೀರಿ ಎಂದರೆ ಸಾಮಾನ್ಯ ಬಡಮಕ್ಕಳ ಜೀವನದಲ್ಲಿ ಕಾರ್ಗತ್ತಲೆ ಹೆಚ್ಚು ಹರಡತಕ್ಕ ವ್ಯವಸ್ಥೆಯನ್ನು ಮಾತ್ರ ಬಹಳ ಚೆನ್ನಾಗಿ ಮಾಡಿದ್ದೀರಿ ಎಂದು ನಾನು ಇವತ್ತು ಹೇಳಬೇಕಾಗಿದೆ. ಗೃಹನಿರ್ಮಾಣದಲ್ಲಿ ಎರಡು ಲಕ್ಷ ಮನೆಗಳನ್ನು ಕೊಡುತ್ತೇವೆ ಎಂದು ಹೇಳಿದ್ದೀರಿ. ಮೆನಿಫೆಸ್ಟೋದಲ್ಲಿ ಕೂಡ ಹಾಗೆಂದು ಕಾಣಿಸಿದ್ದೀರಿ, ಕಳೆದ ವರ್ಷ ಅದದ್ದು ಒಂದು ಲಕ್ಷ ಎರಡು ಸಾವಿರ ಮನೆಗಳೆಂದು ತಾವು ಹೇಳುತ್ತಿದ್ದೀರಿ. ಆದರೆ ಕಳೆದ ವರ್ಷ ಗೃಹನಿರ್ಮಾಣದಲ್ಲಿ ೨೮.೫೨ ಕೋಟಿ ಹಣ ಖರ್ಚು ಮಾಡಿದ್ದರೆ, ಈ ಬಾರಿ ೨೨.೦೬ ಕೋಟಿ ಮಾತ್ರ ಇಟ್ಟಿದ್ದೀರಿ. ಎಂದರೆ ನಿಮ್ಮದೆಲ್ಲಾ ಚುನಾವಣೆ ಘೋಷಣಾಪತ್ರದಲ್ಲಿ, ನಿಮ್ಮ ಭಾಷಣದಲ್ಲಿ ಮಾತ್ರ, ಚುನಾವಣೆಗೆ ಹೋಗುವುದಕ್ಕೆ ಮಾತ್ರ ಎಂದು ಗೊತ್ತಾಗುತ್ತದೆ. ಚುನಾವಣೆ ಮುಗಿದ ಮೇಲೆ ಯಾವುದೂ ನಿಮಗೆ ಬೇಕಾಗಿಲ್ಲ. ವೆಲ್‌ಫೇರ್ ಆಫ್ ಎಸ್ ಸಿ. ಅಂಡ್ ಎಸ್ ಟಿ. ಅಂಡ್ ಅದರ್ ಬ್ಯಾಕ್‌ವರ್ಡ್ ಕ್ಲಾಸಸ್ ಬಗ್ಗೆ ಏನು ಮಾಡಿದ್ದೀರಿ ? ಕಳೆದ ವರ್ಷ ಈ ಬಾಬಿಗೆ ಯೋಜನೆಯಲ್ಲಿ ನಾವು ೯.೩೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೆ, ಈ ವರ್ಷ ಕೊಟ್ಟಿದ್ದು ೭.೯೪ ಕೋಟಿ ರೂಪಾಯಿಗಳನ್ನು ಮಾತ್ರ, ಎಂದರೆ ಎರಡು ಕೋಟಿ ರೂಪಾಯಿಗಳನ್ನು ಕಡಿಮೆ ಮಾಡಿದ್ದೀರಿ. ಹಾಗೆಂದಮೇಲೆ ಎಸ್ ಸಿ. ಎಸ್.ಟಿ. ಬಗ್ಗೆ ನಿಮಗೆ ಎಷ್ಟು ಆಸಕ್ತಿ ಇದೆಯೆಂದು ಸ್ಪಷ್ಟವಾಗಿ ಕಾಣುತ್ತದೆ. ಇವರನ್ನು ಹೇಗೆ ರಕ್ಷಣೆ ಮಾಡಿಕೊಳ್ಳುತ್ತೀರಿ ? ಎರಡು ಕೋಟಿ ರೂಪಾಯಿಗಳನ್ನು ಎಸ್ ಸಿ. ಅಂಡ್ ಎಸ್ ಟಿ, ಮತ್ತು ಹಿಂದುಳಿದ ವರ್ಗದವರಿಗೆ ಕಡಿಮೆ ಮಾಡಿ ಹಿಂದುಳಿದ ವರ್ಗದವರ ಅಭಿವೃದ್ಧಿ ಸಾಧನೆ ಹೇಗೆ ಮಾಡುತ್ತೀರಿ ? ನಿಮಗೆ ಇದರ ಬಗ್ಗೆ ಸಂಪೂರ್ಣವಾಗಿ ನಿರಾಸಕ್ತಿ ಇದೆಯೆಂದು ಇದು ತೋರಿಸುತ್ತದೆ. I think you don't owe any obligation to those people. You think that you must have come to the power because of some other classes of people and not because of SCs/STs and other backward classes, and it is mere manifesto here. ಯೋಜನೆಗೆ ಖರ್ಚು ಮಾಡಿದಂತಹ ಹಣದಲ್ಲಿ ಕ್ರುಷಿಯಲ್ ಸೆಕ್ಟರ್ ಬಡವರಿಗೆ ಸಂಬಂಧಪಟ್ಟಿದ್ದು, ಎಸ್ ಸಿ. ಎಸ್ ಟಿಗೆ ಸಂಬಂಧಪಟ್ಟಿದ್ದು ಇರುವುದು ಗತಿಹೀನರಿಗೆ ಮನೆ ಕಟ್ಟಿಸಿಕೊಡುವುದು, ವಿದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪನೆ ಮಾಡತಕ್ಕಂಥ ಕಾರ್ಯಕ್ರಮ—ಎಲ್ಲಾ ದೃಷ್ಟಿಯಲ್ಲಿಯೂ ಕೂಡ ತಾವು ಬಡ ವರ್ಗದ ಜನರ ಕಣ್ಣಿಗೆ ಮಣ್ಣು ಎರಚಿದ್ದೀರಿ ಹೊರತು ಅವರಿಗೆ ಅನ್ನ ಕೊಡತಕ್ಕಂಥ ಬದುಕಿನಲ್ಲಿ ಆಶಾ ಕಿರಣ ಹುಟ್ಟಿಸತಕ್ಕಂಥ, ಜೀವನದಲ್ಲಿ ಹೆಚ್ಚಿನ ಭರವಸೆಗಳನ್ನು ಮೂಡಿಸುವುದರಲ್ಲಿ ಸಫಲರಾಗಿದ್ದೀರಿ, ಈ ವರ್ಗದ ಜನರಿಗೆ ಏನೊಂದು ಆಸೆಯ ಚಿಗುರು ಇತ್ತು ಅದು ನೀವು ಅಧಿಕಾರಕ್ಕೆ ಬಂದಮೇಲೆ ಇವತ್ತು ಕತ್ತರಿಸಿಬಿಟ್ಟಿದ್ದೀರಿ ಚಿವುಟಿ ಹಾಕಿಬಿಟ್ಟಿದ್ದೀರಿ, ಯೋಜನಾ ಕ್ಷೇತ್ರದಲ್ಲಿ ಹಣವನ್ನು ಕೊಟ್ಟಂತಹ ವಿಚಾರದಲ್ಲಿ ಇದು ಸ್ಪಷ್ಟವಾಗಿ ಕಾಣುತ್ತದೆ ಎಂದು ನಾನು ತಮಗೆ ಹೇಳಬೇಕಾಗಿದೆ.

ತಾವು ಒಂಭತ್ತು ತಿಂಗಳ ಅವಧಿಯಲ್ಲಿ ಏನು ಸಾಧನೆ ಮಾಡಿದ್ದೀರಿ ಎಂದು ವಿಚಾರ ಮಾಡಲಿಕ್ಕೆ ಹೋದರೆ ಮುಖ್ಯವಾಗಿ ೨೦ ಅಂಶಗಳ ಕಾರ್ಯಕ್ರಮ. ನನಗೆ ಜ್ಞಾಪಕ ಇದ್ದಹಾಗೆ ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಸಭೆಗೆ ಸನ್ಮಾನ್ಯ ಮುಖ್ಯ ಮಂತ್ರಿಗಳು ಹೋಗಿದ್ದರು. ವಾರ್ಷಿಕ ಯೋಜನೆ ಬಗ್ಗೆ ಚರ್ಚೆ ಮಾಡುವುದಕ್ಕೆ ಅವರು ಹೋಗಿದ್ದಾಗ ಹೇಳಿದ್ದಾರೆ—ಇಪ್ಪತ್ತು ಅಂಶದ ಕಾರ್ಯಕ್ರಮವನ್ನು ನಾವು ಮುಂದುವರಿಸುತ್ತೇವೆ ಎಂದು. ಇದು ಒಂದು ರಾಜ್ಯಕ್ಕೆ, ಒಂದು ಪಕ್ಷಕ್ಕೆ ಸಂಬಂಧಪಟ್ಟ ಕಾರ್ಯಕ್ರಮ ಅಲ್ಲ. ಇಪ್ಪತ್ತು ಅಂಶದ ಕಾರ್ಯಕ್ರಮ ಇದು ಇಡೀ ರಾಜ್ಯದ ಸಂಪೂರ್ಣ ಜೀವನಾಡಿಗಳಿಗೆ ಲವಲವಿಕೆ ಕೊಡತಕ್ಕಂಥದ್ದಾಗಿವೆ. ಇವತ್ತು ತಾವು ಏನು ಮಾಡಿದ್ದೀರಿ ಎಂದರೆ ರಾಜ್ಯಮಟ್ಟದಲ್ಲಿ ೨೦ ಅಂಶಗಳ ಕಾರ್ಯಕ್ರಮದ ಅನುಷ್ಠಾನದ ಸಮಿತಿ ಎಂದು ಇತ್ತು. ಅದನ್ನು ೨೦ ಅಂಶಗಳ ರಾಜ್ಯಮಟ್ಟದ ಸಮಿತಿ ಎಂದು ಹೇಳಿಕೊಳ್ಳುವುದಕ್ಕೆ ನಿಮಗೆ ನಾಚಿಕೆ. ಇದನ್ನು ಡೆವಲೆಪ್‌ಮೆಂಟ್ ಪ್ರೋಗ್ರಾಂ ರಿವ್ಯೂ ಎಂದು ಮಾಡಿದ್ದೀರಿ, ಕೇಂದ್ರದಲ್ಲಿ ಈರೀತಿ ಮಾತು ಕೊಟ್ಟು ಬಂದಿದ್ದೀರಿ. ಜನತೆಗೂ ಮಾತು ಕೊಟ್ಟಿದ್ದೀರಿ. ಈ ಸದನದಲ್ಲೂ ಮಾತು ಕೊಟ್ಟಿದ್ದೀರಿ. You don't want to call it as a 20 point economic programme review but you want to call it as Development Plan Review. ಇವತ್ತು ಅದನ್ನು ಡೆವಲಪ್‌ಮೆಂಟ್ ಪ್ಲಾನ್ ರಿವ್ಯೂ ಎಂದು ಮಾಡಿ ಕಾರ್ಯಕ್ರಮಗಳನ್ನು ಮಾಡುತ್ತಿದ್ದೀರಿ. ಜಿಲ್ಲಾ

ಮಟ್ಟದ ೨೦ ಅಂಶಗಳ ಕಾರ್ಯಕ್ರಮದ ಕಮಿಟಿ ಇನ್ನೂ ಕೂಡ ರಿವ್ಯೂ ಆಗಿಲ್ಲ. ತಾಲ್ಲೂಕು ಸಮಿತಿ ಕೂಡ ರೀಕಾನ್ಸ್ಟಿಟ್ಯೂಟ್ ಆಗಿಲ್ಲ ಒಂಭತ್ತು ತಿಂಗಳಾಯಿತು. ಜಿಲ್ಲಾ ಮಟ್ಟದಲ್ಲಿ ೨೦ ಅಂಶಗಳ ಕಾರ್ಯಕ್ರಮ ಅನುಷ್ಠಾನ ಸಮಿತಿಗೆ ಮಂತ್ರಿಗಳನ್ನು ಹಾಕಿದ್ದೀರಿ. ಅನಂತರ ಪುನಃ ಅದನ್ನು ಬದಲಾಯಿಸಿ ಡೆವಲೆಪ್‌ಮೆಂಟ್ ರಿವ್ಯೂ ಕಮಿಟಿ ಎಂದು ಹೇಳಿ ಅದಕ್ಕೆ ಮತ್ತೊಬ್ಬ ಮಂತ್ರಿಯನ್ನು ಹಾಕಿದ್ದೀರಿ.

ಇದರ ಅರ್ಥ ಏನು ಎಂಬುದು ನಮಗೆ ಅರ್ಥವಾಗುವುದಿಲ್ಲ. ೨೦ ಅಂಶಗಳ ಕಾರ್ಯಕ್ರಮವನ್ನು ಸಮೀಕ್ಷೆ ಮಾಡುವುದಕ್ಕಾಗಿ ಎಂದು ಹೇಳಿ ಜಿಲ್ಲೆಗೊಬ್ಬರಂತೆ ಸಚಿವರನ್ನು ನೇಮಿಸಿದ್ದೀರಿ. ಅದರ ಜೊತೆಗೆ ಮತ್ತೊಬ್ಬ ಸಚಿವರನ್ನು ಜಿಲ್ಲಾ ಅಭಿವೃದ್ಧಿಯ ಸಮೀಕ್ಷೆ ಸಮಿತಿ ಅಧ್ಯಕ್ಷರು ಎಂದು ಕೂಡ ಮಾಡಿದ್ದೀರಿ. ಈ ಸರ್ಕಾರ ೨೦ ಅಂಶಗಳ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುವಲ್ಲಿ ಅವುಗಳ ಚೈತನ್ಯವನ್ನು ಕುಗ್ಗಿಸತಕ್ಕಂತಹ ಕೆಲಸಗಳನ್ನು ತಾವು ಮಾಡಿದ್ದೀರಿ ಎಂಬ ಭಾವನೆ ನಮಗೆ ಬಂದಿದೆ ಅದನ್ನು ಸ್ಪಷ್ಟಪಡಿಸಬೇಕು. ಎಕನಾಮಿಕ್ ಡವಲಪ್‌ಮೆಂಟ್ ರಿವ್ಯೂವಿನಲ್ಲೂ ಕೂಡ ಏನೂ ಅಭಿವೃದ್ಧಿಯನ್ನು ಸಾಧನೆ ಮಾಡಿದ್ದೀರೆಂದು ನಾನು ನೋಡಿದಾಗ ಇವೊತ್ತು ಈ ೯ ತಿಂಗಳ ಕಾಲದಿಂದ ತಾವು ಅಧಿಕಾರವನ್ನು ನಡೆಸುತ್ತಿದ್ದೀರಿ. ನಾವು ಅನೇಕ ವೇದಿಕೆಗಳನ್ನು ಉಪಯೋಗ ಮಾಡಿಕೊಂಡು It is non-performing Government ಎಂದು ಹೇಳಿದ್ದೇನೆ. ಈ ಗೌರಮೆಂಟ್ ಚಲನೆಯಾಗುತ್ತಿಲ್ಲ, ಕೆಲಸ ಮಾಡುತ್ತಿಲ್ಲ, ೨೦ ಅಂಶಗಳ ಕಾರ್ಯಕ್ರಮ ಅನುಷ್ಠಾನವಾಗುತ್ತಿಲ್ಲ. ಬಡವರಿಗೆ ಅನುಕೂಲವಾಗುತ್ತಿಲ್ಲವೆಂದು ಹೊರಗೆ ಮತ್ತು ಸದನದ ಒಳಗೂ ಹೇಳಿದ್ದು ಉಂಟು. ಕೆಲವರು ಆದಕ್ಕೆ ಸಾರ್ವಜನಿಕವಾಗಿ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದಾರೆ. ಅದೇನೆಂದರೆ, ಏನೊ ಮೊನ್ನೆ ತಾನೆ ಅಧಿಕಾರಕ್ಕೆ ಬಂದಿದ್ದಾರೆ, ಈಗಲೇ ಅವರ ಬಗ್ಗೆ ಇವರು ಮಾತನಾಡುವುದಕ್ಕೆ ಹೊರಟಿರು ಎಂಬುದಾಗಿ ನಾವು ಕೇಳಿದ್ದೇವೆ. ನಮಗೆ ಮನಸ್ಸು ಇಲ್ಲದೆ ಇದ್ದರೂ ಟೀಕೆ ಮಾಡುತ್ತಿದ್ದಾರೆ ಎಂದು ಹೇಳಿದ್ದನು ನಾನು ಕೇಳಿದ್ದೇನೆ ಇದು ರಾಜಕೀಯದ ಪ್ರಶ್ನೆಯಲ್ಲ. ರಾಜ್ಯದ ಅಭಿವೃದ್ಧಿಗೆ ಅನುಷ್ಠಾನಕ್ಕೆ ತರುವ ಬಗ್ಗೆ ಹಾಕಿರತಕ್ಕಂತಹ ಕಾರ್ಯಕ್ರಮಗಳು ಎಲ್ಲರ ಸ್ವತ್ತು. ಆ ಒಂದು ಕಾರ್ಯಸಾಧನೆ ಮಾಡುವುದಕ್ಕಾಗಿಯೇ ವಿಶೇಷವಾಗಿ ಕರ್ನಾಟಕದ ಜನ ಓಟು ಕೊಟ್ಟು, ನಿಮ್ಮನ್ನು ಅಲ್ಲಿ ಕೂರಿಸಿದ್ದಾರೆ. ತಮಗೆ ಎಚ್ಚರಿಕೆಯನ್ನು ಕೊಡತಕ್ಕಂತಹ, ಕಿವಿಯನ್ನು ಹಿಂಡತಕ್ಕಂತಹದ್ದು, ವಿರೋಧ ಪಕ್ಷದಲ್ಲಿದ್ದುಕೊಂಡು ಮಾತನಾಡುವುದು. ಇದು ನಮ್ಮ ಕರ್ತವ್ಯ. ಪೊಲಿಟಿಕಲ್ ಸ್ಟೇಟ್‌ಮೆಂಟ್‌ನ್ನು ಕೊಟ್ಟ ತಕ್ಷಣ ನಮ್ಮ ಮೇಲೆ ನೀವು ಬೀಳುತ್ತೀರಿ. ನಾವು ಮಾಡಿದಂತಹ ರಾಜಕೀಯ ಟೀಕೆಗಳನ್ನು ರಾಜಕೀಯವಾಗಿಯೇ ಎದುರಿಸಬೇಕಾಗುತ್ತದೆ. ನಿಮ್ಮನ್ನು ನಾವು ಹೆದರಿಸುತ್ತೇವೆ ನಮ್ಮನ್ನು ನೀವು ಹೆದರಿಸಬೇಕು. ಆದರೂ ತಾವು ಅಲ್ಲಿಗೆ ನಿಲ್ಲಬಾರದು. You can attack us politically. You can say that Sri M. Veerappa Moily is making a malic ous statement......ತಾವು ಹೇಳಿದ್ದಿದ್ದರೆ ಬಹಳ ಸಂತೋಷವಾಗುತ್ತಿತ್ತು. Politically you are bound to do it. You have got a right to answer us politically. ಆದರೆ ಇದನ್ನು ಹೇಳಿದ್ದ ಮೇಲೂ ಎದುರು ಉತ್ತರ ಬರಲಿಲ್ಲ ಏಕೆಂದರೆ You need not reply. We will complement you for accepting our criticisms? ಆದರೆ ತಾವು ಏನು ಮಾಡುತ್ತೀರಿ ಎಂಬುದು ಅಲ್ಲಿಗೇ ನಿಲ್ಲಬಾರದು. ಏನುಅಧಿಕಾರದಲ್ಲಿದ್ದಂತಹವರು, ಅಥವಾ ವಿರೋಧಪಕ್ಷದ ನಾಯಕರು ಅಥವಾ ಶಾಸಕರೂ ಎಂದು ತಿಳಿದುಕೊಳ್ಳಿ. ಏನೊ ವಿಚಾರ ಹೇಳುತ್ತಿದ್ದಾರೆ ಅದರ ಬಗ್ಗೆ ವಿಚಾರ ಮಾಡೋಣ ಎಂದು ಆಲೋಚನೆ ಮಾಡಿದ್ದೀರಾ ? ಮಾಡಲಿಲ್ಲ ಎಂದು ಹೇಳುವುದಿಲ್ಲ. ಈ ರೀತಿ ತಾವು ಮಾಡಿದ್ದೀರಾ ? ಈಗಲೂ ಇಲ್ಲ. ಮಾಡಿದ್ದೀರಿ ಎಂದು ಹೇಳಬೇಕಾದರೂ ಆದಕ್ಕೆ ಯಾವುದಾದರೊಂದು ನಿದರ್ಶನಬೇಕು. ಯಾವ ವಿಧವಾದ ಕೆಲಸಗಳಾಗಿಲ್ಲ ಎಂದು ಹೇಳುತ್ತೇನೆ, ಮತ್ತು ಅದರ ಬಗ್ಗೆ ಟೀಕೆ ಮಾಡಿದ್ದೇನೆ. ಆ ಕೆಲಸದಲ್ಲಿ ಏನು ಪ್ರಗತಿಯನ್ನು ಸಾಧಿಸಿದ್ದೀರಿ ಎಂಬುದನ್ನು ತಾವು ತೋರಿಸಿ. ತಾವು ಆಲೋಚನೆ ಮಾಡಿ, ಪ್ರಮುಖವಾದ ಕ್ಷೇತ್ರಗಳನ್ನೂ ನೀವು ನೋಡಬೇಕೆಂದು ನಾನು ಸೂಚಿಸುತ್ತಿದ್ದೇನೆ. ಈಗ ತಮಗೂ ಗೊತ್ತಿದೆ. I was also a Planning Minister apart from the Finance. As a Minister for Finance, I knew how that the Planned Schemes shold be implemented ಈ ಯೋಜನೆಗಳ ರಿವ್ಯೂವನ್ನು ಆಗಾಗ ಮಾಡುತ್ತಾ ಇದ್ದೆವು. ಕೇಂದ್ರ ಸರ್ಕಾರದ ಯೋಜನಾ

ಆಯೋಗದ ಮುಂದೆ ಕೆಲವು ಪ್ರಮುಖವಾದ ಕಾರ್ಯಕ್ರಮಗಳನ್ನು ಜಾರಿಗೆ ಕೊಡುವ ಬಗ್ಗೆ ಚರ್ಚೆಯಾಗುತ್ತದೆ, ಪ್ರಮುಖವಾದ ಕಾರ್ಯಕ್ರಮಗಳು ಎಂದರೆ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಹೊಂದಾಣಿಕೆಯಾಗುವ ಕೆಲವು ಕಾರ್ಯಕ್ರಮಗಳ ಬಗ್ಗೆ ಇಂಡಿಕೇಟರ್ಸ್ ಅನ್ನು ಕಳುಹಿಸುತ್ತಾರೆ. ಆದರೆ ಇತ್ತೀಚಿನ ವರದಿ ಬಂದಿಲ್ಲ, ಪತ್ರಿಕೆಯಲ್ಲಿ ಬಂದದ್ದನ್ನು ನಾನು ನೋಡಿದ್ದೇನೆ. ಇಂಡಿಕೇಟರ್ಸ್‌ಗೆ ಸಂಬಂಧಪಟ್ಟ ರಿವ್ಯೂ ವರದಿ ನನಗೆ ಸಿಕ್ಕಲಿಲ್ಲ, ಅದರಲ್ಲಿ ಏನು ಹೇಳಿದ್ದಾರೆಂದರೆ, ೨೦ ಆರ್ಥಿಕ ಅಂಶಗಳ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದಂತಹ ರಾಜ್ಯಗಳಲ್ಲಿ ಕರ್ನಾಟಕ ಮೊದಲನೆಯ ಸ್ಥಾನದಲ್ಲಿತ್ತು. ಆದರೆ ಇವತ್ತು ಕರ್ನಾಟಕ ೩ನೇ ಸ್ಥಾನದಲ್ಲಿದೆ, ಲೇಟೆಸ್ಟ್ ಆಗಿ ೫ನೇ ಸ್ಥಾನಕ್ಕೆ ಹೋಗಿದೆ ಎಂದು ನಮಗೆ ವರ್ತಮಾನ ಬಂದಿದೆ. ಈ ರೀತಿ ಮಾಡಿದರೆ ಮುಂದೆ ೫ರಿಂದ ೧೦–೧೫ನೇ ಸ್ಥಾನದವರೆಗೂ ನಮ್ಮ ಕರ್ನಾಟಕ ಹೋಗಬಹುದು. ಈ ರೀತಿ ಹಿಂದಕ್ಕೆ ಹೋಗುವಂಥದ್ದನ್ನು ತಾವು ತಡೆಗಟ್ಟಬೇಕು. ನಾವು ಏನು ೨೦ ಅಂಶಗಳ ಕಾರ್ಯಕ್ರಮದ ಅನುಷ್ಠಾನಲ್ಲಿ ಮೊದಲನೇ ಸ್ಥಾನದಲ್ಲಿ ಕರ್ನಾಟಕವನ್ನು ಇಟ್ಟಿದ್ದೆವು, ಅದನ್ನು ಉಳಿಸಿಕೊಂಡು ಹೋಗಿದ್ದರೆ ತಮಗೆ ಸಹಭಾಷ್ ಎಂದು ಹೇಳುತ್ತಿದ್ದೆವು. ಇಲ್ಲಿಯವರೆವಿಗೂ ನಾನು ನಿಮ್ಮನ್ನು ಟೀಕೆ ಮಾಡುತ್ತಿರಲಿಲ್ಲ. ಆದರೆ ಆ ಕೆಲಸವನ್ನು ನೀವು ಮಾಡಿಲ್ಲ ಅದಕ್ಕಾಗಿ ನಿಮ್ಮನ್ನು ಟೀಕೆ ಮಾಡಬೇಕಾಗುತ್ತದೆ. ನಾವು ಅಷ್ಟೇ ಅಲ್ಲ ಜನರೂ ನಾಳೆ ನಿಮ್ಮನ್ನು ಟೀಕೆ ಮಾಡಬಹುದು. ತಾವು ೨೦ ಅಂಶಗಳ ಕಾರ್ಯಕ್ರಮವನ್ನು ರಿವ್ಯೂ ಮಾಡಲೇಬೇಕು.

ಇನ್ನು ಐ.ಆರ್.ಡಿ.ಪಿ. ಕಾರ್ಯಕ್ರಮದಲ್ಲಿ ಏನಾಗಿದೆ ಎಂಬುದರ ಬಗ್ಗೆ ಒಂದೇ ಒಂದು ಉದಾಹರಣೆಯನ್ನು ತಮ್ಮ ಗಮನಕ್ಕಾಗಿ ಹೇಳುತ್ತೇನೆ. ೧,೦೫,೦೦೦ ಜನ ಇದರ ಉಪಯೋಗವನ್ನು ಪಡೆದುಕೊಳ್ಳಬೇಕಾಗಿತ್ತು. ಈ ಯೋಜನೆಯಲ್ಲಿ ತಾವು ಸಾಧನೆ ಮಾಡಿರತಕ್ಕಂತದ್ದು ಜೂನ್ ತಿಂಗಳ ಅಂತ್ಯದವರೆಗೆ ೬೪೬೦ ಜನ ಹಾಗೂ ಜುಲೈಯಿಂದ ಆಗಸ್ಟ್ ಅಂತ್ಯದವರೆಗೆ ೨೪೨೨ ಜನ ಇದರಿಂದ ಉಪಯೋಗವನ್ನು ಪಡೆದಿದ್ದಾರೆ. ಇದನ್ನು ನಾವು ಲೆಕ್ಕ ಹಾಕಿ ನೋಡಿದಾಗ ಶೇಕಡ ೨೫ರಷ್ಟು ನೀವು ಅಚೀವ್ ಮಾಡಿರುವುದು, ಏನು ಮಾಡಬೇಕು. ಯೋಜನಾ ಇಲಾಖೆಯಲ್ಲಿ ಇಂಡಿಕೇಟರ್ಸ್ ಏನು ಇವೆ ಅದರಲ್ಲೂ ಕೂಡ ಶೇಕಡ ೨೫ ರಷ್ಟು ಮಾತ್ರ ಅಚೀವ್ ಆಗಿರುವುದು. You must whip them up. If the progress on the programme is less than 33% of the target, it is accounted as poor and Z ro mark is assigned ಐ.ಆರ್.ಡಿ.ಪಿ.ಯಲ್ಲಿ ಸೊನ್ನೆ ನಂಬರ್‌ನು ನಾನು ಕೊಡಲೇ ? This is the indicator whicd is prescribed by the planning commission. I am just finding out some points to appreciate this Government. ಸನ್ಮಾನ್ಯ ಸೂರ್ಯನಾರಾಯಣ್ ರವರೇ ಈ ಸರ್ಕಾರವನ್ನು ಹೊಗಳುವಂತಹದ್ದು ಎಲ್ಲಿಯಾದರೂ ಇದೆಯಾ ಎಂದು ಹುಡುಕುತ್ತಿದ್ದೇನೆ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—೨೦ ಅಂಶಗಳ ಕಾರ್ಯಕ್ರಮವನ್ನು ವಿಸ್ತರಣೆ ಮಾಡಿ ಮಾತನಾಡುತ್ತಿದ್ದೀರಿ, ೨೦ ಪಾಯಿಂಟ್ ಪ್ರೋಗ್ರಾಂನ ವಿಚಾರದಲ್ಲಿ ಏನು ಆಗುತ್ತಿದೆ ಎಂದು ಕೇಳುತ್ತಾ ಇದ್ದೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನೀವು ಮಾಡಿದಂತಹ ಕಾರ್ಯಕ್ರಮ ಪ್ರಕಾರ ಬಹಳ ಕೆಳಮಟ್ಟದ ಕೆಲಸಗಳು ಆಗಿವೆ.

ಇನ್ನು ಎನ್. ಆರ್. ಇ. ಪಿ. ಕಾರ್ಯಕ್ರಮದಲ್ಲೆಯೂ ಕೂಡ ೧೯೮೩–೮೪ರಲ್ಲಿ ೧.೬೬ ಲಕ್ಷ ಮ್ಯಾನ್‌ಡೇಸ್ ತಾವು ಮಾಡಬೇಕಾಗಿತ್ತು. ಆದರೆ ತಾವು ಎಷ್ಟು ಮಾಡಿದೀರಿ ಎಂದರೆ ೫೯.೨೦ ಎಂದರೆ ಮತ್ತೆ it is a very poor per ormance. I am telling you about the percentagePlea e verify the same with your people.

SRI RAMAKRISHNASHEGDE....Target is fixed for the entire year.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾನೂ ಯೋಜನೆ ಇಲಾಖೆಯ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. That is the indication given by the Planning Department

If that is so, **the** per/ormance to that extent is very poor. There is a circular **with** regard **to** the Plan Monitering and Information **Division.**

ಇನ್ನು ಭೂಸುಧಾರಣೆಯ ವಿಚಾರವಾಗಿ ಹೇಳುವುದಾದರೆ, ತಾವು ಇದವರೆವಿಗೆ ೪೭ ಸಾವಿರ ಹೆಕ್ಟರ್ ಭೂಮಿಯನ್ನು ಹಂಚಬೇಕಾಗಿತ್ತು. ಇದುವರೆವಿಗೆ ಎಂದರೆ ಆಗಸ್ಟ್ ಅಂತ್ಯದವರವಿಗೆ ತಾವು ಹಂಚಿದ್ದು ಎಷ್ಟು ಎಂದರೆ ೨,೪೦೦ ಹೆಕ್ಟೇರ್ಸ್‌ನ್ನು ಮಾತ್ರ ಇದರ ಬಗ್ಗೆಯೂ ಕೂಡ ಲೆಕ್ಕ ಹಾಕಿದರೆ ೨೮ ಪರ್ಸೆಂಟನ್ನು ಮಾತ್ರ ತಾವು ಅಚೀವ್ ಮಾಡಿದ್ದೀರಿ. ಆಮೇಲೆ ಬ್ಯಾಂಡೆಡ್ ಲೇಬರರ್ಸ್ ಅನ್ನು ಪುರ್ನವಸತಿ ಮಾಡಬೇಕಾಗಿದ್ದುದು ೧೫,೨೩೪ ಜನ. ಆದರೆ ತಾವು ಇದುವರೆವಿಗೂ ಮಾಡಿದ್ದುದು ೧,೬೫೨ ಜನರಿಗೆ ಮಾತ್ರ ಇದು ಏನೇನೂ ಸಾಲದು. ಇನ್ನೂ ವರ್ಷ ಪೂರ್ಣವಾಗಿಲ್ಲ. ಕೊನೆಯಲ್ಲಿ ಈ ಕಾರ್ಯಕ್ರಮವನ್ನು ಅಸಾಪ್ಯಾನಕ್ಕೆ ತರುತ್ತೇವೆಂದು ತಾವು ಹೇಳುವುದಾದರೆ ಯೋಜನಾ ಇಲಾಖೆಎಂದು ಏಕೆ ಇರಬೇಕು? ಅವರವರ ಇಲಾಖೆಗೆ ಕೊಟ್ಟು ಬಿಡಿ. ಸಾಮಾನ್ಯವಾಗಿರುವಂತಹ ಕಾರ್ಯಕ್ರಮ ಅಲ್ಲ ಇದು ಈ ಕಾರ್ಯಕ್ರಮಗಳನ್ನು ಹಂತ ಹಂತವಾಗಿ ಇಂತಿಷ್ಟು ಮಾಡಬೇಕೆಂಬ ನಿಯಮ ಇದ್ದರೂ ಅದನ್ನು ಮಾಡಲಿಲ್ಲವಲ್ಲವೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೊಂದು ವಿಚಾರ ವೇನೆಂದರೆ, ಹರಿಜನ–ಗಿರಿಜನ ಅಭಿವೃದ್ಧಿ ನಿಗಮದ ವತಿಯಿಂದ ೩೦ ಸಾವಿರ ಹರಿಜನ–ಗಿರಿಜನರಿಗೆ ಸಹಾಯವನ್ನು ಮಾಡಬೇಕಾಗಿತ್ತು. ಅಂದರೆ, ಕೇವಲ ೭,೨೪೦ ಜನರಿಗೆ ಮಾತ್ರ ಈ ಒಂದು ಸಹಾಯವನ್ನು ತಾವು ಕೊಟ್ಟಿದ್ದೀರಿ.

Again it is very poor performance. ಹಾರ್ಟಿಕಲ್‌ಚರಲ್ ಡಿಪಾರ್ಟ್‌ಮೆಂಟ್ ತೆಗೆದುಕೊಳ್ಳಿ, ಇನ್ನು ಇತರೇ ಬೇರೆ ಬೇರೆ ಇಲಾಖೆಗಳಲ್ಲೇ ತೆಗೆದುಕೊಳ್ಳಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟವರ್ಗದವರ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡು ಕೆಲಸ ಮಾಡಬೇಕಾಗಿತ್ತೋ ಆ ಕೆಲಸಗಳನ್ನು ಏನೂ ಮಾಡಿದಂತೆ ಕಾಣಲಿಲ್ಲ. ಅಗ್ರಿಕಲ್‌ಚರಲ್ ಡಿಪಾರ್ಟ್‌ಮೆಂಟ್‌ನಲ್ಲಾಗಲಿ, ಹಾರ್ಟಿಕಲ್‌ಚರಲ್ ಡಿಪಾರ್ಟ್‌ಮೆಂಟಿನಲ್ಲಾಗಲಿ ಹಾಗೆ ಎಲ್ಲಾ ಇಲಾಖೆಯಲ್ಲೂ ತೆಗೆದುಕೊಂಡರೆ ತಮ್ಮ ಒಂದು ಪರ್‌ಫಾರ್ಮೆನ್ಸ್ ನೋಡಿದರೆ ಎಲ್ಲಾದರಲ್ಲೂ ಬಹಳ ಪೂರ್ ಆಗಿದ್ದೀರಿ.

ಇನ್ನು ಕುಡಿಯುವ ನೀರಿನ ಸರಬರಾಜು ಬಗ್ಗೆ ಹೇಳಬೇಕಾದರೆ ನೀರಿಗೆ ಅಭಾವ ಇರುವ ಹಳ್ಳಿಗಳು ಇರತಕ್ಕಂಥಾದ್ದು ೯೯೮೭, ಇದರಲ್ಲಿ ತಾವು ಜುಲೈ ತಿಂಗಳಿನಲ್ಲಿ ನೀರು ಸರಬರಾಜು ಮಾಡಿರ ತಕ್ಕಂಥಾದ್ದನ್ನು ನೋಡಿದರೆ ೪೭೪. ಮತ್ತೆ ಇನ್ನೊಂದು ತಿಂಗಳು ನೋಡಿದರೆ ೨೯೧, ಒಟ್ಟು ೭೬೫ ಮಾಡಿದ್ದೀರಿ. ಇಂಡಿಕೇಟರ್ ಪ್ರಕಾರ ನೋಡಿದರೆ ಇದೂ ಸಹ ಬಹಳ ಪೂರ್ ಪರ್‌ಫಾರ್ಮೆನ್ಸ್. ಹೀಗಿರುವಾಗ ನಿಮಗೆ ನಾವು ಹೇಗೆ ಸರ್ಟಿಫಿಕೇಟ್ ಕೊಡುವುದು? ಇದರ ಬಗ್ಗೆ ವಿಲೇಜಸ್ ಕವರ್ ೩೬೫ ಮಾಡಬೇಕಾಗಿತ್ತು. ಅದರಲ್ಲಿ ಜುಲೈ ತಿಂಗಳಲ್ಲಿ ೨೫ ಮಾಡಿದ್ದೀರಿ ಇನ್ನೊಂದು ತಿಂಗಳಿನಲ್ಲಿ ನೋಡಿದರೆ ಬರೀ ಒಂದೇ ಒಂದು ಮಾಡಿದ್ದೀರಿ ಇದೂ ಸಹ ಬಹಳ ಪೂರ್ ಪರ್‌ಫಾರ್ಮೆನ್ಸ್.

ಇನ್ನು ಸ್ಲಂ ಇಂಪ್ರೂವ್‌ಮೆಂಟ್ ನೋಡಿದರೆ ನಿಮ್ಮ ಟಾರ್ಗೆಟ್ ಇರುವುದು ೫೭,೪೫೦ ಅದರಲ್ಲಿ ನೀವು ರೀಹ್ಯಾಬಿಲಿಟೇಷನ್ ಮಾಡಿರುವುದು ಬರೀ ೧೩೫೦, ಇದೂ ಸಹ ಬಹಳ ಪೂರ್ ಫಾರ್ಮೆನ್ಸ್.

ಇನ್ನು ರೂರಲ್ ಎಲೆಕ್ಟ್ರಿಫಿಕೇಷನ್ ಬಗ್ಗೆ ಹೇಳಬೇಕಾದರೆ ಇದು ಬಹಳ ಪ್ರಾಮುಖ್ಯವಾದುದು, ಇದನ್ನು ಕೆ.ಇ.ಬಿ. ಅವರೇ ಕಂಟಿನ್ಯೂ ಮಾಡಬೇಕು. ಇದರಲ್ಲಿ ವಿಲೇಜಸ್ ಟಿ.ಬಿ. ಎಲೆಕ್ಟ್ರಿಫೈಡ್ ಮಾಡಬೇಕಾದ್ದು ಪ್ಲ್ಯಾನ್ ವಿಲೇಜಸ್ ೧೬೫೫ ಇದೆ. ಇದರಲ್ಲೂ ಸಹ ಹೆಚ್ಚು ಸಾಧನೆ ಮಾಡಿಲ್ಲ.

ಇನ್ನು ಹ್ಯಾಮಲೆಟ್ಸ್ ಬಗ್ಗೆ ಹೇಳುವುದಾದರೆ ಇದರಲ್ಲಿ ೪೦೮೧ ಅಚೀವ್‌ಮೆಂಟ್ ಮಾಡಬೇಕಾಗಿತ್ತು. ನೀವು ಮಾಡಿರುವುದು ೨೦೬೩. ಇದರಲ್ಲಿ ಹೆಚ್ಚು ಸಾಧನೆಯಾಗಿಲ್ಲ. ಉದಾಹರಣೆಗೆ ನೀವು ಮಾಡಿರುವುದು ನೋಡಿದರೆ ಜುಲೈ ತಿಂಗಳಲ್ಲಿ ೧೧೮ ಇದೆ ಇನ್ನೊಂದು ತಿಂಗಳಲ್ಲಿ ಒಂದೇ ಒಂದು ಇದೆ ಇದರಲ್ಲೂ ಸಹ ಆವರೇಜ್ ನೋಡಿದರೆ ಬಹಳ ಪೂರ್‌ಫಾರ್ಮೆನ್ಸ್ ಇದೆ. ಈ ೯ ತಿಂಗಳಲ್ಲಿ ನೀವು ಯಾವ ರೀತಿಯಾಗಿ ಕೆಲಸ ಮಾಡಿದ್ದೀರಿ ಎನ್ನುವುದು ಈ ಒಂದು ಸಾಧನೆಯಿಂದಲೇ ಗೊತ್ತಾಗುತ್ತದೆ.

ಇನ್ನು ನಿಮ್ಮ ಪರ್‌ಫಾರ್‌ಮೆನ್ಸ್ ಬಗ್ಗೆ ಹೇಳುವುದಾದರೆ, ಅದೂಸಹ ಹಿನ್ನಡೆಯಲ್ಲಿ ನಡೆಯುತ್ತಾ ಇದೆ. ಇದಕ್ಕೆ ತಮ್ಮ ಇಲಾಖೆಯಲ್ಲಿ ನಡೆಯತಕ್ಕಂಥಾ ಕೆಲಸವೇ ಸಾಕ್ಷಿಯಾಗಿದೆ.

ಭಾಗ್ಯಜ್ಯೋತಿ ಬಗ್ಗೆ ಹೇಳುವುದಾದರೆ, ಆ ಸ್ಕೀಂ ಹಾಗೆಯೇ ಇದೆ.

ಇನ್ನು ಈ ಒಂದು ಯೋಜನೆ ಪ್ರಕಾರ ರೈತರಿಗೆ ೬೦ ಸಾವಿರ ಪಂಪುಸೆಟ್ಟುಗಳನ್ನು ಎನರ್ಜೈಸ್ ಮಾಡಬೇಕಾಗಿತ್ತು, ಅದೂ ಸಹ ಹೆಚ್ಚು ಸಾಧನೆಯಾಗಿಲ್ಲ. ಕಳೆದ ತಿಂಗಳು ನೋಡಿದರೆ ೨೨೦೭ ಆಗಿದೆ. ಒಟ್ಟು ೯೮೭೨ ಆಗಬೇಕಾಗಿತ್ತು. ಆಗಿಲ್ಲ. ಆದುದರಿಂದ ಈ ಭಾಗ್ಯಜ್ಯೋತಿ ಸ್ಕೀಂನಲ್ಲೂ ಕೂಡ ಯಾವರೀತಿಯಾಗಿಯೂ ಹೆಚ್ಚಾಗಿ ಸುಧಾರಣೆಯಾಗಿಲ್ಲ ಎಂದು ಹೇಳುತ್ತೇನೆ.

ಇನ್ನು ಫ್ಯಾಮಿಲಿ ವೆಲ್‌ಫೇರ್ ಇಲಾಖೆಯಲ್ಲಿ ತೆಗೆದುಕೊಳ್ಳಿ, ನಿಮ್ಮ ಯಾವುದೇ ಇಲಾಖೆಯನ್ನೇ ತೆಗೆದುಕೊಳ್ಳಿ ಯಾವುದರಲ್ಲೂ ಕೂಡ ಅದರಲ್ಲಿ ಏನು ಒಂದು ಗುರಿ ಸಾಧನೆ ಮಾಡಬೇಕಾಗಿತ್ತೋ ಅಷ್ಟನ್ನು ಸಂಪೂರ್ಣವಾಗಿ ಮುಟ್ಟಲು ಈ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎನ್ನುವ ಮಾತನ್ನು ಹೇಳುತ್ತೇನೆ. ಇದನ್ನೆಲ್ಲಾ ಸಮೀಕ್ಷೆ ಮಾಡಿ ನೋಡಿದರೆ ನೀವು ಈ ರಾಜ್ಯದಲ್ಲಿ ಏನೇನು ಅಭಿವೃದ್ಧಿ ಮಾಡಬೇಕೆಂದು ಹೊರಟಿದ್ದೀರೋ ಆ ಕೆಲಸ ಕುಂಠಿತವಾಗಿದೆ, ನಿಮ್ಮ ಪ್ರಯತ್ನ ಆ ಬಗ್ಗೆ ಏನೇನೂ ಸಾಲದು. ಆದುದರಿಂದ ಈ ಒಂದು ಅಭಿವೃದ್ಧಿ ಪಥದಲ್ಲಿ ಪ್ರಾರ್ಥನೆಯಲ್ಲಿ ಸಂಪೂರ್ಣ ಕುಂಠಿತ ಗೊಂಡಿದ್ದೀರಿ ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಯಾವ ಒಂದು ಅಭಿವೃದ್ಧಿ ಯೋಜನೆಯ ಬಾಬನ್ನೇ ತೆಗೆದುಕೊಳ್ಳಿ, ಅದರಲ್ಲಿ ಏನು ಒಂದು ಸಾಧನೆ ಮಾಡಬೇಕಾಗಿತ್ತೋ ಅಷ್ಟು ಸಾಧನೆ ಮಾಡಿಲ್ಲ, ಯಾವುದನ್ನೇ ಆಗಲಿ ತಾವು ಸಂಪೂರ್ಣವಾಗಿ ಸಾಧನೆ ಮಾಡದೇ ಇರುವುದಕ್ಕೆ ಕಾರಣ ಏನು ? ಹಾಗೆಯೇ ಜಿಲ್ಲಾವಾರು ಅಭಿವೃದ್ಧಿ ಕೆಲಸಗಳನ್ನೇ ತೆಗೆದುಕೊಳ್ಳಿ ಅದರಲ್ಲೂ ಸಹ ಯಾವರೀತಿಯಾಗಿ ಒಂದು ಸಾಧನೆ ಮಾಡಬೇಕಾಗಿತ್ತೋ. ಆ ರೀತಿ ಮಾಡಿಲ್ಲ, ಅದರಲ್ಲೂ ತಾವು ವಿಫಲರಾಗಿದ್ದೀರಿ, ಅದರಲ್ಲೂ ಸರ್ಕಾರ ಕುಂಠಿತವಾಗಿದೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ, ಒಟ್ಟಿನಲ್ಲಿ ಹೇಳುವುದಾದರೆ, ಈ ಸರ್ಕಾರ ತಾನು ಹಾಕಿಕೊಂಡಿರತಕ್ಕಂಥ ಯೋಜನಾ ಕ್ಷೇತ್ರದಲ್ಲಿ ಯಾವ ಒಂದು ಕೆಲಸವನ್ನು ಸಾಧನೆ ಮಾಡಲಿಕ್ಕೆ ಹೊರಟಿದೆಯೋ ಆ ಕೆಲಸವನ್ನು ಸಂಪೂರ್ಣವಾಗಿ ಮಾಡಲಿಕ್ಕೆ ಸಾಧ್ಯವಾಗಲಿಲ್ಲ, ವಿಫಲರಾಗಿದ್ದಾರೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಂ ಬಗ್ಗೆ ಹೇಳಬೇಕಾದರೆ ಇದರಲ್ಲಿ ನಮ್ಮ ಸರ್ಕಾರದ ಪಾಲು ಏನು ಇದೆ ಅದರಲ್ಲಿಯೂ ಸಹ ಒಂದು ವ್ಯವಸ್ಥಿತವಾದ ರೀತಿಯಲ್ಲಿ ಹೆಚ್ಚಳ ಮಾಡಲಿಕ್ಕೆ ಏನಾದರೂ ಪ್ರಯತ್ನ ಮಾಡಿದ್ದಾರೆಯೇ ಎಂದು ನೋಡಿದರೆ ಅದರಲ್ಲೂ ಸಹ ಸಾಕಷ್ಟು ಪ್ರಯತ್ನ ನಡೆದಿಲ್ಲ. ತಮಗೆ ಹೇಳಬೇಕಾದರೆ ಈ ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಂ ಈ ಸ್ಕೀಂನ ಔಟ್‌ಲೇ ಅಂಡ್ ಎಕ್ಸ್‌ಪೆಂಡಿಚರ್ ೧೯೮೦-೮೧ರ ಸಾಲಿನಲ್ಲಿ ನೋಡಿದರೆ ೫೩.೬೫ ಕೋಟಿ ರೂಪಾಯಿಗಳು ಇದೆ. ಈ ಬಗ್ಗೆ ೧೯೮೧-೮೨ರ ಒಂದು ರಿವೈಸ್ಡ್ ಎಸ್ಟಿಮೇಟ್ ಪ್ರಕಾರ ೬೩.೦೭ ಆಗಿದೆ. ೧೯೮೨-೮೩ರ ಅಲೋಕೇಷನ್ ನೋಡಿದರೆ ೮೩.೯೫ ಕೋಟಿ ರೂಪಾಯಿಗಳು ಜಾಸ್ತಿಯಾಗಿದೆ. ಎಂದರೆ ೨೦ ಕೋಟಿ ರೂಪಾಯಿಗಳು ಅಷ್ಟು ಹೆಚ್ಚಳ ಆಗಿದೆ. ಈ ವರ್ಷ ಆಂಟಿಸಿಪೇಟೆಡ್ ಎಕ್ಸ್‌ಪೆಂಡಿಚರ್ ನೋಡಿದರೆ ಸುಮಾರು ೯೩ ಕೋಟಿ ರೂಪಾಯಿಗಳು. ಎಂದರೆ ೧೦೦ ಕೋಟಿ ರೂಪಾಯಿಗಳು ಆಯಿತು. ಈ ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಂ ಮತ್ತು ಈ ಸೆಂಟ್ರಲ್ ಸ್ಕೀಂನಲ್ಲಿ ನೋಡಿದರೆ ೬೩ ಕೋಟಿ ರೂಪಾಯಿಗಳು ಇದ್ದುದು ೧೦೦ ಕೋಟಿ ರೂಪಾಯಿಗಳು ಆಗಿದೆ ಎಂದರೆ ಇದರಲ್ಲಿ ಒಟ್ಟು ೩೭ ಕೋಟಿ ರೂಪಾಯಿಗಳು ಹೆಚ್ಚಳ ಮಾಡಿದ್ದೀರಿ, ನೀವು ಈ ಕೆಲಸವನ್ನು ಸಾಧನೆ ಮಾಡಿದ್ದೀರಿ, ಎಂದು ಹೇಳುತ್ತೇನೆ. ಇನ್ನು ಕೆಲವು ಸದಸ್ಯರು ಏನು ಹೇಳಿದರು ಎಂದರೆ ಹಿಂದಿನ ಸರ್ಕಾರದವರು ಕೇಂದ್ರ ಸರ್ಕಾರದಿಂದ ಬಂದಂಥ ಹಣವನ್ನು ಯಾವ ಯೋಜನೆಗಳಿಗಾಗಿ ಹಣ ಬಂದಿತ್ತೋ ಆ ಹಣವನ್ನು ಖರ್ಚು ಮಾಡಲಿಲ್ಲ, ಬೇರೆ ಯಾವ್ಯಾವುದಕ್ಕೊ ವ್ಯಯ ಮಾಡುತ್ತಿದ್ದರು ಇಲ್ಲವೇ ಲ್ಯಾಪ್ಸ್ ಮಾಡುತ್ತಿದ್ದರು ಎಂದು ಏನು ಮಾತನಾಡಿದ್ದಾರೆ ಅದರಲ್ಲಿ ಏನೂ ಹುರುಳಿಲ್ಲ ಎನ್ನುವುದನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಈವೊತ್ತು ಒಂದೇ ವರ್ಷದಲ್ಲಿ ತಾವು ೩೭ ಕೋಟಿ ರೂಪಾಯಿಗಳ ಹೆಚ್ಚಳ ಮಾಡಿದ್ದೀರಿ. ಅಷ್ಟೇ ನೀವು ಮಾಡಿರುವುದು. ಈ ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಂ ಮತ್ತು ಸೆಂಟ್ರಲ್ ಸ್ಕೀಂಸ್ ಬಗ್ಗೆ ಹೇಳುವುದಾದರೆ ರಾಜ್ಯ ಮತ್ತು ಕೇಂದ್ರದ ಬಂಧವ್ಯದ ಬಗ್ಗೆ ಈಗ ಏನು ಒಂದು ವಾದ ಇದೆ ಆ ಸೋಗಿನಲ್ಲಿ ಹೋದರೆ ನಿಮಗೆ ಏನೂ ಸಿಕ್ಕುವುದಿಲ್ಲ. ನೀವು ಈ ಸ್ಕೀಂ ಪ್ರಕಾರ ಕೇಂದ್ರದಿಂದ ಹೆಚ್ಚು ಹಣ

ತರುವುದಕ್ಕೆ ಪ್ರಮುಖವಾದ ಕೆಲಸವನ್ನು ಮಾಡಿ ತೋರಿಸಬೇಕು. ನೀವು ಹೆಚ್ಚು ಕೆಲಸವನ್ನು ಪ್ರಾಮಾಣಿಕವಾದ ರೀತಿಯಲ್ಲಿ ಮಾಡಿದರೆ ಅವರಿಂದ ಹೆಚ್ಚು ಹಣವನ್ನು ಯಾವ ಬಾಬಿನಲ್ಲೇ ಆಗಲಿ ತರುವುದಕ್ಕೆ ಸಾಧ್ಯವಾಗುತ್ತದೆ. ತಮಗೆ ಹೇಳಬೇಕಾದರೆ ೧೯೮೦-೮೧ರಲ್ಲಿ ಕೇವಲ ೧೦ ಕೋಟಿ ರೂಪಾಯಿಗಳ ಹೆಚ್ಚಳ ಇತ್ತು, ೧೯೮೧-೮೨ರಲ್ಲಿ ನೋಡಿದರೆ ಅದು ೨೦ ಕೋಟಿ ಹೆಚ್ಚಳ ಆಗಿದೆ. ೮೨-೮೩ಕ್ಕೆ ೩೦ ಕೋಟಿ ರೂಪಾಯಿಗಳ ಹೆಚ್ಚಳ ಆಗಿದೆ. ಹಾಗೆಯೇ ನೀವು ಪ್ರಾಮಾಣಿಕವಾಗಿ ಸರಿಯಾಗಿ ಕೆಲಸ ಮಾಡಿದರೆ ಈ ಹೊತ್ತಿನ ದಿವಸ ೧೫೦ ಕೋಟಿ ರೂಪಾಯಿಗಳಷ್ಟು ಹೆಚ್ಚಳ ಹಣವನ್ನು ವಿದಿಧ ಬಾಬುಗಳಲ್ಲಿ ತರಬಹುದು. ಆಗ ಮಾತ್ರ ನೀವು ರಾಜ್ಯದಲ್ಲಿ ಸರಿಯಾದಂಥ ಅಧಿಕಾರವನ್ನು ನಿರ್ವಹಣೆ ಮಾಡಿದ ಹಾಗಾಗುತ್ತದೆ. ಮತ್ತು ನಮ್ಮ ರಾಜ್ಯದ ಜನರ ಹಿತಾಸಕ್ತಿಗಳನ್ನೂ ಕೂಡ ನಿರ್ವಹಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ, ಮತ್ತು ನಿಮಗೂ ಸಹ ಕೀರ್ತಿ ಬರುತ್ತದೆ ಎಂದು ಹೇಳುತ್ತೇನೆ. ಕೇಂದ್ರ ಸರ್ಕಾರ ನಮ್ಮ ರಾಜ್ಯಕ್ಕೆ ಹೆಚ್ಚು ಸಂಪನ್ಮೂಲಗಳನ್ನು ಒದಗಿಸಿಲ್ಲ ಎಂದು ನೀವು ಹೇಳುವುದಾದರೆ, ಮತ್ತು ಈ ರೀತಿಯಾಗಿ ತಾವು ಬರೀ ಕೂಗು ಎಬ್ಬಿಸಿದರೆ ಸಾಲದು. ತಾವು ಎಷ್ಟರಮಟ್ಟಿಗೆ ಕೇಂದ್ರ ಸರ್ಕಾರದ ಯೋಜನೆಗಳನ್ನು ರಾಜ್ಯದಲ್ಲಿ ಅನುಷ್ಠಾನ ಮಾಡಲಿಕ್ಕೆ ಕಾರಣ ಬದ್ಧರಾಗಿದ್ದೀರೋ ಅದನ್ನು ನಡೆಸಿಕೊಂಡು ಹೋಗುವುದಾದರೆ ರಾಜ್ಯದ ಜನರ ಹಿತಾಸಕ್ತಿ ಮಾಡುವುದರಲ್ಲಿ ಸಫಲರಾಗುತ್ತೀರಿ, ಅದರಲ್ಲಿ ನೀವು ವಿಫಲರಾಗುವುದಕ್ಕೆ ಸಾಧ್ಯವೇ ಇಲ್ಲ ಎಂದು ಹೇಳುತ್ತೇನೆ. ನೀವು ಇದರ ಬಗೆ ತಿಳಿದುಕೊಳ್ಳಬೇಕಾದಂಥ ಅವಶ್ಯಕತೆ ಖಂಡಿತ ಇದೆ ಎಂದು ಹೇಳುತ್ತೇನೆ.

ಇನ್ನು ಪ್ಲಾನಿಂಗ್ ಬೋರ್ಡ್. ಇದನ್ನು ಇವತ್ತಿನವರೆಗೂ ರೀಕಾನ್ಸ್‌ಟಿಟ್ಯೂಟ್ ಮಾಡಿಲ್ಲ. ಇದು ಮುಖ್ಯವಾದ ಸಂಸ್ಥೆ. ತಮ್ಮ ಎಕಾನಾಮಿಕ್ ಡವೆಲಪ್‌ಮೆಂಟ್ ಕೌನ್ಸಿಲ್ ಏನು ಇದೆ ಥಿಂಕ್ ಟ್ಯಾಂಕ್. ಇದು ಪ್ಲಾನಿಂಗ್ ಬೋರ್ಡನ್ನು ಸೂಪರ್‌ಸೀಡ್ ಮಾಡಿದೆ. ತಾವು ಇನ್ನೂ ಪ್ಲಾನಿಂಗ್ ಬೋರ್ಡ್‌ನ್ನು ರೀಕಾನ್ಸ್‌ಟಿಟ್ಯೂಟ್ ಮಾಡಿಲ್ಲ. ಇದಕ್ಕೆ ಮೀಟಿಂಗ್‌ಗಳೂ ಆಗಿಲ್ಲ. ಆದರೆ ಥಿಂಕ್ ಟ್ಯಾಂಕ್‌ನ ಮೀಟಿಂಗ್ ಆಗಿದೆ, ಇದರ ಸೆಮಿನಾರ್ ಕೂಡ ಆಗಿದೆ. ಈ ಇಲಾಖೆ ಬೇರೆ ಬೇರೆ ಇಲಾಖೆಗಳನ್ನು ಮಾನಿಟರ್ ಮಾಡಬೇಕಾಗುತ್ತದೆ. ರೆವ್ಯೂ ಮಾಡಬೇಕಾಗುತ್ತದೆ, ತಾವು ಯಾವ ರೀತಿಯಲ್ಲಿ ಎಕ್ಸ್‌ಪರ್ಟ್ಸ್‌ನ್ನು ತಂದಿದ್ದೀರಿ ಇದೂ ಅಷ್ಟು ಸಹಾಯಕವಾಗುವಂಥಾದ್ದು, ಆದರೆ ತಾವು ಪ್ಲಾನಿಂಗ್ ಬೋರ್ಡ್‌ನ್ನು ರೀಕಾನ್ಸ್‌ಟಿಟ್ಯೂಟ್ ಮಾಡದೆ ಹೊರಗಿನವರನ್ನು ತಂದು ಥಿಂಕ್ ಟ್ಯಾಂಕ್ ಮೂಲಕ ರಾಜ್ಯದ ಪ್ಲಾನನ್ನು ನಿಯಂತ್ರಿಸುವುದಾದರೆ you are doing it by creating an extra-constitutional authority. ಎಂದು ಹೇಳಿ ನಾನು ಆಪಾದನೆ ಮಾಡಬೇಕಾಗುತ್ತದೆ. The Super Chief Minister of Extra Constitutional authority. ಯಾರು ಈ ಮಾತನ್ನು ಹಿಂದೆ ಹೇಳಿದ್ದರೋ ಅವರೇ He is excersising the control. ಅಲ್ಲಿ ಯಾರೇ ಅಧಿಕಾರಿಗಳು ಇರಬಹುದು ಅವರಿಗೆ ನಾವು ಸರಿಯಾದ ಅಧಿಕಾರವನ್ನು ಕೊಡಬೇಕು ಎಂದು ನಾನು ಹೇಳುತ್ತೇನೆ. ಇವತ್ತು ತಾವು ಹೊರಗಿನವರನ್ನು ಒಬ್ಬ ನಿವೃತ್ತ ಅಧಿಕಾರಿಯನ್ನು ಕರೆತಂದು ಆ ಒಬ್ಬ ವ್ಯಕ್ತಿಯು ರಾಜ್ಯದ ಪ್ಲಾನನ್ನು ನಿರ್ವಹಣೆ ಮಾಡುವುದಾದರೆ ಎಕ್ಸ್‌ಟ್ರಾ ಕಾನ್ಸಟಿಟ್ಯೂಷನಲ್ ಅಥಾರಿಟಿಯ ವಿರುಧ್ಧವಾಗಿ ಯಾರು ಮಾತನಾಡುತ್ತಿದ್ದಾರೋ ಅವರೇ ಇದನ್ನು ಇಂದು ಜೋರಾಗಿ ಮಾಡುತ್ತಿದ್ದಾರೆ ಇಂಥ ಒಂದು ಅಧಿಕಾರವನ್ನು ಮಾಡಲಿಕ್ಕೆ ತಾವು ಆಶೀರ್ವಾದ ಕೊಟ್ಟಿದ್ದೀರಿ ಎಂದು ನಾನು ಹೇಳಬೇಕಾದ ಪ್ರಸಂಗ ಬಂದಿದೆ. ನಮ್ಮ ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ಏನು ಇದೆ ಇದಕ್ಕೆ ಬಹಳ ಒಳ್ಳೆಯ ಕೀರ್ತಿ ಪ್ಲಾನಿಂಗ್ ಕಮಿಷನ್‌ನಲ್ಲಿದೆ ಡಾ. ಎಂ. ನಂಜುಂಡಪ್ಪನವರು ಇದರ ಕಾರ್ಯದರ್ಶಿಗಳಾಗಿ ಬಹಳ ಕೀರ್ತಿಯನ್ನು ತಂದಿದ್ದರು. ಆ ಒಂದು ಯೋಜನಾ ಇಲಾಖೆಯನ್ನು ತಾವು ಛಿದ್ರ ಛಿದ್ರವನ್ನಾಗಿ ಮಾಡಿದ್ದೀರಿ. You have destroyed an important institution. They are taking sides but we cannot remain quiet.

SRI RAMAKRISHNA HEGDE.—I am sorry to interrupt sir. I have not touched the planning department. It is just as intact as you had

SRI M. VEERAPPA MOILY.—But, what is the importance you have given to it.

ಶ್ರೀ ರಾಮಕೃಷ್ಣ ಹೆಗಡೆ.—ಡಾ. ನಂಜುಂಡಪ್ಪನವರನ್ನು ನೀವು ಯೂನಿವರ್ಸಿಟಿಗೆ ಕಳುಹಿಸಿದಿರಿ.

ಶ್ರೀ ಎಂ. ವೀರಪ್ಪಮೊಯ್ಲಿ .—ಅಂಥವರು ಬೇರೆಯವರನ್ನು ನೀವು ಕರೆಯಿಸಬಹುದಲ್ಲವೇ ನಾವು ಇದ್ದಾಗಲೇ ಅವರನ್ನು ಕಳುಹಿಸಿರಬಹುದು. ಆದರೆ ನೀವು ಈ ಇಲಾಖೆಗೆ ಎಷ್ಟರಮಟ್ಟಿಗೆ ಪ್ರಾಮುಖ್ಯತೆಯನ್ನು ಕೊಡುತ್ತಿದ್ದೀರಿ ಎಂದರೆ ಆ ಇಲಾಖೆಯಲ್ಲಿದ್ದು ಖ್ಯಾತಿಯೇ ಮಾಯವಾಗಿದೆ ಈ ಇಲಾಖೆಯನ್ನು ಬೇರೊಂದು ಸೆಂಟ್ರಲ್ ಆರ್ಕೈವ್ಸ್ ತರಹ ಮಾಡಿಟ್ಟಿದ್ದೀರಿ. I think better you transfer that department to the dept. of museums. ಪ್ಲಾನಿಂಗ್ ಡಿಪಾರ್ಟ್‌ಮೆಂಟಿನ ಹೆಸರನ್ನು ಇಟ್ಟುಕೊಂಡು ಸರಿಯಾದಂಥ ಅಧಿಕಾರವನ್ನು ಅವರಿಗೆ ಕೊಡದಿದ್ದರೆ ಇಲಾಖೆಯನ್ನು ಈ ರೀತಿಯಾಗಿ ನಿಸ್ತೇಜನ ಮಾಡುವುದಿದ್ದರೆ ಇಲಾಖೆ ಏಕೆ ಇರಬೇಕು ? ಇಲಾಖೆಯಲ್ಲಿ ಯಾರು ಅಧಿಕಾರಿಗಳು ಇರುತ್ತಾರೆ ಅದು ಪ್ರಾಮುಖ್ಯವಲ್ಲ ಅಧಿಕಾರಿಗಳು ಬರಬಹುದು ಹೋಗಬಹುದು ಆದರೆ ಯಾವ ಒಂದು ಪರಂಪರೆಯನ್ನು ಇಟ್ಟುಕೊಂಡು ಇದನ್ನು ಬೆಳೆಸಿಕೊಂಡು ಬಂದಿದ್ದೇವೆ ಎನ್ನುವುದನ್ನು ನಾವು ನೋಡಬೇಕಾಗುತ್ತದೆ. ಹಿಂದೆ ಇದ್ದ ಸನ್ಮಾನ್ಯ ದಿವಂಗತ ದೇವರಾಜ ಅರಸ್ ಅವರು ಇಲಾಖೆಗೆ ಯಾವ ಪ್ರಾಮುಖ್ಯತೆಯನ್ನು ಕೊಟ್ಟಿದ್ದರು ಇದರಲ್ಲಿ ಡಾ. ಎಂ. ನಂಜುಂಡಪ್ಪನವರು ಯಾವರೀತಿಯಾಗಿ ಕೆಲಸ ಮಾಡಿದ್ದರು ಯಾವರೀತಿಯಲ್ಲಿ ಇದನ್ನು ನಡೆಸಿಕೊಂಡು ಬಂದಿದ್ದಾರೆಂದು ನಮಗೆಲ್ಲರಿಗೂ ಗೊತ್ತಿದೆ. ಅವರು ಯೂನಿವರ್ಸಿಟಿಗೆ ಹೋಗಿದ್ದರೆ ಬೇರೆಯವರನ್ನು ಕರೆಯಿಸಿ ? Personalities are not mportant. It is the maintaenance of that dept. ನಾನು ಸಹ ಈ ಇಲಾಖೆಯನ್ನು ಮಂತ್ರಿಯಾಗಿದ್ದಾಗ ನೋಡುತ್ತಿದ್ದೆ. ಕೈಗಾರಿಕಾ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಹಣಕಾಸಿನ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ನಾನು For any advice I used to lookto that department That was the brain centre of the entire administration. ಈಗ ಕಾನ್‌ಫ್ಲಿಕ್ಟ್ ಇರಬಹುದು, ಐ.ಎ.ಎಸ್. ವರ್ಸಸ್ ನಾನ್ ಐ.ಎ.ಎಸ್. I had always maintained the balance between IAS and non. IAS. I had no problam at all. I used to extract work from the to the best of my capacity.

ಶ್ರೀ ಎಂ. ರಘುಪತಿ.— ಆಖ್ಯಾತೆಯೇ ನಿಮಗೆ ಬಿಟ್ಟು ಹೋಯಿತು.

ಶ್ರೀ ಎಂ, ವೀರಪ್ಪಮೊಯ್ಲಿ .—ಖ್ಯಾತಿ ವ್ಯಕ್ತಿಗಳ ಮೇಲೆ ಇದೆ. ಆ ವ್ಯಕ್ತಿತ್ವವನ್ನು ನೀವು ಅಳಿಸಿಬಿಟ್ಟಿದ್ದೀರಿ. ಇದನ್ನು ಬೆಳೆಸಬೇಕಾದರೆ ನಮಗೆ ೧೦ ವರ್ಷಗಳು ಬೇಕಾಯಿತು, ಈ ಇಲಾಖೆಯನ್ನು ಸುವ್ಯವಸ್ಥಿತವಾಗಿ ಬೆಳೆಸಬೇಕಾದರೆ ನಮಗೆ ೧೦ ವರ್ಷಗಳು ಬೇಕಾಯಿತು. ತಾವು ೯ ತಿಂಗಳಲ್ಲಿ ಹತ್ತು ವರ್ಷಗಳಲ್ಲಿ ಬೆಳೆಸಿದ್ದನ್ನು ನಿಸ್ತೇಜವನ್ನಾಗಿ ಮಾಡಿದ್ದೀರಿ. ಅದಕ್ಕೆ ನಮಗೆ ವ್ಯರ್ಥವಾಗಿದೆ. ದಯಮಾಡಿ ಈ ಕೆಲಸವನ್ನು ಮಾತ್ರ ಮಾಡಬೇಡಿ ಈ ಇಲಾಖೆಯನ್ನು ಸರಿಯಾಗಿ ಸಜ್ಜುಗೊಳಿಸಿ ರಾಜ್ಯದ ಯೋಜನಾ ಕ್ಷೇತ್ರದ ನಿತ್ರಾಣವನ್ನು ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಹೇಳುತ್ತೇನೆ.

ಇವರು ಬಡ್ಜೆಟ್ಟಿನಲ್ಲಿ ಏನು ಕಾಣಿಸಿದ್ದಾರೆಂದರೆ ೧೬೦. ೭೪ ಕೋಟಿ ರೂಪಾಯಿಗಳು ಡಿಫಿಸಿಟ್‌ನ್ನು ಕಾಣಿಸಿದ್ದಾರೆ. I think it will be still more. It will not be less than Rs two crores. ಇದರಲ್ಲಿ ಕನ್‌ಸೇಷನ್ ಟು ಪ್ರೊಫೆಷನ್ ಟ್ಯಾಕ್ಸ್, ಇಲ್ಲಿ ೧೨೦೦ ರೂಪಾಯಿಗಳ ಮೇಲ್ಪಟ್ಟು ಆದಾಯ ಇರತಕ್ಕವರಿಗೆ ತೆರಿಗೆ ಹಾಕುತ್ತೇವೆಂದು ಹೇಳಿದ್ದಾರೆ. Of course, I donot wish to take into account of an overdraft. ತಾವು ಬಡ್ಜೆಟ್ ಪ್ರಸೆಂಟ್ ಮಾಡಿದಾಗ ಇದನ್ನು ಅನೌನ್ಸ್ ಮಾಡಿರಲಿಲ್ಲ. ಜೂನ್‌ನಲ್ಲಿ ಟ್ಯಾಕ್ಸ್ ಕನ್‌ಸೇಷನನ್ನು ಅನೌನ್ಸ್ ಮಾಡಿದ್ದಾರೆ. ೧೬೨.೭೪ ಕೋಟಿ ರೂಪಾಯಿಗಳು ಡಿಫಿಸಿಟ್‌ನಲ್ಲಿ ಕಾವೇರಿ ಯೋಜನೆಗಳಿಗೆ ಇಟ್ಟ ಹಣ ನಾನ್‌ಪ್ಲಾನ್‌ನಲ್ಲಿ ಬಂದರೂ ಕೂಡ ಪ್ಲಾನಿನಲ್ಲಿ ಸೇರಿಸ ಬೇಕಾದಂಥ ಹಣ ೪೪ ಕೋಟಿ ರೂಪಾಯಿಗಳು. ಎಂದರೆ ೨೦೬ ಕೋಟಿ ರೂಪಾಯಿಗಳು ಈಗ ಇರತಕ್ಕ ಓವರ್‌ಡ್ರಾಫ್ಟ್ You will adjest by ways and means. ಇದನ್ನು ತಾವು ಬೇರೆ ರೀತಿಯಲ್ಲಿ ಅಡ್ಜಸ್ಟ್ ಮಾಡಿದ್ದರೂ ಕೂಡ ಇವತ್ತಿನದಿವಸ ೬೧೯ ಕೋಟಿ ರೂಪಾಯಿಗಳು ಕಾವೇರಿ ಜಲಾನಯನ ಪ್ರದೇಶಗಳೂ ಸೇರಿ ಒಂದು ಕಾರ್ಯಕ್ರಮ ಇದೆ. ಇದನ್ನು ತಾವು ಅನುಷ್ಠಾನ ಮಾಡುವುದಿದ್ದರೆ ಬಹುಶಃ ಈ ವರ್ಷದಲ್ಲಿ ಸುಮಾರು ೨೧೦ ಕೋಟಿ ರೂಪಾಯಿಗಳು ನನಗೆ ಡಿಫಿಸಿಟಿ ಇದೆ. ಎಂದರೆ ತಾವು ಅನುಷ್ಠಾನ ಮಾಡತಕ್ಕ ಯೋಜನೆಗಳು ಬರೀ ೪೦೭ ಕೋಟಿ ರೂಪಾಯಿಗಳದು ಮಾತ್ರ ಆಗುತ್ತದೆ ೬೧೯ ಕೋಟಿ ರೂಪಾಯಿಗಳಲ್ಲಿ ೨೧೦ ಕೋಟಿ ರೂಪಾಯಿಗಳು ಹೋದರೆ ೪೧೯ ಕೋಟಿ ಕೊಪಾಯಿಗಳ ಯೋಜನೆ ಅದೂ ತೆರಿಗೆಯನ್ನು ಕೊಡುವ

ದಿದ್ದರೆ. There will be planeerosion to the extent of 33% ಕಳೆದ ವರ್ಷದ ಯೋಜನಾ ಕ್ಷೇತ್ರದಲ್ಲಿ ಎಷ್ಟು ಹಣವನ್ನು ಒದಗಿಸಿತ್ತೋ ಅದಕ್ಕಿಂತ ಹೆಚ್ಚು ಹಣವನ್ನು ಒದಗಿಸಿಕೊಂಡರೂ ಇದೂ ಕಡಿಮೆಯಾಗಿ ಕಾಣುತ್ತದೆ. ಇದರಿಂದ ತಾವು ಯಾವ ರೀತಿಯಲ್ಲಿ ಗ್ರೋತ್ ತೋರಿಸುತ್ತೀರಿ ? ಅದು ಇಲ್ಲದಿದ್ದರೆ ೨೧೦ ಕೋಟಿ ರೂಪಾಯಿಗಳ ತೆರಿಗೆಯನ್ನು ಜನತೆಯ ಮೇಲೆ ತಾವು ಹಾಕಬೇಕಾದಂಥ ಪ್ರಸಂಗ ಬರುತ್ತದೆ. ಇಲ್ಲದಿದ್ದರೆ ನಿಮ್ಮ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಕಂಡಿತವಾಗಿಯೂ ಸಾಧ್ಯವಾಗುವುದಿಲ್ಲ ಎನ್ನತಕ್ಕ ಸಂಶಯ ನಮಗೆ ಬರುತ್ತದೆ. ನೂರು ರೂಪಾಯಿಗಳ ಹೊಸ ತೆರಿಗೆಯನುನ್ನು ಹಾಕುತ್ತೇವೆಂದು ಡೆಲ್ಲಿಯಿಂದ ಹೇಳಿಕೆಯನ್ನು ಕೊಟ್ಟಿದ್ದೀರಿ. ನೂರುಕೋಟಿ ರೂಪಾಯಿಗಳ ತೆರಿಗೆಯನ್ನುಹಾಕಿದರೆ ಇನ್‌ಪ್ಲೇಷನರಿ ಪರಿಸ್ಥಿತಿ ಮತ್ತಷ್ಟುಉಲ್ಬಣವಾಗುತ್ತದೆಬೆಲೆ ಏರಿಕೆಗೂ ಇದು ಜ್ವಾಲಾಮುಖಿಯಾಗುವಂಥ ಪ್ರಸಂಗಬರುತ್ತದೆ ಈಗಾಗಲೇ ತಾವು ಬಡವರಿಗೆ ಸಂಬಂಧಪಟ್ಟ ವಿಚಾರದಲ್ಲಿ ಹರಿಜನರಿಗೆ ಸಂಬಂಧಪಟ್ಟ ವಿಚಾರದಲ್ಲಿ ಕೃಷಿ ಕಾರ್ಮಿಕರ ಸಂಬಂಧಪಟ್ಟ ವಿಚಾರದಲ್ಲಿ ತಮ್ಮಯೋಜನೆಯಲ್ಲಿ ಕಡಿತವನ್ನು ಮಾಡಿದ್ದೀರಿ. ಕಡಿತ ಮಾಡುವುದರ ಜೊತೆಗೆ ೩೩ ಪರ್ಸೆಂಟ್, ಈ ೨೦೧ ಕೋಟಿ ರೂಪಾಯಿಗಳ ಹೆಚ್ಚಳದಿಂದ ಗ್ರೋತ್ ರೇಟನ್ನು ಮಾಡುತ್ತೇವೆಂದು ಹೇಳಿದರೆ ಈ ವರ್ಷದಯೋಜನೆ ಕಡಿಮೆಯಾಗುತ್ತದೆ.

ನಾನು ಆಗಲೇ ಹೇಳಿದ್ದೇನೆ, ಅದು ೫೧೫ ಕೋಟಿ ರೂಪಾಯಿಗಳು ಎಂದು ಮತ್ತೆ ಅದಕ್ಕೆ ಲೇಟೆಸ್ಟ್ ಫಿಗರ್ಸ್ ಕೂಡ ಕೊಟ್ಟೆ. ಇದರಿಂದಾಗಿ ಅತಿ ಹೆಚ್ಚಿನ ಇಳಿತ ಇವತ್ತು ಯೋಜನಾ ಕ್ಷೇತ್ರದಲ್ಲಿ ಆಗಲಿಕ್ಕೆ ಸಾಧ್ಯವಿವೆ ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ತಾವು ಸಂಸತ್ ಸದಸ್ಯರಿಗೆ ಕೊಟ್ಟಂಥ ಪುಸ್ತಕದಲ್ಲಿ ಕೇಂದ್ರದ ಹಣಕಾಸಿನ ಸಚಿವರು ಬರೆದಂಥ ಒಂದು ಪತ್ರವನ್ನು ಅಚ್ಚುಗೊಳಿಸಿದ್ದೀರಿ. ಅವರ ಲೆಕ್ಕದ ಪ್ರಕಾರ 'ಸಂಬಂಧಪಟ್ಟ ಸವಲತ್ತುಗಳನ್ನು ಪುನಃ ಹಣಕಾಸಿನ ವರ್ಷದ ಕೊನೆಯಲ್ಲಿ ರಾಜ್ಯದ ಬಡ್ಜೆಟ್ ೪೫.೫೪ ಕೋಟಿ ರೂಪಾಯಿಗಳು ವಾಸ್ತವಿಕ ಕೊರತೆ ೫೩,೭೩ ಕೋಟಿ ಎಂದು ಇದ್ದರೆ ನಮ್ಮ ರಾಜ್ಯದಲ್ಲಿ ಬರಗಾಲ ಪರಿಹಾರ ಕಾಮಗಾರಿಗಳ ವೆಚ್ಚಕ್ಕಾಗಿ ೧೯೮೩—೮೪ನೇ ಸಾಲಿನಲ್ಲಿ ಭಾರತ ಸರ್ಕಾರದಿಂದ ೮.೮೧ ಮೊತ್ತವನ್ನು ಮುಂಗಡವಾಗಿ ಸಂದಾಯಗೊಳಿಸಿದೆ. ರಾಜ್ಯದ ವಿಧಾನಸಭೆಯಲ್ಲಿ ಮಂಡಿಸಿದಂಥ ಬಡ್ಜೆಟ್‌ನಲ್ಲಿ ಸರ್ಕಾರದವರು ಘೋಷಿಸಿದ ಹೆಚ್ಚಿನ ಸಂಪನ್ಮೂಲ ಸಂಗ್ರಹವನ್ನು ಲೆಕ್ಕಕ್ಕೆ ತೆಗೆದುಕೊಂಡ ನಂತರವೂ ೧೨೦. ೪೪ ಕೋಟಿ ರೂಪಾಯಿಗಳ ಕೊರತೆ ಕಂಡುಬರುತ್ತದೆ. ಹೀಗೆ ಪ್ರಸಕ್ತ ವರ್ಷದ ಕೊನೆಯಲ್ಲಿ ೧೭೪.೧೨ ಕೋಟಿ ರೂಪಾಯಿಗಳ ಕೊರತೆ ಕಂಡುಬರುತ್ತದೆ. ಈ ಕೊರತೆ ೧೬೫, ೧೫ ಕೋಟಿಗೆ ಇಳಿಯಬಹುದು ಎಂದು ಲೆಕ್ಕ ಹಾಕಲಾಗಿದೆ ಎಂದರೆ ಕೇಂದ್ರದ ಹಣಕಾಸಿನ ಮಂತ್ರಿಗಳ ಹೇಳಿಕೆ ಪ್ರಕಾರ ಕಡಿಮೆ ಎಂದರೆ ೧೫೫.೧೫ ಕೋಟಿ ಇದೇ ಈ ಕರ್ನಾಟಕ ರಾಜ್ಯದ ಒಂದು ಬಡ್ಜೆಟ್‌ನಲ್ಲಿ ಅತ್ಯಂತ ಹೆಚ್ಚಿನ ಕೊರತೆಯನ್ನು ತಾವು ಮುಂಡನೆ ಮಾಡಿಕೊಂಡು ಅದನ್ನು ನಿಭಾಯಿಸತಕ್ಕ ದೃಷ್ಟಿಯಲ್ಲಿ ಯಾವುದೇ ಒಂದು ಸಫಲತೆ ಇಷ್ಟರವರೆಗೆ ಕಂಡಿಲ್ಲ, ಇದನ್ನು ತುಂಬಿಸಕ್ಕ ಒಂದು ಶಕ್ತಿ ನಿಮ್ಮ ಸರ್ಕಾರಕ್ಕೆ ಇದೆ ಎಂದು ಯಾವುದೇ ಚಿಹ್ನೆಯನ್ನು ಆಧಾರವಾಗಿ ಇವತ್ತಿನವರೆಗೆ ತಾವು ತೋರಿಸಿಕೊಟ್ಟಿಲ್ಲ ಎಂದು ವಿಷಾದದಿಂದನಾನು ಖಂಡಿತವಾಗಿ ಕೇಳುತ್ತಾ ಇದ್ದೇನೆ. ನನ್ನ ಲೆಕ್ಕಚಾರದ ಪ್ರಕಾರ ಕಡಿಮೆ ಪಕ್ಷ ೨೧೦ ಕೋಟಿಯಾದರೂ ಇವತ್ತು ತಾವು ಕೊರತೆಯನ್ನು ತುಂಬಿಸಬೇಕಾಗಿದೆ. ಈ ಕೊರತೆಯನ್ನು ತುಂಬಿಸದೇ ಹೋದರೆ ಈ ಯಾವ ಬೇಡಿಕೆಗಳನ್ನು ನಾವು ಏನು ಮಂಜೂರು ಮಾಡುತ್ತೇವೆ ಆ ಬೇಡಿಕೆಗಳಿಗೆ ಯಾವ ಅರ್ಥವೂ ಕೂಡ ಇರುವುದಿಲ್ಲ. ಈ ಬೇಡಿಕೆಗಳನ್ನು ನಿಭಾಯಿಸಲಿಕ್ಕೆ, ನಿರ್ವಹಿಸಲಿಕ್ಕೆ ಯಾವುದೇ ರೀತಿಯ ಶಕ್ತಿ ನಿಮಗೆ ಬರುತ್ತಾ ಇಲ್ಲ ಎಂದು ಹೇಳಲಿಕ್ಕೆ ಇಷ್ಟಪಡುತ್ತೇನೆ. ನಿಜವಾಗಿಯೂ ೧೯೮೨—೮೩ನೇ ವರ್ಷದಲ್ಲಿ ತಾವು ಏನು ಡಿಫಿಸಿಟ್ ತೋರಿಸಿದ್ದೀರಿ, ಇಷ್ಟು ಡಿಫಿಸಿಟ್ ತೋರಿಸುವುದು ನಿಜವಾಗಿಯೂ ನಮಗೆ ಹೆಮ್ಮೆ ತರತಕ್ಕದ್ದಲ್ಲ. ಆದರೆ ಇವತ್ತು ೫೩ ಕೋಟಿಗಿಂತಲೂ ಹೆಚ್ಚು ಕೊರತೆಯಿಂದ ೧೯೮೨—೮೩ನೇ ವರ್ಷವನ್ನು ಮುಗಿಸಿ ಇವತ್ತು ಸುಮಾರು ೧೦ ಕೋಟಿಯವರೆಗೆ ಕೊರತೆಯನ್ನು ೧೯೮೩—೮೪ನೇ ಸಾಲಿನಲ್ಲಿ ತೋರಿಸತಕ್ಕ ಕೆಲಸವನ್ನು ಮಾಡಿದ್ದೀರಿ ಎಂದು ಹೇಳಬೇಕಾಗಿದೆ. ಇದನ್ನು ಯಾವರೀತಿಯಲ್ಲಿ ನಿಭಾಯಿಸಲಿಕ್ಕೆ ಇವರಿಗೆ ಶಕ್ತಿ ಇದೆ ಎಂದು ನನಗೂ ಕೂಡ ಆಸೆ ಕಾಣುತ್ತಾ ಇಲ್ಲ. ನಾನು ನಿಜವಾಗಿಯೂ ಇದರ ವಿವರಗಳನ್ನು ಮತ್ತೆ ಹೇಳಲಿಕ್ಕೆ ಹೋಗುವುದಿಲ್ಲ. ಇವತ್ತು ಸೇಲ್ಸ್ ಟ್ಯಾಕ್ಸ್ ಇನ್‌ಕಂ ವಿಚಾರದಲ್ಲಿ ಏನಾಗಿದೆಯೆಂದು ದಯಮಾಡಿ ನೋಡಬೇಕು. ತಮಗೆ ಗೊತ್ತಿದೆ, ಸೇಲ್ಸ್ ಟ್ಯಾಕ್ಸ್‌ನಲ್ಲಿ ನಾವು ಕಳೆದ ವರ್ಷ ಅತಿ ಹೆಚ್ಚಿನ ಹೆಚ್ಚಳವನ್ನು ಸಾಧಿಸಿಕೊಂಡು ಬಂದಿದ್ದೇವೆ. ೧೯೭೭—೭೮ರಲ್ಲಿ ೧೭೩.೨೫ ಕೋಟಿಯಾದರೆ ೧೯೮೦—೮೧ರಲ್ಲಿ ೨೭೫ ಕೋಟಿಗೆ ಹೋಗಿದೆ. ಸೇಲ್ಸ್

ಟ್ಯಾಕ್ಸ್ ಮಾತ್ರ ಹೇಳುತ್ತಿದ್ದೇನೆ. ೧೯೮೧—೮೨ರಲ್ಲಿ ೩೬೮.೫೧ ಕೋಟಿ. ೧೯೮೨-೮೩ರಲ್ಲಿ ೪೦೪.೫೨ ಕೋಟಿ. ಸೇಲ್ಸ್ ಟ್ಯಾಕ್ಸ್ ಹೆಚ್ಚಳ ಏಪ್ರಿಲ್ ೧೯೮೨ರಲ್ಲಿ ಪ್ಲಸ್ ೬೩ ಪರ್ಸೆಂಟ್ ಗ್ರೋತ್ ರೇಟ್ ಇತ್ತು ಸೇಲ್ಸ್ ಟ್ಯಾಕ್ಸ್ ಕಲೆಕ್ಷನ್‌ನಲ್ಲಿ ಈಏಪ್ರಿಲ್ ೧೯೮೩ರಲ್ಲಿ ಮೈನಸ್ ೬೧ ಇದೆ. ೮೨ರಲ್ಲಿ ೬೩% ಪ್ಲಸ್ ಇದ್ದರೆ ಈಗ ಮೈನಸ್ ೬೧ ಪಾಯಿಂಟ್ ಗ್ರೋತ್ ರೇಟ್. ಜೂನ್ ೧೯೮೨ರಲ್ಲಿ ೧೩.೪ ಪರ್ಸೆಂಟ್ ಗ್ರೂತ್ ಸೇಲ್ಸ್ ಟ್ಯಾಕ್ಸ್‌ನಲ್ಲಿ ಇದ್ದರೆ ಜೂನ್ ೧೯೮೩ ರಲ್ಲಿ ಗ್ರೋತರೇಟ್ ೧.೭ ಪರ್ಸೆಂಟ್. ತಮಗೆ ಗೊತ್ತಿದೆ, ಜೂನ್ ೧೯೮೧ರಲ್ಲಿ ಎಲ್ಲಾ ಪಬ್ಲಿಕ್ ಸೆಕ್ಟಾರ್ಸ್ ಕಂಪನಿಗಳು ಸುಮಾರು ೬೦ ದಿವಸಗಳ ಕಾಲ ಸ್ಟ್ರೈಕ್‌ನಲ್ಲಿದ್ದವು. ಅನೇಕ ರೀತಿಯ ಸೇಲ್ಸ್ ಟ್ಯಾಕ್ಸ್ ಸಂಪನ್ಮೂಲಗಳ ಜೋಡಣೆಯ ಬಗ್ಗೆ ಸಾಕಷ್ಟು ಕೊರತೆ ಆಗ ಬಂದಿದೆ. ಜೂನ್ ೧೯೮೧ ರಲ್ಲಿಯೂ ಕೂಡ ೩೫.೮೫. ಪರ್ಸೆಂಟ್ ನಾವು ಸಾಧನೆ ಮಾಡಿದ್ದೇವೆ. ಜೂನ್ ೧೯೮೩ರಲ್ಲಿ ೧.೭ ಪರ್ಸೆಂಟ್, ಜೂನ್ ೧೯೮೨ರಲ್ಲಿ ೧೩.೪ ಪರ್ಸೆಂಟ್, ಜೂನ್ ೧೯೮೧ರಲ್ಲಿ ೩೫ ೫ ಪರ್ಸೆಂಟ್. ಇದಕ್ಕೆ ನಾನು ಕಾರಣಗಳನ್ನು ಪ್ರತ್ಯೇಕವಾಗಿ ವಿವರಿಸಲಿಕ್ಕೆ ಹೋಗುವುದಿಲ್ಲ. ಆದರೆ ಸೇಲ್ಸ್‌ಟ್ಯಾಕ್ಸ್ ಬಗ್ಗೆ ವರ್ಗಾವಣೆ ಪಾಲಿಸಿಯಲ್ಲಿ ಏನು ಮಾಡಿದಿರಿ ಎಂದರೆ ತಾವು ಜುಲೈನಲ್ಲಿ ಟ್ರಾನ್ಸ್‌ಫರ್ಸ್ ಮಾಡಿದಿರಿ. ಇದು ಆನ್ಯುವಲ್ ಟ್ರಾನ್ಸ್‌ಫರ್ ಮಾಡಿರುವುದು. ಇದರ ಪರಿಣಾಮ ಇದಕ್ಕೆ ಕಾರಣವಾಯಿತು. ನಾವು ಕಳೆದ ವರ್ಷ ೭—೫—೧೯೮೨ರಲ್ಲಿ ಟ್ರಾನ್ಸ್‌ಫರ್ ಮಾಡಿದ್ದೇವೆ ತಾವು ಈ ವರ್ಷ ೫—೭—೧೯೮೩ ರಲ್ಲಿ ಟ್ರಾನ್ಸ್‌ಫರ್ ಮಾಡಿದ್ದೀರಿ. ಏಕೆಂದರೆ, ಈ ಇಲಾಖೆ ಹುಲಿಯನ್ನು ಸವಾರಿ ಮಾಡಿದಂಥ ಇಲಾಖೆ. ತಾವು ಸ್ಪೀಡ್‌ನಲ್ಲಿ ಹೋಗಬೇಕು. ಕಠಿಣ ಕಾರ್ಯಕ್ರಮವಾಗಿ ತೆಗೆದುಕೊಳ್ಳಬೇಕಾಗುತ್ತದೆ, ವೇಗವಾಗಿ ಹೋಗಬೇಕಾಗುತ್ತದೆ. ಈ ವರ್ಗಾವಣೆಯಲ್ಲೇ ಇರುವುದು. ಯಾವಾಗ ನೀವು ಸಡಿಲ ಬಿಡುತ್ತೀರೋ ಆಗ ನಿಮ್ಮ ಸಂಪನ್ಮೂಲ ಆ ವರ್ಷದ್ದು ಹೊರಟುಹೋಗುತ್ತದೆ. We are openig flood gates by transferring according to the whims and fancies of the officers. ಅವರ ನ್ಯಾಯವಾದಂಥ ವಿಚಾರಗಳನ್ನು ನಾವು ನೋಡಬೇಕು. ಆದರೆ There should be a single of command. ಇದರಲ್ಲಿ ತಪ್ಪಿದ್ದು ಇಷ್ಟೆ. ಇದು ಬರೀ ಸ್ಲೇಲ್ಸ್ ಟ್ಯಾಕ್ಸ್ ಡಿಪಾರ್ಟಿಮೆಂಟ್‌ಗೆ ಮಾತ್ರ ತಮ್ಮ ಇಡೀ ಆಡಳಿತಕ್ಕೆ ಅನ್ವಯವಾಗುತ್ತದೆ. ಯಾರನ್ನಾದರೂ ಅಧಿಕಾರಿಗಳನ್ನು ನಂಬಬೇಕು, ಕಮಿಷನರನ್ನು ನಂಬಿ ಅಥವಾ ಸೆಕ್ರೆಟರಿಗಳನ್ನು ನಂಬಿ. ಆದರೆ ನಾವು ಅಧಿಕಾರದಲ್ಲಿರುವಾಗಲೂ ಕೂಡ I had told the Chief Minister at that time. ಈ ಇಲಾಖೆಯನ್ನು ಟ್ರಾನ್ಸ್‌ಫರ್ ಇಂಟರ್‌ಫಿಯರ್ಸ್‌ನಿಂದ ಹೊರತು ಪಡಿಸಬೇಕು. There should not be any interference as far as transfer of officials in this Department is concerned. ಏಕೆಂದರೆ, ಸಂಪನ್ಮೂಲ ಬೇಕು. ಇವತ್ತು ಶಾಸಕರು ಹಣವನ್ನು ಕೇಳುತ್ತಾ ಇದ್ದಾರೆ, ಅನೇಕ ಯೋಜನೆಗಳನ್ನು ಇವತ್ತು ಜಾರಿ ಮಾಡಬೇಕಾಗುತ್ತದೆ. ಸಂಪನ್ಮೂಲ ಬಹಳ ಬಿಗಿಯಾಗಿ ವಸೂಲಾಗಬೇಕಾದಂಥ ಇಲಾಖೆಯಲ್ಲೂ ಕೂಡ ವರ್ಗಾವಣೆಯಲ್ಲಿ ಹಸ್ತಕ್ಷೇಪ ಬೇರೆ ಬೇರೆ ಕಾರಣಗಳಿಂದ ಮಾಡಿದರೆ ಆಗತಕ್ಕಂಥ ಪರಿಣಾಮ ಇದೇ; ಇದರಲ್ಲಿ ಕುಸಿತವಾಗುತ್ತದೆ. ತಾವು ಮೂರು ವರ್ಷಗಳ ಹಿಂದಿನ ವಿದ್ಯಾಮಾನವನ್ನು ತೆಗೆದುಕೊಳ್ಳಿ. ನಿಷ್ಠೂರವಾದರೂ ಕೂಡ ಈ ಇಲಾಖೆಯು ವರ್ಗಾವಣೆಯ ದೃಷ್ಟಿಯಲ್ಲಿ ಬಹಳ ಕಠಿಣವಾಗಿ ನಿಲ್ಲಬೇಕಾಗುತ್ತದೆ. You have to stand just like a rock. ಏಕೆಂದರೆ, ಒಳ್ಳೆಯ ಅಧಿಕಾರಿಗಳಿದ್ದಾರೆ. It is a gold mine. It should not be a gold mine for somebody else to exploit it. It should exclusively be expeoited by the Government for mobilising resources. ಅದನ್ನು ತಾವು ಯಾವಾಗ ಮಾಡುತ್ತೀರಿ ಅದರಿಂದ ಹೆಚ್ಚಳ ಮಾಡಲಿಕ್ಕೆ ಸಾಧ್ಯವಿದೆ. ಈಗಲೂ ಕೂಡ ಒಳ್ಳೆಯ ಕಮಿಷನರ್ ಇದ್ದಾರೆ, ಒಳ್ಳೆಯ ಅಧಿಕಾರಿಗಳು ಕೆಲವರಿದ್ದಾರೆ. ನಾನು ಮಾನ್ಯ ಬೊಮ್ಮಾಯಿಯವರಿಗೆ ಪ್ರತ್ಯೇಕವಾಗಿ ಹೇಳಿದೆ. Please keep this D partmnt intact ಏಕೆಂದರೆ, ರಾಜ್ಯದ ಜನರ ಹಿತಾಸಕ್ತಿಯ ಪ್ರಶ್ನೆ. ಏಕೆಂದರೆ, ಸಂ ಪನ್ಮೂಲಗಳನ್ನು ಅತಿ ಜಾಸ್ತಿ ಕೊಡತಕ್ಕ ಈ ಇಲಾಖೆಯನ್ನು ನಾವು ಶಿಥಿಲಗೊಳಿಸಿದರೆ ಅದನ್ನು ಪುನಃ ಕಟ್ಟಲಿಕೆ ಇನ್ನೂ ಕೆಲವು ವರ್ಷಗಳು ಬೇಕಾಗುತ್ತದೆ. ಆದುದರಿಂದ ಈ ಬಗ್ಗೆ ಪುನಃ ಯೋಚನೆ ಮಾಡಬೇಕು. ಇದರ ಆಡಳಿತವನ್ನು ನಿಷ್ಠೂರವಾಗಿ ನಡೆಸಿಕೊಳ್ಳುತಕ್ಕಂಥ ವ್ಯವಸ್ಥೆಯನ್ನು ತಾವು ಮಾಡಬೇಕು. please keep away this Deparment from all in interfercnce and this is my submission.

ಶ್ರೀ ಎಂ. ಎಸ್. ಕೃಷ್ಣನ್—ತಾವು ಇಲಾಖೆ ಶಿಥಿಲವಾಗಿರುವುದಕ್ಕೆ ಒಂದೇ ಒಂದು ಕಾರಣ ಕೊಟ್ಟಿದ್ದೀರಿ. ಮೂಲಭೂತವಾಗಿ ಶಿಥಿಲವಾಗಿರುವುದಕ್ಕೆ ಕಾರಣ ಇರಬೇಕಲ್ಲವೇ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ಅಧಿಕಾರಿಗಳ ವರ್ಗಾವರ್ಗಿಯಲ್ಲಿ ಕೈಹಾಕಿತು. ಇವತ್ತು ಅಧಿಕಾರಿಗಳು ಏನು ಮಾಡುತ್ತಿದ್ದಾರೆಂದರೆ, ಬೆಂಗಳೂರಿಗೆ ಬಂದು ಹೋಟೆಲುಗಳಲ್ಲಿ, ಕ್ಯಾಂಪ್ ಮಾಡಿ, ತಮ್ಮ ಪ್ರಭಾವ ಬೀರಲಿಕ್ಕೆ ಪ್ರಯತ್ನ ಮಾಡುತ್ತಾರೆ. ಪ್ರಭಾವ ರಹಿತವಾಗಿ ಮಾಡಬೇಕಾದರೆ, objectively, we must sit and transfer officers, according to their collection performance. You can just call for the sheets. You have to keep the performance as mirror. ಯಾವ ಅಧಿಕಾರಿಗಳು ಎಷ್ಟು ಪರ್ಸೆಂಟೇಜ್ ಕಲೆಕ್ಷನ್ ಮಾಡಿದ್ದಾರೆ, ನಾವು ೭೫ ಪರ್ಸೆಂಟ್ ಮೇಲ್ಪಟ್ಟು ಕಲೆಕ್ಷನ್ ಮಾಡಿದಂಥ ಮೇಲಾಧಿಕಾರಿಗಳ ಮನವಿಯನ್ನು ಮಾತ್ರ ಕನ್ಸಿಡರ್ ಮಾಡುತ್ತಿದ್ದೆವು. ಕಲೆಕ್ಷನ್ ಸರಿಯಾಗಿಲ್ಲದೇ ಹೋದರೆ, ಸರಿಯಾದಂಥ ಪೋಸ್ಟಿಂಗ್ಸ್ ಕೂಡ ಕೊಡುತ್ತಿರಲಿಲ್ಲ. We have got to maintain certain norms for transfer. You must just avoid for the time being, about that man belongs to this community or that group or that man is friend of this man or that man ಜನವರಿಯಿಂದ ಜುಲೈವರೆಗೆ ವರ್ಗಾವಣೆ ಮಾಡಿದ್ದೀರಿ, ೭ ತಿಂಗಳಲ್ಲಿ ನಿಷ್ಕ್ರೂರವಾಗಿ ಅಧಿಕಾರಿಗಳನ್ನು ವರ್ಗ ಮಾಡಿದ್ದೀರಿ. Out of fear, they may come to Bangalore. ಇಲಾಖೆಯನ್ನು ಸರಿಯಾಗಿ ನಿರ್ವಹಿಸಬೇಕಾದಂಥ ಅವಶ್ಯಕತೆ ಇದೆ. ನಾನು ಈ ಕೆಲವು ಅಂಕಿಸಂಖ್ಯೆಗಳನ್ನು ಕೊಟ್ಟಿದ್ದೇನೆ, ಇನ್ನೂ ಕೂಡ ಇವೆ. ಅವುಗಳು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಯಾವ ಮಟ್ಟದಲ್ಲಿ ಸೇಲ್ಸ್ ಟ್ಯಾಕ್ಸ್ ಕಲೆಕ್ಷನ್ ಮಾಡಬೇಕಾಗಿತ್ತೋ, ಆ ಮಟ್ಟದಲ್ಲಿ ಅದು ಆಗಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ನನ್ನ ಮೇಲೆ ಕಾಮೆಂಟ್ ಮಾಡಿದ್ದಾರೆ. Perhaps if he would have called me, I would have given some suggestions in this behalf, ಆದ್ದರಿಂದ ಈ ಇಲಾಖೆ ಸರ್ಕಾರಕ್ಕೆ ಮಾತ್ರ ಸೀಮಿತವಾದಂಥದ್ದಲ್ಲ ನನ್ನ ಕ್ಷೇತ್ರದಲ್ಲಿ ರಸ್ತೆ ಆಗಬೇಕಾಗಿರುತ್ತೆ, ಸೇತುವೆ ಆಗಬೇಕಾಗಿರುತ್ತೆ, ಕೊಟ್ಟಂಥ ಹಣಕ್ಕಿಂತಲೂ ೧೦೦-೧೫೦ ಕೋಟಿ ರೂಪಾಯಿಗಳು ಹೆಚ್ಚಿಗೆ ಖರ್ಚು ಮಾಡಬೇಕಾದ ಪರಿಸ್ಥಿತಿಯಲ್ಲಿ ತಾವು ಇದ್ದೀರಿ ಎಂದು ಹೇಳುತ್ತಿದ್ದೇವೆ. ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯ ೧೯೮೧-೮೨ನೇ ಸಾಲಿನಲ್ಲಿ ಇಡೀ ರಾಷ್ಟ್ರದಲ್ಲಿಯೇ ಆರ್ಥಿಕ ನಿರ್ವಹಣೆ ವಿಚಾರದಲ್ಲಿ ಪ್ರಥಮ ಸ್ಥಾನ ಪಡೆದಿತ್ತು. This is from the Planning Commission. Surplus out of sanctions in 1981-82. was plus 39.74 crores. ಎಲ್ಲಾ ರಾಜ್ಯಗಳಿಗಿಂತಲೂ ಕೂಡ ಮಿಕ್ಕಿ ಖರ್ಚು ಮಾಡುವಂಥ ಆರ್ಥಿಕ ಸ್ವರೂಪ ಕರ್ನಾಟಕ ರಾಜ್ಯಕ್ಕೆ ಇತ್ತು. ೨ನೇ ಸ್ಥಾನ ತಮಿಳು ನಾಡಿಗೆ ಹೋಗಿತ್ತು. Of course, as a Chief Minister you will have to be magnanimous. ನಾನು ಆರ್ಥಿಕ ಮಂತ್ರಿಯಾಗಿ ಸಾಧನೆ ಮಾಡಿದ್ದೇವೆಂದು ಹೇಳುವುದಿಲ್ಲ. ಆಗಿನ ಕಾಲದ ಶಾಸಕರು, ಮಂತ್ರಿಗಳು ಹಾಗೂ ಅಧಿಕಾರಿಗಳ ಮುಂದೆ ಮಾಡಿದರು. ಸೇಲ್ಸ್ ಟ್ಯಾಕ್ಸ್ ಇಲಾಖೆ ಸಂಪನ್ಮೂಲಗಳನ್ನು ಒದಗಿಸುವ ದಿಸೆಯಲ್ಲಿ ಚೆನ್ನಾಗಿ ಕೆಲಸ ಮಾಡಿತು. ಅಲ್ಲದೆ ಸ್ಮಾಲ್ ಸೇವಿಂಗ್ಸ್‌ನಲ್ಲೂ ಕೂಡ ಹೆಚ್ಚಳ ಮಾಡಿದ್ದರಿಂದ ಮಾತ್ರ ಸಾಧನೆ ಮಾಡಲಿಕ್ಕೆ ಸಾಧ್ಯವಾಯಿತು, ಅದರಿಂದ ಅಂಥ ಒಂದು ಸ್ಥಾನವನ್ನು ಕರ್ನಾಟಕ ಪಡೆಯುಲಿಕ್ಕೆ ಸಾಧ್ಯವಾಯಿತು. ಅಂಥ ಅಧಿಕಾರಿಗಳು ಈಗಲೂ ಇದ್ದಾರೆ, ಅವರಿಗೆ ಸರಿಯಾದಂಥ ಮಾರ್ಗದರ್ಶನ ಮತ್ತು ನಿರ್ದೇಶನ ಕೊಟ್ಟು ಕೆಲಸ ಮಾಡಿದರೆ ಒಳ್ಳೆಯ ಫಲಿತಾಂಶ ದೊರೆಯುತ್ತದೆ, ಇಲ್ಲದೇ ಹೋದರೆ ಜನಹಿತಾಸಕ್ತಿಯಾಗುವುದಿಲ್ಲ.

ಇನ್ನು ಓವರ್‌ಡ್ರಾಫ್ಟ್ ಬಗ್ಗೆ ಹೇಳುವುದಾದರೆ, ರಾಜ್ಯದಲ್ಲಿ ಪ್ರಗತಿಪರವಾದ ಕಾರ್ಯಕ್ರಮಗಳನ್ನು ಹಾಕಿಕೊಂಡ ಮೇಲೆ ಓವರ್‌ಡ್ರಾಫ್ಟನ್ನು ಅನುಸರಿಸಬೇಕಾಗುತ್ತದೆ. ಜೊತೆಗೆ ಓವರ್ ಡ್ರಾಫ್ಟನ್ನು ನಿರ್ವಹಣೆ ಕೂಡ ಮಾಡಬೇಕಾಗುತ್ತದೆ. ಅದು ಒಂದು ರೀತಿ "ಹುಚ್ಚು ಕುದುರೆ" ಇದ್ದ ಹಾಗೆ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಹುಚ್ಚು ನಾಯಿ ಆಗಬಾರದು,

ಶ್ರೀ ಎಂ. ವೀರಪ್ಪಮೊಯಿಲಿ.—ಇದರ ಬಗ್ಗೆ ಕಡಿವಾಣ ಇಟ್ಟುಕೊಳ್ಳುವ ಸಾಮರ್ಥ್ಯ ತಮಗೆ ಇಲ್ಲ ಎಂದು ನಾನು ಹೇಳುವುದಿಲ್ಲ. ಆದರೂ ಕೂಡ ಅದನ್ನು ನಿರ್ವಹಿಸದೇ ಇರುವುದಕ್ಕೆ ಕಾರಣ ಏನು ಎನ್ನುವುದನ್ನು ತಮ್ಮಿಂದ ತಿಳಿದುಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ಇಲ್ಲದೇ ಹೋದರೆ ತಾವು ಅರ್ಥ ಖಾತೆಯನ್ನು ಏತಕ್ಕೆ ಇಟ್ಟುಕೊಂಡಿದ್ದೀರಿ ? ಅರ್ಥ ಇಲಾಖೆಯನ್ನು ಬೇರೆಯವರಿಗೆ ವಹಿಸಿ ಕೊಡುವುದು ಒಳ್ಳೆಯದು I must say, as a Finance Minis er you could not function as effectively as we all expected. ಇಲ್ಲಿ ಕಡಿತ ಹಾಕಬೇಕು, ಮತ್ತು ನಿಷ್ಠೂರವಾಗಿ ಇರಲಿಕ್ಕೆ ಆಗುವುದಿಲ್ಲ, ಇದರಿಂದಾಗಿ ಓವರ್ ಡ್ರಾಫ್ಟ್ ನಾಗಾಲೋಟದಿಂದ ಓಡುತ್ತಿದೆ. ಸರಿಯಾದ ನಿಯಂತ್ರಣ ಏತಕ್ಕೆ ಆಗುತ್ತಿಲ್ಲ, ಇದಕ್ಕೆ ಪ್ರಬಲವಾದ ಕಾರಣ ಇರಬೇಕು. ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಸಮತೋಲನ ಮಾಡಲಿಕ್ಕೆ ಏತಕ್ಕೆ ಸಾಧ್ಯವಾಗುತ್ತಿಲ್ಲ. ತಾವು ನಿಷ್ಠೂರವಾದ ರೀತಿಯಲ್ಲಿ ಆಡಳಿತ ಮಾಡುವುದಕ್ಕೆ ಅಸಾಧ್ಯವಾಗುತ್ತದೆ. ಬೇರೆಬೇರೆ ಕಾರ್ಪೊರೇಷನ್‌ಗಳಿಂದ ೧೮ ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದೀರಿ. ಇದನ್ನು ಸೇರಿಸಿದರೆ ೨೮ ಕೋಟಿ ರೂಪಾಯಿಗಳಿಗೆ ಕೊರತೆ ಆಗುತ್ತದೆ ಒಟ್ಟಿನಲ್ಲಿ ನಿಮ್ಮ ಓವರ್ ಡ್ರಾಫ್ಟ್ ನಾಗಾಲೋಟದಿಂದ ಹೋಗುತ್ತೆ, ಇದನ್ನು ತಾವು ಕಂಟ್ರೋಲ್ ಮಾಡಬೇಕು. If you have got others' money, why should you go out and mobilise resources. If you can go on with the overdraft, ultimate,y ನೀವು ಸಂಪನ್ಮೂಲಗಳನ್ನು ಒದಗಿಸುವುದಕ್ಕಾಗುವುದಿಲ್ಲ. ಅರ್ಥವಾಗುವುದಿಲ್ಲ ಆದ್ದರಿಂದ ಕೈಬಿಡಬಹುದು. ಇದ್ದ ಪ್ರಕಾರ ಎ. ಪಿ ಎಂ. ಸಿ. ಮಾರ್ಕೆಟ್ ಯಾರ್ಡಿನಿಂದಲೂ ಹಣ ತೆಗೆದುಕೊಂಡಿದ್ದೀರಿ ಎಂದು ಕೇಳಿದ್ದೇನೆ ನನಗೆ ನೆನಪು I think, when I was the finance Minister I started giving money from Treasury. I don't know whether you have done it much earlier. ಆ ಹಣ ಟ್ರೆಜರಿಗೆ ಕಳುಹಿಸಿ ಒಂದು ಕೆಲಸ ಮಾಡಿದಿರಿ. ಆದೇ ರೀತಿ ಬೆಂಗಳೂರು ನಗರ ಕಾರ್ಪೋರೇಷನ್‌ನಿಂದ ೪ ಕೋಟಿ ರೂಪಾಯಿಗಳನ್ನು ಟ್ರೆಜರಿಗೆ ತೆಗೆದುಕೊಂಡಿದ್ದೀರಿ, ಅದು ಉಳಿಯಿತು, ಇಲ್ಲದೇ ಇದ್ದರೆ ರಸ್ತೆಗಳ ಮೇಲೆ ೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೂ ರಸ್ತೆಗಳೆಲ್ಲ ತೂತು ಬಿದ್ದಿವೆ. ಈ ಹಣವನ್ನು ಅವರು ಖರ್ಚು ಮಾಡುತ್ತಿದ್ದರು.

ನಾಲ್ಕು ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಬಂದಿದ್ದರಿಂದ ೪ ಕೋಟಿ ರೂಪಾಯಿಗಳು ಉಳಿಯಿತು. ಅದಕ್ಕೋಸ್ಕರ ನಾನು ಮುಖ್ಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಎಲ್ಲಾ ಕಡೆಯಿಂದಲೂ ಹಣವನ್ನು ಮೊಬಿಲೈಸ್ ಮಾಡಿದ್ದೀರಿ. ಅದನ್ನು ನೀವು ತುರಾತುರಿಯಾಗಿ ತೆಗೆದುಕೊಂಡು ಖರ್ಚು ಮಾಡುತ್ತಿದ್ದೀರಿ. ಆರ್ಥಿಕ ದಿವಾಳಿ ಮಾಡುತ್ತಿದ್ದೀರೆಂದು ನಾನು ಹೇಳಿದೆ. ಅದಕ್ಕೂ ತಾವು ಹೇಳಿದಿರಿ, ಇಷ್ಟೆಲ್ಲ ಆಗಿರುವುದು ದಿವಾಳಿ ಅಲ್ಲದೆ ಮತ್ತೇನು ? ಎಂದು. ಅದನ್ನು ಸುಧಾರಿಸಿಕೊಂಡು ಕೆಲವು ರಿಯಾಯಿತಿಗಳನ್ನು ರೈತರಿಗೆ ಮ್ಯಾನಿಫೆಸ್ಟೋದಲ್ಲಿ ಕಾಣಿಸಿದ್ದೀರಿ. ೧೨ ಎಕರೆ ಜಮೀನು ಇರತಕ್ಕ ಪ್ಲಾಂಟರ್ಸ್ ಮೇಲೂ ಅಗ್ರಿಕಲ್ಚರ್ ಇನ್‌ಕಮ್ ಟ್ಯಾಕ್ಸನ್ನು ಹಾಕಿದ್ದೀರಿ other then ಪ್ಲಾಂಟೇಷನ್ ಕ್ರಾಪ್ ಟ್ಯಾಕ್ಸ್ ಹಾಕಿದ್ದೀರಿ. ನಾನು ಅರ್ಥ ಸಚಿವನಾಗಿದ್ದಾಗ ಪ್ಲಾಂಟೇಷನ್ ಕ್ರಾಪ್ ಟ್ಯಾಕ್ಸ್ ಅಲ್ಲದೆ ಬೇರೆ ತೆರಿಗೆಯಾದ ಒಂದು ಕೋಟಿ ೨೫ ಲಕ್ಷ ರೂಪಾಯಿಗಳನ್ನು ವಸೂಲ್ಮಾಡುವುದಕ್ಕೆ ೫೦ ಲಕ್ಷ ರೂಪಾಯಿ ಖರ್ಚಾಗುತ್ತಿತ್ತು. ಆದ್ದರಿಂದ ಅಂಥ ವ್ಯವಸ್ಥೆ ಬೇಡವೆಂದು ಅದನ್ನು ತೆಗೆದೆವು. ೧೦ ಎಕರೆವರೆಗೆ ಜಮೀನು ಹೊಂದಿದ್ದವರಿಗೆಲ್ಲ ಆ ತೆರಿಗೆಯನ್ನು ಮನ್ನಾ ಮಾಡಿದ್ದೆವು. ಹರಿಜನರು ಮತ್ತು ಸಣ್ಣ ಸಣ್ಣ ರೈತರಿಗೆ ಈ ಬಾಬ್ತು ಬೇಡವೆಂದು ತೆಗೆದರೆ ಇವತ್ತು ನೀವು ಪುನಃ ೨ ಹೆಕ್ಟೇರ್ ಜಮೀನುಳ್ಳವರಿಗೂ ಕೂಡ ಪ್ಲಾಂಟೇಷನ್ ಕ್ರಾಪ್ ಮೇಲೆ ತೆರಿಗೆ ಹಾಕಿದ್ದೀರಿ. ಇದು ಖಂಡಿತ ನ್ಯಾಯವಲ್ಲ. ರೈತರ ಮೇಲೆ ತೆರಿಗೆ ಹಾಕುವುದಿಲ್ಲ. ಅವರ ಮೇಲಿರತಕ್ಕ ತೆರಿಗೆ ಹೊರೆಯನ್ನು ಇಳಿಸುತ್ತೇವೆಂದು ಮುಂದೆ ಬಂದ ಸರ್ಕಾರ ಆ ತೆರಿಗೆಗಳನ್ನು ಪುನಃ ಹಾಕುವುದು ಸರಿಯಲ್ಲವೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಆ ಕೆಲಸ ಮಾಡಿದ್ದರಿಂದ ಸಣ್ಣ ರೈತರಿಗೆ ಮತ್ತು ಹರಿಜನ–ಗಿರಿಜನರಿಗೆ ಬಹಳ ತೊಂದರೆಯಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಕರ್ನಾಟಕ ಸರ್ಕಾರೀ ನೌಕರರ ಬಗ್ಗೆ ಹೇಳುವುದಾದರೆ, ನಾವು ಹಿಂದೆ ಅವರ ಪೇಸ್ಕೇಲ್ ಅನ್ನು ಸಾಕಷ್ಟು ಜಾಸ್ತಿ ಮಾಡಿದ್ದೆವು. ಈಗ ಅನೇಕ ಜನರ ಬೇರೆ ಬೇರೆ ಬೇಡಿಕೆಗಳು ಇವೆ. ಅವುಗಳ ಕಡೆಗೆ ತಾವು ಏನೇನು ಗಮನ ಹರಿಸಿಲ್ಲ. ಏಕೆಂದರೆ, ರೈತರ ಪರವಾಗಿ ಚುನಾಯಿತರಾಗಿ ಬಂದವರು

ರೈತರಿಗೆ ಕೊಡುತ್ತೀರಿ ಎಂದರೆ ಅದೂ ಇಲ್ಲ, ಇತ್ತ ಸರ್ಕಾರಿ ನೌಕರರಿಗೂ ಪರಿಹಾರ ಕೊಡುವುದಿಲ್ಲ, ಈ ಎರಡೂ ವರ್ಗಗಳಲ್ಲಿ ಸಂಪೂರ್ಣವಾದ ಕೋಲಾಹಲವನ್ನು ಎಬ್ಬಿಸಿದ್ದೀರೇ ಹೊರತು ಅವರಿಗೆ ಸಹಾಯ ಮಾಡತಕ್ಕ ಮನಸ್ಸನ್ನು ತಾವು ಮಾಡಿತವೆಂದು ಇವತ್ತು ನಾನು ಹೇಳಬೇಕಾಗಿದೆ. ತಮ್ಮ ಸರ್ಕಾರ ಏನಾಗಿದೆ, ಅನೇಕ ರೀತಿಯಲ್ಲಿ ಕೆಲವು ಪ್ರೆಜರ್‌ಗಳಿಗೆ ಒಳಗಾಗಿ ಕೆಲಸ ಮಾಡುತ್ತಿರುವ ಹಾಗೆ ಸಾರ್ವಜನಿಕರಲ್ಲಿ ಅಭಿಪ್ರಾಯ ಬರುತ್ತಿದೆ. ತಮ್ಮ ಇಡೀ ಬಡ್ಜೆಟ್ಟನ್ನು ಮತ್ತು ಯೋಜನೆಗಳನ್ನು ಸೂಕ್ಷ್ಮವಾಗಿ ನೋಡಿದರೆ ಶ್ರೀಮಂತ ರೈತರಿಗೆ ಮತ್ತು ಶ್ರೀಮಂತ ವರ್ಗದ ಜನರಿಗೆ ಸಹಾಯ ಮಾಡಿದ್ದೀರಿ. ಯಾವ ರಿಯಾಯಿತಿಗಳು ಬಡವರಿಗೆ ಹೋಗಲಿಲ್ಲ. ದೊಡ್ಡ ದೊಡ್ಡ ರೈತರಿಗೆ ಮಾತ್ರ ಈ ರಿಯಾಯಿತಿ ಸಿಕ್ಕಿದೆ. ಅದರಲ್ಲಿ ಒಂದೆರಡು ಎಕ್ಸೆಪ್ಷನ್ಸ್ ಇರಬಹುದು. ತಾವು ಯಾವ ಒಂದು ಬೆನಿಫಿಟ್ ಕೊಡುತ್ತೀರೋ ಅದು ಶ್ರೀಮಂತ ರೈತರಿಗೆ ಹೋಗಿದೆ ತಾವು ಕೊಟ್ಟ ಬೆನಿಫಿಟ್ಸ್ ಅರ್ಬನ್ ರಿಚ್‌ಗಳಿಗೆ ಹೋಗಿದೆ. ಅದನ್ನು ಬೇರೆ ಬೇರೆ ರೀತಿ ವಿಶ್ಲೇಷಣೆ ಮಾಡಿ ಹೇಳಬಹುದು. ನಗರಕ್ಕೆ ಸೀಮಿತವಾದ ಕಾರ್ಯಕ್ರಮದಲ್ಲಿ ಅರ್ಬನ್ ರಿಚ್‌ಗೆ ಹೋಗಿದೆ. ಇವತ್ತು ತಾವು ಕೊಡತಕ್ಕ ಮತ್ತೊಂದು ರಿಯಾಯತಿ ಫಿಲಂ ವರ್ಗಕ್ಕೆ ಹೋಗಿದೆ. ಕನ್ನಡ ಭಾಷೆ ಅಭಿವೃದ್ಧಿ ಆಗಲಿ ಎಂದು ಕನ್ನಡ ಫಿಲಂಗಳಿಗೆ ೫೦ ಪರ್ಸೆಂಟ್ ಮಾತ್ರ ಟ್ಯಾಕ್ಸ್ ಇಟ್ಟಿದ್ದೀರಿ. ಕೆಲವು ಫಿಲಂಗಳಿಗೆ ಟ್ಯಾಕ್ಸನ್ನು ಪೂರ್ತಿಯಾಗಿ ಮನ್ನಾ ಮಾಡಬೇಕು. ಆದರೆ ಆ ರೀತಿ ಕೆಲವಕ್ಕೆ ಇಟ್ಟು ಕೆಲವಕ್ಕೆ ಬಿಟ್ಟರೆ ಪಕ್ಷಪಾತ ಧೋರಣೆ ತೋರಿದಂತಾಗುತ್ತದೆ ಮತ್ತು ರಾಜಕೀಯ ಒತ್ತಡ ಬರುತ್ತದೆಂದು ಒಂದೇ ರೀತಿಯಾಗಿ ಕನ್ನಡ ಚಿತ್ರಗಳಿಗೆ ೫೦ ಪರ್ಸೆಂಟ್ ಮನರಂಜನೆ ತೆರಿಗೆಯನ್ನು ಇಟ್ಟಿದ್ದೀರಿ. ಇದರಿಂದ ವರಮಾನ ಕಡಿಮೆಯಾಗಿದೆ ಎಂದರೆ ಒಪ್ಪುವುದಿಲ್ಲ. ಮನರಂಜನಾ ತೆರಿಗೆಯಲ್ಲಿ ರಿಯಾಯಿತಿ ಕೊಡದೆ ತೆರಿಗೆ ಕಡಿಮೆಯಾಗಿದೆ ಎಂದರೆ ಖಂಡಿತವಾಗಿ ಒಪ್ಪುವುದಿಲ್ಲ. ಈಗ ಸಬ್ಸಿಡಿ ಜಾಸ್ತಿ ಮಾಡಿದ್ದೀರಿ, ಈ ವರ್ಗದವರಿಗೆ ಸಬ್ಸಿಡಿ ಜಾಸ್ತಿ ಮಾಡಬೇಕಾದ ಅವಶ್ಯಕತೆ ಖಂಡಿತವಾಗಿ ಇರಲಿಲ್ಲ. ಇದರಿಂದ ಏನಾಗಿದೆ ಎಂದರೆ ಯಾವ ಒಂದು ಸಾರ್ವತ್ರಿಕವಾದ ಲಾಭವನ್ನು ಈ ಕ್ಷೇತ್ರಕ್ಕೆ ಮತ್ತು ಭಾಷಾ ಕ್ಷೇತ್ರದ ಅಭಿವೃದ್ಧಿಗೆ ಕೊಡಬೇಕೆಂದು ಮಾಡಿದ್ದೀರಿ ಅದನ್ನು ಬಿಟ್ಟು ಸಬ್ಸಿಡಿಯಿಂದ ಚಿತ್ರ ನಡೆಸುವವರಿಗೆ ಪ್ರಯೋಜನ ಇದೆ. ಮನರಂಜನಾ ತೆರಿಗೆಯ ರಿಯಾಯಿತಿಯಿಂದ ಸಾಕಷ್ಟು ಚಲನಚಿತ್ರಗಳಿಗೆ ಪ್ರೋತ್ಸಾಹ ಸಿಗುತ್ತದೆ. ಆದರೆ ಸಬ್ಸಿಡಿ ಕೊಡುವುದರಿಂದ ಪ್ರೊಡ್ಯೂಸರ್‌ಗಳಿಗೆ ಮಾತ್ರ ಲಾಭ ಸಿಗುತ್ತದೆಯೇ ಹೊರತು ಬೇರೆಯವರಿಗೆ ಸಿಗುವುದಿಲ್ಲ. ಇದನ್ನು ಜಾಸ್ತಿ ಮಾಡಿದ್ದರಿಂದ ಚಿತ್ರ ತಯಾರಿಸತಕ್ಕ ಶ್ರೀಮಂತರಿಗೆ ಹೆಚ್ಚು ಲಾಭ ದೊರೆಯುತ್ತದೆ. ಒಟ್ಟು ರಿಯಾಯಿತಿಯಲ್ಲಿ ಇಷ್ಟು ಮಾತ್ರ ಕಂಡುಬರುತ್ತದೆ. ಬೇರೆ ಯಾವುದೇ ರೀತಿಯ ಲಾಭವನ್ನು ಮಾಡಿದಂತೆ ಕಂಡುಬರುವುದಿಲ್ಲ.

ಈಗ ಡ್ರಾಟ್ ಬಗ್ಗೆ ಸಾಕಷ್ಟು ವಿಚಾರ ಬಂದಿದೆ. ಈ ಬಾಬಿಗೆ ಕೇಂದ್ರ ಸರ್ಕಾರ ನಮಗೆ ಸರಿಯಾಗಿ ಸಹಾಯ ಮಾಡಿಲ್ಲವೆಂದು ಒಂದು ಕಡೆ ಗುಲ್ಲು ಎದ್ದಿದೆ. ಇದರ ಬಗ್ಗೆ ನಾನು ಹೇಳುವುದಕ್ಕೆ ಇಷ್ಟಪಡುವುದೇನೆಂದರೆ ಈಗ ೧೯ ಜಿಲ್ಲೆಗಳ ಪೈಕಿ ೧೬ ಜಿಲ್ಲೆಗಳಲ್ಲಿ ಬರಗಾಲ ಬಂದಿದೆ ಬಡ್ಜೆಟ್ ಅನ್ನು ತಯಾರಿಸತಕ್ಕ ಸಂದರ್ಭದಲ್ಲಿ ಈ ವಿಚಾರವನ್ನು ಬಡ್ಜೆಟ್ಟನಲ್ಲಿ ಸೇರಿಸಬೇಕಾಗಿದೆ. ಕೇಂದ್ರ ಸರ್ಕಾರ ಯಾವುದೇ ರೀತಿಯ ಸಹಾಯ ಮಾಡಿದರೂ ಕೂಡ ಬಡ್ಜೆಟ್ ಸಪೋರ್ಟ್ ಬೇಕಾಗುತ್ತದೆ. ಬಡ್ಜೆಟ್ ಸಪೋರ್ಟ್ ಸಾಮಾನ್ಯವಾಗಿ ಆಯಾಯ ಕಾಲಮಾನದ ಒಂದು ಮಾಪನದ ಮೇಲೆ ಬಂದಿದೆ. ತಮಗೆ ಗೊತ್ತಿರುವ ಹಾಗೆ ಬರಗಾಲದ ಸಲುವಾಗಿ ೮೨-೮೩ ರಲ್ಲಿ ೫.೬ ಕೋಟಿ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಒದಗಿಸಿದ್ದೆವು. ೧೬ ಜಿಲ್ಲೆಗಳಲ್ಲಿ ಬರಗಾಲ ಇರುವಾಗ ತಾವು ಹೆಚ್ಚು ಹಣವನ್ನು ಇದಕ್ಕೆ ಇಡಬೇಕಾಗಿತ್ತು. ಅದಕ್ಕೆ ಬದಲಾಗಿ ಕೇವಲ ೫.೪೬ ಕೋಟಿ ರೂಪಾಯಿಗಳನ್ನು ಮಾತ್ರ ೮೩-೮೪ನೇ ಸಾಲಿಗಾಗಿ ಒದಗಿಸಿದ್ದೀರಿ. ಇದು ಏತಕ್ಕೆ ? ಕಾಲು ಕೆರೆದು ಕೇಂದ್ರದ ಜೊತೆಯಲ್ಲಿ ಜಗಳವಾಡೋಣವೆಂದು ಈ ವ್ಯವಸ್ಥೆ ಮಾಡಿದ್ದೀರಾ ? ಅಥವಾ ನಿಮ್ಮ ಬಡ್ಜೆಟ್ಟನಲ್ಲಿ ಇಷ್ಟು ಮಾತ್ರ ಕೊಟ್ಟು ಹೆಚ್ಚು ಹಣವನ್ನು ಕೇಂದ್ರ ಸರ್ಕಾರದಿಂದ ಪಡೆಯಬೇಕೆಂಬ ದೃಷ್ಟಿಯಿಂದ ಮಾಡಿದ್ದೀರಾ ಎಂಬುದನ್ನು ತಾವು ಉತ್ತರ ಕೊಡತಕ್ಕ ಸಂದರ್ಭದಲ್ಲಿ ಹೇಳಬೇಕು ಈ ರಾಜ್ಯದಲ್ಲಿರತಕ್ಕ ಬಡಜನರು ಈ ರಾಜಕೀಯ ಚದುರಂಗದಾಟದಲ್ಲಿ ಸಿಲುಕಿ ಬವಣೆ ಪಡತಕ್ಕ ಪರಿಸ್ಥಿತಿಯನ್ನು ಉಂಟು ಮಾಡಬಾರದು. ಒಂದೆರಡು ತಿಂಗಳ ಅವಧಿಯಲ್ಲಿ ೧೫ ಕೋಟಿ ರೂಪಾಯಿಗಳನ್ನು ಬರಗಾಲದ ಸಲುವಾಗಿ ಕೊಟ್ಟದ್ದು ಕರ್ನಾಟಕ ರಾಜ್ಯದ ಇತಿಹಾಸದಲ್ಲೇ ಇಲ್ಲ. ಅಷ್ಟು ಹಣವನ್ನು ನಾನ್ ಕಾಂಗ್ರೆಸ್ ಸರ್ಕಾರ ಇದ್ದಾಗಲೂ ಕೂಡ ಕೇಂದ್ರ ಸರ್ಕಾರ ಕೊಟ್ಟಿದೆ. ಯಾವುದೇ ಒಂದು ಕಾರಣ ಇಲ್ಲದೆ ಅವರ ಮೇಲೆ ಕಾಲು ಕೆರೆದು ಜಗಳವಾಡುವುದಕ್ಕೆ ಬದಲು ತಾವು ಸರಿಯಾಗಿ ಅಕೌಂಟ್ಸ್ ಕೊಟ್ಟಿದ್ದರೆ ಅನುಕೂಲವಾಗುತ್ತಿತ್ತು. ತಾವು ಏನು ತಮ್ಮ

ಪತ್ರದಲ್ಲಿ ಕೇಂದ್ರಕ್ಕೆ ೨೨ ಕೋಟಿ ರೂಪಾಯಿಗಳ ಹಣ ಬೇಕೆಂದು ಬರೆದಿದ್ದೀರಿ ಅದಕ್ಕೆ ಸರಿಯಾದ ಅಕೌಂಟ್ಸ್ ಕೊಟ್ಟು ಮಂಜೂರು ಮಾಡಿಸಿಕೊಳ್ಳತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಸೂರ್ಯನಾರಾಣರಾವ್.—೧೫ ಕೋಟಿ ರೂಪಾಯಿಗಳು ಕರ್ನಾಟಕಕ್ಕೆ ಕೊಟ್ಟಿರುವುದು ಬಹಳ ಜಾಸ್ತಿ ಎಂದು ಹೇಳಿದ್ದೀರಿ. ಒರಿಸ್ಸಾ ಮತ್ತು ಮಧ್ಯಪ್ರದೇಶಕ್ಕೆ ಎಷ್ಟು ಕೊಟ್ಟಿದ್ದಾರೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ದಯವಿಟ್ಟು ಸಭೆಯನ್ನು ಮಿಸ್‌ಲೀಡ್ ಮಾಡಬೇಡಿ. ನಾನು ಜಾಸ್ತಿ ಎಂದು ಹೇಳಲೇ ಇಲ್ಲ. ಎರಡು ತಿಂಗಳ ಅವಧಿಯಲ್ಲಿ ೧೫ ಕೋಟಿ ರೂಪಾಯಿಗಳನು ಕೊಟ್ಟಿದ್ದು ಯಾವಾಗಲೂ ಇಲ್ಲ ಎಂದು ಹೇಳಿದೆ.

ಡಾ. ವಿ.ಎಸ್. ಆಚಾರ್ಯ.—ಈಗಾಗಲೇ ೬ ತಿಂಗಳು ದಾಟಿಹೋಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಅರ್ಥ ಮಾಡಿಕೊಂಡು ಹೇಳಿ ಅರ್ಥ ತಿಳಿದುಕೊಂಡು ಹೇಳಬೇಡಿ. ಪೂರ್ತಿ ತಿಳಿದುಕೊಂಡು ಹೇಳಿ. ಈ ಬರಗಾಲದ ಬಾಬಿನಲ್ಲಿ ಸರ್ಕಾರದವರು ಎಷ್ಟು ಹಣವನ್ನು ಖರ್ಚು ಮಾಡುತ್ತಾರೇ ಅದನ್ನು ಕೇಂದ್ರ ಸರ್ಕಾರದಿಂದ ರೀಎಂಬರ್ಸ್ ಮಾಡಬೇಕೆಂದು ಹೇಳುವವರಲ್ಲಿ ನಾನೂ ಒಬ್ಬ. ಆದರೆ ತಾವು ಏನು ಮಾಡಿದ್ದೀರೆಂದರೆ ಇಲ್ಲಿ ಸಾಕಷ್ಟು ರಾಜಕೀಯವನ್ನು ಬೆರೆಸಿ ಸರಿಯಾದ ಲೆಕ್ಕವನ್ನು ಕೊಡದೇ ಇದ್ದೀರಿ. ತಮ್ಮ ಸ್ಟೇಟ್‌ಮೆಂಟ್ ಪ್ರಕಾರ ಹೋಗುವುದಾದರೆ If I am to go by your statement of accounts provided by the Revenue Department, what you have spent till today is Rs. 23 Crores. ಒಂದು ತಿಂಗಳಲ್ಲಿ ಹೆಚ್ಚಾಗಿರಬಹುದು, ಆದರೆ ಬರಗಾಲಕ್ಕೆ ಖರ್ಚು ಮಾಡಿದಂಥ ಹಣ ಆ ಬಾಬಿನಲ್ಲಿ ಎಂದರೆ ಸ್ಕೇರ್‌ಸಿಟಿ ಹೆಡ್‌ನಲ್ಲಿ ೨೩ ಕೋಟಿ ರೂಪಾಯಿಗಳು ಮಾತ್ರ. You have spent the other amounts on other accounts. Whether it s re-imbursable by the Government is a propriety which has to be seen. ಅದನ್ನು ತಾವು ಹೇಳಬೇಕು. I may not very accurate as far as the position of procedure is concerned. ಆದರೆ ಸ್ಕೇರ್ಸಿಟಿ ಹೆಡ್‌ನಲ್ಲಿ ೨೩ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ೧೬ ಜಿಲ್ಲೆಗಳಲ್ಲಿ ಬರಗಾಲ ಬಂದಿದ್ದು ಒಂದು ಒಂದೂವರೆ ವರ್ಷ ಕಾಲ ಬರಗಾಲದಿಂದ ಜನ ಬವಣೆ ಪಡುತ್ತಿದ್ದರೂ, ಅನೇಕ ಜನರು ಕೆಲಸ ಬೇಕು, ಅನ್ನ ಬೇಕು ಎಂದು ಕೇಳುತ್ತಾ ಇದ್ದು ಕರ್ನಾಟಕ ರಾಜ್ಯದಲ್ಲಿ ಹಾಹಾಕಾರ ಎಲ್ಲೆಡೆ ಹರಡಿರುವಾಗ ೭೫ ಕೋಟಿ ರೂಪಾಯಿಗಳನ್ನು ಸ್ಕೇರ್ಸಿಟಿ ಹೆಡ್‌ನಲ್ಲಿ ಖರ್ಚು ಮಾಡಬೇಕಾಗಿತ್ತು. You could have adjust that. How you have adjusted the accounts is a unestion ? You can correct yourself and give us a statement to-day saying that you have spent Rs. 75 crores on scarcity works, I will be one with you to take up the issue with th! Government of India. So far you have spent only this much on the scarcity nd provided money from other heads. ನಾನೂ ಕೂಡ ಈ ಸ್ಕೇರ್ಸಿಟಿ ಹೆಡ್ಸ್‌ನಲ್ಲಿ ಎಷ್ಟು ಖರ್ಚಾಗಿದೆ ಎಂಬುದನ್ನು ಹೇಳುವುದಕ್ಕೆ ಸಾಧ್ಯವಾಗುತ್ತಿಲ್ಲ. ರಾಜ್ಯದ ಜನ ಬವಣೆ ಪಡುತ್ತಿರುವಾಗ ೧೫ ೨೫ ಕೋಟಿ ರೂಪಾಯಿಗಳು ಮಾತ್ರವಲ್ಲ ಇಲಾಖೆಗಳು ಸರಿಯಾಗಿ ಕಾರ್ಯನಿರ್ವಹಣೆ ಮಾಡಿದರೆ ೧೦೦ ಕೋಟಿ ರೂಪಾಯಿಗಳನ್ನು ಬೇಕಾದರೂ ಕೇಂದ್ರದಿಂದ ರಾಜ್ಯಕ್ಕೆ ತರಿಸಬಹುದಾದ ಪರಿಸ್ಥಿತಿಯನ್ನು ತಾವು ಇವತ್ತು ನಿಲ್ಲಿಸಿದ್ದೀರಿ. ಇದರ ವಿಚಾರದಲ್ಲಿ ಪ್ರತಿಷ್ಠೆ ಬಿಟ್ಟು ಸರಿಯಾದ ಮಾಹಿತಿಯನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟು ಲೆಕ್ಕಾಚಾರವನ್ನು ಸರಿಯಾಗಿ ಕೊಟ್ಟು ಈ ಸದನವನ್ನೂ ಸಂಪೂರ್ಣ ವಿಶ್ವಾಸಕ್ಕೆ ತೆಗೆದುಕೊಂಡು ರಾಜ್ಯದ ಜನತೆಯ ವಿಶ್ವಾಸವನ್ನು ತಾವು ಗಳಿಸಬೇಕೇ ವಿನಹ ಬರಗಾಲದ ವಸ್ತುವನ್ನು ರಾಜಕೀಯ ಬಂಡವಾಳವಾಗಿ ಉಪಯೋಗ ಮಾಡುವ ಪ್ರವೃತ್ತಿ ಕರ್ನಾಟಕ ರಾಜ್ಯದ ಜನತೆಯ ಹಿತಾಸಕ್ತಿಗೆ ತೊಂದರೆಯಾಗುತ್ತದೆ ಎಂದು ಹೇಳುತ್ತಿದ್ದೇನೆ.

ಡಾ. ಎಚ್.ಎಲ್. ತಿಮ್ಮೇಗೌಡ.—ಮಾನ್ಯ ಮೊಯಿಲಿಯವರು ಕೇಂದ್ರ ಸರ್ಕಾರ ಬರಗಾಲಕ್ಕೆ ೧೦೦ ಕೋಟಿ ರೂಪಾಯಿಗಳನ್ನಾದರೂ ಕೊಡಬೇಕು ಎಂದು ಹೇಳುತ್ತಿದ್ದಾರೆ. ೧೫ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇ ಜಾಸ್ತಿ ಎಂದು ಹೇಳುವವರು ೧೦೦ ಕೋಟಿ ಕೊಡಬಹುದು ಎಂದು ಹೇಳುತ್ತಿದ್ದಾರಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ತರಹದ ರಾಜಕೀಯವನ್ನು ನಾನು ಇಷ್ಟಪಡುವುದಿಲ್ಲ. ೧೫ ಕೋಟಿ ರೂಪಾಯಿಗಳನ್ನು ಜಾಸ್ತಿ ಎಂದು ನಾನು ಹೇಳಲಿಲ್ಲ. ೭೫ ಕೋಟಿ ಅಲ್ಲ ೧೦೦ ಕೋಟಿ ರೂಪಾಯಿಗಳಾದರೂ ಕೇಂದ್ರ ಸರ್ಕಾರದಿಂದ ತರಬೇಕಾಗಿತ್ತು, ಅದಕ್ಕೆ ತಾವು ಸರಿಯಾದ ವ್ಯವಸ್ಥೆಯನ್ನು ಮಾಡಲಿಲ್ಲ ಎಂದು ಆಪಾದನೆ ಮಾಡುತ್ತಿದ್ದೇನೆ.

ಡಾ. ಎಚ್. ಎಲ್. ತಿಮ್ಮೇಗೌಡ.—ಕೇಂದ್ರ ಸರ್ಕಾರದ ಟೀಂ ಬಂದು ಪರಿಸ್ಥಿತಿಯನ್ನು ನೋಡಿಕೊಂಡು ಹೋಗಿ ಇಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಸ್ಕೇರ್ಸಿಟಿ ಕಂಡೀಷನ್ ಸರಿಹೋಗಬಹುದು ಎಂದು ಲೆಕ್ಕಪತ್ರಗಳನ್ನು ತೆಗೆದುಕೊಂಡು ಹೋದ ಮೇಲೆ ರಾಜ್ಯ ಸರ್ಕಾರದವರು ಲೆಕ್ಕ ಕೊಡಲಿಲ್ಲ, ಕಾಲು ಕೆರೆದುಕೊಂಡು ಜಗಳ ಮಾಡುತ್ತೀರಿ ಎಂದು ಹೇಳಿದರೆ ಏನರ್ಥ ? ಅವರೇ ನೋಡಿಕೊಂಡು ಹೋದಮೇಲೆ ೧೦೦ ಕೋಟಿ ರೂಪಾಯಿಗಳನ್ನಾದರೂ ಬೇಕಾಗಿದ್ದರೆ ಕೊಡಬೇಕಾಗಿತ್ತು.

SRI M. VEERAPPA MOILY --I think interruptions may not be good

ಚೇರ್ಮನ್.—ಮಾನ್ಯ ತಿಮ್ಮೇಗೌಡರೆ, ತಾವು ಆಮೇಲೆ ಮಾತನಾಡಿ.

ಶ್ರೀ ಎಂ. ವೀರಪ್ಪ ಮೊಯ್ಲಿ —ಇವತ್ತಿನವರೆಗೂ ಬರಗಾಲದ ಹೆಡ್‌ನಲ್ಲಿ ಖರ್ಚು ಮಾಡಿದಂಥ ಹಣ ಲೆಕ್ಕದ ಪ್ರಕಾರ ೨೩ ಕೋಟಿ ರೂಪಾಯಿಗಳು ಮಾತ್ರ. ಕೇಂದ್ರದ ಟೀಂ ಬಂದಮೇಲೆ ಸೀಲಿಂಗ್ ಫಿಕ್ಸ್ ಮಾಡಿದ್ದು ೨೨ ಕೋಟಿ ರೂಪಾಯಿಗಳು. ಈ ಸಂದರ್ಭದಲ್ಲಿ ಖರ್ಚು ಮಾಡಿದ ೧೫ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ, ಇನ್ನು ೭ ಕೋಟಿ ರೂಪಾಯಿಗಳು ಬಿಡುಗಡೆ ಆಗಬೇಕು. ಆ ದಿಸೆಯಲ್ಲಿ ತಾವು ಏನು ಪ್ರಯತ್ನವನ್ನು ಮಾಡಿದ್ದೀರಿ? ಪಿ ಡಬ್ಲ್ಯು ಡಿ. ಹೆಡ್‌ನಲ್ಲಿ ಎನ್. ಆರ್. ಇ. ಪಿ ಹೆಡ್‌ನಲ್ಲಿ ಪಿ. ಎಚ್. ಇ. ನಲ್ಲಿ, ಬೇರೆ ಬೇರೆ ಇಲಾಖೆಗಳಲ್ಲಿ ಖರ್ಚು ಮಾಡಿದ ನಾರ್ಮಲ್ ಬಜೆಟರಿ ಹಣವನ್ನು ಕೂಡಿಸಿ ಲೆಕ್ಕ ಕೊಟ್ಟರೆ I think it has got to be sorted out. I' will also discuss with them. ಇನ್ನೂ ಕೂಡ ತಾವು ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ. ಹೇಳಿಕೆ ಕೊಟ್ಟಾಗ ೭೫ ಕೋಟಿ ರೂಪಾಯಿಗಳು ಎಂದು ಹೇಳುತ್ತಿದ್ದೀರೇ ಹೊರತು ಯಾವ ರೀತಿಯ ಅಕೌಂಟ್ಸ್ ಕೊಟ್ಟಿದ್ದೀರಿ ? ನಮ್ಮನ್ನೂ ಕರೆಯಬೇಕಾಗಿತು. ನಮ್ಮನ್ನು ಕರೆದು ಈ ವಿಷಯವನ್ನು ಚರ್ಚೆ ಮಾಡಬೇಕಾಗಿತ್ತು. ಯಾರ ಜೊತೆಯೂ ಚರ್ಚೆ ಮಾಡದೇ ಯಾರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದೇ ರಾಜಕೀಯವಾಗಿ ಮಾತನಾಡಿದರೆ ಖಂಡಿತವಾಗಿ ಹೆಚ್ಚು ಸಂಪನ್ಮೂಲಗಳನ್ನು ಒದಗಿಸಿಕೊಳ್ಳುವುದಕ್ಕೆ ಖಂಡಿತ ಸಾಧ್ಯವಾಗುವುದಿಲ್ಲ ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇನ್ನು ಹೆಚ್ಚು ಸಮಯವನ್ನು ನಾನು ಆರ್ಥಿಕ ಇಲಾಖೆ ಬಗ್ಗೆ ತೆಗೆದುಕೊಳ್ಳುವುದಿಲ್ಲ.

ಚೇರ್ಮನ್.— ತಮ್ಮ ಭಾಷಣ ೧ ಗಂಟೆ ೫೦ ನಿಮಿಷ ಆಯಿತು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಏನು ಮಾಡುತ್ತೀರಿ ? ಎಲ್ಲಾ ಇಲಾಖೆಗಳೂ ಕ್ಲಬ್ ಆಗಿವೆ. ಗೃಹ ಇಲಾಖೆ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ನಾನೂ ಕೂಡ ಅನೇಕ ಪೋಲೀಸ್ ಅಧಿಕಾರಿಗಳ ಸಮ್ಮೇಳನಗಳಲ್ಲಿ ಅಧಿಕಾರಿಗಳೊಂದಿಗೆ ಮಾತನಾಡಿದ್ದೇನೆ. ಅನೇಕ ಕಿರಿಯ ಐ. ಪಿ. ಎಸ್. ಅಧಿಕಾರಿಗಳು ಹೇಳುವುದೇನೆಂದರೆ IPS Officers who have been posted to Karnataka are the most lucky ones. ಎಂದರೆ ಕರ್ನಾಟಕ ರಾಜ್ಯಕ್ಕೆ ಒಳ್ಳೆಯ ಪರಂಪರೆ ಇದೆ. ಒಳ್ಳೆಯ ಅಧಿಕಾರಿಗಳು ಇದ್ದಾರೆ. ಒಳ್ಳೆಯ ಸಂಸ್ಕೃತಿ ಇದೆ ಮತ್ತು ಒಳ್ಳೆಯ ರಾಜ್ಯ ಕೂಡ. ಜನ ಒಳ್ಳೆಯವರಿದ್ದಾರೆ. ಪ್ರಮುಖವಾದ ಕರ್ನಾಟಕ ರಾಜ್ಯದ ಜನ ಶಾಂತಿಯನ್ನು ಕಾಪಾಡಿಕೊಳ್ಳುವ, ನೆಮ್ಮದಿಯನ್ನು ಕಾಪಾಡಿಕೊಳ್ಳುವ ಮನಸ್ಸುಳ್ಳವರು, ಸುಸಂಸ್ಕೃತರು. ಅದೇ ರೀತಿ ಪೋಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳೂ ಒಳ್ಳೆಯವರಾಗಿದ್ದಾರೆ. ಈ ಪರಂಪರೆ ಕರ್ನಾಟಕದಲ್ಲಿ ಬೆಳೆದುಕೊಂಡು ಬಂದಿದೆ. ಕಾನೂನು ವ್ಯವಸ್ಥೆಯಲ್ಲಿ ಏನಾದರೂ ಹೆಚ್ಚು ಕಡಿಮೆಯಾದರೆ ನನಗನ್ನಿಸುತ್ತದೆ I think politicians will have to be mostly blamed. ಅನೇಕ ಸಂದರ್ಭಗಳಲ್ಲಿ ಪೋಲೀಸ್ ಇಲಾಖೆಯನ್ನು ನಾವು ನಿರ್ದಾಕ್ಷಿಣ್ಯವಾಗಿ ದೂರುತ್ತೇವೆ. ನಮ್ಮ ಸ್ವಾರ್ಥಕ್ಕೆ ಅವರನ್ನು ಉಪಯೋಗ ಮಾಡಿಕೊಂಡ ಪರಂಪರೆ ಕೂಡ ಇದೆ. ನಮ್ಮಲ್ಲಿ ಒಳ್ಳೆಯ ಪೋಲೀಸ್ ಫೋರ್ಸ್ ಇದೆ. ಎಲ್ಲಾ ಹಂತದ ಅಧಿಕಾರಿಗಳೂ ದಕ್ಷರಾಗಿದ್ದಾರೆ. We have outstanding Police Officers and outstanding policy constabulary.

ತಮಗೆ ಗೊತ್ತಿದೆ ಅಧ್ಯಕ್ಷರೇ ಕಳೆದ ಸಾರಿ ದೊಡ್ಡ ದೊಡ್ಡ ಚಳುವಳಿಗಳು ಈ ರಾಜ್ಯದಲ್ಲಿ ಆಗಿವೆ. ನಾವು ಅಧಿಕಾರದಲ್ಲಿ ಇದ್ದಾಗ ಚಳುವಳಿಗಳು ನಡೆದಿವೆ. ದೇಶದಲ್ಲಿ ಎಲ್ಲೂ ಆಗಿರಲಿಕ್ಕಿಲ್ಲದಷ್ಟು ಪಬ್ಲಿಕ್ ಸೆಕ್ಟಾರ್ ಸ್ಟ್ರೈಕ್ ನಮ್ಮಲ್ಲಿ ನಡೆಯಿತು. ಅದಕ್ಕೆ ಕಾರಣ ಏನು ಎಂಬುದರ ಬಗ್ಗೆ ನಾನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. But it was a great event as far as police are concerned in the sphere of law and order. But there was a big agitation, From the point of view of the home Dept. it was a very bit event. ಸುಮಾರು ೬೦ ದಿವಸಗಳ ಕಾಲ ಸಂಘಟಿತ ಕಾರ್ಮಿಕರು ಅಷ್ಟು ಪ್ರಪೋಕೇಷನ್ ಇದ್ದರೂ ಕೂಡಾ ನಾವು ಹೇಗೆ ನಿರ್ವಹಿಸಿದ್ದೇವೆ ಎಂಬುದು ಇಲ್ಲಿ ಮುಖ್ಯ. ಒಬ್ಬರು ಅಥವಾ ಇಬ್ಬರು ತೀರಿ ಹೋದುದರ ಬಗ್ಗೆ ವಿಷಾದಪಡುತ್ತೇವೆ. ಫೈರಿಂಗ್ ಆಗಿರಬಹುದು, ಆದರೂ ಕೂಡಾ ಪೋಲೀಸಿನವರು ಸಂಯಮದಿಂದ ವರ್ತಿಸಿದ್ದಾರೆ. ಪೋಲೀಸಿನವರು ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಿಕೊಂಡು ಹೋದರು. ಆದರೆ ತಮ್ಮ ಅಧಿಕಾರಾವಧಿಯಲ್ಲಿ ಏನು ಮಾಡಿದ್ದೀರೆಂದು ಹೇಳುತ್ತೇನೆ. ಅಧಿಕಾರ ಇಲ್ಲದಾಗ ಮಾತನಾಡುವುದು, ಅಧಿಕಾರ ಬಂದ ಕೂಡಲೇ ಮಾತನಾಡುವುದು, ನಂತರ ಸಿಕ್ಕಿಹಾಕಿಕೊಳ್ಳುವುದು ಬೇಡ. ಲೆಕ್ಕ ಹಾಕಿ ನೋಡಿದರೆ ಒಂದು ತಿಂಗಳಿಗೆ ಒಂದು ಗೋಲೀ ಬಾರ್ ಇವರ ಕಾಲದಲ್ಲಿ ಆಗಿದೆ. boiling point during these two years. Farmers agitation unprecedented. You must acknowledge that. Gokak agitation ಆಗಿದೆ. ಮತ್ತೆ ನಿಪ್ಪಾಣಿಯಲ್ಲಿ ತಂಬಾಕು ಬೆಳೆಗಾರರು ರಸ್ತೆ ರೋಖೋ ಚಳುವಳಿಯನ್ನು ಮಾಡಿದರು. ರಾಷ್ಟ್ರೀಯ ಹೆದ್ದಾರಿಯನ್ನು ಬಂದ್ ಮಾಡಿದರು. ಅಧ್ಯಕ್ಷರೇ ಇವತ್ತು ಪೋಲೀಸಿನವರ ಸ್ಥಿತಿ ಏನಾಗಿದೆ. ಇವತ್ತು ಇವರಲ್ಲಿ ೯೯.೯೯ರಷ್ಟು ಜನ ಸಂತೋಷವಾಗಿಲ್ಲ. ಏನೋ ಕೈಯಲ್ಲಿ ಬಂದೂಕು ಇದೆ, ನಾವುಬಿಡಿ ಒಬ್ಬರನ್ನು ಬಹುದು ಎಂದು ನಮ್ಮ ಕರ್ನಾಟಕದ ಪೋಲೀಸಿನವರಲ್ಲಿ ಇಂತಹ ಒಂದು ಸ್ಯಾಡಿಷ್ ಅಪ್ರೋಚ್ ಖಂಡಿತಾ ಇಲ್ಲ. ಇವರ ಬಗ್ಗೆ ಸಾಕಷ್ಟು ವಿಚಾರಗಳನ್ನು ನಾವು ತಿಳಿದುಕೊಂಡಿದ್ದೇವೆ. ಇಂತಹ ಒಂದು ಉಲ್ಬಣವಾದ ಪರಿಸ್ಥಿತಿಯಲ್ಲಿ ಕಳೆದ ವರ್ಷದ ಒಂದು ಸ್ಟ್ಯಾಟಿಸ್ಟಿಕ್ಸ್‌ನ್ನು ನಾನು ಕೊಡುತ್ತೇನೆ. ಫೈರಿಂಗ್‌ನಲ್ಲಿ ೧೨೦-೫೦೦-೭೦೦-೧,೦೦೦ ಹೀಗೆ ಜನರು ಸತ್ತರು ಎಂದು ಲೆಕ್ಕ, ಪ್ರಾರಂಭ ಮಾಡಿದರೆ ಲೆಕ್ಕಕ್ಕೆ ಮಿತಿ ಎಲ್ಲಿದೆ ? ಇದು ಸರಿಯಲ್ಲ. ಕಳೆದ ಸಾರಿ ೧೯೮೨ರಲ್ಲಿ ೨೬ ಸಾರಿ ಫೈರಿಂಗ್ ಆಗಿದೆ, You may correct it because you have official figures, But I have collected from the documents. ಅದರಲ್ಲಿ ಸತ್ತಿರುವವರ ಸಂಖ್ಯೆ ೨೪. ಇದರಲ್ಲಿ farmers agitation-5. communal clashed-9, firing on dacoite-1, implementation of Gogak Report-6, firing on ID liquor dealers/smugglers-1, organising functioning something like that-2. Total 24. ಎಂದರೆ ೨೪ ಮಂದಿ ಫೈರಿಂಗ್‌ನಲ್ಲಿ ತೀರಿಹೋದರು, ಅಧ್ಯಕ್ಷರೇ ಇವರು ಚುನಾವಣಾ ಪ್ರಣಾಳಿಕೆಯಲ್ಲಿ ಏನು ಹೇಳಿದರು? ತಿಂಗಳಿಗೆ ಒಂದು ಗೋಲೀಬಾರ್ ಎಂದು ಪ್ರಣಾಳಿಕೆಯಲ್ಲಿ ಹೇಳಿದರು.

ಶ್ರೀ ರಾಮಕೃಷ್ಣ ಹೆಗಡೆ.—ನೀವೇ ಹೇಳಿದ ಪ್ರಕಾರ ತಿಂಗಳಿಗೆ ೨ ಆಯಿತು.

ಶ್ರೀ ಎಂ. ವೀರಪ್ಪ ಮೊಯ್ಲಿ.—ತಿಂಗಳಿಗೆ ಒಂದು ಆಗಲಿ ಎರಡು ಆಗಲಿ. ತಿಂಗಳಿಗೆ ಒಂದು ಗೋಲೀಬಾರ್ ಎಂದು ಪ್ರಣಾಳಿಕೆಯಲ್ಲಿ ಹೇಳಿದ್ದೀರಿ. Do you want to take credit for what you have done ? I don't think any one of us is proud of it. I am not any proud of my Government in this regard. ಇದು ಆಗಿದೆ. ಆದರೆ ಈ ವರ್ಷ ತಮಗೇ ಗೊತ್ತಿದೆ ಅಧ್ಯಕ್ಷರೇ. ಅಂತಹ ಒಂದು ಅಜಿಟೇಷನ್ ಎಲ್ಲಿ ಬಂತು ? ಜನವರಿ ತಿಂಗಳಿಂದ ಮುಂದೆ ಅಂತಹ ಚಟುವಟಿಕೆಗಳು ಏನೂ ಆಗಲಿಲ್ಲ. ಇದಕ್ಕೆ ತಾವು ಪ್ರಜೆಗಳನ್ನು ಅಭಿನಂದಿಸಬೇಕು. ಅವರ ಮೇಲೆ ನಿಮಗೆ ಅಭಿಮಾನ ಇರಬೇಕು. ಜನ ಇವತ್ತು ತಮಗೆ ಸರಿಯಾದ ಶಾಂತ ವಾತಾವರಣವನ್ನು ಕೊಟ್ಟರೂ ಕೂಡಾ ಅಂತಹ ಶಾಂತ ವಾತಾವರಣವನ್ನು ಕಂಡಿದ್ದವರು ನೀವು. In fact we were attempting to launch many agitations to be frank

with you. ಪ್ರೈಸ್ ರೈಸ್ ಮೇಲೆ ಬೇರೆ ಬೇರೆ ರೀತಿಯಲ್ಲಿ ಎಜಿಟೇಷನ್ ಮಾಡುವುದಕ್ಕೆ ಕಾರಣ ಇದ್ದರೂ ಕೂಡಾ ಎಲ್ಲೂ we would not provoke this Government. We should not create law and order problem. Even at one time we fiaee a call also for agitation. But we withdrawn that.

SRI RAMAKRISHNA HEGDE.—Because there was no response.

SRI M. VEERAPPA MOILY.—I am sorry. We did not launch any agitation. We deliberately kept away from the agitation because we wanted to give some more time. ಇವತ್ತು ಜನ ಎಚ್ಚೆತ್ತಿದ್ದಾರೆ. ಮತ್ತು ಜನರು ಕಂಗಾಲಾಗಿದ್ದಾರೆ. ಆ ಬಗ್ಗೆ ವಿವರವಾಗಿ ನಾನು ಆಮೇಲೆ ಹೇಳುತ್ತೇನೆ. ಇವತ್ತು ಶಾಂತಿಮಯ ವಾತಾವರಣವನ್ನು ಕರ್ನಾಟಕ ಜನತೆ ಕೊಟ್ಟರೂ ಕೂಡಾ ನೀವು ಅವರನ್ನು ಪ್ರಚೋದನೆ ಮಾಡಿ ಶಾಂತಿಯನ್ನು ಕದಡತಕ್ಕ ಪ್ರಯತ್ನವನ್ನು ಏಕೆ ಮಾಡಿದಿರೋ ಗೊತ್ತಿಲ್ಲ. I don't know the reasons for that. You may have some motive. I don't say you have any motive, but some people may have a motive. I don't know why. ನೀವು ಬುಡ್ಡೋಜರ್ ಬಿಟ್ಟಿದ್ದೀರಿ, ಜನಗಳು ತಮ್ಮಷ್ಟಕ್ಕೆ ತಾವೇ ರಿಸ್ಟ್ಲೀನ್ ಆಗಿದ್ದಾರೆ. ಬೆಲೆ ಏರಿಕೆ ಬಗ್ಗೆ ಹೇಳಬೇಕೆಂದರೆ, ರೂಪಾಯಿ ೨.೨೫ಕ್ಕೆ ಸಿಗುತ್ತಿದ್ದಂತಹ ಅಕ್ಕಿ ಇವತ್ತು ೬ ರೂಪಾಯಿಗಳನ್ನು ಕೊಟ್ಟರೂ ಸಿಗುತ್ತಾ ಇಲ್ಲ. ಆದರೂ ಕೂಡಾ ನಮ್ಮ ಜನರಲ್ಲಿ ಶಾಂತಿ ಇದೆ. ಅಷ್ಟು ದೊಡ್ಡ ಚಳುವಳಿ ಇಲ್ಲದೇ ಇದ್ದ ಕಾಲದಲ್ಲಿ ಎಷ್ಟು ಸಾರಿ ಗೋಲೀಬಾರ್ ಮಾಡಿದ್ದೀರಿ ? ಸುಮಾರು ೯ ಸಾರಿ ಫೈರಿಂಗ್ ಆಯಿತು. ೨೧.೫.೮೩ರಲ್ಲಿ ವೈಟ್ ಫೀಲ್ಡ್‌ನಲ್ಲಿ ಫೈರಿಂಗ್ ಆಯಿತು. ೨೭-೧-೧೯೮೩ರಲ್ಲಿ ಚನ್ನರಾಯಪಟ್ಟಣದಲ್ಲಿ ಆಯಿತು.

ಶ್ರೀ ರಾಮಕೃಷ್ಣ ಹೆಗಡೆ.—ನಿಮ್ಮ ಕಾಲದಲ್ಲಿ ನೀವು ಓದುತ್ತಿದ್ದೀರಿ. ಏನು ನಮ್ಮ ಕಾಲದಲ್ಲಿ ಫೈರಿಂಗ್ ಆಯಿತೆ ?

ಶ್ರೀ ಎಂ. ವೀರಪ್ಪ ಮೊಯ್ಲಿ.—If therh was no firing it is alright. But at least there was a firing, They have used guns. ೧೬-೨-೧೯೮೩ರಲ್ಲಿ ಕಾಲ್ ಬಜಾರ್‌ನಲ್ಲಿ ಆಯಿತು. ನಾನು ನಾವುಗಳ ಬಗ್ಗೆ ಹೇಳುತ್ತಿಲ್ಲ. ಗೋಲೀಬಾರ್ ಆದುದನ್ನು ಹೇಳುತ್ತಿದ್ದೇನೆ. ೧೮-೨-೧೯೮೩ರಂದು ಮತ್ತೆ ಅದೇ ಜಾಗದಲ್ಲಿ ಫೈರಿಂಗ್ ಆಗಿದೆ. ಆಗ ಅಲ್ಲಿ ಆರು ಜನರು ಸತ್ತರು. ೧೩-೫-೧೯೮೩ರಂದು ಮಾಲೂರಿನಲ್ಲಿ ಗೋಲೀಬಾರ್ ಆಗಿ ೫ ಜನ ಸತ್ತಿದ್ದಾರೆ. ೨-೮-೧೯೮೩ರಲ್ಲಿ ಕೆ.ಜಿ.ಎಫ್. ರಾಬರ್ಟ್ಸನ್‌ಪೇಟೆಯಲ್ಲಿ ಗೋಲೀಬಾರ್ ಆಗಿ ೨ ಸಾವು ಆಗಿದೆ. ೧೭-೮-೧೯೮೩ರಲ್ಲಿ ಬಿಜಾಪುರದಲ್ಲಿ ಗುಂಪು ಘರ್ಷಣೆಯಿಂದಾಗಿ ಲಾಟಿಛಾರ್ಜ್ ಆಗಿದೆ. ಮತ್ತೆ ಆಗಸ್ಟ್ ೧೯೮೩ರಲ್ಲಿ ಕೆಲವು ಸುತ್ತಿನ ಟಿಯರ್‌ಗ್ಯಾಸ್ ಪ್ರಯೋಗ ಮಾಡಲಾಗಿದೆ. ಹೀಗೆ ಒಟ್ಟು ೧೨ ಜನ ಸಾವಿಗೀಡಾಗಿದ್ದಾರೆ. ಎಂದರೆ ೯ ತಿಂಗಳಲ್ಲಿ ೧೩ ಜನ ಸತ್ತಿದ್ದಾರೆ ನಮ್ಮ ೧೨ ತಿಂಗಳಲ್ಲಿ ಸತ್ತಿದ್ದು ೨೮ ಜನ. ಇದರ ಬಗ್ಗೆ ನಾವು ಯಾರೂ ಮೆಚ್ಚುಗೆಯನ್ನು ವ್ಯಕ್ತಪಡಿಸತಕ್ಕದ್ದಿಲ್ಲ. ಇಲ್ಲಿ ಹೆಚ್ಚು ಜನರು ಸತ್ತರು, ಕಡಿಮೆ ಜನರು ಸತ್ತರು ಎನ್ನುವ ಪ್ರಶ್ನೆ ಅಲ್ಲ. ಆದರೆ ಪೋಲೀಸ್ ಫೋರ್ಸ್‌ನ್ನು ಡೀಮಾರಲೈಸ್ ಮಾಡತಕ್ಕದರ ಬಗ್ಗೆ ತಾವು ಏನು ಮಾಡಿದ್ದೀರಿ. ಅದರ ಪರಿಣಾಮ ನಿಮಗೆ ಇವತ್ತು ಕಾಣುತ್ತಿದೆ. ಅದು ನಮಗೆ ಕಾಣುತ್ತಿದೆ.

ಮಾನ್ಯ ಅಧ್ಯಕ್ಷರೇ, ಇವತ್ತು ಹರಿಜನರ ಮೇಲೆ ನಡೆದಿರತಕ್ಕ ಹಲ್ಲೆಗಳು ಎಷ್ಟು ? ನಮ್ಮ ಕಾಲದಲ್ಲಿ ಆಗಿಲ್ಲವೆಂದು ನಾನು ಹೇಳುವುದಿಲ್ಲ ; ಶಾಂತಿ ಪಾಲನೆ ಕಾಪಾಡುವ ಸಂದರ್ಭದಲ್ಲಿ ಕೆಲವು ಘಟನೆಗಳು ನಡೆದಿವೆ. ಈ ಸರ್ಕಾರ ಬಂದಮೇಲೆ ಸುಮಾರು ೧೨-೧೩ ಕಡೆಗಳಲ್ಲಿ ಹರಿಜನರ ಮೇಲೆ ಗಲಭೆಗಳು ನಡೆದಿವೆ. ಬಾಳ್ಳುಪೇಟೆ, ತೆಂಗಳಿ, ಮಾದಾಪುರ ಅದೇರೀತಿ ಅಲ್ಪಸಂಖ್ಯಾತರ ಮೇಲೆ ನಡೆದಿರತಕ್ಕ ಹಲ್ಲೆಗಳು ಸುಲ್ತಾನ್ ಪಾಳ್ಯ ಹಾಗೂ ಯಶವಂತಪುರದಲ್ಲಿ ನಡೆದಂಥ ಘಟನೆಗಳು ; ಅದೇರೀತಿ ಹೆಣ್ಣು ಮಕ್ಕಳ ಮೇಲೆ ನಡೆದಿರತಕ್ಕ ಅತ್ಯಾಚಾರಗಳು, ಇವತ್ತು ಸುಸಂಸ್ಕೃತ ಹೆಣ್ಣು ಮಕ್ಕಳು ದಾರಿಯಲ್ಲಿ ಹೋಗುವಂಥ ಪರಿಸ್ಥಿತಿ ಇಲ್ಲವಾಗಿದೆ. ವರದಕ್ಷಿಣೆ ಸಂಬಂಧಪಟ್ಟಂತೆ ಕೇಸುಗಳನ್ನು ಕೊಟ್ಟರೆ, ಬುಕ್ ಆಗುತ್ತಿಲ್ಲ ; ವರದಕ್ಷಿಣೆ ಸಂಬಂಧಪಟ್ಟಂತೆ ವಿಚಾರಣೆ ಕೂಡ ಸರಿಯಾಗಿ ನಡೆಯುತ್ತಿಲ್ಲ. ರೇಪ್ ಇನ್

ಡೆಂಟುಗಳು ಕೂಡ ಜಾಸ್ತಿಯಾಗಿವೆ. ಗೇಣಿದಾರರ ಮೇಲೆ ನಡೆಯತಕ್ಕ ದೌರ್ಜನ್ಯಗಳು ಹೆಚ್ಚಿವೆ. ಪೋಲೀಸ್ ಕಸ್ಟಡಿಯಲ್ಲಿ ಹಿಂಸೆಗಳು ಜಾಸ್ತಿಯಾಗುತ್ತಿವೆ. ಪೋಲೀಸರೇ ಇವತ್ತು ದೌರ್ಜನ್ಯ ಎಸಗುತ್ತಿದ್ದಾರೆ. ಪೋಲೀಸ್ ಇಲಾಖೆಯಲ್ಲಿ ತಾವು ಸಾಕಷ್ಟು ವರ್ಗಾವಣೆಗಳನ್ನು ಮಾಡಿದ್ದೀರಿ. ಸರ್ಕಲ್ ಮತ್ತು ಸಬ್ ಇನ್ಸ್‌ಪೆಕ್ಟರುಗಳ ವರ್ಗಾವಣೆಯನ್ನು ಸೆಕ್ರೆಟರಿಯೇಟ್‌ನಿಂದ ಮಾಡಿದ್ದಾರೆಂಬ ವರ್ತಮಾನ ಇದೆ. ಆ ರೀತಿ ಏತಕ್ಕೆ ಮಾಡಿದಿರಿ ? Again in the police department there is no single line command. There are so many Generals. ಒಳ್ಳೆಯ ಅಧಿಕಾರಿಗಳಿಗೆ ಪ್ರೊಮೋಷನ್ ಕೊಡಿ, ಆದರೆ ತಾವು ಹೇಗೆ ಅಧಿಕಾರ ನಿರ್ವಹಿಸುತ್ತೀರೆಂಬುದು ಬಹಳ ಮುಖ್ಯವಾದುದು. If there are so many Generals in army what will happen. We have got to look into that aspect before taking a decision. ಮಾನ್ಯ ಅಧ್ಯಕ್ಷರೇ, ಕಾಂಗ್ರೆಸ್ (ಐ) ವರ್ಕರ್ಸ್ ಮೇಲೆ ಹಲ್ಲೆ ಆಯಿತು ? ಕೇರಳದಲ್ಲಿ ಆಯಿತು ; ವೆಸ್ಟ್-ಬೆಂಗಾಳದಲ್ಲಿ ಆಯಿತು ಎಂದು ಪತ್ರಿಕೆಯಲ್ಲಿ ಓದಿದ್ದೇವೆ, ಇಲ್ಲಿಯೂ ಕೂಡ ಪ್ರಾರಂಭವಾಗಿದೆ. ಪೋಲೀಸಿನವರನ್ನು ರಾಜಕೀಯವಾಗಿ ಉಪಯೋಗ ಮಾಡಿಕೊಳ್ಳುವಂಥ ಪ್ರಸಂಗ ಅನೇಕ ಕಡೆ ನಡೆದಿದೆ. ಪೋಲೀಸ್ ಅಧಿಕಾರಿಗಳ ವರ್ಗಾವಣೆಯಲ್ಲಿ ಸ್ಥಳೀಯ ರಾಜಕೀಯವನ್ನು ಗಣನೆಗೆ ತೆಗೆದುಕೊಂಡಿದ್ದೀರಿ ಎಂದು ಹೇಳಬೇಕಾಗುತ್ತದೆ. ಈ ವಿಚಾರದಲ್ಲಿ ಸರಿಯಾದಂಥ ಚಿಂತನೆ ಮಾಡಬೇಕಾದಂಥ ಅವಶ್ಯಕತೆ ಇತ್ತೆಂದು ಹೇಳುತ್ತೇನೆ. They will sometime succumb to the presures. So. it is very necessary that we may have to overcome particular person and the police officers. Otherwise, they may think that there are persons to help them ನನಗೆ ರಕ್ಷಣೆ ಮಾಡುವವರು ಇದ್ದಾರೆಂದು ತಿಳಿದುಕೊಳ್ಳುತ್ತಾರೆ. ಇದರಿಂದ ಸಂಪೂರ್ಣವಾಗಿ ಕಾನೂನು ಶಿಥಿಲವಾಗುತ್ತದೆ. ಸರಿಯಾಗಿ ಕರ್ತವ್ಯವನ್ನು ನಿರ್ವಹಣೆ ಮಾಡುವಂಥ ಪರಿಸ್ಥಿತಿ ಅವರಲ್ಲಿ ಬರುವುದಿಲ್ಲ. ತಾವು ಇವತ್ತು ಉನ್ನತ ಪೋಲೀಸ್ ಅಧಿಕಾರಿಗಳನ್ನು ವರ್ಗ ಮಾಡಿರುವುದರಲ್ಲಿ ಸಾರ್ವಜನಿಕರಿಗೆ ಒಂದು ರೀತಿಯಾದ ಅನುಮಾನ ಬಂದಿದೆ. ಬೇರೆ ಬೇರೆ ಉದ್ಯೋಗಗಳಿಗೆ ನೇಮಕ ಮಾಡುವುದರಲ್ಲಿ ಅನುಮಾನ ಬರುವಹಾಗೆ ಮಾಡಿರುವುದರಿಂದ ಪೋಲೀಸ್ ಫೋರ್ಸ್‌ನಲ್ಲಿ ಡೀಮಾರ್ಲೈಸೇಷನ್ ಆಗುತ್ತದೆ. ನಿಷ್ಪಕ್ಷಪಾತವಾದ ಅಧಿಕಾರಿಗಳು ಕೆಲಸ ಮಾಡುವುದಕ್ಕಾಗುವುದಿಲ್ಲ. ಮಾನ್ಯ ದೇವೇಗೌಡರು ಹಾಗೂ ಬೊಮ್ಮಾಯಿಯವರು ವಿರೋಧಪಕ್ಷದಲ್ಲಿದ್ದಾಗ ಬಹಳ ಸಾರಿ ಇದನ್ನು ಹೇಳಿದ್ದಾರೆ. ಹಿಂದೆ ಪೋಲೀಸ್ ಅಧಿಕಾರಿಗಳನ್ನು ಯಾವ ಯಾವುದಕ್ಕೆ ಉಪಯೋಗ ಮಾಡಿಕೊಳ್ಳುತ್ತಿದ್ದರೋ ಅದು ಸ್ವಲ್ಪವೂ ಕಡಿಮೆಯಾಗಿಲ್ಲ, ಇಂಟೆಲಿಜೆನ್ಸ್ ಪೋಲೀಸಿನವರು ಎಲ್ಲಾ ಕಡೆ ಇದ್ದಾರೆ ; ರಾಜಕಾರಣಿಗಳ ಹಿಂದೆಯೂ ಅವರನ್ನು ಹಾಕಿದ್ದೀರಿ. ಸದಸ್ಯರುಗಳ ಮನೆಮುಂದೆ ಇಟ್ಟಿದ್ದೀರಿ, ನಮ್ಮ ಮನೆ ಮುಂದೆ ಕೂಡ ಇಟ್ಟಿದ್ದೀರಿ, ಎಲ್ಲಾ ಕಡೆ ಪೋಲೀಸರನ್ನು ಸರಿಯಾಗಿ ತಾವು ಕೂಡ ಉಪಯೋಗ ಮಾಡುತ್ತಿದ್ದೀರಿ. ಇವರ ಬದಲು ಪೋಲೀಸಿನವರನ್ನು ಕರ್ನಾಟಕ ರಾಜ್ಯದಲ್ಲಿ ಸಾಮಾಜಿಕ ಶಿಸ್ತನ್ನು ನೋಡಿಕೊಳ್ಳುವುದಕ್ಕೆ, ಶಾಂತಿ ಪಾಲನೆಯನ್ನು ಸಮತೋಲನವಾಗಿ ನೋಡಿಕೊಳ್ಳುವುದಕ್ಕೆ, ಹರಿಜನರ ಮೇಲೆ, ಮಹಿಳೆಯರ ಮೇಲೆ, ನಡೆಯುವಂಥ ದೌರ್ಜನ್ಯಗಳನ್ನು ತಪ್ಪಿಸುವುದಕ್ಕೆ ಉಪಯೋಗ ಮಾಡಿದ್ದರೆ, ತಾವು ಹೇಳಿದಂಥ ಮಾತಿಗೆ ಸರಿಯಾಗಿ ನಡೆದುಕೊಳ್ಳುತ್ತಿದ್ದೀರೆಂದು ನಾವು ಹೇಳಬಹುದಿತ್ತು. ತಾವು ಪೋಲೀಸ್ ಅಧಿಕಾರಿಗಳನ್ನು ಪೊಲಿಟಿಕಲ್ ಇಂಟೆಲಿಜನ್ಸ್‌ಗಾಗಿ ಟ್ರಸರಿ ಬೆಂಚಿನಲ್ಲಿ ಮುಂದುವರಿಸಿಕೊಂಡು ಹೋಗುವುದಾದರೆ, ರಾಜ್ಯದಲ್ಲಿ ಶಿಸ್ತು ತರುವುದಕ್ಕೆ ಪೋಲೀಸ್ ಇಲಾಖೆಗೆ ಸಾಧ್ಯವೆ ಎನ್ನುವ ಅನುಮಾನ ಬರುತ್ತದೆ.

ಇನ್ನು ಪೋಲೀಸಿನವರ ವಸತಿ ಸೌಕರ್ಯಗಳ ಬಗ್ಗೆ ಎರಡು ಮಾತು ಹೇಳಬೇಕಾಗುತ್ತದೆ. ಕಳೆದ ವರ್ಷ ನಾನು ಕೂಡ ಪೋಲೀಸ್ ವಸತಿ ಗೃಹಗಳಿಗೆ ಭೇಟಿ ಕೊಟ್ಟಿದ್ದೇನೆ. ಹಾಲಿ ಇರುವಂಥ ಮನೆಗಳನ್ನು ದುರಸ್ತಿ ಮಾಡಬೇಕು. ಈಗ ಇರತಕ್ಕ ಮನೆಗಳಲ್ಲಿ ಅಮಾನುಷ ರೀತಿಯಲ್ಲಿ ಅವರು ಜೀವನ ಮಾಡಿಕೊಂಡು ಹೋಗುತ್ತಿದ್ದಾರೆ. ಸುಮಾರು ೮೦ ಲಕ್ಷ ರೂಪಾಯಿಗಳ ಯೋಜನೆಯನ್ನು ನಾವು ಮಾಡಿದ್ದೆವು, ಅದನ್ನು ಮುಂದುವರಿಸಿಕೊಂಡು ಹೋಗಬೇಕು. ಪೋಲೀಸ್ ವಸತಿ ಗೃಹಗಳನ್ನು ಹೊಸದಾಗಿ ಕಟ್ಟತಕ್ಕ ಪ್ರಯತ್ನವನ್ನು ತಾವು ಮಾಡಬೇಕು. ನಾನು ಆಗಲೇ ಹೇಳಿದಂತೆ ಈಗ ಇರತಕ್ಕ ವಾಸದ ಮನೆಗಳನ್ನು ಸರಿಯಾಗಿ ದುರಸ್ತು ಮಾಡದೇ ಹೋದರೆ, ಪಶುಗಳು ಕೂಡ ಅಲ್ಲಿ

ಇರುವುದಕ್ಕೆ ಸಾಧ್ಯವಾಗುವುದಿಲ್ಲ. ಇದರ ಬಗ್ಗೆ ಏನು ಯೋಚನೆ ಮಾಡಿದ್ದೀರಿ ಎಂಬುದನ್ನು ಇಲ್ಲಿ ಹೇಳಿಲ್ಲ. ಆಂಧ್ರ ಪ್ರದೇಶ ಹಾಗೂ ಇತರೆ ರಾಜ್ಯಗಳಲ್ಲಿ ಪೋಲೀಸ್ ಹೌಸಿಂಗ್ ಕಾರ್ಪೊರೇಷನ್‌ಗಳು ಇವೆ, ಕೇಂದ್ರದಿಂದ ಹಾಗೂ ಇತರೆ ಹಣಕಾಸಿನ ಸಂಸ್ಥೆಗಳಿಂದ ಹಣ ತರಿಸಿಕೊಂಡು ಈ ಯೋಜನೆಯನ್ನು ಮುಂದುವರಿಸುವುದಕ್ಕೆ ಸಾಧ್ಯವಿದೆ. ಇವತ್ತು ಪೋಲೀಸ್ ಇಲಾಖೆಯಲ್ಲಿ ಸುಮಾರು ೪೯ ಪರ್ಸೆಂಟ್ ಅಧಿಕಾರಿಗಳಿಗೆ ಅಕಾಮಡೇಷನ್ ಇದೆ ಉಳಿದವರಿಗೆ ಇಲ್ಲ. ಇದರ ಬಗ್ಗೆ ವಿಶೇಷವಾದಂಥ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಅಲ್ಲದೆ, ಪೋಲೀಸ್ ವೆಲ್‌ಫೇರ್ ಸ್ಕೀಂನ್ನು ಕೂಡ ಚೆನ್ನಾಗಿ ಬೆಳಸಿಕೊಂಡು ಬರಲಾಗಿದೆ. ಪೋಲೀಸಿನವರು ಜೀವನದಲ್ಲಿ ಅನೇಕ ರೀತಿ ಕಷ್ಟ ಕಾರ್ಪಣ್ಯಗಳನ್ನು ಎದುರಿಸಬೇಕಾಗಿದೆ. ಕೆಲವು ಸಂದರ್ಭಗಳಲ್ಲಿ ಮರಣಕ್ಕೊಳಗಾಗುವುದಲ್ಲದೆ ಗಾಯಾಳುಗಳಾಗಬೇಕಾಗುತ್ತದೆ. ಇಂಥವರಿಗೆ ಹೆಚ್ಚಿಗೆ ಇನ್‌ಸೆಂಟೀವ್ಸ್ ಕೊಡಬೇಕೆಂದು ತೀರ್ಮಾನ ಮಾಡಿದ್ದೆವು, ಇದರ ಬಗ್ಗೆ ಹೊಸದಾಗಿ ಯಾವ ಯೋಜನೆಗಳನ್ನು ತಾವು ಹಾಕಿಕೊಂಡಂತೆ ಕಾಣಲಿಲ್ಲ, ಇದೂ ಕೂಡ ಬಹಳ ಪ್ರಾಮುಖ್ಯವಾದ ಅಂಗವಾಗಿರುವುದರಿಂದ ಹೆಚ್ಚಿನ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಸೂಚಿಸುತ್ತೇನೆ.

೧,೫೦ ಪಿ.ಎಂ.

ಅವರನ್ನು ತಾವು ಸರಿಯಾಗಿ ನೋಡಿಕೊಂಡಿಲ್ಲ. ರಾಜ್ಯದಲ್ಲಿ ಸಾಮಾಜಿಕ ವ್ಯವಸ್ಥೆಯನ್ನು ನೋಡಿಕೊಳ್ಳತಕ್ಕ ಇವರನ್ನು ನಾನು ನೋಡಿಕೊಳ್ಳಬೇಕಾಗುತ್ತದೆ. ಈ ದಿಸೆಯಲ್ಲಿ ಅನೇಕ ಕಾರ್ಯಕ್ರಮಗಳನ್ನು ತಾವೂ ಹಾಕಿಕೊಂಡು ಮುಂದೆ ಹೋಗಬೇಕೆಂದು ಹೇಳುತ್ತೇನೆ. ಇನ್ನು ಪಾವಗಡದ ನಿಗೂಢತೆ ಹಾಗೆಯೇ ಉಳಿದಿದೆ. ಅನೇಕ ತೋಳಗಳನ್ನು ಬಲಿ ತೆಗೆದುಕೊಂಡಿದ್ದಾರೆ. ೫ ಹಸುಳೆಗಳ ಕೊಲೆಯಾಗಿದೆ. ಯಾವಾಗಲೂ ಈ ರೀತಿಯ ಸಾವುಗಳು ಆದಾಗ ಕೇಸು ರಿಜಿಸ್ಟರು ಮಾಡಿಲ್ಲ. ಆದ್ದರಿಂದ ಅಲ್ಲಿಯ ಜನಗಳಲ್ಲಿ, ಅನುಮಾನ ಇದೆ. ಇದು ಮಾನವನಿಂದ ಆಗಿರಬಹುದೆಂದು ಅನುಮಾನ ಇದೆ. ಅಲ್ಲಿ ಪ್ರತ್ಯಕ್ಷವಾಗಿ ನೋಡಿರತಕ್ಕಂತಹವರು ಹೇಳುತ್ತಿದ್ದಾರೆ ಇದನ್ನು ಸರಿಯಾಗಿ ನಿರ್ವಹಣೆ ಮಾಡಿಲ್ಲ. ಯಾವುದೇ ಅಧಿಕಾರಿ ಇರಲಿ, ೫ ನಿಗೂಢ ಕೊಲೆಗಳನ್ನು ರಿಜಿಸ್ಟರು ಮಾಡದೇ ಇರತಕ್ಕದ್ದು ತಪ್ಪು ಯಾವುದೇ ವಿಚಾರಣೆಯನ್ನು ತಾವು ಮಾಡಿಲ್ಲ. You have taken everything for granted. ತೋಳಗಳನ್ನು ಕೊಲ್ಲುತ್ತಿದ್ದೀರಿ ಇವೊತ್ತಿಗೂ ಕೂಡ ನಿಗೂಢವಾದಂಥಾದ್ದನ್ನು ಬಯಲುಪಡಿಸತಕ್ಕ ವಿಚಾರದಲ್ಲಿ ಅನುಮಾನ ಪರಿಹಾರ ಮಾಡತಕ್ಕ ಕ್ರಮ ಮಾಡಿಲ್ಲ ಎಂದು ಹೇಳಲಿಕ್ಕೆ ನಾನು ಇಚ್ಛೆಪಡುತ್ತೇನೆ. ಇದರಿಂದ ಪಾವಗಡದಲ್ಲಿರತಕ್ಕ ಜನತೆ ಸಂಶಯ ವ್ಯಕ್ತಪಡಿಸುತ್ತಿದ್ದಾರೆ. ೫ ಕೇಸುಗಳನ್ನು ರಿಜಿಸ್ಟರು ಮಾಡದೇ, ಯಾವುದೇ ಕ್ರಮ ತೆಗೆದುಕೊಳ್ಳದೇ ಇರತಕ್ಕದ್ದು ಖಂಡಿತ ಸರಿಯಲ್ಲ ಎಂದು ಹೇಳುತ್ತೇನೆ. ಇದು ಡೌಟಿನ ಪ್ರಶ್ನೆ ಅಲ್ಲ, ಹಸುಳೆಗಳ ಪ್ರಶ್ನೆ ಇದೆ. ಈ ೫ ಕೇಸುಗಳಲ್ಲಿ ಸರಿಯಾದ ಇನ್‌ವೆಸ್ಟಿಗೇಷನ್ ಮಾಡಬೇಕಾಗಿತ್ತು ಯಾವಾಗ ಕೇಸುಗಳನ್ನು ರಿಜಿಸ್ಟರು ಮಾಡುವುದಿಲ್ಲವೋ ಆ ಬಗ್ಗೆ ಇನ್‌ವೆಸ್ಟಿಗೇಷನ್ ಮಾಡುವುದಿಲ್ಲ investigation process is not on ಇನ್‌ವೆಸ್ಟಿಗೇಷನ್ ಮಾಡದೇ ಇದ್ದಾಗ ಕಣ್ಣುಮುಚ್ಚಿ ಪ್ರಾಣಿ ಮಾಡಿವೆ, ಮನುಷ್ಯರು ಮಾಡಿದ್ದಾರೆಂದು ಹೇಳಿದರೆ ಇದರಿಂದ ಯಾವರೀತಿ ಪ್ರಯೋಜನ ಕಾಣಲಿಕ್ಕೆ ಬರುವುದಿಲ್ಲ ಎಂದು ಹೇಳಲಿಕ್ಕೆ ನಾನು ಇಚ್ಛೆಪಡುತ್ತೇನೆ. ಈ ಸಂದರ್ಭದಲ್ಲಿ ಒಂದು ಮಾತು ಹೇಳಬೇಕೆಂದರೆ, ಒಬ್ಬ ಸಚಿವರ ಮಗಳ ಮದುವೆಗೆ ಪೋಲೀಸರ ವೈರ್‌ಲೆಸ್ ಉಪಯೋಗ ಮಾಡಿದ್ದಾರೆಂದು ಒಂದು ಪತ್ರಿಕೆಯಲ್ಲಿ ಬಂದಿತ್ತು. ಎಲ್ಲೆಲ್ಲಿ ಅನುಕೂಲ ಇದೆ ಅಲ್ಲಿ ಪೋಲೀಸರನ್ನು ಉಪಯೋಗ ಮಾಡುತ್ತೀರಿ. ಎಲ್ಲೆಲ್ಲಿ ಅನುಕೂಲ ಇಲ್ಲ ಅಲ್ಲಿ ಪೋಲೀಸರ ಉಪಯೋಗ ಮಾಡಬಾರದೆಂದು ಹೇಳುತ್ತೀರಿ. ನೀವು ನಿರ್ವಹಣೆ ಮಾಡತಕ್ಕ ಕಾನೂನು ವ್ಯವಸ್ಥೆ, ಆಡಳಿತ ಏನಿದೆ, ಇದರಲ್ಲಿ ತಾವು ಸಂಪೂರ್ಣ ವಿಫಲರಾಗಿದ್ದೀರಿ. ಈ ಒಂದು ಕಾನೂನು ನಿರ್ವಹಣೆಗೆ ಇರತಕ್ಕ ವ್ಯವಸ್ಥೆ ಯಾವುದು ಇದೆ, ಯಾವ ಶಾಸನ ಇದೆ, ಅವು ನಿಮಗೆ ಸಾಕಾಗಿಲ್ಲ. You want more weapons to administer the State. What does it mean ಸರಿಯಾಗಿ ಇದ್ದಂಥ ಶಾಸನಗಳನ್ನು ಉಪಯೋಗ ಮಾಡಲಿಕ್ಕೆ ಶಕ್ತಿ ಇಲ್ಲದಿದ್ದಾಗ ತಮಗೆ ಬೇರೆ ಬೇರೆ ಕಾನೂನು ಬೇಕೇ ? ತಮಗೆ ಪಿಡಿ ಆರ್ಡಿನೆನ್ಸ್ ಬೇಕಾಗಿದೆ ಗೂಂಡಾಗಳನ್ನು ಹಿಡಿಯಲಿಕ್ಕೆ ಪ್ರಾಮಾಣಿಕವಾಗಿ ಮಾಡಿದ ಶಾಸನವೇ ಅಥವಾ ರಾಜಕೀಯ ವಿರೋಧಿಗಳನ್ನು ಬಗ್ಗು ಬಡಿಯಲಿಕ್ಕೆ ಈ ಕಾನೂನನ್ನು ಮಾಡಿದ್ದೀರಿ ಎಂದು ಜನರಲ್ಲಿ ಸಂಶಯ ಉಳಿದಿದೆ. ಪಿಡಿ ಆರ್ಡಿನೆನ್ಸ್‌ನ್ನು ತಾವು ಅಧಿಕಾರ ಪೀಠದಲ್ಲಿ

ಸುರಕ್ಷಿತವಾಗಿ ಇರಲಿಕ್ಕೆ ಮಾಡಿದ ಸಂಚೇ ಹೊರತು ಈ ದೇಶದಲ್ಲಿ ಕಾನೂನು ವ್ಯವಸ್ಥೆ ಉಳಿಸಿಕೊಳ್ಳಲಿಕ್ಕೆ ಮಾಡಿದ ವ್ಯವಸ್ಥೆ ಅಲ್ಲ ಎಂದು ನಾನು ಹೇಳುತ್ತೇನೆ. ಕಾನೂನು ವ್ಯವಸ್ಥೆಯ ಬಗ್ಗೆ ಅಷ್ಟಕ್ಕೆ ಬಿಡುತ್ತೇನೆ. ಪೋಲೀಸ್ ಇಲಾಖೆಯನ್ನು ನಿರ್ವಹಣೆ ಮಾಡತಕ್ಕ ದೃಷ್ಟಿಯಲ್ಲಿ ಸಂಪೂರ್ಣವಾಗಿ ಅಧಿಕಾರಿಗಳನ್ನು ಡೀಮಾರಲೈಸ್ ಮಾಡಲಿಕ್ಕೆ ಯಾವ ವಿಚಾರಗಳನ್ನು ಮಾಡಬೇಕೋ ಅದನ್ನೆಲ್ಲಾ ತಾವು ಮಾಡಲಿಕ್ಕೆ ಎಲ್ಲಾ ಪ್ರಯತ್ನ ಮಾಡಿದ್ದೀರಿ. ಇದರಿಂದ ರಾಜ್ಯಕ್ಕೆ ಹಿತ ಆಗುವುದಿಲ್ಲ ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಕಮಿಷನ್ ರಿಪೋರ್ಟ್‌ಗಳ ಬಗ್ಗೆ ಸಾಕಷ್ಟು ಮಾತನಾಡಿದ್ದೀರಿ. ಮಾನ್ಯ ಬೊಮ್ಮಾಯಿಯವರು, ದೇವೇಗೌಡರು ಹಿಂದೆ ಮಾತನಾಡುತ್ತಿದ್ದರು. ಈಗ ಅನೇಕ ಕಮಿಷನ್ ರಿಪೋರ್ಟ್ಸ್ ತಮ್ಮ ಮುಂದೆ ಇದೆ ಅದರ ಮೇಲೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದನ್ನು ಹೇಳಬೇಕು. ಈಗ ಅನೇಕ ಕಮಿಟಿಗಳನ್ನು ಮಾಡಿದ್ದೀರಿ, ಅವು ವರದಿ ಕೊಡಬೇಕೆಂದು ಹೇಳಬೇಕಾಗುತ್ತದೆ. ಕಮಿಷನ್ ಅವರು ವರದಿ ಕೊಡಲಿಕ್ಕೆ ಅನೇಕ ಸಮಯ ಬೇಕಾಗುತ್ತದೆ. ಅನಂತರ ವರದಿಯನ್ನು ಕೊಟ್ಟಮೇಲೆ ಅನುಷ್ಠಾನ ಮಾಡಲಿಕ್ಕೆ ೯ ತಿಂಗಳು ಬೇಕಿದ್ದರೆ ಆದರಿಂದ ಏನು ಪ್ರಯೋಜನ ? ಆದ್ದರಿಂದ ಇವೊತ್ತು ಹೈಕೋರ್ಟ್ ಯಾವುದೇ ಜಡ್ಜನ್ನು ಈ ಕಮಿಷನ್‌ಗಳಿಗೆ ನೇಮಕ ಮಾಡಲಿಕ್ಕೆ ಒಪ್ಪುತ್ತಿಲ್ಲ. ಬಂದಂಥ ಕಮಿಷನ್ ರಿಪೋರ್ಟ್ ಪ್ರಮಾಣಿಕವಾಗಿ ಕಾರ್ಯಾಚರಣೆ ಮಾಡತಕ್ಕ ಒಂದು ಮೆರಿಟ್ಸ್ ತಮ್ಮಲ್ಲಿ ಇಲ್ಲ ಎಂದು ಎಲ್ಲರಲ್ಲಿಯೂ ಒಂದು ರೀತಿಯ ಭಾವನೆ ಬಂದಿದೆ. ಹಿಂದೆ ನೇಮಕ ಆಗಿರತಕ್ಕದ್ದು ಆಗಿರಲಿ, ಮುಂದೆ ಆಗಿರತಕ್ಕದ್ದು ಆಗಿರಲಿ ನ್ಯಾಯಾಂಗ ವಿಚಾರಣೆ, ಅದರಿಂದ ಕಂಡುಬರತಕ್ಕ ಕಾರ್ಯಕ್ರಮ ಅದರ ಒಂದು ವಿಚಾರದ ಬಗ್ಗೆ ತಾವು ಸರಿಯಾಗಿ ಮಾಡುತ್ತಿಲ್ಲ ಎಂದು ಹೇಳಲಿಕ್ಕೆ ನಾನು ಇಚ್ಛೆಪಡತ್ತೇನೆ. ಕಮಿಷನ್ ಎಂದು ತಾವು ಹೇಳತಕ್ಕದ್ದರಲ್ಲಿ ಪ್ರಮಾಣಿಕತೆ ಇದೆಯೋ ಹೊರತು ಕಮಿಷನ್ ರಿಪೋರ್ಟ್ ಜಾರಿ ಮಾಡುವುದರಲ್ಲಿ ಪ್ರಾಮಾಣಿಕತೆ ಇಲ್ಲ ಎಂದು ನಾನು ತಮಗೆ ಹೇಳಬೇಕಾಗುತ್ತದೆ. ಯಾರು ಏನು ಎತ್ತ ಎಂದು ನಾನು ಬೇರೆ ಬೇರೆ ವಿಶ್ಲೇಷಣೆ ಮಾಡಲಿಕ್ಕೆ ಹೋಗುವುದಿಲ್ಲ. ವಿಜಿಲೆನ್ಸ್ ಕಮಿಷನ್ ಆದರ ವಿಚಾರದಲ್ಲಿ ತಾವು ನಮಗೆ ಉತ್ತರ ಹೇಳಬೇಕಾಗುತ್ತದೆ ಎಷ್ಟೆಷ್ಟು ವರದಿಗಳನ್ನು ಜಾರಿ ಮಾಡಿದ್ದೀರಿ. ಕ್ಯಾಬಿನೆಟ್‌ನಲ್ಲಿ ಎಷ್ಟು ಕೇಸುಗಳನ್ನು ಕನ್‌ಸಿಡರ್ ಮಾಡಿದ್ದೀರಿ. ವಿಜಿಲೆನ್ಸ್ ಕಮಿಷನ್ ರಿಪೋರ್ಟ್ ಎಲ್ಲೆಲ್ಲಿ ಡೀವಿಯೇಟ್ ಮಾಡಿದ್ದೀರಿ. ಯಾರಿಗೆ ಶಿಕ್ಷೆ ಕೊಟ್ಟಿದ್ದೀರಿ ಎಂದು ಹೇಳಬೇಕು, ವಿಜಿಲೆನ್ಸ್ ಕಮಿಷನ್ ರಿಪೋರ್ಟ್ ಬಂದಾಗ ಅದರ ಸ್ವಾಯತ್ತತೆಯನ್ನು ಮನ್ನಿಸಬೇಕಾಗುತ್ತದೆ. ಡೈರೆಕ್ಟರ್ ಜನರಲ್ ಆಫ್ ಪೋಲೀಸ್ ಉನ್ನತ ಅಧಿಕಾರ ಇರತಕ್ಕ ಸ್ಥಳದಲ್ಲಿ ಬೇರೆ ಯಾವುದೇ ಕಾರಣದಿಂದ ಅದನ್ನು ಪ್ರಶ್ನೆ ಮಾಡತಕ್ಕ ದೃಷ್ಟಿಯಲ್ಲಿ ಹೋದರೆ, ಇಂತಹ ಸ್ವಾಯತ್ತ ಸಂಸ್ಥೆಗಳನ್ನು ಗೌರವಯುತವಾಗಿ ಬೆಳೆಸಿಕೊಂಡು ಹೋಗಲಿಕ್ಕೆ ಸಾಧ್ಯವಾಗುವುದಿಲ್ಲ. ಈ ಸದನದಲ್ಲಿ ಮತ್ತು ಅನೇಕ ಕಡೆಗಳಲ್ಲಿ ವಿಜಿಲೆನ್ಸ್ ಕಮಿಷನ್ ವರದಿ ಮೇಲೆ ಏನಾಗಿದೆ, ಅನುಕೂಲ ಬಂದಾಗ ಬದಲಾವಣೆ ಮಾಡತಕ್ಕದ್ದು ಬದಲಾವಣೆ ಮಾಡತಕ್ಕ ವ್ಯವಸ್ಥೆ ಕೂಡ ಆಗಿರುವುದರಿಂದ, ವಿಜಿಲೆನ್ಸ್ ಕಮಿಷನ್ ವರದಿಯನ್ನು ಕೊಟ್ಟರು ಅದನ್ನು ಕೊಡುವುದನ್ನು ಅನುಷ್ಠಾನ ಮಾಡತಕ್ಕ ಪ್ರಾಮಾಣಿಕತೆಯ ಬಗ್ಗೆ ಜನರಲ್ಲಿ ಸಾಕಷ್ಟು ಅಸಮಾಧಾನ ಬರುತ್ತಿದೆ. ಅಧಿಕಾರಕ್ಕೆ ಬಂದಕೂಡಲೇ ಶುದ್ಧ ಮತ್ತು ದಕ್ಷ ಆಡಳಿತವನ್ನು ಕೊಡುತ್ತೇವೆಂದು ಹೇಳಿದ್ದೀರಿ. ವಿಜಿಲೆನ್ಸ್ ಕಮಿಷನ್‌ಗೆ ಯಾವುದೇ ಗೌರವ ಕೊಡದೇ ಕಡೆಗಣಿಸುವುದು ಇದ್ದರೆ ತಮ್ಮ ದಕ್ಷತೆಯ ಬಗ್ಗೆ ಸಂಶಯವನ್ನು ನಾವು ವ್ಯಕ್ತಪಡಿಸಬೇಕಾಗುತ್ತದೆ. ಎಷ್ಟು ವಿಜಿಲೆನ್ಸ್ ವರದಿ ಬಂದಿದೆ ಎಷ್ಟು ಸಮಯ ಆಯಿತು. ಎಷ್ಟರಲ್ಲಿ ಅವರ ಒಪಿನಿಯನ್ ಡೀವಿಯೇಟ್ ಮಾಡಿದ್ದೀರಿ, ಎಷ್ಟರಲ್ಲಿ ಅನುಷ್ಠಾನ ಮಾಡಿದ್ದೀರಿ, ಅವುಗಳ ಸ್ಪಷ್ಟ ಚಿತ್ರವನ್ನು ನಮ್ಮ ಮುಂದಿಡುವ ಅವಶ್ಯಕತೆ ಇದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈ ವರ್ಗಾವಣೆ ವಿಚಾರದಲ್ಲಿ ಹೇಳುವುದಾದರೆ This Government has got emuck in transfers. ನಾವು ಸಾಕಷ್ಟು ಡೀಸೆಂಟ್ರಲೈಸ್ ಮಾಡಿದ್ದೇವೆಂದು ಹೇಳಿದ್ದೀರಿ. ಆದರೆ ಎಲ್ಲಾ ವರ್ಗಾವಣೆಗಳೂ ಮಂತ್ರಿಗಳ ಮಟ್ಟದಲ್ಲೇ ಆಗುವುದಾದರೆ ನೀವು ಹೇಳಿರುವ ಮಾತು ತಪ್ಪಾಗುತ್ತದೆ. ನಿಮ್ಮ ಅಧಿಕಾರ ಸ್ಥಾನ ಶಿಥಿಲವಾಗಿದೆ. ಈ ಅಧಿಕಾರಸ್ಥಾನವನ್ನು ಭದ್ರಪಡಿಸಿ ಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಜನರು ನಿಮ್ಮಿಂದ ಬಹಳ ನಿರೀಕ್ಷಣೆ ಮಾಡುತ್ತಿದ್ದಾರೆ. ಆಡಳಿತವನ್ನು ನಡೆಸತಕ್ಕ ಅಧಿಕಾರಿಗಳಿಂದ ದಕ್ಷತೆಯಿಂದ ಕೆಲಸ ಮಾಡಿಸಬೇಕಾದರೆ ನಿಮ್ಮ ವರ್ಗಾವಣೆ ನೀತಿ ಏನಿದೆ, ಅದು I don't know whethar it is one time operation of a multipronged objective. ಇದು ಒಂದು ವರ್ಷ ಎಂದು, ಈ ಎಲ್ಲಾ ಕಾರ್ಯಕ್ರಮಗಳೂ ಸ್ಥಗಿತವಾಗುವಂತೆ ವ್ಯವಸ್ಥಿತವಾಗಿ ಮಾಡಿದ್ದೀರಿ. ಮುಂದಿನ ವರ್ಷ ಇದೇ

ರೀತಿ ಮಾಡುವುದಾದರೆ ನಿಮ್ಮ ಕೆಲಸ ಯಾವುದೂ ಆಗುವುದಿಲ್ಲವೆಂದು ಹೇಳಬಯಸುತ್ತೇನೆ. ಇವತ್ತು ಕೇಂದ್ರಸರ್ಕಾರ ಮತ್ತು ರಾಜ್ಯಸರ್ಕಾರದ ಬಾಂಧವ್ಯದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ತಾವು ಒಂದು ಸಮ್ಮೇಳನವನ್ನೂ ಕೂಡ ಮಾಡಿದ್ದೀರಿ. ಅದನ್ನು ಮಾಡುವಾಗ ಬಹಳ ಗುಟ್ಟಾಗಿ ಮಾಡಿದ್ದೀರಿ. ಅದಕ್ಕೆ ಬದಲು ನಮ್ಮನ್ನೂ ಅಲ್ಲಿಗೆ ಕರೆಯಬಹುದಾಗಿತ್ತು. ನೀವು ಅಲ್ಲಿಗೆ ಬಂದಿದ್ದವರಿಗೆ ಕೊಟ್ಟ ಒಂದೊಂದು ಹ್ಯಾಂಡ್ ಬ್ಯಾಗ್‌ಗೆ ೨೫೦ ರೂಪಾಯಿಗಳ ಬೆಲೆ ಆಗುತ್ತದೆ ಇದಕ್ಕಾಗಿ ಸುಮಾರು ೨೫ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಿರೆಂದು ಕೇಳಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಕೇಂದ್ರ ಮತ್ತು ರಾಜ್ಯಸರ್ಕಾರಗಳ ಬಾಂಧವ್ಯ ಏರ್ಪಡದೇ ಇದ್ದರೂ ಪರವಾಯಿಲ್ಲ ನಮಗೆ ಒಂದೊಂದು ಬ್ಯಾಗ. ಆದರೂ ಸಿಕ್ಕಿದ್ದರೆ ಚೆನ್ನಾಗಿ ಇರುತ್ತಿತ್ತು.

ಶ್ರೀ ರಾಮಕೃಷ್ಣ ಹೆಗಡೆ.—ನಿಮಗೆ ಆಹ್ವಾನ ಬಂದಿದ್ದರೂ ನೀವು ಬರದೇ ಇದ್ದರೆ ನಾವು ಏನು ಮಾಡುವುದಕ್ಕೆ ಸಾಧ್ಯ? ಆ ಸಮ್ಮೇಳನದ ಉದ್ಘಾಟನಾ ಸಮಾರಂಭಕ್ಕೆ ಎಲ್ಲರಿಗೂ ಆಹ್ವಾನವನ್ನು ನಾವು ಕಳುಹಿಸಿದ್ದೆವು,

ಶ್ರೀ ಎಂ ವೀರಪ್ಪ ಮೊಯ್ಲಿ.—ತಮ್ಮ ಭಾಷಣವನ್ನು ಕೇಳಿದ್ದರೆ ಅದರ ಮೇಲಾದರೂ ನಾವು ಚರ್ಚೆ ಮಾಡಬಹುದಿತ್ತು. ಅಲ್ಲಿಗ ಅನೇಕ ಪ್ರತಿಷ್ಠಿತರನ್ನು ತಾವು ಕರೆಯಿಸಿದ್ದಿರಿ. ಅವರ ಜೊತೆ ಚರ್ಚೆ ಮಾಡುವುದಕ್ಕೆ ನಮಗೆ ಅವಕಾಶವನ್ನು ಕೊಡದಿದ್ದರೆ ನಾವು ಆ ಸಮಾರಂಭಕ್ಕೆ ಬಂದೂ ಪ್ರಯೋಜನ ಏನು ?

ಶ್ರೀ ರಾಮಕೃಷ್ಣ ಹೆಗಡೆ.—ರಾಜಕೀಯ ಮುಖಂಡರಿಗೆ ಅಲ್ಲಿ ಸ್ಥಾನ ಇರಲಿಲ್ಲ.

ಶ್ರೀ ಎಂ ವೀರಪ್ಪಮೊಯ್ಲಿ.—ಹಾಗಾದರೆ Centre-State relationship is only for academicians not for politicians ಹಾಗಾದರೆ ನಿವೂ ಅಲ್ಲಿಗೆ ಹೋಗಬಾರದಿತ್ತು. ಏಕೆಂದರೆ ತಾವೂ ರಾಜಕಾರಣಿಗಳು.

SRI RAMAKRISHNA HEGDE.—I just performed the ceremonial ritual.

ಶ್ರೀ ಎಸ್. ಬಂಗಾರಪ್ಪ.—ಸೆರೆಮೋನಿಯಲ್ ರಿಚುಯಲ್‌ಗೆ ಹೋಗಿ ಬಹಳ ದೊಡ್ಡ ವಿಚಾರವನ್ನೇ ಚರ್ಚೆಗೆ ಇಟ್ಟಿದ್ದೀರಿ.

ಶ್ರೀ ಎಂ ಎಸ್ ಕೃಷ್ಣನ್.—ನೀವು ಹೇಳಿದ್ದನ್ನೇ ಬೇರೆಯವರೂ ಹೇಳಿದರೇ ಹೊರತು ಅವರ ಹತ್ತಿರ ಇದ್ದ ಬೇರೆ ಸರಕು ಯಾವುದನ್ನೂ ವ್ಯಕ್ತಪಡಿಸಲಿಲ್ಲ. ನೀವು ರಾಜಕಾರಣಿಗಳಂತೆ ಮಾತನಾಡಿದಿರಿ. ನೀವು ಅಕೆಡೆಮಿಸ್ಟ್ ಆಗಿ ಮಾತನಾಡಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ನಿಮಗೆ ಆಹ್ವಾನಪತ್ರಿಕೆ ಬಂದಿದೆಯಲ್ಲಾ...

ಶ್ರೀ ಎಂ. ವೀರಪ್ಪ ಮೊಯ್ಲಿ.—ನನಗೆ ಬಂದಿಲ್ಲ. ಆದರೆ ಅದನ್ನು ನಾನೇ ತರಿಸಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.—ನೀವು ತರಿಸಿಲ್ಲ. ನಾವು ಹಂಚಿದ್ದೇವೆ.

ಶ್ರೀ ಎಸ್, ಬಂಗಾರಪ್ಪ.—ನಮಗೆ ಯಾವುದೂ ಬಂದಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾನು ಪ್ರತ್ಯೇಕವಾಗಿ ಬರೆದು ತರಿಸಿದ್ದೇನೆ. ಮಾನ್ಯ ಮುಖ್ಯ ಮಂತ್ರಿಯವರು ತಮ್ಮ ದಸ್ಕತ್ತನ್ನು ಹಾಕಿ ಬಹಳ ಸಂತೋಷದಿಂದ ಕಳುಹಿಸಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ...

ಶ್ರೀ ರಾಮಕೃಷ್ಣ ಹೆಗ್ಗಡೆ.—ತಮಗೂ ಕಳುಹಿಸಿಕೊಟ್ಟಿದೇವೆ.

ಶ್ರೀ ಎಂ. ವೀರಪ್ಪ ಮೊಯ್ಲಿ. ಮಾನ್ಯ ಅಧ್ಯಕ್ಷರೆ. ಇದು ಪೊಲಿಟಿಕಲ್ ಕಾನ್‌ಫರೆನ್ಸ್ ಎಂದು ಹೇಳುವುದಿಲ್ಲ It is politica in naturel. ತಾವು ಹೇಳುವುದಕ್ಕೆ ಏತಕ್ಕೆ ಹೆದರುತ್ತೀರಿ ? ಆದರಲ್ಲಿ ಭಾಗವಹಿಸಬೇಕಾದರೆ some sort of security badges were given. ಅಷ್ಟು ಬಂದೋಬಸ್ತನಲ್ಲಿ ಗೌಪ್ಯವಾಗಿ ಈ ಕಾನ್‌ಫರೆನ್ಸನ್ನು ಮಾಡುವ ಅಗತ್ಯವಾದರೂ ಏನಿತ್ತು ? ಇದು ಯಾರ ಮೇಲಿನ ಪಿತೂರಿಯೂ ಅಲ್ಲವೆಂದು ಹೇಳುವುದಾದರೆ he should have thrown

up on the door steps of lawyears and academicians to witness the conference. ಅನೇಕ ಜನರು ಅದನ್ನು ನೋಡಬೇಕೆಂದಿದ್ದರು. ಅದರಲ್ಲಿ ನೀವು ಭಾಗವಹಿಸ ಬೇಡಿ, ಬೇಕಾದರೆ ಬಂದು ನೋಡಿ ಎಂದು ಹೇಳಬಹುದಿತ್ತು. ಸರ್ಕಾರದ ಖರ್ಚಿನಿಂದ ತಾವು ಇಂಥ ಒಂದು ಕಾನ್‌ಫರೆನ್ಸನ್ನು ಮಾಡಿದ್ದೀರಿ. ಅಲ್ಲಿ ಏನೇನು ನಡೆಯಿತು ಎಂಬುದನ್ನು ನೋಡ ಬಹುದಿತ್ತು.

ಶ್ರೀ ಎಸ್. ಬಂಗಾರಪ್ಪ.—ಇಂಥ ವಿಚಾರಗಳಿಗೆ ಮಾನ್ಯ ಮುಖ್ಯ ಮಂತ್ರಿಯವರು ಬಹಳ ಬೇಗ ಗಮನ ಕೊಡುತ್ತಾರೆ. ಇದು ಚರ್ಚೆಯಾಗಬಾರದೆಂದು ಅಲ್ಲ. ಅದನ್ನು ಬಿಟ್ಟು ಬೇರೆ ವಿಚಾರಗಳು ಅವರಿಗೆ ಹೊಳೆಯುವುದಿಲ್ಲ. ಇನ್ನೂ ಸ್ವಲ್ಪ ವಿವರವಾಗಿ ಇದರ ಬಗ್ಗೆ ಹೇಳಬೇಕೆಂದರೆ ಈಗ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ವಿಚಾರದಲ್ಲಿ ಯಾವ ರೀತಿ ಚರ್ಚೆ ಮಾಡುತ್ತವೆ, ಸಮಾಜದಲ್ಲಿರತಕ್ಕ ಬಡವರು, ಅಲ್ಪಸಂಖ್ಯಾತರು, ಅಥವಾ ಹಿಂದುಳಿದವರ್ಗದ ಜನರು ಅಥವಾ ಯಾವುದೇ ವರ್ಗದ ಜನರು ಅಥವಾ ಯಾವುದೇ ವರ್ಗದ ಜನರ ವಿಚಾರವೇ ಇರಲಿ ಅದರ ಬಗ್ಗೆ ಚರ್ಚಾಗೋಷ್ಠಿಯನ್ನು ಮಾಡಬೇಕೆಂದು ಇವರ ಗಮನಕ್ಕೆ ಬರುವುದಿಲ್ಲ. ಆದರೆ ಇಂಥಾದ್ದು ಮಾತ್ರ ಬೇಗನೆ ಬರುತ್ತದೆ.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಂಬಂಧದಲ್ಲಿ ಒಂದು ಹೊಸಬೆಳಕನ್ನು ಚೆಲ್ಲಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಬೆಳಕು ಇದೆ ಚೆಲ್ಲುತ್ತಾರೆ. ಆದರೆ ಬೇರೆ ವಿಚಾರದಲ್ಲಿ ಬೆಳಕನ್ನು ಚೆಲ್ಲಲು ಸರಕು ಇರಬೇಕಲ್ಲವೇ ?

ಶ್ರೀ ಎಂ. ರಘುಪತಿ.—ಮುಂದಾಲೋಚನೆಯ ಬಗ್ಗೆ ಇವರು ಯೋಚನೆ ಮಾಡುವುದಿಲ್ಲ. ಅದು ತಕ್ಷಣ ನಮ್ಮ ತಲೆಯಲ್ಲಿ ಹೊಳೆಯುವುದಿಲ್ಲ ಎಂದು ಹೇಳಿದಿರಿ. ಅಂಥ ವಿಚಾರದಲ್ಲಿಯೂ ಕೂಡ ಇವರು ಆಸಕ್ತಿ ವಹಿಸಿದ್ದೇವೆ. ಸ್ವಲ್ಪ ಕಾದು ನೋಡಿ.

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ನಾವು ಕಾಯುತ್ತೇವೆ.

ಶ್ರೀ ಎಂ. ರಘುಪತಿ.—ಕಾದು ನೋಡಿ ಆಮೇಲೆ ನೀವೇ ಶಹಭಾಸ್ ಎಂದು ಹೇಳುತ್ತೀರಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ಕಾನ್‌ಫರೆನ್ಸ್ ಖಂಡಿತವಾಗಿಯೂ ರಾಜಕೀಯದ್ದು. ಈ ರಾಜಕೀಯ ಸಮ್ಮೇಳನಕ್ಕೆ ಸರ್ಕಾರದ ಹಣ ಖರ್ಚಾಗಿದೆ. ಈ ರಾಜಕೀಯ ಸಮ್ಮೇಳನಕ್ಕೆ ನಿಮ್ಮ ಸರ್ಕಾರದ ವೇದಿಕೆಯನ್ನು ಉಪಯೋಗ ಮಾಡಿಕೊಂಡಿದ್ದೀರಿ. ಇದು ನಿಮ್ಮ ಅಧಿಕಾರದ ಸಂಪೂರ್ಣ ದುರುಪಯೋಗ. ಇದರಲ್ಲಿ ಅನುಮಾನವೇ ಬೇಕಾಗಿಲ್ಲ. ಆಡಳಿತದಲ್ಲಿ ರಾಜಕೀಯ ವನ್ನು ಈ ರೀತಿ ಮಾಡುತ್ತಾ ಹೋಗುವುದಾದರೆ ಆಡಳಿತ ಯಂತ್ರವನ್ನು ತಾವು ಸಂಪೂರ್ಣವಾಗಿ ಶಿಥಿಲ ಮಾಡುತ್ತೀರಿ. ಜನತೆಗೆ ಒಳ್ಳೆಯ ಆಡಳಿತವನ್ನು ತಾವು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಒಂದು ಪರಿಣಾಮ ಏನಾಯಿತು ಎಂದರೆ ದಕ್ಷಿಣ ಭಾರತದ ಮುಖ್ಯ ಮಂತ್ರಿಗಳು ಒಂದಾಕಡೆ ಸೇರುವುದು ಆಯಿತು. ಅವರು ಮಾತುಕತೆ ನಡೆಸುವುದಕ್ಕೆ ನಾನು ಅಪೇಕ್ಷೆ ಮಾಡುವುದಿಲ್ಲ. ಆದರೆ......

SRI RAMACHANDRA RAO.—There is nothing political in this.

ಶ್ರೀ ಎಂ. ವೀರಪ್ಪ ಮೊಯ್ಲಿ.—Then it is political. It is not done with a political motive. ಇದರಲ್ಲಿ ರಾಜಕೀಯ ಇಲ್ಲವೆಂದು ಹೇಗೆ ಹೇಳುತ್ತೀರಿ ? ಇದರಿಂದ ರಾಜಕೀಯ ಲಾಭವನ್ನು ಪಡೆಯಬೇಕೆಂದು ನೀವು ಮಾಡಿದ್ದೀರಿ, ದುರುದ್ದೇಶದಿಂದ ಮಾಡಿದ್ದೀರಿ. ಕೇಂದ್ರಸರ್ಕಾರದ ಮೇಲೆ ರಾಜ್ಯಸರ್ಕಾರಗಳನ್ನು ಎತ್ತಿ ಕಟ್ಟಬೇಕೆಂದು ಮಾಡಿದ್ದೀರಿ, ಇದರಲ್ಲಿ ಯಾವುದೇ ಅನುಮಾನವೂ ಇಲ್ಲ.

ಶ್ರೀ ದೊಡ್ಡಬೋರೇಗೌಡ.— ಮಾನ್ಯ ಅಧ್ಯಕ್ಷರೆ ಯಾವುದು ರಾಜಕೀಯ ಸಮ್ಮೇಳನ ? ಯಾವುದಕ್ಕೆ ಸರ್ಕಾರದ ಹಣ ಖರ್ಚಾಗಿದೆ ? ಹಿಂದೆ ಇವರು ಆರ್ಥಿಕ ಸಚಿವರಾಗಿದ್ದಾಗ ರಾಜಕೀಯ ಸಮ್ಮೇಳನವನ್ನು ಮಾಡಿದಾಗ ವಿದ್ಯುಚ್ಛಕ್ತಿ ಮಂಡಲಿಯವರಿಗೆ ವಿದ್ಯುಚ್ಛಕ್ತಿ ಬಾಬ್ತು ೩.೫ ಲಕ್ಷ ರೂಪಾಯಿಗಳನ್ನು ಕೊಟ್ಟಿಲ್ಲವೆಂದು ಈ ವರದಿಯಲ್ಲಿದೆ. ಇವರ ಬಗ್ಗೆ ಏನು ಹೇಳುತ್ತಾರೆ ?

ಶ್ರೀ ಎಂ. ವೀರಪ್ಪಮೊಯ್ಲಿ.— ಇದನ್ನು ನೀವು ವಸೂಲ್ಮಾಡಿ. ಇದನ್ನು ನಾವು ದುರುಪಯೋಗ ಮಾಡಿಲ್ಲ. Everything charged, if there are any bills you ask them and collect money.

ಇದು ಸರ್ಕಾರದಿಂದ ನೇರವಾಗಿ ಖರ್ಚು ಮಾಡಿದ್ದು. ಇದರ ಬಿಲ್ಲನ್ನು ಯಾರಿಗೂ ಕಳಿಸ ಬೇಕಾಗಿಲ್ಲ ಈ ಮುಖ್ಯಮಂತ್ರಿಗಳ ಒಕ್ಕೂಟ ಸಮ್ಮೇಳನದ ಪರಿಣಾಮದಿಂದ ಇಡೀ ರಾಜ್ಯದ ಹಿತಾಸಕ್ತಿಗೇ ಧಕ್ಕೆ ಬಂದಿದೆ.

ಆಂಧ್ರ ಪ್ರದೇಶದ ಮಾನ್ಯ ಮುಖ್ಯಮಂತ್ರಿಗಳು, ತಮಿಳುನಾಡಿನ ಮುಖ್ಯಮಂತ್ರಿಯವರುಮತ್ತು ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು. ಇವರು ಬಹಳ ಸ್ನೇಹಿತರು ಆಗಿಬಿಟ್ಟಿದ್ದಾರೆ ಅವರ ಬಗ್ಗೆ ಶ್ರೀಮಾನ್ ಬಂಗಾರಪ್ಪನವರು ಹೇಳಿದ್ದಾರೆ. ಸನ್ಮಾನ್ಯ ಸಚಿವರಿಗೆ ಇದು ಅರ್ಥವಾಗುವುದಿಲ್ಲ ಅರ್ಥ ವಾಗುವುದು ಸ್ವಲ್ಪ ತಡ. ರಾಜ್ಯದ ಹಿತಾಸಕ್ತಿ ಅರ್ಥವಾಗುವುದು ಸ್ವಲ್ಪ ತಡ. ಇವರಿಗೆ ರಾಜಕೀಯ ಬಹಳ ಬೇಗ ಅರ್ಥವಾಗುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಇತ್ತ ಕಡೆ ಸ್ವಲ್ಪ ಗಮನ ಕೊಡಬೇಕು. ತೆಲಗು-ಗಂಗಾ ಪ್ರಾಜೆಕ್ಟ್-ಈ ತೆಲಗು ಗಂಗಾ ಪ್ರಾಜೆಕ್ಟ್ ಒಂದು ದೊಡ್ಡ ರಾಕೆಟ್. ಈ ತೆಲಗು ಗಂಗಾ ಪ್ರಾಜೆಕ್ಟ್‌ಗೆ. ತಾವು ಹೋಗಿದ್ದಿರಿ. ರಾಜ್ಯದ ಹಿತಾಸಕ್ತಿಯನ್ನು ಬಲಿ ಕೊಡುವುದು ಬಹುಶಃ ತಮಗೆ ಅರ್ಥವಾಗಿದಿಯೋ ಏನೋ ಎನ್ನುವುದು ಗೊತ್ತಿಲ್ಲ. It is a very serious matter. ತಮಗೆ ಗೊತ್ತಿದೆ ಮದ್ರಾಸ್ ಸಿಟಿಗೆ ವಾಟರ್ ಸಪ್ಲೆಯನ್ನು ಕೊಡಬೇಕು. ಇದು ತಮ್ಮಗೆ ಅರ್ಥವಾಗುತ್ತಿದಿಲ್ಲ. It will affect the entire people of Hyderabad Karnataka area. ಇದಕ್ಕೆ ಏನಾದರೂ ಇದ್ದರೆ ತಾವು ಹೇಳಿ. ಸರ್ಕಾರದ ಪತಿಯಿಂದ ಏನಾದರೂ ಹೇಳುವುದಿದ್ದರೆ ತಾವು ಹೇಳಿ. ಹೈದರಾಬಾದ್ ಕರ್ನಾಟಕ ರಾಜ್ಯದ ಜನತೆಯ ಹಿತಾಸಕ್ತಿಯನ್ನು ಬಲಿಪೀಠಕ್ಕೆ ಕೊಡಲು ಒಪ್ಪಿದ್ದೀರಿ. ಮಾನ್ಯ ಮುಖ್ಯ ಮಂತ್ರಿಗಳು ಒಗ್ಗಟ್ಟಾಗಿ ಬಲಿಪೀಠಕ್ಕೆ ಕರ್ನಾಟಕ ರಾಜ್ಯದ ಜನತೆಯ ಹಿತಾಸಕ್ತಿಯನ್ನು ಬಲಿ ಕೊಟ್ಟಿದ್ದಾರೆ. ತೆಲಗು-ಗಂಗಾ ಪ್ರಾಜೆಕ್ಟ್‌ನಿಂದ ಅಧ್ಯಕ್ಷರೇ ೧೫ ಟಿಎಂಸಿಎಫ್‌ಟಿ ವಾಟರ್ ಮದ್ರಾಸ್‌ಗೆ ಕೊಡಬೇಕು. ಇರಿಗೇಷನ್‌ಗೆ ಕಡಪ-ನೆಲ್ಲೂರು ಜಿಲ್ಲೆಗೂ ನೀರನ್ನು ಕೊಡ ಬೇಕೆಂದು ತೆಲಗು ಗಂಗಾ ಪ್ರಾಜೆಕ್ಟ್‌ನಿಂದ, ಮಾಡಿದ್ದಾರೆ. ಆಂಧ್ರದವರು ೩೧ ಕೋಟಿ ರೂಪಾಯಿಗಳ ಖರ್ಚು ಕೊಡುವಂತೆ ಆಗಿರುತ್ತದೆ. ಅಧ್ಯಕ್ಷರೇ ಇದರಿಂದ ಏನು ಆಗುತ್ತದೆ ಎಂದರೆ ಮದ್ರಾಸ್ ಸಿಟಿಗೆ ೧೫ ಟಿಎಂಸಿಎಫ್‌ಟಿ ನೀರನ್ನು ಕೊಡುವುದು ಒಂದು ಅದು ಅಷ್ಟು ದೊಡ್ಡ ಸಂಗತಿ ಅಲ್ಲ. ೧೫ ಟಿಎಂಸಿಎಫ್‌ಟಿ ನೀರನ್ನು ಕೊಡಬೇಕೆಂದು ಅಲ್ಲಿ ನಿರ್ಣಯವಾಗಿದೆ. ಅದಕ್ಕೆ ಯಾರದೂ ಆಕ್ಷೇಪಣೆ ಇಲ್ಲ ಆದರೆ ಇದರಿಂದ ಏನಾಗುತ್ತದೆ ಎಂದರೆ ಕೃಷ್ಣಾ ನೀರನ್ನು ಶ್ರೀಶೈಲ ರಿಸರ್ವಾಯರ್‌ನಿಂದ ಕುಂದೂರು ವ್ಯಾಲಿ ಮೂಲಕ ಪೆನ್ನಾರ್‌ವರೆಗೂ ಕೊಡಬೇಕೆಂದು ಹೇಳಿ ಈ ಯೋಜನೆಯಲ್ಲಿ ಹೇಳಿದ್ದಾರೆ. ಈಗ ಅವರು ಪೆನ್ನಾರ್ ಯೋಜನೆಯಿಂದ ಸುಮಾರು ೧೫೦-೨೦೦ ಟಿಎಂಸಿಎಫ್‌ಟಿ ಆ ನೀರು ಹೋಗುತ್ತದೆ. ಇಡೀ ರಿಪೋರ್ಟ್‌ನಲ್ಲಿ ಏನು ಇದೆ ಎಂಬುದು ತಮಗೆ ಗೊತ್ತಿದೆ. ಗೋದಾವರಿ, ಕೃಷ್ಣಾವಾಟರ್ ಡಿಸ್ಪ್ಯೂಟ್ ಟ್ರಿಬ್ಯುನಲ್ ಮುಂದೆ ಇದೆ. ಅದನ್ನು ಪ್ರತ್ಯೇಕವಾಗಿ ಚರ್ಚೆಗೆ ತರುತ್ತೇನೆ. ಮುಂದೆ ವಿವರವಾಗಿ ಚರ್ಚೆ ಮಾಡಬಹುದು. ೧೫ ಟಿಎಂಸಿಎಫ್‌ಟಿ ವಾಟರ್ ಮದ್ರಾಸ್‌ಗೆ ಹೋಗತಕ್ಕಂಥದ್ದು ಅಷ್ಟೇ ಅಲ್ಲ ೧೫೦-೨೦೦ ಟಿಎಂಸಿಎಫ್‌ಟಿ ವರೆಗೂ ವಾಟರ್ ಕೃಷ್ಣಾನದಿಯಿಂದ ಹೋಗುತ್ತದೆಂದು ತಮಗೆ ಗೊತ್ತಿದೆ. ೨೦೦೦ನೇ ಇಸವಿ ಒಳಗಡೆ ಕೃಷ್ಣಾ ನೀರನ್ನು ನಾವು ಉಪಯೋಗ ಮಾಡದೇ ಇದ್ದರೆ ಪುನಃ ವಿತರಣೆ ಮಾಡಬೇಕಾಗುತ್ತದೆ. ಏತಕ್ಕೆಂದರೆ ಒಮ್ಮೆ ಆಂಧ್ರ ಪ್ರದೇಶದವರು ನೀರನ್ನು ಉಪಯೋಗ ಮಾಡಿದಮೇಲೆ we will lose our right ೧೫೦ ಟಿಎಂಸಿಎಫ್‌ಟಿ ಹೆಚ್ಚಿನ ನೀರು ಈವೊತ್ತು ನಮ್ಮ ಕೃಷ್ಣಾದಿಂದ ನಮ್ಮ ಪಾಲಿನ ನೀರನ್ನು ಆಂಧ್ರ ಪ್ರದೇಶಕ್ಕೆ ಕೊಡತಕ್ಕಂಥ ಒಂದು ಸಂಚಿನಲ್ಲಿ ನೀವು ಸಿಕ್ಕಿಹಾಕಿ ಕೊಂಡಿದ್ದೀರಿ. ಇದರ ಬಿಡುಗಡೆ ಯಾವ ರೀತಿ ಮಾಡಿಕೊಳ್ಳುತ್ತೀರಿ ಎನ್ನುವುದನ್ನು ದಯವಿಟ್ಟು ಹೇಳಬೇಕು. ಏತಕ್ಕೆಂದರೆ ಕೃಷ್ಣಾ ವಾಟರ್ ಡಿಸ್‌ಪ್ಯೂಟ್ ಟ್ರಿಬ್ಯುನಲ್‌ನಲ್ಲೂ ಕೂಡ, it is a very serious matter, where the entire interest of the State will be affected. ಇದು ಒಂದು ಗಂಭೀರವಾದ ವಿಚಾರ. ಹೇಗಾದರೂ ಆಂಧ್ರ ಪ್ರದೇಶದಲ್ಲಿ ಎಂಟನೂರು ಟಿ.ಎಂ.ಸಿ.ಎಫ್ ಟಿ. ಅವರ ಪಾಲಿಗೆ ಬಂದಿರತಕ್ಕಂಥದ್ದನ್ನು ಈಗಾಗಲೇ ಅವರು ಉಪಯೋಗ ಮಾಡಿಕೊಂಡಿದ್ದಾರೆ. ಆದ್ದರಿಂದ ಅವರಿಗೆ ಇನ್ನೂ ಹೆಚ್ಚಿನ ನೀರನ್ನು ಕೃಷ್ಣಾದಿಂದ ಕೊಡತಕ್ಕಂಥ ಪ್ರಶ್ನೆ ಬರುವುದಿಲ್ಲ. ನಮ್ಮ ಪಾಲಿಗೆ ಬಂದಂಥ ನೀರು ಏಳನೂರು

ಟಿಎಂಸಿಎಫ್‌ಟಿ. ಮಹಾರಾಷ್ಟ್ರಕ್ಕೆ ಬಂದಿರತಕ್ಕಂಥದ್ದು ೫೬೦ ಟಿ.ಎಂ.ಸಿ.ಎಫ್.ಟಿ. ನಾವು ಅದನ್ನು ಉಪಯೋಗ ಮಾಡಲಿಲ್ಲ. ಆದರೆ ಆಂಧ್ರ ಪ್ರದೇಶದಲ್ಲಿ ಆ ನೀರನ್ನೂ ಸಂಪೂರ್ಣವಾಗಿ ಉಪಯೋಗ ಮಾಡಿಕೊಂಡಿದ್ದಾರೆ. ಆದ್ದರಿಂದ ಅವರಿಗೆ ಮತ್ತೆ ಎಲ್ಲಿಂದ ನೀರು ಬರಬೇಕು ? ಅವರಿಗೆ ಮಹಾರಾಷ್ಟ್ರ ಅಥವಾ ಕರ್ನಾಟಕದ ಪಾಲಿನ ನೀರು ಈವೊತ್ತು ಆಂಧ್ರ ಪ್ರದೇಶಕ್ಕೆ ತಾವು ಧಾರೆ ಎರೆದು ಕೊಡತಕ್ಕಂಥ ಕಾರ್ಯಕ್ರಮಕ್ಕೆ ತಾವು ಹೋಗಿದ್ದೀರಿ. ಇದರಲ್ಲಿ ಭಾಗವಹಿಸಿದ್ದೀರಿ. ಆದ್ದರಿಂದ ಈ ಬಗ್ಗೆ ಮರುಚಿಂತನೆ ಮಾಡಬೇಕು. ಯಾವುದೇ ಒಂದು ರಾಜ್ಯದ, ಸ್ನೇಹಿತರ ಒಂದು ಸಂಕೋಲೆಗೆ ಬಲಿಯಾಗಿ ರಾಜ್ಯದ ಜನತೆಯ ಹಿತಾಸಕ್ತಿಯನ್ನು ಬಲಿಕೊಡಬಾರದು ಎಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

ಡಾ॥ ಎಚ್. ಎಲ್. ತಿಮ್ಮೇಗೌಡ.--ತಮ್ಮ ಪ್ರೈಮಿನಿಸ್ಟರ್‌ರವರು ಆ ಸಮಯದಲ್ಲಿ ಭಾಗ ವಹಿಸಿದ್ದರಲ್ಲ. ಆಗ ತಾವು ಬಾಯ್‌ಕಾಟ್ ಮಾಡಬಹುದಾಗಿತ್ತಲ್ಲವೇ ?

ಶ್ರೀ ಎಂ. ವೀರಪ್ಪಮೊಯಿಲಿ.--ಬಾಯ್‌ಕಾಟ್ ಮಾಡತಕ್ಕಂಥ ಪ್ರಶ್ನೆಯಿಲ್ಲ. ಪ್ರಾಜೆಕ್ಟ್ ರಿಪೋರ್ಟನ್ನು ಕೂಡ ಈವತ್ತಿಗೂ ಪ್ಲಾನಿಂಗ್ ಕಮಿಷನ್‌ರವರು ಕ್ಲಿಯರ್ ಮಾಡಿಲ್ಲವೆಂದು ತೋರುತ್ತದೆ.

ಡಾ॥ ಎಚ್. ಎಲ್. ತಿಮ್ಮೇಗೌಡ.-- ಆ ಸಮಾರಂಭಕ್ಕೆ ಮಾನ್ಯ ಮುಖ್ಯ ಮಂತ್ರಿಗಳು, ಪ್ರೈಮಿನಿಸ್ಟರ್ ಹಾಜರಾಗಿದ್ದರು. ನಮ್ಮ ಮುಖ್ಯ ಮಂತ್ರಿಗಳು ರಾಜ್ಯದ ಹಿತಕ್ಕೆ ಧಕ್ಕೆ ಬರತಕ್ಕಂಥ ರೀತಿಯಲ್ಲಿ ಕೆಲಸ ಮಾಡಿದ್ದಾರೆಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು. ಮಾನ್ಯ ಮುಖ್ಯ ಮಂತ್ರಿಗಳು ಏನೋ ಸಿಕ್ಕಿಹಾಕಿಕೊಂಡಿದ್ದಾರೆ ಎಂದು ಈವೊತ್ತು ಹೇಳತಕ್ಕಂಥವರು ಆವತ್ತೇ ತಮ್ಮ ಪ್ರೈಮಿನಿಸ್ಟರ್‌ರವರಿಗೆ ನಮ್ಮ ರಾಜ್ಯಕ್ಕೆ ತೊಂದರೆಯಾಗುತ್ತದೆಂದು ಏತಕ್ಕೆ ಹೇಳಬಾರದಾಗಿತ್ತು ?

ಶ್ರೀ ಎಂ. ವಿರಪ್ಪಮೊಯಿಲಿ.--ಮಾನ್ಯ ಗೌಡರು ಕಪ್ಪ ಕೋಣೆಯಲ್ಲಿ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಕಪ್ಪು ಬೆಕ್ಕನ್ನು ಹುಡುಕಲಿಕ್ಕೆ ಹೊರಟಿದ್ದಾರೆ. ೧೫೦-೨೫೦ ಟಿಎಂಸಿಎಫ್‌ಟಿ ವಾಟರನ್ನು ಕೊಡಿ, ಜನತೆ ನಿಮ್ಮನ್ನು ಮೆಚ್ಚಿಕೊಳ್ಳುತ್ತಾರೆ.

ಒಬ್ಬ ಸದಸ್ಯರು.-- ಹೈದರಾಬಾದ್ ಕರ್ನಾಟಕಕ್ಕೆ ಧಕ್ಕೆ ಬರುತ್ತದೆಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು. ಕೃಷ್ಣಾನೀರು ರಾಯಚೂರು ಜಿಲ್ಲೆಯ ಮೇಲೆ ಹೋಗುತ್ತದೆ. ಈ ಗದ್ದಲ ದಲ್ಲಿ ನಮ್ಮ ನೀರು ಹೋಗುತ್ತದೆಯೋ ಏನೋ ದಯವಿಟ್ಟು ಮಾನ್ಯ ಮುಖ್ಯಮಂತ್ರಿಯವರು ಹೇಳಬೇಕು.

ಶ್ರೀ ರಾಮಕೃಷ್ಣ ಹೆಗಡೆ.-- ತಾವು ಸಂಪೂರ್ಣವಾದ ಸಮರ್ಥನೆ ಕೊಡಬೇಕು. ಯಾವ ದೃಷ್ಟಿ ಯಿಂದ ಕರ್ನಾಟಕಕ್ಕೆ ಧಕ್ಕೆಯಾಗುತ್ತದೆ. ನಾವು ಯಾವುದನ್ನು ಸರೆಂಡರ್ ಮಾಡಿದ್ದೇನೆ, ಮುಂದಿನ ಪೀಳಿಗೆಗೆ ಹೇಗೆ ಧಕ್ಕೆ ಮಾಡಿರುತ್ತವೆ, ಅದನ್ನೆಲ್ಲ ಬಿಚ್ಚಿ ವಿವರವಾಗಿ ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.-- ನಾನು ಹೇಳಿದ್ದೇನೆ, ತಾವು ಯಾವುದೋ ಚರ್ಚೆಯಲ್ಲಿ ಇದ್ದಿರಿ.

ಶ್ರೀ ರಾಮಕೃಷ್ಣ ಹೆಗಡೆ.-- ತಾವು ಅರ್ಥಮಂತ್ರಿಗಳಾಗಿದ್ದವರು, ಯೋಜನಾಮಂತ್ರಿಗಳಾ ಗಿದ್ದವರು, ಏನಾದರೂ ಹೇಳಿದರೆ ಅದು ಅರ್ಥಬರುವ ರೀತಿಯಲ್ಲಿ ತಾವು ಹೇಳುತ್ತೀರೆಂದು ನಾನು ನಿರೀಕ್ಷಣೆ ಮಾಡಿರುತ್ತೇನೆ. ತಾವು ಅರ್ಥವಾಗದ ರೀತಿಯಲ್ಲಿ ಹೇಳಿದರೆ ಏನು ಮಾಡುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ.--ತಮಗೆ ಅರ್ಥವಾಗದೇ ಇದ್ದರೆ ನಾನು ಏನು ಮಾಡುವುದಕ್ಕೆ ಆಗುತ್ತದೆ. ತೆಲಗು ಗಂಗಾ ಪ್ರಾಜೆಕ್ಟನಲ್ಲಿ ಬರೀ.........

ಶ್ರೀ ಎಸ್. ಬಂಗಾರಪ್ಪ.--ನಾನು ಅವರ ಭಾಷಣವನ್ನು ಕೇಳಿದೆ. ನನಗೆ ಅರ್ಥವಾಯಿತ್ತು ತಮಗೆ ಏತಕ್ಕೆ ಅರ್ಥವಾಗಲಿಲ್ಲವೋ ಗೊತ್ತಾಗಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.-- ಅವರ ಬುದ್ಧಿ ನಿಮ್ಮ ಬುದ್ಧಿ ಒಂದೇ ಇರುವುದರಿಂದ ನಿಮಗೆ ಅರ್ಥ ವಾಗಿರುತ್ತದೆ.

ಶ್ರೀ ಎಸ್. ಬಂಗಾರಪ್ಪ.--ಹೌದು ಹೌದು ಏತಕ್ಕೆಂದರೆ ನಿಮ್ಮ ಬುದ್ಧಿ ನಮಗೆ ಹೇಳುವುದು ಬೇಡ, ನಾವು ಕೇಳುವುದಕ್ಕೂ ತಯಾರಾಗಿಲ್ಲ. ನಿಮ್ಮ ಬುದ್ಧಿ ಕೇಳಿದರೆ ಜನತೆಗೂ ಒಳ್ಳೆಯದಲ್ಲ, ದೇಶಕ್ಕೂ ಒಳ್ಳೆಯದಲ್ಲ.

(ಗೊಂದಲ)

SRI M. RAGHUPATHY.—You are playing an Advocate's role very well, on behalf of Congress-I.

SRI S. BANGARAPPA.— By profession, I am an advocate,

೧-೩೦ ಪಿ.ಎಂ.

ಶ್ರೀ ಎಸ್. ಬಂಗಾರಪ್ಪ.—ನಾನು ವೃತ್ತಿಯಲ್ಲಿ ಅಡ್ವೊಕೇಟ್ ಇದ್ದೇನೆ. ಜನರ ಹಿತ ದೃಷ್ಟಿಯಿಂದ ನಾನು ಈ ಕೆಲಸ ಮಾಡುತ್ತೇನೆ. ಈಗ ನನಗೆ ತಿಳಿದಂತೆ ಶ್ರೀ ವೀರಪ್ಪಮೊಯ್ಲಿ ಅವರು ಹೇಳಿದ್ದೇನೆಂದರೆ, ಕೃಷ್ಣಾ ನದಿಯ ನೀರನ್ನು ನಾವು ಸರಿಯಾಗಿ ಉಪಯೋಗ ಮಾಡಿಕೊಳ್ಳದೆ ಆಂಧ್ರಕ್ಕೆ ಏನಾದರೂ ಬಿಟ್ಟುಕೊಟ್ಟರೆ ಮುಂದೆ ಇದರಿಂದ ರಾಯಚೂರಿಗೆ ಅನ್ಯಾಯವಾಗುತ್ತದೆಂದು ಅವರು ಅಂಕಿಅಂಶಗಳನ್ನು ಕೊಟ್ಟು ಹೇಳಿದ್ದಾರೆ. ಮದ್ರಾಸ್ ನಗರಕ್ಕೆ ನೀರು ಕೊಡಬಾರದೆಂದು ಇವರು ಹೇಳಲಿಲ್ಲ. ಆದರೆ ನೀರನ್ನು ಕೊಡುವುದಕ್ಕೆ ಮುಂಚೆ ಎಷ್ಟು ಪ್ರಮಾಣದಲ್ಲಿ ಕೊಡಬೇಕು. ಎಷ್ಟು ಪ್ರಮಾಣದಲ್ಲಿ ಕೊಡಬಾರದು. ನಮ್ಮ ಜನರಿಗೆ ಎಷ್ಟು ಬೇಕಾಗುತ್ತದೆ ಎಂಬುದನ್ನೆಲ್ಲಾ ನೋಡಬೇಕಾಗುತ್ತದೆ. ಈಗಾಗಲೇ ೧೯೨೪ನೇ ಇಸವಿಯ ಒಪ್ಪಂದದ ಪ್ರಕಾರ ತಮಗೆ ಸಾಕಷ್ಟು ನೀರು ಕಾವೇರಿಯಿಂದ ಸಿಗದ ಕಾರಣ ಪಂಚಾಯಿತಿಗೆ ಹೋಗೋಣ ವೆಂದು ತಮಿಳುನಾಡಿನವರು ಹೇಳುತ್ತಿದ್ದಾರೆ, ಆದ್ದರಿಂದ ಇವರು ಹೇಳಿದ್ದು ತಮಗೆ ಅರ್ಥವಾಗಲಿಲ್ಲವೆಂದರೆ......

ಶ್ರೀ ಎಂ. ರಘುಪತಿ.—ಇದಕ್ಕೆ ಸಂಬಂಧ ಪಟ್ಟ ಡಾಕ್ಯುಮೆಂಟ್ಸ್ ಏನೇನು ಇದೆಯೋ ಅದನ್ನೆಲ್ಲಾ ಕೊಡಲಿ, ಅದರ ಮೇಲೆ ಚರ್ಚೆ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.—ಈಗಾಗಲೇ ಅವರು ಅಂಕಿಅಂಶಗಳನ್ನು ಕೊಟ್ಟು ಬಹಳ ಸೀರಿಯಸ್ ಆಗಿ ಹೇಳಿದ್ದಾರೆ.

ಶ್ರೀ ಎಂ. ರಘುಪತಿ.—ನಮ್ಮ ರಾಜ್ಯಕ್ಕೆ ಇದರಿಂದ ಯಾವ ವಿಧವಾದ ದಕ್ಕೆಯೂ ಆಗಿಲ್ಲ ವೆಂಬ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಮುಖ್ಯ ಮಂತ್ರಿಗಳಿಗಿಂತ ಮೊದಲು ನೀವೆ ಉತ್ತರ ಕೊಡುತ್ತಿದ್ದೀರಿ.

ಶ್ರೀ ಕೆ. ಹೆಚ್. ರಂಗನಾಥ್.—ಕೃಷ್ಣಾ ಅವಾರ್ಡ್‌ನಿಂದ ನಮ್ಮ ರಾಜ್ಯಕ್ಕೆ ಬಂದಿರುವಂತಹ ನೀರಿನ ಪ್ರಮಾಣವೆಷ್ಟೆಂಬುದನ್ನು ಮಾನ್ಯ ಮಂತ್ರಿಗಳು ಹೇಳುತ್ತಾರೆಯೋ ?

ಶ್ರೀ ಎಂ. ರಘುಪತಿ.—ನೀವೂ ಸಹ ಮಂತ್ರಿಗಳಾಗಿದ್ದೀರಿ. ಆದ್ದರಿಂದ ನೀವೇ ಹೇಳಿ

ಶ್ರೀ ಕೆ. ಹೆಚ್. ರಂಗನಾಥ್.—ಸುಮ್ಮನೆ ತಾವು ಮಕ್ಕಳಾಡಿದಂತೆ ಏತಕ್ಕೆ ಆಡುತ್ತೀರಿ ? ಮುಖ್ಯ ಮಂತ್ರಿಗಳಿಗೆ ಎಲ್ಲಾ ಗೊತ್ತಿದೆ, ಅವರು ಹೇಳುತ್ತಾರೆ. ನೀವು ಏತಕ್ಕೆ ಸುಮ್ಮನೆ ಕುಳಿತು ಎದ್ದೇಳುತ್ತೀರಿ ?

ಶ್ರೀ ಎಂ. ರಘುಪತಿ.—ತಮ್ಮ ಹಾಗೆ ನಾನು ಎದ್ದು ಕುಳಿತುಕೊಳ್ಳುವುದಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ನಾನು ಕೂಡ ಇವರು ಹೇಳಿದ್ದನ್ನು ಗಮನವಿಟ್ಟು ಕೇಳಿದೆ. ಶ್ರೀ ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿದ್ದಾಗ ಮದ್ರಾಸ್‌ಗೆ ಕುಡಿಯಲು ೫ ಟಿ. ಎಂ. ಸಿ. ಎಫ್ ಟಿ. ಯಷ್ಟು ನೀರನ್ನು ಕೊಡಬೇಕೆಂಬ ವಿಚಾರ ಇಲ್ಲಿ ಬಂದಾಗ, ಕೊಡಬಹುದೆಂದು ಹೇಳಿದಂಥ ವಿಚಾರ ದಾಖಲೆಯಲ್ಲಿದೆ. ಆದರೆ ಈಗ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ನೀರು ಹೋಗುತ್ತಿದೆ ಎಂದು ಇವರು ಹೇಳಿದ್ದನ್ನು ಕೇಳಿ ನನಗೆ ಆಶ್ಚರ್ಯವಾಯಿತು. ಈ ವಿಚಾರದಲ್ಲಿ ಮುಖ್ಯ ಮಂತ್ರಿಗಳಿಗೆ ಏನಾದರೂ ಗೊತ್ತಿಲ್ಲದಿದ್ದರೆ ತಾವು ಅವರ ಸಹಾಯಕ್ಕೆ ಬೇಕಾದರೆ ಬನ್ನಿ. ಆದರೆ ತಾವು ಇಲ್ಲಿ ರಸ್ತೆಯಲ್ಲಿ ಮಾತನಾಡಿದಂತೆ ಏತಕ್ಕೆ ಮಾತನಾಡುತ್ತೀರಿ ?

ಶ್ರೀ ಎಂ. ರಘುಪತಿ.—ತಮಗೆ ಆ ಅಭ್ಯಾಸವಿರಬಹುದು. ಆದರೆ ನಾನು ಆ ರೀತಿ ಮಾತ ನಾಡುವುದಿಲ್ಲ.

ಶ್ರೀ ಎಸ್, ಬಂಗಾರಪ್ಪ,—ಮಾನ್ಯ ಮಂತ್ರಿಗಳು ಇನ್‌ಫರಮೇಷನ್ ಮಿನಿಸ್ಟರ್ ಆಗಿರುವುದರಿಂದ ಅವರಿಗೆ ಮೂರು ಪ್ರಪಂಚಗಳೂ ಗೊತ್ತು ಎನ್ನುವಂತೆ ಮತ್ತು ವಿರಾಟಸ್ವರೂಪದಂತೆ ಹೇಳುತ್ತಿದ್ದಾರೆ. ಆದರೆ ಅವರು ಆ ರೀತಿ ತಿಳಿದುಕೊಂಡಿರುವುದು ಸರಿಯಲ್ಲ.

ಶ್ರೀ ಎಂ. ರಘುಪತಿ.—ಇದು ಏನು ಬಹಳ ಲಘುವಾಗಿ ಕಾಣುವಂತಹ ವಿಚಾರವಲ್ಲ. ಬಗ್ಗೆ ನಾನು ಒಂದು ತಿಂಗಳಿನಿಂದ ಅಭ್ಯಾಸ ಮಾಡಿದ್ದೇನೆ I am raising a very serious issue De not laugh. I never wanted to raise the issue unless it is well founded,

ಪಲ್ಲಿಸಿಂಗ್ ಕಾಮಿಷನ್‌ಲ್ಲಿರುವಂತಹ ಪರಿಣತರ ಜೊತೆಯಲ್ಲಿ ಹಾಗೂ ವಿಶ್ವಬ್ಯಾಂಕ್‌ಗೆ ಸಲಹೆಗಾರರಾಗುವಂತಹ ಜನರ ಜೊತೆಯಲ್ಲಿ ನಾನು ಈಗ ಗಂಟೆ ಗಟ್ಟಲೇ ಚರ್ಚೆ ಮಾಡಿದ್ದೇನೆ. ಆದ್ದರಿಂದ ಲಘುವಾಗಿ ಇದರಲ್ಲಿ ಏನೋ ಆಗಿದೆ ಎಂದು ಹೇಳುವ ವಿಚಾರವಲ್ಲ. ಸಾಕಷ್ಟು ಆಲೋಚನೆ ಮಾಡಿದ ನಂತರ ಈ ವಿಚಾರ ಹೇಳುತ್ತಿದ್ದೇನೆ. ಇದನ್ನು ತಾವು ಸಾವಧಾನವಾಗಿ ಕೇಳುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಏನೋ ಒಂದು ಮಾತನಾಡಬೇಕೆಂದು ಬಂದಿರುವವರು ನಾವಲ್ಲ. ತಾವು ಇಲ್ಲಿ ಏನಾದರೂ ಮಾತನಾಡುವುದಕ್ಕೆ ಮೊದಲು ದಿನಗಟ್ಟಲೇ ಅಭ್ಯಾಸ ಮಾಡಿರುತ್ತೇವೆ. ವಿಚಾರಗಳನ್ನು ತಿಳಿದುಕೊಳ್ಳದೆ ಇಲ್ಲಿ ಏನನ್ನೂ ಹೇಳುವುದಿಲ್ಲ. ಇದಕ್ಕೆ ಸಂಬಂಧಪಟ್ಟ ಎಲ್ಲಾ ಪುಸ್ತಕಗಳು ನನ್ನ ಹತ್ತಿರ ಇವೆ. ಇದರ ಪ್ರತಿಗಳು ತಮ್ಮ ಹತ್ತಿರ ಇಲ್ಲದಿದ್ದರೆ ನಾನು ಕಳುಹಿಸಿಕೊಡುತ್ತೇನೆ.

ಚೇರ್‌ಮನ್.—ನೀವು ನನ್ನ ಕಡೆ ತಿರುಗಿಕೊಂಡು ಮಾತನಾಡಿ.

ಶ್ರೀ ಎಂ, ವೀರಪ್ಪಮೊಯ್ಲಿ.—ನಾನು ಹೇಳಿದ್ದನ್ನು ನೀವು ಅರ್ಥ ಮಾಡಿಕೊಂಡಿದ್ದೀರಿ. ಆದ್ದರಿಂದ ಬೇರೆಯವರನ್ನು ಕನ್‌ವಿನ್ಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ,

ಚೇರ್‌ಮನ್.—ನೀವು ನನ್ನ ಮೂಲಕ ಸರ್ಕಾರಕ್ಕೆ ಹೇಳಿ.

ಶ್ರೀ ಎಂ. ವೀರಪ್ಪಮೊಯ್ಲಿ —ಈ ಕೃಷ್ಣಾ ರಿವರ್ ಡಿಸ್‌ಪ್ಯೂಟ್‌ನಲ್ಲಿ ಆಂಧ್ರಕ್ಕೆ ೮೦೦ ಟಿ, ಎಂ. ಸಿ. ಎಫ್. ಟಿ., ಕರ್ನಾಟಕ್ಕೆ ೭೦೦ ಟಿ. ಎಂ. ಸಿ. ಎಫ್, ಟಿ. ಮಹಾರಾಷ್ಟ್ರ ೫೬೦ ಟಿ. ಎಂ, ಸಿ. ಎಫ್. ಟಿ, ಯಷ್ಟು ನೀರು ಅಲಾಟ್ ಆಗಿದೆ. ಇದರ ಒಟ್ಟು ಪ್ರಮಾಣ ೨೦೬೦ ಟಿ.ಎಂ.ಸಿ ಎಫ್ ಟಿ ಇದರಲ್ಲಿ ಡಿಫೆಂಡಬಲ್ ೭೫ ಪರ್ಸೆಂಟ್. ೭೪೯ ಟಿ. ಎಂ.ಸಿ.ಎಫ್.ಟಿ ಯಷ್ಟು ನೀರನ್ನು ಆಂಧ್ರ ಪ್ರದೇಶ ಈಗಾಗಲೇ ಉಪಯೋಗಿಸುತ್ತಿವೆ, ಹಾಗೂ ಅದು ಪ್ರೊಟೆಕ್ಟೆಡ್ ಯೂಸ್‌ನಲ್ಲಿದೆ ಈ ವಿಚಾರವನ್ನು ಮಾನ್ಯ ರಘುಪತಿಯವರು ಸ್ವಲ್ಪ ಗಮನವಿಟ್ಟು ಕೇಳಬೇಕು. ಶ್ರೀಶೈಲಂಪ್ರಾಜೆಕ್ಟ್‌ನಲ್ಲಿ ವ್ಯಾಪರೇಷನ್ ಲಾಸ್ ೩೩ ಟಿ.ಎಂ.ಸಿ.ಎಫ್.ಟಿ. ಯಷ್ಟು ಇದೆ ೧೭ ಟಿ.ಎಂ.ಸಿ ಎಫ್,ಟಿ. ಯಷ್ಟು ನೀರನ್ನು ಉಪಯೋಗ ಮಾಡುವಂತಹ ಜೊರಾಲ ಸ್ಟೇಜ್-ಒನ್ ಪ್ರಾಜೆಕ್ಟ್ ಕೆಲಸ ಮುಗಿದ ನಂತರ ಆಂದ್ರದವರು ಕೃಷ್ಣಾ ಬೇಸನ್‌ನಲ್ಲಿ ಮತ್ತೆ ನೀರನ್ನು ಉಪಯೋಗ ಮಾಡುವುದಕ್ಕೆ ಅವಕಾಶವಿಲ್ಲ. ಆದರೂ ಅವರು ಹೊಸ ಪ್ರಾಜೆಕ್ಟ್ ಕೆಲಸ ತೆಗೆದುಕೊಂಡಿದ್ದಾರೆ ಶ್ರೀ ಶೈಲಂ ರೈಟ್ ಬ್ಯಾಂಕ್ ಚಾನಲ್ ಕೆಲಸಕ್ಕೆ ಮಂಜೂರಾತಿ ಕೊಟ್ಟಿದ್ದಾರೆ. ಗೋಧಾವರಿ ನೀರನ್ನು ಡೈವರ್ಟ್ ಮಾಡಿದರೆ ಆಂದ್ರಕ್ಕೆ ೮೦ ಟಿ.ಎಂ.ಸಿ.ಎಪ್.ಟಿ. ಯಲ್ಲಿ ೪೫ ಟಿ.ಎಂ.ಸಿ.ಎಪ್.ಟಿ. ಯಷ್ಟು ಸಿಗುತ್ತದೆ. ಈ ನೀರನ್ನು ಅವರು ಬೇಕಾದರೆ ಉಪಯೋಗ ಮಾಡಿಕೊಳ್ಳಲಿ. ಆದರೆ ಅವರು ಈ ಕೆಲಸ ಮಾಡಲು ಹೋಗುತ್ತಿಲ್ಲ. ಆದರೆ ಅವರು ತೆಲುಗು ಗಂಗಾ ಪ್ರಾಜೆಕ್ಟ್ ಕೆಲಸವನ್ನು ಕೈಗೊಂಡಿದ್ದಾರೆ. ನಾವೇನಾದರೂ ನಮ್ಮ ಪಾಲಿನ ನೀರನ್ನು ೨೦೦೦ ಎ. ಡಿ. ಒಳಗಾಗಿ ಉಪಯೋಗಿಸಿಕೊಳ್ಳದಿದ್ದರೆ ಆಂದ್ರದವರೇ ಉಪಯೋಗ ಮಾಡಿಕೊಳ್ಳುತ್ತಾರೆ. ಅಲ್ಲಿನ ರೈತರೇ ಕೃಷ್ಣಾ ನೀರನ್ನು ಬಳಸಿಕೊಂಡು ಬೆಳೆ ಬೆಳೆಯುತ್ತಾರೆ. ಆಗ ನಮಗೇನೂ ಉಳಿಯುವುದಿಲ್ಲ. ಆದ್ದರಿಂದ ೨೦೦೦ ಎ. ಡಿ. ಒಳಗಾಗಿ ನಮ್ಮ ಪಾಲಿನ ನೀರನ್ನು ಉಪಯೋಗಿಸಿಕೊಳ್ಳುವುದರ ಬಗ್ಗೆ ನಾವು ಕ್ರಮ ಕೈಕೊಳ್ಳುವುದು ಒಳ್ಳೆಯದು, ಈಗ ಮಲಪ್ರಭಾ ಮತ್ತು ಘಟಪ್ರಭಾ ಪ್ರಾಜೆಕ್ಟ್‌ಗಳು ಮುಗಿಯಲು ಸಾಕಷ್ಟು ಸಮಯ ತೆಗೆದುಕೊಳ್ಳುತ್ತಿವೆ.

೭೦೦ ಟಿ. ಎಂ. ಸಿ. ಕರ್ನಾಟಕರಾಜ್ಯಕ್ಕೆ ನೀರು ಬಂದಿದೆ. ನಾವು ಉಪಯೋಗ ಮಾಡತಕ್ಕದ್ದು ೩೦೦ ರಿಂದ ೪೦೦ ಟಿ. ಎಂ ಸಿ. ಮಾತ್ರ, ಹೆಚ್ಚು ಎಂದರೆ ೫೦೦ ರಿಂದ ೬೦೦ ಟಿ. ಎಂ. ಸಿ. ನೀರನ್ನು ನಾವು ಉಪಯೋಗಮಾಡಿಕೊಳ್ಳಬಹುದು. ಅದಕ್ಕಿಂತ ಹೆಚ್ಚು ಉಪಯೋಗ ಮಾಡುವುದಕ್ಕೆ ಸಾಧ್ಯವಿಲ್ಲ. ನಾವು ಅಲ್ಲಿಗೆ ಜಾಸ್ತಿ ಖರ್ಚು ಮಾಡಿದರೂ ಅದರಿಂದ ಉಪಯೋಗ ಮಾಡಿಕೊಳ್ಳಲಿಕ್ಕೆ

ಖಂಡಿತವಾಗಿಯೂ ಸಾಧ್ಯವಿಲ್ಲ. ಆದ್ದರಿಂದ ಈ ನೀರನ್ನು ನಾವು ಉಪಯೋಗ ಮಾಡಿಕೊಳ್ಳಬೇಕಾದರೆ ಅದರ ಬಗ್ಗೆ ನಾವು ಖಂಡಿತವಾಗಿಯೂ ಜಾಗ್ರತೆಯನ್ನು ವಹಿಸಬೇಕಾಗುತ್ತದೆ. ಇಂಗ್ಲೀಷ್‌ನಲ್ಲಿ ಒಂದು ಗಾದೆ ಇದೆ, Water is like a women's virtue. Once lost, lost for ever. ಒಮ್ಮೆ ನೀರಿನ ಬಗ್ಗೆ ನಿದ್ರೆಹೋದರೆ ಕಷ್ಟ. ಅಂತರರಾಜ್ಯ ಕಾನೂನುಗಳಿವೆ. I am passing this list prepared by me to the Hon'ble Chief Minister. Let him go through it. ಆದ್ದರಿಂದ ಅದರ ಬಗ್ಗೆ ಬಹಳ ಜತನದಿಂದ ನಮ್ಮ ಹಕ್ಕನ್ನು ಉಳಿಸಿಕೊಳ್ಳತಕ್ಕಂತಹ ಒಂದು ವ್ಯವಸ್ಥೆಯನ್ನು ಮಾಡದೇ ಹೋದರೆ ನಂತರ ತೊಂದರೆಯಾಗುತ್ತದೆ. ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಬೇಗ ಕೆಲಸಕಾರ್ಯಗಳು ಆದರೆ ಧಾರವಾಡ ಜಿಲ್ಲೆ, ಬಿಜಾಪುರ ಜಿಲ್ಲೆ, ರಾಯಚೂರು ಜಿಲ್ಲೆ, ಗುಲ್ಬರ್ಗ ಜಿಲ್ಲೆಗಳಲ್ಲಿ ಜನರು ನೀರಿಗಾಗಿ ಕಾಯುತ್ತಿದ್ದಾರೆ. ನೀವು ಸರಿಯಾಗಿ ಕೆಲಸಮಾಡದ್ದರೆ, ಅವರಿಗೆ ಖಂಡಿತವಾಗಿಯೂ ಮೋಸಮಾಡಿದಂತಾಗುತ್ತದೆ. If you call for a meeting I am prepared to attend it. ನಾನು ಏತಕ್ಕೆ ಹೇಳಿದ್ದೇನೆಂದರೆ we will have to inform the Centre about this. We have to register our problems with the Government of India. ದಾಕ್ಷಿಣ್ಯಕ್ಕೆ ಬಲಿಯಾದರೆ ಮುಂದೆ ಏನೋ ಪರಿಣಾಮವಾಗುತ್ತದೆ. The people may protest. ಇದನ್ನು ನಾನು ಮಾಡಬಾರದಾಗಿತ್ತು ಎಂದು ಮುಂದೆ ತಾವು ಯೋಚನೆ ಮಾಡುವುದು ಬೇಡ. ಈಗ ಸರ್ಕಾರ ಇದೆ, ನೀವು ಎಲ್ಲಾ ಮಾಡಬಹುದು. ಇವತ್ತು ನೀವು ಅಧಿಕಾರದಲ್ಲಿರಬಹುದು, ಹಿಂದೆ ನಾವು ಅಧಿಕಾರದಲ್ಲಿ ಇದ್ದಿರಬಹುದು ಇವತ್ತು ನಾವು ಅಧಿಕಾರಕ್ಕೆ ಬಂದು ಹೋಗುವುದು ಮುಖ್ಯವಲ್ಲ. ಕರ್ನಾಟಕ ರಾಜ್ಯದಲ್ಲಿ ಬರಗಾಲಕ್ಕೆ ತುತ್ತಾಗಿ ಅವ್ಯಾಹತವಾಗಿ ಕಷ್ಟಪಡತಕ್ಕ ಜನರು ಇದ್ದಾರೆ. ಅವರ ಬೇಡಿಕೆಗಳನ್ನು ಈಡೇರಿಸಲಿಕ್ಕೆ ಸರ್ಕಾರ ಯಾವುದೇ ದಾಕ್ಷಿಣ್ಯಕ್ಕೆ ಒಳಗಾಗಬಾರದು, ಇದನ್ನು ಲಘುವಾಗಿ ತಿದುಕೊಳ್ಳಬಾರದೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ನೀವು ಯಾವುದೇ ದಾಕ್ಷಿಣ್ಯಕ್ಕೆ ಒಳಗಾದರೆ ನಾವು ಪ್ರೊಟೆಸ್ಟ್ ಮಾಡಬೇಕಾಗುತ್ತದೆ. ಯಾವುದೇ ರೀತಿಯಿಂದ ನೀರಿನ ಹಕ್ಕನ್ನು ಕಳೆದುಕೊಳ್ಳತಕ್ಕ ಕೆಲಸವನ್ನು ಈ ಸರ್ಕಾರ ಮಾಡಬಾರದೆಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮುಖ್ಯಮಂತ್ರಿಗಳು ರಾಜ್ಯದ ಹಿತಾಸಕ್ತಿಯ ಬಗ್ಗೆ ಹೆಚ್ಚು ಆಸಕ್ತಿಯನ್ನು ವಹಿಸಬೇಕು. ಮಾನ್ಯಮುಖ್ಯಮಂತ್ರಿಗಳ ಪ್ರವಾಸ ಕಾರ್ಯಕ್ರಮದ ಬಗ್ಗೆ ನಾನು ಸ್ವಲ್ಪ ನೋಡಿದ್ದೇನೆ. ಅವರ ಪ್ರವಾಸ ರಾಜ್ಯದಲ್ಲಿ ಹೆಚ್ಚಾಗಬೇಕು. ಹೊರ ರಾಜ್ಯಗಳ ಪ್ರವಾಸ ಸ್ವಲ್ಪ ಕಡಿಮೆಯಾಗಬೇಕು. ರಾಜ್ಯದಲ್ಲಿ ಅನೇಕ ಯೋಜನೆಗಳು ಇವೆ.

ಶ್ರೀ ಪಿ. ರಾಂದೇವ್.— ಹೆಲಿಕಾಪ್ಟರ್‌ನಲ್ಲಿ ಹೋಗಬೇಕೆಂದು ಹೇಳುತ್ತಿದ್ದೀರಾ ?

ಶ್ರೀ ಎಂ ವೀರಪ್ಪಮೊಯಿಲಿ.— ಹೆಲಿಕಾಪ್ಟರ್‌ನಲ್ಲಿ ಹೋಗುವುದು ಬೇಡ, ಕಾರಿನಲ್ಲೆ ಹೋಗಿ. ಗ್ರಾಮಾಂತರ ಪ್ರದೇಶಗಳಿಗೆ ಹೋಗಿ, ಯಾವ ತರಹ ಕಾರ್ಯಕ್ರಮಗಳನ್ನು ಜಾರಿಗೆ ತರುತ್ತಿದ್ದಾರೆಂದು ಮುಖ್ಯಮಂತ್ರಿಗಳು ನೋಡಬೇಕು.

ಶ್ರೀ ಎಂ. ರಘುಪತಿ.— ಹಿಂದಿನ ಮುಖ್ಯಮಂತ್ರಿಗಳಾದ ಗುಂಡೂರಾಯರ ಪ್ರೋಗ್ರಾಮ್‌ಗಳನ್ನು ನಾನು ತರಿಸಿ ಕೊಡಲೇ ?

SRI M. VEERAPPA MOILY.—You have also accompanied him in his tours. Who has arranged felicitation programmes ?

ಶ್ರೀ ಎಂ. ರಘುಪತಿ.— ಯಾರು ಕರೆದಿದ್ದವರು ?

ಶ್ರೀ ಎಂ. ವೀರಪ್ಪಮೊಯಿಲಿ.— ನೀವು ಈ ಕೆಲಸ ಬಿಡಿ, ಸರಿಯಾಗಿ ಕೆಲಸಮಾಡಲಿಕ್ಕೆ ತಯಾರಾಗಿ. ಮಾನ್ಯ ಗುಂಡೂರಾಯರ ಹೆಸರನ್ನು ಹೇಳಲಿಕ್ಕೆ ನಿಮಗೆ ಯಾವ ಅಧಿಕಾರವೂ ಇಲ್ಲ.

ಶ್ರೀ ಎಂ, ರಘುಪತಿ,— ಮಾನ್ಯ ಗುಂಡೂರಾಯರು ಅಧಿಕಾರದಲ್ಲಿದ್ದಾಗ ನಾವು ಅವರನ್ನು ವಿರೋಧ ಮಾಡಿಕೊಂಡು ಬಿಟ್ಟಿದ್ದೇವೆ. ಬಂಗಾರಪ್ಪನವರನ್ನು ಕೇಳಿ.

ಶ್ರೀ ಎಸ್ ಬಂಗಾರಪ್ಪ.— ನಮಗೆ ಗೊತ್ತಿಲ್ಲ, ನೀವು ನಮ್ಮ ಹೆಸರು ತೆಗೆದುಕೊಂಡು ಉದಾಹರಣೆ ಕೊಟ್ಟರೆ ಚೆನ್ನಾಗಿದೆ. ನೀವು ಗುಂಡೂರಾಯರು ಅನೇಕ ವರ್ಷಗಳಿಂದ ಸ್ನೇಹಿತರು. ಅವರ ಕಾಲದಲ್ಲಿ ಏನೇನು ಮಾಡಿದ್ದೀರಿ, ನಾನು ಕಾಂಗ್ರೆಸ್ಸಿಗೆ ಲೇಟಾಗಿ ಬಂದವನು. ಅದಕ್ಕಿಂತಲೂ ಮೊದಲು ಇದ್ದವರು ನೀವು. ಅಲ್ಲಿ ಏನೇನು ವ್ಯವಹಾರ ನಡೆದಿದೆ, ಕೊನೆಯಲ್ಲಿ ಬಂದವನಿಗೆ ಏನು ಗೊತ್ತಿದೆ ?

ಶ್ರೀ ಎಂ. ರಾಮಪ್ಪ.— ಗುಂಡೂರಾಯರ ಜೊತೆಯಲ್ಲಿದ್ದಾಗ ಚಾಕು, ಚೂರಿ, ಚೈನುಗಳನ್ನು ನೋಡಿ ಕೊನೆಗೆ ಚಾಕು ಹಾಕಿ ಬಂದುಬಿಟ್ಟರು.

ಶ್ರೀ ಎಂ. ರಘುಪತಿ.— ಚಾಕು, ಚೂರಿ, ಚೈನು ಇವುಗಳ ಬಗ್ಗೆ ನಾನು ಕಾಂಗ್ರೆಸ್ (ಐ)ನಲ್ಲಿ ಇದ್ದಾಗಲೂ ವಿರೋಧ ಮಾಡಿದ್ದೇನೆ. ನಾನು ಸದನದಲ್ಲಿ ಮಾತನಾಡಿರತಕ್ಕ ದಾಖಲೆಗಳು ಇವೆ ಚರ್ಚೆ ಮಾಡುವುದಕ್ಕೆ ಬೇಕಾದರೆ ಇಡುತ್ತೇನೆ.

ಶ್ರೀ ಜೆ. ಡಿ. ಸೋಮಪ್ಪ.— ಮಂತ್ರಿ ಮಾಡದೇ ಇರುವುದಕ್ಕೆ ವಿರೋಧ ಮಾಡಿದ್ದುದು. ನಿಜ ಮಂತ್ರಿ ಮಾಡಲಿಲ್ಲವೆಂದು ವಿರೋಧ ಮಾಡಿದ್ದು ನಿಜ ತಾನೇ ?

ಶ್ರೀ ಎಂ. ರಘುಪತಿ.— ಹೌದು ಎಂದು ಹೇಳುತ್ತೇನೆ.

ಶ್ರೀ ಜೆ. ಡಿ. ಸೋಮಪ್ಪ.— ನಾವು ಎಲ್ಲಾ ಒಟ್ಟಿಗೆ ಇದ್ದವರು.

ಶ್ರೀ ಎಂ. ರಘುಪತಿ.— ಮಾನ್ಯ ಅರಸ್‌ರವರನ್ನು ಬಿಟ್ಟಾಗ ನಾನು ಚೂರಿ ಹಾಕಲಿಲ್ಲ. ನಾನು ಗುಂಡೂರಾಯರನ್ನು ಬಿಟ್ಟಾಗ ಅವರು ಮುಖ್ಯಮಂತ್ರಿಗಳಾಗಿದ್ದಾಗ ಬಿಟ್ಟಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.— ಯಾವಾಗ, ಯಾರು, ಎಲ್ಲಿ, ಇರುತ್ತಾರೆ ಎಂದು ಹೇಳುವುದೇ ಕಷ್ಟವಾಗಿದೆ. ನಾಳೆ ಇಲ್ಲಿರಬಹುದು, ಈಗ ಅಲ್ಲಿರಬಹುದು ಒಟ್ಟಿನಲ್ಲಿ ಯಾವಾಗ ಯಾರ್ಯಾರು ಎಲ್ಲೆಲ್ಲ ಇರುತ್ತಾರೆಂದು ಗೊತ್ತಾಗುವುದಿಲ್ಲ.

Sri S. BANGARAPPA.— Pure Janatha Party. ?

ಶ್ರೀ ಎಂ. ಎಸ್. ಕೃಷ್ಣನ್.— ಹಾಗಾದರೆ ಜನತಾ ಪಕ್ಷ ಪ್ಯೂರ್ ಅಲ್ಲವೇ ?

ಶ್ರೀ ಎಂ ರಘುಪತಿ.— ಸೋಸಿಯಲಿಸ್ಟ್, ಕಾಂಗ್ರೆಸ್ (ಐ), ಕ್ರಾಂತಿರಂಗ ಮತ್ತೆ ಕಾಂಗ್ರೆಸ್ (ಐ)ಗೆ ಹೋಗಬಹುದೆನೋ ಗೊತ್ತಿಲ್ಲ.

ಶ್ರೀ ಎಸ್. ಬಂಗಾರಪ್ಪ.— ರಘುಪತಿಯವರು ಎಲ್ಲರಿಗಿಂತ ಮೊದಲು ಇರುತ್ತಾರೆ. ಮುಂದೆ ಏನಾದರೂ ಬದಲಾವಣೆಯಾದರೆ ಎಲ್ಲರಿಗಿಂತ ಮೊದಲೇ ಇಲ್ಲಿ ಇರುತ್ತಾರೆ.

ಶ್ರೀ ಎಂ. ರಘುಪತಿ.— ಜನತೆ ನಮ್ಮಿಂದ ವಚನ ತೆಗೆದುಕೊಂಡಿದ್ದಾರೆ. ನಾವು ಯಾವ ಚಿನ್ಹೆಯಿಂದ ಗೆದ್ದುಬಂದಿದ್ದೇವೆಯೋ ಆ ಚಿನ್ಹೆಯನ್ನು ಬಿಡುವಹಾಗೆ ಇಲ್ಲ. ನಾನು ಸಿಂಬಲ್ ಬಿಡುವುದಾದರೆ ಶಾಸನಸಭೆಯಲ್ಲಿ ಹೇಳುತ್ತಿದ್ದೇನೆ ರಾಜೀನಾಮೆ ಕೊಟ್ಟು ಹೋಗುತ್ತೇನೆ. ಹಾಗೆಯೇ ಹೋಗುವುದಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.— ಸುಲಭವಾಗಿ ಬರುತ್ತೀರಿ, ಬಹಳ ಕಷ್ಟದಲ್ಲಿ ರಾಜೀನಾಮೆ ಕೊಡುವಂತಹ ಪ್ರಸಂಗ ಮಾಡಿಕೊಳ್ಳಬೇಡಿ. I have become wiser in politics. ಇವರು ಮೊನ್ನೆ ಮೊನ್ನೆಯವರೆಗೂ ಗುಂಡೂರಾಯರ ಜೊತೆಯಲ್ಲಿದ್ದರು. ಅವರ ಬೆನ್ನುಹಿಂದೆ ಹೋಗುತ್ತಿದ್ದರು. ವಿರೋಧಪಕ್ಷದಲ್ಲಿದ್ದಾಗಲೂ ಸಹ ಚೀಟಿ ಕಳುಹಿಸುತ್ತಿದ್ದರು ನಾನು ಗುಂಡೂರಾಯರಿಗೆ ಇವರುಗಳ ಮಾತು ಕೇಳಬೇಡಿ ಎಂದು ಕೇಳಿದ್ದೇನೆ. ಯಾವ ಸಂದರ್ಭದಲ್ಲಿ ತಾವು ಎಲ್ಲಿ ಇರುತ್ತೀರಿ ಎಂದು ಹೇಳುವುದಕ್ಕೆ ಆಗುವುದಿಲ್ಲ. ನೀವು ಇಲ್ಲಿಗೆ ಈಗ ಬಂದರೆ ನಾನು ನಿಷ್ಠೂರ ಕಟ್ಟಿಕೊಳ್ಳಬೇಕಾಗುತ್ತದೆ.

ಛೇರ್ಮನ್.— Please come to the point.

SRI M. VEERAPPA MOILY.— I have become wiser in politics. I want to be friendly with Mr. Raghupathi.

ಶ್ರೀ ಎಂ. ರಘುಪತಿ.— Personally, I have nothing against you. ನಿಮ್ಮ ಬಗ್ಗೆ ನಾನು ಹೇಳುವುದಿಲ್ಲ, ನೀವು ಒಂದೇ ಕಡೆ ಇದ್ದವರು, ನಿಮ್ಮ ಬಗ್ಗೆ ನಾನು ಎಂದೂ ಮಾತನಾಡು ವುದಿಲ್ಲ. ನನಗೆ ಗೊತ್ತಿದೆ ಯಾರ್‌ಯಾರು ಎಲ್ಲಿದ್ದರು ಎಂಬುದು.

— ಮಾನ್ಯ ಮೊಯಿಲಿಯವರೆ ನೀವು ಬೇಗ ಮುಗಿಸಿ.

ಶ್ರೀ ಎಂ. ವೀರಪ್ಪಮೊಯಿಲಿ.— ಬಗಲ್ ಮೇ ದುಶ್ಮನ್, ಇದ್ದಹಾಗೆ.

ಶ್ರೀ ಎಂ. ರಾಮಪ್ಪ.— ಮಿರ್‌ಸಾದಕರು.

ಶ್ರೀ ಎಂ. ರಘುಪತಿ.— ನಾನು ಆ ಕೆಲಸ ಮಾಡಿಲ್ಲ. ಯಾವತ್ತೂ ಮಾಡುವುದಿಲ್ಲ.

ಶ್ರೀ ವಿ. ಎಸ್. ಆಚಾರ್ಯ.— ಇದು ಯಾವ ಡಿಮಾಂಡ್‌ಮೇಲೆ ಚರ್ಚೆ ? ಮಾನ್ಯ ವೀರಪ್ಪ ಮೊಯಿಲಿಯವರು ಕೃಷ್ಣಾ ನೀರಿನ ಬಗ್ಗೆ ಬಹಳ ಗಂಭೀರವಾದ ವಿಷಯಗಳನ್ನು ಹೇಳುತ್ತಿದ್ದರು ಅದರ ಬಗ್ಗೆ ಏನು ಹೇಳುತ್ತಾರೆಂಬುದನ್ನು ಕೇಳಬೇಕು.

ಮಾನ್ಯ ಅಧ್ಯಕ್ಷರೇ ಮಾನ್ಯ ರಘುಪತಿಯವರು ಆ ರೀತಿ ಮಾತನಾಡುವುದು ಸರಿಯಲ್ಲ.

ಛೇರ್ಮನ್,—ಮಾನ್ಯ ಸದಸ್ಯರು ದಯವಿಟ್ಟು ಪಾಯಿಂಟ್‌ಗೆ ಬಂದರೆ ಒಳ್ಳೆಯದು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸನ್ಮಾನ್ಯ ಮುಖ್ಯ ಮಂತ್ರಿಗಳು ಯಾವಾಗಲೂ ಪತ್ರಿಕೆಗಳಲ್ಲಿ ಸ್ಟೇಟ್‌ಮೆಂಟನ್ನು ಕೊಡುವುದು ನೋಡಿದರೆ ಕರ್ನಾಟಕ ರಾಜ್ಯದ ಜನತೆಯನ್ನು ಇನ್ನೆಷ್ಟು ಪ್ರಗತಿಪರ ವಾದಂಥ ಮಾರ್ಗದಲ್ಲಿ ಕೊಂಡೊಯ್ಯುತ್ತಾರೋ ಎನ್ನುವ ಮಾತನ್ನು ಹೇಳುತ್ತಾರೆ. ಆದರೆ ಇದು ವರೆಗೂ ಯಾವ ಕೆಲಸವನ್ನು ಕೂಡ ಮಾನ್ಯ ಮಂತ್ರಿಗಳು ಮಾಡಿಲ್ಲವೆಂದು ನಾನು ಹೇಳುತ್ತೇನೆ. ಅವರ ಪ್ರಗತಿಯ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಗಮನ ಕೊಟ್ಟಿಲ್ಲವೆಂದು ತಿಳಿಯೋಣವೇ ? ಆದ್ದರಿಂದ ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಕರ್ನಾಟಕ ಜನತೆಯ ಪ್ರಗತಿ ಗಾಗಿ ದುಡಿಯಬೇಕಾದರೆ ಕರ್ನಾಟಕದ ಮೂಲೆ ಮೂಲೆಯನ್ನು ಸಹ ಸುತ್ತಬೇಕು. ಅದು ಬಿಟ್ಟು ಇವರು ಯಾವಾಗಲೂ ರಾಜ್ಯದ ಹೊರಗಡೆ ಹೆಚ್ಚು ಟೂರ್ ಮಾಡಿದ್ದಾರೆ. ಇವರು ಅಧಿಕಾರಕ್ಕೆ ಬಂದ ಮೇಲೆ ರಾಜ್ಯದಲ್ಲಿ ಎಷ್ಟು ದಿವಸ ಸುತ್ತಿದ್ದಾರೆ ಮತ್ತು ರಾಜ್ಯದಿಂದ ಹೊರಗಡೆ ಎಷ್ಟು ದಿವಸ ಸುತ್ತಿ ದ್ದಾರೆಂದರೆ ೧೦-೧-೯೮೩ ರಿಂದ ೪-೯-೯೮೩ರ ವರೆಗೆ ನಾವು ನೋಡುವುದಾದರೆ ೪೨ ದಿವಸಗಳು ಮಾತ್ರ ರಾಜ್ಯದಲ್ಲಿ ಟೂರ್ ಮಾಡಿದ್ದಾರೆ. ಮತ್ತೆ ಹೊರಗಡೆ ೬೪ ದಿವಸ ಟೂರ್ ಮಾಡಿದ್ದಾರೆ. ಮತ್ತೆ ಬೆಂಗಳೂರಿನಲ್ಲಿ ಕೇವಲ ೧೮ ದಿವಸಗಳು ಮಾತ್ರ ಉಳಿದುಕೊಂಡಿದ್ದಾರೆ. ಆದ್ದರಿಂದ ನಾನು ಹೇಳುವುದೇನೆಂದರೆ ರಾಜ್ಯದ ಹೊರಗಡೆ ಹೆಚ್ಚು ಟೂರ್ ಮಾಡಿದರೆ ನಮ್ಮ ರಾಜ್ಯದ ಪ್ರಗತಿಯನ್ನು ತಾವು ಯಾವ ರೀತಿಯಲ್ಲಿ ಸಾಧನೆ ಮಾಡುತ್ತೀರಿ ? ಆದ್ದರಿಂದ ಮಾನ್ಯ ಮಂತ್ರಿಗಳು ಬರೀ ಪ್ಲಾಟ್ ಫಾರಂನಲ್ಲಿ ಮಾತ್ರ ಭಾಷಣ ಮಾಡಿದ್ದಾರೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತು ತಾವು ಯಾವಾಗಲೂ ಪ್ಲಾಟ್‌ಫಾರಂನಲ್ಲಿ ಭಾಷಣ ಮಾಡುವುದು ಏನೆಂದರೆ ಕಾಂಗ್ರೆಸ್ ಸರ್ಕಾರ ನಮ್ಮ ಸರ್ಕಾರವನ್ನು ಉರುಳಿಸಲು ಪ್ರಯತ್ನ ಮಾಡುತ್ತಿದೆ ಎಂದು ಆದರೆ ತಾವು ಈಗ ಬಿ.ಜೆ.ಪಿ. ಪಕ್ಷದಿಂದ ಹೊಂದಾಣಿಕೆಯನ್ನು ಮಾಡಿಕೊಂಡಿದ್ದೀರಿ. ಅವರಿಗೆ ತಾವು ಮಂತ್ರಿ ಪದವಿಯನ್ನು ಕೊಡಲಿಲ್ಲ. ಎಲ್ಲಾ ತಾವೇ ಇಟ್ಟುಕೊಂಡಿದ್ದೀರಿ. ಬಿ.ಜೆ.ಪಿ.ಯವರಿಗೆ ಮಂತ್ರಿ ಪದವಿ ಕೊಟ್ಟಿದ್ದರೆ ನಮ್ಮ ಮಾನ್ಯ ಸದಸ್ಯರಾದಂಥ ಶ್ರೀಮಾನ್ ವಿ. ಎಸ್. ಆಚಾರ್‌ರವರಿಗೆ ಕೊಡಬೇಕಾಗಿತ್ತು. ಆದರೆ ತಾವು ಅವರಿಗೆ ಮಂತ್ರಿ ಪದವಿಯನ್ನು ಕೊಡಲಿಲ್ಲ. ಅವರಿಗೆ ಮಂತ್ರಿ ಪದವಿಯನ್ನು ಕೊಟ್ಟಿದ್ದರೆ ನಮ್ಮ ಜಿಲ್ಲೆ ಮುಂದೆ ಬರುವುದಕ್ಕೆ ಅವಕಾಶವಾಗುತ್ತಿತ್ತು. ಇವತ್ತು ನಾವೆಲ್ಲಾ ವಿರೋಧ ಪಕ್ಷದಲ್ಲಿರುವುದರಿಂದ ನಮ್ಮ ಜಿಲ್ಲೆ ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಈ ವಿಷಯದಲ್ಲಿ ಹಿಂದೆ ಬಿದ್ದಿದೆ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇವತ್ತು ನಮ್ಮ ಜಿಲ್ಲೆಯಲ್ಲಿ ಅಭಿವೃದ್ಧಿ ಕೆಲಸಕಾರ್ಯಗಳು ಸರಿಯಾಗಿ ನಡೆಯುತ್ತಿಲ್ಲ. ಕಾರಣವೇನೆಂದರೆ ಕ್ಯಾಬಿನೆಟ್‌ನಲ್ಲಿ ನಮ್ಮ ಜಿಲ್ಲೆಯ ಪರವಾಗಿ ಒಬ್ಬ ಮಂತ್ರಿ ಗಳು ಇದ್ದರೆ ಅಲ್ಲಿ ಅವರು ತಮ್ಮ ಜಿಲ್ಲೆಯ ಅಭಿವೃದ್ಧಿ ಕಾರ್ಯಗಳ ಬಗ್ಗೆ ಪ್ರಸ್ತಾಪ ಮಾಡಿ ಹೆಚ್ಚು ಹೆಚ್ಚು ಹಣವನ್ನು ಒದಗಿಸಿಕೊಡಬಹುದು. ಆದರೆ ಆ ಕೆಲಸ ಇವತ್ತು ನಡೆಯುತ್ತಿಲ್ಲ. ಆದ್ದರಿಂದ ನಾನು ಆ ಮಾತನ್ನು ಹೇಳಬೇಕಾಯಿತು ಅಷ್ಟೆ. ಆ ಬಗ್ಗೆ ನಾನು ಹೆಚ್ಚು ಮಾತನಾಡುವುದಿಲ್ಲ.

ಇನ್ನು ಜನತಾ ಸರ್ಕಾರ ಬಂದ ಮೇಲೆ ಎಷ್ಟು ಗೋಲಿಬಾರ್ ಮಾಡಿದ್ದಾರೆ. ಅದರ ಲೆಕ್ಕವನ್ನು ತರಿಸಿ ನೋಡಿದರೆ ಮಾತ್ರ ತಮಗೆ ಗೊತ್ತಾಗುತ್ತದೆ. ಚುನಾವಣೆಯ ಕಾಲದಲ್ಲಿ ಇವರು ಹೇಳಿದ್ದು ಏನೆಂದರೆ ನಾವು ಯಾವ ಸಂದರ್ಭದಲ್ಲಿಯಾದರೂ ಕೂಡ ಗೋಲಿಬಾರ್ ಮಾಡುವುದಿಲ್ಲವೆಂದು. ಆದರೆ ಇವತ್ತು ಲೆಕ್ಕವಿಲ್ಲದಷ್ಟು ಗೋಲಿಬಾರ್ ಮಾಡಿದ್ದಾರೆ. ಮತ್ತೆ ಚುನಾವಣೆಯ ಕಾಲದಲ್ಲಿ ಹೇಳಿದ್ದಾರೆ ಒಂದು ಹಳ್ಳಿಗೆ ೭೫ ಕೃಷಿಕ ಉತ್ಪಾದನಾ ಉದ್ಯೋಗಗಳನ್ನು ಸೃಷ್ಟಿ ಮಾಡುತ್ತೇವೆಂದು ಇದುವರೆವಿಗೂ ಯಾವ ಕಾರ್ಯಕ್ರಮವನ್ನು ಸಹ ಮಾಡಿಲ್ಲ. ಈ ದಿಸೆಯಲ್ಲಿ ಕೆಲಸ ಮಾಡುವಂಥ ಒಂದು ಲಕ್ಷಣವನ್ನೇ ನಾವು ೬ ತಿಂಗಳಿಂದ ಕಾಣುತ್ತಿಲ್ಲ. ಮತ್ತೆ ಚುನಾವಣೆಯ ಸಂದರ್ಭದಲ್ಲಿ ತಾವು ಹೇಳಿದ ಪ್ರಕಾರ ಭೂಮಿಗೆ ತಕ್ಕ ಪರಿಹಾರವನ್ನು ಎಂದರೆ ೮೦ ಪರ್ಸೆಂಟ್ ಪರಿಹಾರವನ್ನು ಸ್ಥಳದಲ್ಲಿಯೇ ಕೊಡುತ್ತೇವೆಂದು ಹೇಳಿದ್ದೀರಿ. ಆದರೆ ತಾವು ಇದುವರೆಗೂ ಯಾರಿಗೂ ಭೂಮಿಯ ಪರಿಹಾರವೇ ಕೊಟ್ಟಿಲ್ಲ. ಮತ್ತೆ ಉಳುವವನಿಗೆ ಭೂಮಿ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. ಯಾರಿಗೂ ಭೂಮಿಯನ್ನು ಇದು ವರೆಗೂ ಕೊಡಿಸಿಲ್ಲ. ಗೇಣಿ ವಸೂಲು ಮಾಡುವುದಿಲ್ಲವೆಂದು ಹೇಳಿದ್ದೀರಿ. ಆದರೆ ಗೇಣಿಯನ್ನು ಕೂಡ ವಸೂಲು ಮಾಡುತ್ತಿದ್ದೀರಿ. ಮತ್ತು ವಿಧವೆಯರಿಗೆ ಪರಿಹಾರ ಕೊಡುತ್ತೇವೆಂದು ಹೇಳಿದ್ದೀರಿ. ಯಾವ ವಿಧವೆಯರಿಗೆ ಪರಿಹಾರ ಕೊಟ್ಟಿದ್ದೀರಿ ! ಆದರೆ ತಾವು ಈ ವರ್ಷ ಕೂಡ ಬಡ್ಜೆಟ್‌ನಲ್ಲಿ ಈ ಬಾಬುಗಳಿಗೆ ಹಣ ಕೊಟ್ಟಿಲ್ಲ. ಆದರೆ ನಾನು ಒಟ್ಟಿನಲ್ಲ ಹೇಳುವುದಾದರೆ ತಾವು ಚುನಾವಣೆಯ ಕಾಲದಲ್ಲಿ ಜನತೆಗೆ ಏನೇನು ಭರವಸೆಗಳನ್ನು ಕೊಟ್ಟಿದ್ದೀರೋ ಆ ಎಲ್ಲಾ ಭರವಸೆಗಳನ್ನು ಬರೀ ಭರವಸೆಗಳಾಗಿಯೇ ಉಳಿದಿವೆ. ಯಾವುದನ್ನು ಕೂಡ ತಾವು ಈಡೇರಿಸುವ ಲಕ್ಷಣ ತಮ್ಮಲ್ಲಿ ಕಾಣುತ್ತಿಲ್ಲ. ಮತ್ತೆ ತಾವು ಚುನಾವಣೆಯ ಕಾಲದಲ್ಲಿ ರೈತರಿಗೆ ಕೊಟ್ಟಂತಹ ಭರವಸೆಗಳು ಈಗ ಜ್ಞಾಪಕದಲ್ಲಿ ಇವೆಯೋ ಅಥವಾ ಇಲ್ಲವೋ ಗೊತ್ತಿಲ್ಲ. ಕೆಲವರಿಗಂತೂ ರೈತರ ಕಷ್ಟ ಸುಖಗಳು ಏನು, ಯಾವ ರೀತಿಯಲ್ಲಿರುತ್ತವೆ ಎಂಬುದೂ ಕೂಡ ಗೊತ್ತಿರುವುದಿಲ್ಲ.

ಮತ್ತೆ ಅಗತ್ಯ ವಸ್ತುಗಳ ಬೆಲೆಗಳು ನಿಯಂತ್ರಣ ಮಾಡುವುದರಲ್ಲಿ ಜನತಾ ಸರ್ಕಾರ ಸಂಪೂರ್ಣ ವಾಗಿ ವಿಫಲಗೊಂಡಿದೆ. ತಾವು ಚುನಾವಣೆಯ ಸಂದರ್ಭದಲ್ಲಿ ಹೇಳಿದ ಹಾಗೆ ಇನ್ನು ೧೦ ವರ್ಷದಲ್ಲಿ ಎಲ್ಲಾ ಬಡಜನರಿಗೂ ಕೂಡ ಎರಡು ಜೊತೆ ಸಮವಸ್ತ್ರ ಕೊಡುವುದು. ಆದರೆ ಯಾರಿಗೂ ಈಗ ಒಂದು ಜೊತೆ ಬಟ್ಟೆಯನ್ನಾದರೂ ಕೊಟ್ಟಿಲ್ಲ. ಮತ್ತೆ ಕ್ಯಾಪಿಟೇಷನ್ ಫೀಜು ರದ್ದು ಮಾಡುವ ಬಗ್ಗೆ. ಈಗ ತಾವು ಕ್ಯಾಪಿಟೇಷನ್ ಫೀಜುರದ್ದು ಮಾಡಿರುವುದು ಕೇವಲ ಪರರಾಜ್ಯದ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಟ್ಟು ರಾಜ್ಯದ ವಿದ್ಯಾರ್ಥಿಗಳನ್ನು ಕೈಬಿಟ್ಟಿದ್ದೀರಿ. ಮತ್ತೆ ಕನ್ನಡವನ್ನು ಕಡ್ಡಾಯವಾಗಿ ಜಾರಿಗೆ ತರುವ ಬಗ್ಗೆ ಹೇಳುವುದಾದರೆ ನಮ್ಮ ರಾಷ್ಟ್ರದ ರಾಷ್ಟ್ರಕವಿ ಶ್ರೀ ಕುವೆಂಪುರವರು ಹೇಳಿದ್ದಾರೆ, ಜನತಾ ಸರ್ಕಾರದವರು ಮಾಡುತ್ತಿರುವ ಕೆಲಸ ವಂಚನೆಯ ಕೆಲಸವೆಂದು. ಆ ಒಂದು ಪಟ್ಟಿಯನ್ನು ಅವರು ತಮ್ಮ ತಲೆಗೆ ಕಟ್ಟಿದ್ದಾರೆ. ಮತ್ತೆ ಮಂತ್ರಿಗಳಾದವರು ಕೂಡಲೇ ತಮ್ಮ ಆಸ್ತಿಪಾಸ್ತಿಗಳ ವಿವರಗಳನ್ನು ಘೋಷಿಸಿಕೊಳ್ಳಬೇಕೆಂದು ಹೇಳಿದ್ದರು. ಆದರೆ ಇದುವರೆಗೂ ಯಾವ ಮಂತ್ರಿಯೂ ಕೂಡ ಆಸ್ತಿಪಾಸ್ತಿಗಳನ್ನು ಘೋಷಣೆ ಮಾಡಿಲ್ಲ. ಮೊನ್ನೆ ಮಾನ್ಯ ಮಂತ್ರಿಗಳು ಪ್ರಶ್ನೆಯೊಂದಕ್ಕೆ ಉತ್ತರ ಹೇಳುತ್ತಾ ಹೇಳಿದರು ಕೇವಲ ನಾಲ್ಕೈದು ಮಂತ್ರಿಗಳು ಮಾತ್ರ ವಿವರಗಳನ್ನು ಕೊಟ್ಟಿದ್ದಾರೆಂದು. ಆದರೆ ಇನ್ನು ಉಳಿದ ಮಂತ್ರಿಗಳು ಇನ್ನು ಸ್ವಲ್ಪ ಆಸ್ತಿ ಪಾಸ್ತಿ ಮಾಡಿಕೊಂಡ ಮೇಲೆ ಘೋಷಣೆ ಮಾಡಬಹುದೆಂದು ನಂಬೋಣವೇ ?

ಶ್ರೀ ರಾಮಕೃಷ್ಣ ಹೆಗಡೆ.—ಆಗ ನಾನು ಮಾನ್ಯ ಸದಸ್ಯರಿಗೆ ಉತ್ತರ ಕೊಟ್ಟಾಗ ಪಟ್ಟಿ ಅಪೂರ್ಣ ವಾಗಿತ್ತು. ಈಗ ಪೂರ್ಣವಾಗಿ ಎಲ್ಲಾ ಮಂತ್ರಿಗಳು ತಮ್ಮ ತಮ್ಮ ಆಸ್ತಿಪಾಸ್ತಿಗಳ ವಿವರದ ಪಟ್ಟಿಯನ್ನು ಕೊಟ್ಟಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—೬ ತಿಂಗಳಾದ ಮೇಲೆ ಆಸ್ತಿಪಾಸ್ತಿಗಳ ಪಟ್ಟಿಯನ್ನು ಕೊಡಲು ಕಾಲಾವಕಾಶವಾಯಿತೆ. ಇದುವರೆಗೂ ಏತಕ್ಕೆ ಕೊಡಲಿಲ್ಲ ? ೫ ವರ್ಷಗಳು ಪೂರ್ತಿಯಾಗಿ ಮುಗಿದು ಹೋದ ಮೇಲೆ ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು ಎಂದು ನನ್ನ ಭಾವನೆ.

೨-೦೦ ಪಿ. ಎಂ.

ಇವೊತ್ತು ಯಾವುದೇ ರೀತಿಯಿಂದ ಪಕ್ಷಾಂತರ ನಿಗ್ರಹಿಸಲು, ಮತ್ತು ನಿಷೇಧಿಸಲು ಶಾಸನವನ್ನು ತರುವುದಕ್ಕೆ ಹೊರಟಿದ್ದಾರೆ, ಆದರೆ ದಿನನಿತ್ಯ ಇದೇ ಕೆಲಸವನ್ನು ನಮ್ಮ ಮಂತ್ರಿಮಂಡಲದ ಸದಸ್ಯರು

ಮಾಡುತ್ತಿದ್ದಾರೆ. ಈಗ ಶಾಸಕರಿಗೆ ಅವರಿಗೆ ತಮ್ಮದೇ ಆದಂಥ ಪಕ್ಷದಲ್ಲಿರಲು ಹಕ್ಕು ಇದೆ. ಅವರು ಮಂತ್ರಿಗಳ ಜೊತೆಯಲ್ಲಿ ತಮ್ಮ ಕ್ಷೇತ್ರದ ಕೆಲಸ ಮಾಡಬೇಕೆಂದು ಹೋದರೆ ಒಂದು ರೀತಿಯ ಪ್ರಲೋಭನೆ; ಒತ್ತಾಯ ಮತ್ತು ಬಲವಂತ ಅವರ ಮೇಲೆ ನಡೆಯುತ್ತದೆ. ಈ ಕಾರ್ಯಕ್ರಮ ಬಹಳ ನಿರಂತರವಾಗಿ ಸಾಗುತ್ತಿದೆ. ಆದರೆ ಈ ಕಾರ್ಯಕ್ರಮದಿಂದ ನೀವೆ ಕೊಚ್ಚಿಕೊಂಡು ಹೋಗುವುದರಿಂದ. ಸ್ವಲ್ಪ ಪರಿಜ್ಞಾನವಿಟ್ಟುಕೊಂಡು ಕೆಲಸ ಮಾಡಬೇಕಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಈಗ ಅವರು ಬಹಳ ಹುಷಾರಿನಿಂದ ಒಬ್ಬೊಬ್ಬರನ್ನೇ ನಿಧಾನವಾಗಿ ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಯಡಿಯೂರಪ್ಪನವರು ಹೇಳುತ್ತಿದ್ದಾರೆ ಬಂದವರ ಹತ್ತಿರ ಹೇಳುವುದು ೧೦ ಜನ ಬರುತ್ತಾರೆ, ೨೦ ಜನ ಬರುತ್ತಾರೆಂದು. ಏಕೆಂದರೆ ತಾವು ಆತ್ಮ ಮುಟ್ಟಿ ಹೇಳಬೇಕು, ಇಂತಹ ನಾಚಿಕೆಗೇಡಿನ ಕೆಲಸಕ್ಕೆ ಜಾತಿಯ ಬಣ್ಣ ಕೊಟ್ಟು ಹಣದ ವ್ಯಾಮೋಹ ತೋರಿಸುವುದು ಸರಿಯಲ್ಲ. ತಮ್ಮ ಮ್ಯಾನಿಫೆಸ್ಟೋದಲ್ಲಿ ಹೇಳಿರುವುದಕ್ಕೆ ವಿರುದ್ಧವಾಗಿ ಮಾಡುತ್ತಿದ್ದೀರಿ. ನೀವು ಮಾಡತಕ್ಕಂಥ ಪಾಪದ ಕೆಲಸಕ್ಕೆ ನೀವೇ ಅಳತಕ್ಕಂಥ ಸಂದರ್ಭ ಬರುತ್ತದೆಯೆಂದು ಹೇಳುತ್ತೇನೆ.

ಶ್ರೀ ಪಿ. ರಾಮದೇವ್.—ನಿಮಗೆ ಇದನ್ನು ಹೇಳುವ ಹಕ್ಕು ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ನನಗೆ ಹೇಳುವ ಹಕ್ಕು ಇದೆ, ನಾನು ರಾಜಕೀಯ ಸೇರಿದಂದಿನಿಂದ ಇವತ್ತಿಗೂ ಕೂಡ ಪಕ್ಷಾಂತರ ಮಾಡಿಲ್ಲ, ಮಾಡುವುದೂ ಇಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—೧೯೮೦ನೇ ಇಸವಿಯಲ್ಲಿ ನೀವು ಮಾಡಿಸಿದ್ದೀರೆಂದು ಅವರು ಹೇಳುತ್ತಿದ್ದಾರೆ. ನೀವು ಫೈನಾನ್ಸ್ ಮಿನಿಸ್ಟರ್ ಆಗಿರುವುದೇ. ಪಕ್ಷಾಂತರದಿಂದ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾವೆಲ್ಲ ನಮ್ಮ ಪಕ್ಷದಿಂದಲೇ ಆರಿಸಿ ಬಂದಿರುವುದರಿಂದ, ಇದರಲ್ಲಿ ಪಕ್ಷಾಂತರ ಮಾಡಿದ ಪ್ರಶ್ನೆ ಬರುವುದಿಲ್ಲ. ಕರ್ನಾಟಕದಲ್ಲೆಲ್ಲ ನಮ್ಮವರೇ ಬಂದಿದ್ದಾರೆ.

ಶ್ರೀ ಪಿ. ರಾಮದೇವ್.—ಶ್ರೀಮಾನ್ ಗುಂಡೂರಾಯರವರು ದೇವರಾಜ ಅರಸ್‌ರವರಿಗೆ ವಿರುದ್ಧವಾಗಿ ೪೯ ಜನರನ್ನು ತೆಗೆದುಕೊಂಡು ಬೇರೆ ಕೂತದ್ದು ಪಕ್ಷಾಂತರವಲ್ಲವೇ ?

ಶ್ರೀ ಎಸ್. ಬಂಗಾರಪ್ಪ.—ಆಗ ಅವರು ತೆಗೆದುಕೊಂಡು ಬಿಟ್ಟರು ಎಂದು ಈಗ ತೆಗೆದುಕೊಳ್ಳುವುದು ಸರಿಯೆಂದು ಹೇಳುತ್ತೀರಾ ?

ಶ್ರೀ ಪಿ. ರಾಮದೇವ್.—ಪಕ್ಷಾಂತರ ಪ್ರಾರಂಭ ಮಾಡಿದವರು ಯಾರು ? ನೀವೇ. ಆದ್ದರಿಂದ ಮೊಯಿಲಿಯವರು ಹೇಳತಕ್ಕಂಥದು ಸರಿಯಲ್ಲ.

ಶ್ರೀ ಮಾಣಿಕ್ಯರಾವ್ ಪಾಟೀಲ್.—ಇನ್ನು ಕೆಲವೇ ದಿವಸಗಳಲ್ಲಿ ಮುಖ್ಯಮಂತ್ರಿಯವರು ಮತ್ತು ನಿಮ್ಮ ಪಕ್ಷದ ಅಧ್ಯಕ್ಷರಾದ ಚಂದ್ರಶೇಖರ್‌ರವರು ನಮ್ಮ ಪಕ್ಷಕ್ಕೆ ಬರುವವರಿದ್ದಾರೆ. ಇದು ನಿಮ್ಮ ಹಣೆಬರಹ. ನೀವೇಕೆ ಯೋಚನೆ ಮಾಡುತ್ತಿದ್ದೀರಿ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ನಮ್ಮ ಅಧ್ಯಕ್ಷರು ಬೆಂಗಳೂರಿಗೆ ಬರುತ್ತಿದ್ದಾರೆಂದು ಎಷ್ಟು ಸುಳ್ಳು ಪ್ರಚಾರ ಮಾಡುತ್ತಿದ್ದಾರೆ, ಅದು ಸರಿಯಲ್ಲ.

ಶ್ರೀ ಮಾಣಿಕ್ಯರಾವ್ ಪಾಟೀಲ್.—ತಾವು ಕರೆಂಟ್ ಪೇಪರ್ ಓದಿದ್ದೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಆದರೆ ಇವೊತ್ತು ಪಕ್ಷಾಂತರ ಕ್ಷೇತ್ರದಲ್ಲಿ ಹಗಲು ದರೋಡೆ ಮಾಡಿ ಅಧಿಕಾರಕ್ಕೆ ನೀವು ಬಂದಿದ್ದೀರಿ.

ಶ್ರೀ ವಿ. ಎಸ್. ಆಚಾರ್.—ಅವರು ರಿಟೇಲ್ ಪಕ್ಷಾಂತರವೆಂದು ಹೇಳುತ್ತಿದ್ದಾರೆ, ನೀವು ಹೋಲ್‌ಸೇಲ್ ಪಕ್ಷಾಂತರವೆಂದು ಹೇಳುತ್ತಿದ್ದೀರಿ. ಹಾಗಾದರೆ ನೀವು ಯಾವ ಬೇಡಿಕೆಯ ಮೇಲೆ ಚರ್ಚೆ ಮಾಡುತ್ತಿರುವುದು ?,

ಶ್ರೀ ಪಿ. ರಾಮದೇವ್.—ಇದರ ಬಗ್ಗೆ ನಾವು ಆತುರ ಪಡುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನಮ್ಮ ರಾಜಕೀಯ ಚರಿತ್ರೆಯಲ್ಲಿ ಹೆಸರುಗಳಿಸಿದ ಮಾನ್ಯ ಶ್ರೀ ದೇವರಾಜ ಅರಸ್‌ರ ಪಕ್ಷವು ದೊಡ್ಡ ಪ್ರಮಾಣದಲ್ಲಿ ಗೆದ್ದು ಬಂದಾಗ ಮಾನ್ಯ ಗುಂಡೂರಾವ್ ಅವರು ಎಲ್ಲರನ್ನು ಎಳೆದುಕೊಂಡು ದೇವರಾಜ ಅರಸ್‌ರಿಗೆ ಗೋವಿಂದ ಮಾಡಿಬಿಟ್ಟರು. ಅದು ಪಕ್ಷಾಂತರವಲ್ಲವೇ ? ಈ ಜನರನ್ನು ಒಂದೇ ಸಲ ಎಳೆದುಕೊಂಡುಬಿಟ್ಟರಲ್ಲ ಅದು ಪಕ್ಷಾಂತರವಲ್ಲವೇ? ಅದೂ ಪಕ್ಷಾಂತರವೇ, ಇವತ್ತು ಜನತಾಪಕ್ಷಕ್ಕೆ ಸೇರಿಸಿಕೊಳ್ಳುವುದೂ ಪಕ್ಷಾಂತರವೇ ! ಆದರೆ ಇಂತಹ ಕೆಟ್ಟ ಪಾಠವನ್ನು ಕಲಿಸಿಕೊಟ್ಟವರೂ ಅವರೆ ! ಒಂದು ಬಿಲ್ ತಂದು ಅದನ್ನು ತೆಗೆದುಹಾಕಿ.

ಛೇರ್‌ಮನ್.—ಮಾನ್ಯ ಮೊಯಿಲಿಯವರೆ. ಸ್ವಲ್ಪ ಬೇಗನೆ ಮುಗಿಸಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೇ, ಸನ್ಮಾನ್ಯ ರಾಮದೇವ್‌ರವರು ಮಾತನಾಡಿದರೆ ಒಪ್ಪಬಹುದು. ಏಕೆಂದರೆ ಅವರು ನಮ್ಮ ಗುರುಗಳು, ಬ್ರಹ್ಮಚಾರಿಗಳು, ಸನ್ಯಾಸಿಗಳು. ಈಗ ಏನಾಗಿದೆಯೆಂದರೇ ಕ್ರಾಂತಿರಂಗ ಜನತಾಪಕ್ಷದಿಂದ ಬೇರೆಯಾಯಿತು. ಕ್ರಾಂತಿರಂಗದಿಂದ ಬಹಳ ಜನರು ಆರಿಸಿಬಂದಿದ್ದರು ಈಗ ಅವರೆಲ್ಲ ಬಂಗಾರಪ್ಪನವರನ್ನು ಬಿಟ್ಟು ಎಲ್ಲಿಗೆ ಹೋದರು, ಅವರೆಲ್ಲ ಪಕ್ಷಾಂತರವಾಗಿ ಹೋಗಿಲ್ಲವೇ ?

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಕ್ರಾಂತಿರಂಗದ ಅಧ್ಯಕ್ಷರಾದಂಥ ನಜೀರ್‌ಸಾಬ್‌ರವರನ್ನು ಹೊಡೆದುಕೊಂಡು ಹೋದರು.

ಒಬ್ಬ ಸದಸ್ಯರಾದವರು.—ಅವರ ಪಕ್ಷವೇ ಜನತಾ ಪಕ್ಷದಲ್ಲಿ ವಿಲೀನವಾಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅನುಕೂಲವಾದಾಗ ಮರ್ಜರ್ ಎಂದು ಹೇಳುತ್ತೀರಿ. ಅನಾನುಕೂಲವಾದಾಗ ಪಕ್ಷಾಂತರವೆಂದು ಹೇಳುತ್ತಿದ್ದೀರಿ. It is highly immoral politics. ಇವೊತ್ತಿನ ದಿವಸ ಪಕ್ಷಾಂತರ ಮಾಡಬಾರದೆಂದು ನಿಮ್ಮ ಮ್ಯಾನಿಫೆಸ್ಟೋನಲ್ಲಿ ಬರೆದಿದ್ದೀರಿ ನಾವು ಬರೆದಿದ್ದಲ್ಲ.

ಚೇರ್‌ಮನ್.—ನೀವು ಆ ಕಡೆ ನೋಡಿ ಮಾತನಾಡಬೇಡಿ ಈ ಕಡೆ ಮುಖ್ಯಮಂತ್ರಿಗಳ ಕಡೆ ನೋಡಿ ಮಾತನಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಆ ಕಡೆ ನೋಡುವುದಿಲ್ಲ, ನೋಡತಕ್ಕಂಥ ಪಾಪ ಕೂಡ ಮಾಡುವುದಿಲ್ಲ. ಏಕೆಂದರೆ, ಪಕ್ಷಾಂತರದ ನೇತಾರರೇ ಅವರು ಅವರನ್ನು ನೋಡಿ ಏತಕ್ಕೆ ಮಾತನಾಡ ಬೇಕು ನಾನು ?

ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಏನಿದೆ ಎಂದರೆ........

ಛೇರ್ಮನ್.—ಉತ್ತರ ಅವರು ಹೇಳುತ್ತಾರೆ. ಉತ್ತರ ಅವರಿಂದ ಬೇಕಲ್ಲವೇ ನಿಮಗೆ ?

ಶ್ರೀ ಎಂ. ವೀರಪ್ಪಮೊಯಿಲಿ.—ಪಕ್ಷಾಂತರದ ವಿಚಾರವನ್ನು ಹೇಳುತ್ತೀರಿ ? ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಓಟನ್ನು ತೆಗೆದುಕೊಂಡ ಮಾರುದಿನವೇ ಕ್ರಾಂತಿರಂಗದ ಅಧ್ಯಕ್ಷರನ್ನು ಅಪಹರಿಸಿಕೊಂಡು ಹೋಗಿದ್ದೀರಲ್ಲ ? I think you should have filed a Kidnap case.........

(ಗೊಂದಲ)

ಶ್ರೀ ಕೆ. ಜಿ. ಮಹೇಶ್ವರಪ್ಪ.—ನನ್ನದೊಂದು ಪಾಯಿಂಟ್ ಆರ್ಫ್ ಆರ್ಡರ್ ಇದೆ..........

ಶ್ರೀ ಎಂ. ಎಸ್. ಕೃಷ್ಣನ್.—ಅವರನ್ನು ಡಿಫೆಂಡ್ ಮಾಡುವುದಕ್ಕೆ ಮೊಯಿಲಿಯವರು ಬರುವ ಪ್ರಮೇಯ ಏನಿದೆ ? ಬಂಗಾರಪ್ಪನವರಿಗೆ ಡಿಫೆಂಡ್ ಇವರೇಕೆ ಮಾಡಬೇಕು ? ಆಷ್ಟು ಹೊತ್ತಿನಿಂದ ನಾನು ನೋಡುತ್ತಿದ್ದೇನೆ... ..

ಶ್ರೀ ಸಂಗಮೇಶ್ವರ ಸರದಾರ್ —ಅವರು ಜನತಾ ಪಕ್ಷದಿಂದ, ಜನತಾಪಕ್ಷದ ಚಿನ್ಹೆ ಮೇಲೆ ಆ ಹೆಸರಿನ ಮೇಲೆ ಆರಿಸಿಬಂದಿದ್ದಾರೆ. ಇದನ್ನು ಮೊಯ್ಲಿಯವರು ತಿಳಿದುಕೊಳ್ಳಬೇಕು.

ಶ್ರೀ ಎಸ್. ಬಂಗಾರಪ್ಪ.—ಸಂಗಮೇಶ್ವರ ಸರದಾರರೇ. ಜನತಾಪಕ್ಷದ ಚಿನ್ಹೆ ಸ್ವಂತದ್ದು ಅಲ್ಲ, ಚರಣಸಿಂಗರ ಕ್ರಾಂತಿದಳದ ಚಿನ್ಹೆ ಅದು. ಚುನಾವಣಾ ಕಾಲದಲ್ಲಿ ಒಂದು ಪಕ್ಷದ ಚಿಹ್ನೆಯನ್ನು ಮತ್ತೊಂದು ಪಕ್ಷ ತೆಗೆದುಕೊಳ್ಳಬಹುದು. ಅಂದ ಮಾತ್ರಕ್ಕೆ ಈ ಚಿಹ್ನೆಯಿಂದ ಗೆದ್ದ ಮಾತ್ರಕ್ಕೆ ನಿಮ್ಮ ಪಕ್ಷ ಪಾಪ್ಯುಲರ್ ಎಂದು ಅಲ್ಲ. ಮುಂದಿನ ಚುನಾವಣೆ ಬರುತ್ತದೆ......

(ಗೊಂದಲ ನಾಲ್ಕಾರು ಸದಸ್ಯರು ಏಕಕಾಲದಲ್ಲಿ ಮಾತನಾಡಲು ಉಪಕ್ರಮಿಸಿದರು)

ಶ್ರೀ ಕೆ. ಜಿ. ಮಹೇಶ್ವರಪ್ಪ.—ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ್ದುದು ಸತ್ಯಾಂಶದಿಂದ ಕೂಡಿದ್ದಲ್ಲ. ಜನವರಿ ೮ನೇ ತಾರೀಖು ಕ್ರಾಂತಿರಂಗದ ಎಲ್ಲಾ ಶಾಸಕರು, ಬಂಗಾರಪ್ಪನವರ ಸಮೇತ ಸಭೆಸೇರಿ ಸರ್ವಾನುಮತವಾಗಿ ಜನತಾದಲ್ಲಿ ವಿಲೀನ ಆಗಬೇಕೆಂದು ತೀರ್ಮಾನ ಮಾಡಲಾಗಿತ್ತು.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಕೆಟ್ಟ ವಾದ ಇದು. ಬೇರೆ ಕಾರಣಗಳು ನಿಮಗೆ ಗೊತ್ತಿಲ್ಲ. ನಿಮ್ಮ ಚಿನ್ಹೆ ಇಷ್ಟೊಂದು ಪಾಪ್ಯುಲರ್ ಆಗಿದ್ದರೆ ಮೆಜಾರಿಟಿ ಏಕೆ ಬರಲಿಲ್ಲ ? ಬಿಜೆಪಿ, ಸಿಪಿಐ, ಸಿಪಿಎಂ ಬೆಂಬಲ ಏತಕ್ಕೆ ಬೇಕಾಗಿತ್ತು ? ಅಷ್ಟೊಂದು ಪಾಪ್ಯುಲರ್ ನಿಮ್ಮ ಚಿನ್ಹೆ ಆಗಿದ್ದರೆ ಇದೆಲ್ಲಾ ಏಕೆ ಬೇಕಾಗಿತ್ತು ? ಇದಕ್ಕೆ ಉತ್ತರ ಕೊಡುತ್ತೀರಾ ?

ಛೇರ್ಮನ್.—ಮೊಯಿಲಿಯವರೇ, ನೀವು ಶುರು ಮಾಡಿ.

(ಗೊಂದಲ)

ಒಬ್ಬರು ಮಾನ್ಯ ಸದಸ್ಯರು.—ಕನಕಪುರದ ಚುನಾವಣೆ ಫಲಿತಾಂಶ ಇದಕ್ಕೆ ಉತ್ತರ ಕೊಟ್ಟಿಲ್ಲವೇ?

ಶ್ರೀ ವೀರಪ್ಪಮೊಯಿಲ್ಲಿ.—ನನಗೆ ಈ ಪಕ್ಷಾಂತರದ ಸೋಂಕು ಬೇಡ. ಅಧ್ಯಕ್ಷರೇ, ಮಾನ್ಯ ಬಂಗಾರಪ್ಪನವರು ಜನತಾಪಕ್ಷದ ಬಗ್ಗೆ ಏತಕ್ಕೆ ಮಾತನಾಡುತ್ತಿದ್ದಾರೋ ನನಗೆ ಗೊತ್ತಿಲ್ಲ. ಜನತಾ ಪಕ್ಷ ೭೯ರಲ್ಲೇ ಕೊಚ್ಚಿಕೊಂಡು ಹೋಗಿದೆ. This is only a transit shed. ಯಾರೇ ಬರಬಹುದು, ಯಾರೇ ಹೋಗಬಹುದು. ಉಪಚಾರ ಅಲ್ಲಿ ನಡೆದಿದೆ.

ಶ್ರೀ ಎಸ್. ಬಂಗಾರಪ್ಪ.—ತಮ್ಮ ಅಭಿಪ್ರಾಯವನ್ನು ನಾನು ಒಪ್ಪುವುದಿಲ್ಲ. ಇದರ ಅಂತಿಮ ಸಮಾಧಿ ಹೆಗಡೆಯವರ ಅಮೃತ ಹಸ್ತದಿಂದ ಆಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ನಮ್ಮ ಸಮಾಧಿ ಯಾರ ಅಮೃತ ಹಸ್ತದಿಂದಲೂ ಆಗುವುದಿಲ್ಲ. ಅಮೃತ ಶಬ್ಧದ ಅರ್ಥ ಅವರಿಗೆ ಗೊತ್ತಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಭಾರತೀಯ ಸಂಸ್ಕೃತಿ ಪರಿಚಯ ಮಾನ್ಯ ಮುಖ್ಯ ಮಂತ್ರಿಗಳಿಗೆ ಇಲ್ಲ. ಸಮಾಧಿ ಮಾಡುವಂಥದ್ದು ಬಹಳ ಪುಣ್ಯದ ಕೆಲಸ. ಹೆಣವನ್ನು ತೆಗೆದುಕೊಂಡು ಹೋಗುವಾಗ ಪೂಜೆ, ಬ್ಯಾಂಡು ವಾದ್ಯ ಭಾರಿಸುತ್ತಾರೆ. ಅದು ಅಮೃತ ಹಸ್ತವೇ ಸರಿ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಸಾಧಾರಣ ಹಸ್ತದಿಂದ ಸಮಾಧಿಯಾಗುತ್ತದೆ ಎಂದು ಹೇಳುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಪಕ್ಷಾಂತರದ ವಿಚಾರ ಮಾತನಾಡುತ್ತಿದ್ದೇವೆ. ಈ ಬಿಲ್ ಇಂಟ್ರಡ್ಯೂಸ್ ಮಾಡಿದವರು, ಚುನಾವಣಾ ಘೋಷಣೆಯಲ್ಲಿ ಹೇಳಿದವರು, ಪ್ರಣಾಳಿಕೆಯಲ್ಲಿ ಅದನ್ನು ಅಚ್ಚು ಮಾಡಿದಂತಹ ಜನಕ್ಕೆ ಈ ದೇಶದಲ್ಲಿ ಒಂದು ಉತ್ತಮವಾದ ಪರಂಪರೆಯನ್ನು ಹಾಕಿಕೊಳ್ಳಬೇಕಾದ ಕಳಕಳಿ ಇದ್ದರೆ, ಇವತ್ತು ಅಧಿಕಾರ ನಡೆಸತಕ್ಕ ನೆಪದಲ್ಲಿ, ಬೇರೆ ಯಾವುದೇ ಪಕ್ಷದ ಮೆನಿಫೆಸ್ಟೋ ಅನ್ನು ಜಾರಿ ಮಾಡುತ್ತಿರಲಿಲ್ಲ, ಮರ್ಜರ್ ನೆಪದಲ್ಲಿ ಯಾರು ಇಂಡಿಪೆಂಡೆಂಟ್ ಆಗಿ ಆರಿಸಿ ಬಂದಿದ್ದಾರೆ, ಅವರು ನಿಮ್ಮ ಚಿನ್ಹೆಯಿಂದ ಬಂದವರಲ್ಲ. ನಿಮ್ಮ ಪಕ್ಷದ ಮುಖಾಂತರ ಬಂದವರು ಅಲ್ಲ. This is a new novel method found out. That is why I call the Chief Minister the most intelligent Chif Minister. As I called this party is a transit shed. ನಿಮ್ಮ ಈ ಷಡ್ ಕೂಡ ಖಾಯಂ ಅದುದ್ದು ಅಲ್ಲ. ಇದೂ ಕೂಡ ಕುಸಿಯುತ್ತದೆ. ಮತ್ತು ಇದರಲ್ಲಿ ಕೆಸರು ಮಣ್ಣು ಸೇರುತ್ತದೆ, ನೀವು ಕೇಸರಿನ ಜೊತೆಯಲ್ಲಿ ಕೊಚ್ಚಿಕೊಂಡು ಹೋಗುತ್ತೀರಿ. ಯಾರಿಗೂ ಅದನ್ನು ತಡೆಯುವುದಕ್ಕೆ ಆಗುವುದಿಲ್ಲ. ಒಂದು ಸಿದ್ಧಾಂತ ಇಲ್ಲದ ಜನ ಚುನಾವಣೆ ಗೋಸ್ಕರವಾಗಿ ಪಕ್ಷ ಕಟ್ಟಿಕೊಂಡು ಬಂದಿರುವ ಜನರಿಂದ ಕರ್ನಾಟಕ ರಾಜ್ಯದ ಜನತೆ ಏನನ್ನೂ ನಿರೀಕ್ಷೆ ಮಾಡುತ್ತಿಲ್ಲ.

ಛೇರ್ಮನ್.--ಮಾನ್ಯ ಮೊಯಿಲಿಯವರೇ, ಮೂರುವರೆ ತಾಸು ಆಗಿದೆ.

ಒಬ್ಬರು ಮಾನ್ಯ ಸದಸ್ಯರು.--ಶ್ರೀಮಾನ್ ಮೊಯಿಲಿಯವರು ಬಹಳ ಡಿಸ್ಪರೇಟ್ ಆಗಿರುವ ಹಾಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.--ಒಂದು ಶತಮಾನದ ಇತಿಹಾಸವುಳ್ಳ ಪಕ್ಷಕ್ಕೆ ಸಾವು ಇಲ್ಲ. ಸಾಯುತಕ್ಕಂಥ ಪಕ್ಷ ನಮ್ಮದಲ್ಲ. I am very confident.. ...I belong to a party which has got 100 years history......ಯಾರಾದರೂ ವ್ಯಕ್ತಿ ಕೆಟ್ಟ ಕೆಲಸ ಮಾಡಿದರೆ ವ್ಯಕ್ತಿ ನಾಶವಾಗಬಹುದು ಆದರೆ ಪಕ್ಷ ನಾಶವಾಗುವುದಿಲ್ಲ......

(ಗೊಂದಲ)

ಶ್ರೀ ವಿ. ಧನಂಜಯಕುಮಾರ್.—ಮೊಯ್ಲಿಯವರು ಹೇಳಿದರು ಈ ಟ್ರಾನ್ಸಿಟ್ ಷೆಡ್ ಬಹಳ ದುರ್ಬಲವಾಗಿದೆ, ಕುಸಿದು ಹೋಗುತ್ತಿದೆ ಎಂದು. ಅದನ್ನು ಬಲಪಡಿಸಲು ಕೆಲವರು ಓಡಿ ಹೋಗುತ್ತಿದ್ದಾರೆ. ಆಗ ಷೆಡ್ಡು ಉಳಿಯುತ್ತದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಆ ಟ್ರಾನ್ಸಿಟ್ ಷೆಡ್ಡಿನ ಕಂಬ ಯಾವ ಕಡೆ ಉರುಳುತ್ತದೆಂಬುದು ನನಗೆ ಅರ್ಥವಾಗುವುದಿಲ್ಲ. ಆದರೂ ಬಿ.ಜೆ.ಪಿ. ಯವರು ಅದನ್ನು ನಂಬಿ ಇದ್ದಾರೆ.

ಶ್ರೀ ಬಿ. ಎಸ್. ಎಡಿಯೂರಪ್ಪ.—ಒಂದು ವೇಳೆ ಆ ರೀತಿ ಕಂಬ ಬೀಳುವುದಾದರೆ ಅದನ್ನು ನಿಮ್ಮ ಮೇಲೆ ಬೀಳಿಸುವುದಕ್ಕಾಗಿ ಇದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಕೆಸರಿನಲ್ಲಿ ಈ ಜನರು ಬೀಳುತ್ತಿದ್ದಾರೆ.

ಡಾ॥ ವಿ. ಎಸ್. ಆಚಾರ್ಯ.—ಕಮಲ ಹುಟ್ಟಿದ್ದು ಕೆಸರಿನಲ್ಲಿ. ಆದರೆ ಆ ಕಮಲಕ್ಕೆ ಕೆಸರು ಎಲ್ಲಿ ಆಗುತ್ತದೆ ? ಕೆಸರು ಕಮಲಕ್ಕಾಗುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಪಕ್ಷಾಂತರಕ್ಕೂ ನಮಗೂ ಸಂಬಂಧವಿಲ್ಲ.

ಶ್ರೀ ಬಿ. ವಿ. ಕರೀಗೌಡ.—ಪಕ್ಷಾಂತರರ ಗುರು ಅವರು.

ಶ್ರೀ ಎಂ. ವೀರಪ್ಪ ಮೊಯಿಲಿ.—ಇವರು ನಾನು ಒಂದು ಕೆಟ್ಟ ಪರಂಪರೆಯನ್ನು ಬೆಳೆಸುತ್ತಿದ್ದಾರೆಂದರೆ, ಶಾಸಕರು ಯಾವುದಾದರೊಂದು ಕೆಲಸಕ್ಕೆ ಹೋದಾಗ ಪಕ್ಷಾಂತರ ಮಾಡಕ್ಕಂತದ್ದಕ್ಕೆ ಪ್ರಚೋದನೆ ಕೊಡತಕ್ಕಂತಹದ್ದಕ್ಕೆ ಶಿಕ್ಷಾರ್ಹ ಮಾಡತಕ್ಕಂತಹ ಪ್ರಸಂಗ ಬರಬೇಕಾಗಿದೆ. ಇದು ಬರತಕ್ಕ ಸಮಯ ಬಹಳ ಸನ್ನಿಹಿತಕ್ಕಾಗಿದೆ. ಸ್ವತಂತ್ರವಾಗಿ ಸ್ಪರ್ಧಿಸಿ ಆರಿಸಿ ಬಂದಿದ್ದವರಿಗೆ ಅಧ್ಯಕ್ಷ ಪದವಿ. ಆಮೇಲೆ ಪಕ್ಷಕ್ಕೆ ಸೇರಿಸುವುದು, ಪಾಪ ಪ್ರಮಾಣಿಕವಾಗಿ ಜನತಾ ಪಕ್ಷದಿಂದ ಚುನಾವಣೆಯಲ್ಲಿ ಆರಿಸಿ ಬಂದಂತಹವರಿಗೆ ಯಾವ ಅಧ್ಯಕ್ಷ ಪದವಿಯೂ ಇಲ್ಲ, ಮಂತ್ರಿ ಪದವಿಯೂ ಇಲ್ಲ.

ಶ್ರೀ ಬಿ. ವಿ. ಕರೀಗೌಡ.—ನಮಗೆ ಆ ಬಗ್ಗೆ ಸಂಕಟವಿಲ್ಲ. ನಮ್ಮ ಬಗ್ಗೆ ಬಹಳ ಕಳಕಳಿಯನ್ನು ವ್ಯಕ್ತಪಡಿಸುತ್ತಿದ್ದಾರೆ ನಮ್ಮ ವಿರೋಧಪಕ್ಷದ ನಾಯಕರು. ನಮಗೆ ಯಾವ ಅಧಿಕಾರವೂಬೇಕಾಗಿಲ್ಲ. ನಾವು ಇಲ್ಲಿಯೇ ಇರುತ್ತೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಕರಿಗೌಡರೆ, ಹೌದು ಪ್ರಮಾಣಿಕವಾಗಿ ಜನತಾ ಪಕ್ಷದಿಂದ ಚುನಾವಣೆಯಲ್ಲಿ ಗೆದ್ದು ಬಂದಂತಹವರು ಏನು ಮಾಡುತ್ತೀರಿ ? ಅಧಿಕಾರ ಉಳಿಸಿಕೊಂಡು ಹೋಗಬೇಕಾದರೆ ಇರಬೇಕು. ನಿಮ್ಮಂತಹವರು ತಿಳಿದುಕೊಂಡಿದ್ದೀರಿ. ಬಾಕಿಯಾವರು ಏನು ಮಾಡುತ್ತಾರೆ ಪಾಪ. ಅವರಿಗೆ ಯಾವ ಅಧ್ಯಕ್ಷ ಪಧವಿಯೂ ಇಲ್ಲ. ಕ್ರಾಂತಿ ರಂಗದಿಂದ ಆರಿಸಿ ಬಂದಂತಹ ೧೨ ಜನ ಇವರ ಪಕ್ಷಕ್ಕೆ ಹೋದರು. ಅವರಿಗೆ ಮಂತ್ರಿ ಪದವಿ. ಈ ೧೨ ಜನರನ್ನು ಏತಕ್ಕಾಗಿ ನಿಮ್ಮ ಪಕ್ಷಕ್ಕೆ ಸೇರಿಸಿಕೊಂಡದ್ದು ? ಅದಕ್ಕಾಗಿ ನೀವು ಏಕಕ್ಕಾಗಿ ಪಕ್ಷಾಂತರ ನಿಷೇದ ಮಸೊದೆಯನ್ನು ತಂದಿದ್ದೀರಿ ? ಇವರ ಚುನಾವಣೆಯ ಮ್ಯಾನಿಫೆಸ್ಟೋನಲ್ಲಿ ಏನಿದೆ. ಈ ಜನತಾ ಸರ್ಕಾರ, ಇವರ ರಾಜಕೀಯ ಅನೀತಿಯನ್ನು ಇವತ್ತು ಇಡೀ ದೇಶದಲ್ಲಿ ಪ್ರದರ್ಶನ ಮಾಡುತ್ತಿದ್ದಾರೆ. ಇಂತಹ ಒಂದು ರಾಜಕೀಯ ವಾತಾವರಣವನ್ನು ಕಲುಷಿತ ಮಾಡತಕ್ಕಂತಹ ಈ ಪ್ರಯತ್ನ ಯಾವುದು ಇದೆ, ಇದಕ್ಕಿಂತ ದೊಡ್ಡ ನಾಚಿಕೆಗೇಡಿತನದ್ದು ಮತ್ತೊಂದು ಇಲ್ಲ ಎನ್ನುವುದನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇವತ್ತು ಇವರು ಪೊಲಿಟಿಕಲ್ ಹಿಪೋಕ್ರಸಿ ಎಂದು ಹೇಳಿ ಘೋಷಣೆ ಮಾಡಿಕೊಂಡು ಅಧಿಕಾರಕ್ಕೆ ಬಂದು ಈ ಒಂದು ಪಾಪದ ಕೆಲಸಕ್ಕೆ ಕೈ ಹಾಕತಕ್ಕಂಥಹದ್ದು ಈ ಪಕ್ಷ.

ಛೇರ್ಮನ್.—ಆ ಬಗ್ಗೆ ನೀವು ಹೆಚ್ಚು ಹೇಳಿದ್ದೀರಿ. ಬೇರೆ ಪಾಯಿಂಟ್‌ಗೆ ಬನ್ನಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಬೇರೆ ಯಾವ ಪಾಯಿಂಟ್‌ನ್ನು ಹೇಳಲಿ ?

ಶ್ರೀ ಪಂಪಾಪತಿ.—ಮೊದಲು ಮಾತನಾಡುವವರಿಗೆ ೩ ಗಂಟೆ, ೪ ಗಂಟೆ ಹಾಗೂ ೫ ಗಂಟೆ ಸಮಯ ಕೊಟ್ಟುಬಿಟ್ಟು ಕೊನೆಯಲ್ಲಿ ನಮ್ಮಂತಹವರು ಮಾತನಾಡುವುದಕ್ಕೆ ಪ್ರಾರಂಭ ಮಾಡಿದ ತಕ್ಷಣ ಡಣ್ ಡಣ್ ಎಂದು ಬೆಲ್ ಹೊಡೆದರೆ ನಮ್ಮ ಗತಿ ಏನಾಗಬೇಕು ?

ಛೇರ್ಮನ್.—ಮಾನ್ಯ ಸದಸ್ಯರು ಹೇಳಿದ್ದು ಸರಿಯಾಗಿದೆ. ಆದ್ದರಿಂದ ತಾವು ಬೇರೆ ಪ್ರಶ್ನೆಗೆ ಬನ್ನಿ.

SRI M. VEERAPPA MOILY.—This Government and this Party has been totally infected with defections.

ಛೇರ್ಮನ್.—ಅದನ್ನೇ ಹೇಳುತ್ತಿದ್ದೀರಿ. ಬೇರೆ ಸದಸ್ಯರೂ ಮಾತನಾಡುವವರು ಇದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ತಾನು ಚುನಾವಣೆಯಲ್ಲಿ ಹೇಳಿದಂತಹ ಮಾತಿನಲ್ಲಿ ಒಂದು ನೈತಿಕ ತಳಹದಿಯ ಮೇಲೆ ಈ ಸರ್ಕಾರ ನಿಂತಿಲ್ಲ. ಬರೀ ಪಕ್ಷಾಂತರವನ್ನು ಮಾಡುವುದಕ್ಕೆ ಪ್ರಚೋದನೆ ಮಾಡಿ, ಆದರಿಂದ ಈ ಒಂದು ಸರ್ಕಾರ ನಿಂತಿದೆ ಎಂಬುದಾಗಿ ಉದಾಹರಣೆ ಕೊಟ್ಟು ಹೇಳಬೇಕಾಗುತ್ತದೆ ಆದ್ದರಿಂದ ಇವತ್ತು ಪಕ್ಷಾಂತರ ಯಾವುದು ಎಂದು ಏನು ಹೇಳಿದ್ದಾರೆ ಅದಕ್ಕೆ ವಿರೋಧವಾಗಿ ನಡೆದು ಕೊಂಡಿದ್ದಾರೆ.

ಛೇರ್ಮನ್.—ಪಕ್ಷಾಂತರದ ಮೇಲೆ ಈಗಾಗಲೇ ಸಾಕಷ್ಟು ಹೇಳಿದ್ದೀರಿ. ಮತ್ತೆ ಅದನ್ನೇ ಹೇಳ ಬೇಡಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಈ ಸರ್ಕಾರ ಜನತೆಗೆ ಏನೊಂದು ವಚನ ಕೊಟ್ಟಿದ್ದಾರೆಂಬುದನ್ನು ಈಗಾಗಲೇ ವಿಶ್ಲೇಷಣೆ ಮಾಡಿ ಹೇಳಿದ್ದೇನೆ. ಆ ಜನಗಳಿಗೆ ಕೊಟ್ಟಂತಹ ಯಾವುದೇ ಭರವಸೆಯನ್ನು ಈಡೇರಿಸತಕ್ಕ ಹೆಜ್ಜೆಯನ್ನು ಇವರು ಇಟ್ಟಿಲ್ಲ. ಅದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡಿಲ್ಲ. ಸಂಪೂರ್ಣವಾಗಿ ಇವತ್ತು ಜನತೆಗೆ ವಚನಭ್ರಷ್ಟವಾಗಿದೆ ಈ ಸರ್ಕಾರ. ಅದು ರಾಜಕೀಯವಾಗಿ ಅಧಿಕಾರವನ್ನು ಉಳಿಸಿಕೊಳ್ಳತಕ್ಕ ಒಂದು ಹಿನ್ನಲೆಯಲ್ಲಿ ಅನೀತಿಕಾರಕ ಕಾರ್ಯ ಕ್ರಮಗಳನ್ನು ಕೈಗೊಳ್ಳತಕ್ಕ ಈ ಸರ್ಕಾರ ಮಂಡಿಸಿರತಕ್ಕಂತಹ ಯಾವ ಬೇಡಿಕೆಗಳು ಇವೆ, ಅವುಗಳನ್ನೆಲ್ಲಾ ನಾನು ಸಂಪೂರ್ಣವಾಗಿ ವಿರೋಧ ಮಾಡುತ್ತಿದ್ದೇನೆ. ಈ ರೀತಿಯಲ್ಲಿ ಇವತ್ತು ಯಾವ ರಾಷ್ಟ್ರದ ಜನರಿಗೆ ಕರ್ನಾಟಕ ರಾಜ್ಯದ ಜನತೆಯ ಹಿತರಕ್ಷಣೆಯನ್ನು ಬಲಿ ಕೊಡತಕ್ಕಂತಹ ಯಾವುದೇ ಒಂದು ಪ್ರಯತ್ನವನ್ನು ಈ ಕರ್ನಾಟಕ ರಾಜ್ಯದ ಜನತೆ ಸಹಿಸುವುದಿಲ್ಲ ಎಂಬ ಎಚ್ಚರಿಕೆಯನ್ನು ಕೊಟ್ಟು ನನಗೆ ಮಾತನಾಡುವುದಕ್ಕೆ ಅವಕಾಶಕೊಟ್ಟಂತಹ ಅಧ್ಯಕ್ಷರಿಗೆ ವಂದನೆಗಳನ್ನು ಸಮರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಡಾ॥ ವಿ. ಎಸ್. ಆಚಾರ್.—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಇಲಾಖೆಗೆ ಸಂಬಂಧಪಟ್ಟಂತಹ ಗೃಹ ಬೇರೆ ಬೇರೆ ಇಲಾಖೆಗಳ ಬಗ್ಗೆ ಮಂಡಿಸಿರತಕ್ಕಂತಹ ಬೇಡಿಕೆಗಳ ಬಗ್ಗೆ ನನ್ನ ಸಮ್ಮತಿಯನ್ನು ಸೂಚಿಸುತ್ತಿರುವುದರ ಜೊತೆಗೇ, ಕಳೆದ ಸುಮಾರು ೯ ತಿಂಗಳ ಕಾಲ ಆಡಳಿತ ನಿರ್ವಹಣೆಯನ್ನು ಉತ್ತಮ ರೀತಿಯಲ್ಲಿ ಮಾಡಿದ್ದರೆ ನಮ್ಮ ಸಮ್ಮತಿಯನ್ನು ಬಹಳ ಸಮಾಧಾನಪಟ್ಟು ಕೊಂಡು ಕೊಡತಕ್ಕಂತಹ ಸನ್ನಿವೇಶವನ್ನು ನಾವು ಕಾಣಬಹುದಿತ್ತು. ಅಂತಹ ಒಂದು ಸಮಾಧಾನ ಪಟ್ಟುಕೊಂಡು ಈ ಬೇಡಿಕೆಗೆ ಬೆಂಬಲ ಕೊಡುವಂತಹ ಪರಿಸ್ಥಿತಿ ನಿರ್ಮಾಣವಾಗಲಿಲ್ಲವೆಂದು ಹೇಳುವಂತಹ ಬೇಸರದ ಒತ್ತಿಗೆಯನ್ನೂ ಕೊಡುವಂತಹ ಪ್ರಸಂಗ ಇವತ್ತು ಬಂದಿದೆ

ನಮ್ಮ ರಾಜ್ಯದಲ್ಲಿ ಈ ವರ್ಷದ ಪ್ರಥಮದಲ್ಲಿ ಜನ ಆಡಳಿತವನ್ನು ನಿಮ್ಮ ಕೈಗೆ ಕೊಡುವುದರ ಜೊತೆಗೆ ಒಂದು ದೊಡ್ಡ ಬದಲಾವಣೆ, ಎಂದರೆ ಆರ್ಥಿಕವಾಗಿ, ಹಾಗೂ ಸಾಮಾಜಿಕವಾದ ಬದಲಾವಣೆ ಸಹ ಬರುತ್ತದೆಂಬ ಉದ್ದೇಶದಿಂದ ಇದ್ದಂತಹ ಅಧಿಕಾರವನ್ನು ರಾಜಕೀಯವಾಗಿ ಬದಲಾವಣೆ ಒಂದು ಒಳ್ಳೆಯ ಲವಲವಿಕೆ ವಾತಾವರಣ ರಾಜ್ಯದಲ್ಲಿ ನಿರ್ಮಾಣವಾಗುತ್ತದೆ ಎನ್ನುವಂತಹ ಆಸೆಯನ್ನು

ನಿರೀಕ್ಷಿಸುತ್ತಾ ಇದ್ದರು. ಆದರೆ ಕಳೆದ ೯ ತಿಂಗಳ ಆಡಳಿತದಲ್ಲಿ ಯಾವುದೇ ಒಂದು ಹೊಸ ಸಲಹೆ ಸಹ ಇಲ್ಲ. ಜನರಿಗೆ ಸಮಾಧಾನವಾಗುವಂತಹ, ಸಂತೋಷಪಡುವಂತಹ ಅದರಲ್ಲೂ ಕಷ್ಟದಲ್ಲಿದ್ದಂತಹ ಜನರ ಅನುಕೂಲಕ್ಕಾಗಿ ಯಾವುದೇ ಒಂದು ಕಾರ್ಯಕ್ರಮವನ್ನು ಈ ಸರ್ಕಾರ ತೆಗೆದುಕೊಳ್ಳಲಿಲ್ಲ. ಸಾಮಾನ್ಯ ಆಡಳಿತದ ಬಗ್ಗೆ ನಾನು ಹೇಳುತ್ತಿದ್ದೇನೆ. ಸಾಮಾನ್ಯ ಆಡಳಿತದಲ್ಲಿಯೂ ಕೂಡ ಯಾವುದೇ ಸುಧಾರಣೆ ಕಂಡುಬಂದಿಲ್ಲ. ಪತ್ರಿಕೆಗಳಲ್ಲಿ ಪ್ರತಿ ದಿವಸ ಸಚಿವರ ಹೇಳಿಕೆ ಬರುತ್ತದೆ. ಆ ರೀತಿ ಹೇಳಿಕೆ ಬಂದಾಗ ಸ್ವಲ್ಪ ಆಸೆ ಹುಟ್ಟುತ್ತದೆ. ಆದರೆ ಅದು It will never be transformed into action... ಮಂತ್ರಿಮಂಡಲದ ಸಭೆಗಳು ಆಗುತ್ತವೆ. ಮಂತ್ರಿ ಮಂಡಲದ ಸಭೆಯಲ್ಲಿ ಆದಂತಹ ನಿರ್ಣಯಗಳು ಪತ್ರಿಕೆಗಳಲ್ಲಿ ಬರುತ್ತವೆ. ಆದರೆ ಆ ನಿರ್ಣಯಗಳು ಜಾರಿಗೆ ಬರುವುದಿಲ್ಲ. ಬಂದವೂ ಒಂದು ಕಾಣುವುದಿಲ್ಲ. ಈ ರೀತಿಯಾಗಿ, ಮಂತ್ರಿಗಳ ಹೇಳಿಕೆ, ಮಂತ್ರಿಮಂಡಲದಲ್ಲಿ ಆದಂತಹ ನಿರ್ಣಯಗಳು ಪತ್ರಿಕೆಯಲ್ಲಿ ಬರುವುದರಿಂದ ಒಂದು ರೀತಿಯ ಆಸೆ ಉಂಟಾಗುತ್ತದೆ. At least it is not perceptible... ರೆಡ್ ಟೇಪಿಸಂ. ಎಂದರೆ ಕೆಂಪು ಪಟ್ಟಿ ಎಂದು ಹೇಳುತ್ತಾರೆ. ಆಡಳಿತದ ಪ್ರತಿಯೊಂದು ಕ್ಷೇತ್ರದಲ್ಲೂ ಮುಂಚೆಗಿಂತ ಹೆಚ್ಚು ಕೆಂಪು ಪಟ್ಟಿ ಬಂದಿದೆ. ಮುಂಚೆ ಏನೊಂದು ಮನೋಭಾವ ಇತ್ತು. ಇಂದೂ ಕೂಡ ಮುಂದುವರಿಯುತ್ತಿದೆ. ಬದಲಾವಣೆಯಾದದ್ದು ಆಡಳಿತದಲ್ಲಿ ಗೊತ್ತಾಗುವುದಿಲ್ಲ. ಅಧಿಕಾರಿಗಳು ಮಂತ್ರಿಗಳು ಕೊಟ್ಟಂತಹ ಹೇಳಿಕೆಯನ್ನು ಕಾರ್ಯಾಚರಣೆಗೆ ತರುತ್ತಿಲ್ಲ. ಅವರನ್ನು ಕೇಳಿದರೆ, ಮಂತ್ರಿಗಳು ಹೇಳುತ್ತಾರೆ ಬರೆದು ಕೊಟ್ಟರೂ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುವಂತಹ ಮಟ್ಟಕ್ಕೆ ಬಂದಿದೆ. ಅಂತಹ ಕೆಲವು ಅಧಿಕಾರಿಗಳೂ ಇನ್ನೂ ಇದ್ದಾರೆ. ನಾನು ಎಲ್ಲಾ ಅಧಿಕಾರಿಗಳ ಬಗ್ಗೆ ಹೇಳುತ್ತಿಲ್ಲ. ಸ್ವಾಭಾವಿಕವಾಗಿ ಆ ಒಂದು ಭಾವನೆ ಬಂದಿದೆ. ರೆಡ್ ಟೇಪಿಸಂ ಮುಂಚೆಗಿಂತ ಜಾಸ್ತಿಯಾಗಿದೆ ಎನ್ನುವ ಭಾವನೆ ಬಂದಿದೆ.

೨. ೩೦. ಪಿ. ಎಂ.

ಹೀಗೆ ಎಲ್ಲಾ ವಿಷಯದಲ್ಲೂ ಸಹ ಬಹಳ ನಿಧಾನಗತಿಯಾಗಿದೆ. ಎಗ್ರೋನೈಸಿಂಗ್ ಡಿಲೇ. ಇದನ್ನು ಮಾನ್ಯ ಮುಖ್ಯಮಂತ್ರಿಗಳು ಗಂಭೀರವಾಗಿ ಪರಿಗಣಿಸಬೇಕು ಎಂದು ತಿಳಿಸಲು ಇಷ್ಟಪಡುತ್ತೇನೆ. ಈ ಅಡ್ಮಿನಿಸ್ಟ್ರೇಷನ್ ವಿಚಾರದಲ್ಲಿ Time and tide will never weight for none ಆಗುತ್ತೆ ಇದನ್ನು ಮಾನ್ಯ ಮುಖ್ಯ ಮಂತ್ರಿಗಳು ಯೋಚನೆ ಮಾಡಿ ಅದಷ್ಟು ಶೀಘ್ರಗತಿಯಲ್ಲಿ ಕೆಲಸ ಆಗುವ ಹಾಗೆ ಮಾಡಬೇಕು ಮಾನ್ಯ ಮುಖ್ಯ ಮಂತ್ರಿಗಳು ಹಿಂದುಳಿದ ವರ್ಗದವರ ಬಗ್ಗೆ, ಎಸ್. ಸಿ. ಮತ್ತು ಎಸ್. ಟಿ. ಬಗ್ಗೆ ಒಂದೊಂದು ಸಮಿತಿಯನ್ನು ನೇಮಕ ಮಾಡಿದರು ಪತ್ರಿಕೆಯಲ್ಲಿ ಆ ಸಮಿತಿಯ ಹೆಸರುಗಳೂ ಸಹ ಬಂದಿದೆ. ಆದರೆ ಈ ಒಂದು ಸಮಿತಿ ಅಧಿಕೃತವಾಗಿ ಉದ್ಘಾಟನೆ ಆದುದ್ದು ೫೪ ದಿವಸ ನಂತರ. ಏತಕ್ಕೆ ಇಷ್ಟು ದಿನ ತಡವಾಯಿತು ಎಂದು ಕೇಳುತ್ತೇನೆ. ಸ್ಟೇಟ್ ಡೆವಲಪಮೆಂಟ್ ಕೌನ್ಸಿಲ್ ಬಗ್ಗೆ ಮಾನ್ಯ ವೀರಪ್ಪಮೊಯ್ಲಿ ರವರು ಮಾತನಾಡಿದ್ದಾರೆ. ಇದಕ್ಕೆ ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನವರು ನನ್ನ ಹೆಸರನ್ನೂ ಸಹ ಸೇರಿಸಿದ್ದಾರೆ, ಇದರ ಬಗ್ಗೆ ಒಂದು ಮೀಟಿಂಗ್ ಅನ್ನು ೬ ತಿಂಗಳೊಳಗೆ ಕರೆಯಬೇಕು. ಆದರೆ ಅದರ ಸಭೆ ಇನ್ನೂ ಸೇರಿಲ್ಲ. ಅದೇ ರೀತಿಯಾಗಿ ಕನ್ನಡ ಭಾಷಾ ಕಾವಲು ಸಮಿತಿ ಎಂದು ಒಂದು ಸಮಿತಿ ಮಾಡಿದರು. ಈ ಕನ್ನಡ ಭಾಷೆಯನ್ನು ಜಾರಿಗೆ ತರುವುದಕ್ಕೆ ಸರ್ಕಾರದ ಒಂದು ನೀತಿ ಏನು ಎನ್ನುವುದನ್ನು ಪ್ರಕಟಣೆ ಮಾಡಿದರು. ಕನ್ನಡ ಭಾಷೆಯನ್ನು ಜಾರಿಗೆ ತರಲಿಕ್ಕೆ ಈ ಒಂದು ಸಮಿತಿ ಮುಖಾಂತರ ಶಕ್ತಿ ಬರುತ್ತದೆ ಎನ್ನುವ ಉದ್ದೇಶದಿಂದ ಇದನ್ನು ಮಾಡಿದರು. ಆದರೆ ಇದುವರೆಗೂ ಕೂಡ ಅದು ಒಂದು ಕಾರ್ಯಕ್ರಮ ಜಾರಿಗೆ ಬರಲಿಲ್ಲ. ಹಾಗೆಯೇ ಇನ್ನೊಂದು ವಿಷಯ ಹೇಳುವುದಾದರೆ, ನವ ಚಂಡೀಗರ್ ರೀತಿಯಲ್ಲಿ ನವಬಾಗಲ ಕೋಟೆಯನ್ನು ನಿರ್ಮಾಣ ಮಾಡುವ ಬಗ್ಗೆ ಒಂದು ಕ್ರಿಯಾ ಸಮಿತಿಯನ್ನು ೨೪-೮-೮೩ ರಂದು ನೇಮಕ ಮಾಡಿದ್ದಾರೆ. ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಬಂದಾಗ ಆ ಪಟ್ಟಣ ಮುಳುಗಡೆಯಾಗದೇ ಇರುವ ಹಾಗೆ ಎತ್ತರವಾಗಿ ಅಲ್ಲಿ ಒಂದು ಗೋಡೆ ನಿರ್ಮಿಸಲು ಒಂದು ಯೋಜನೆ ಹಾಕಿಕೊಂಡಿದ್ದಾರೆ. ಈ ಸಮಿತಿಯವರು ೩ ತಿಂಗಳೊಳಗೆ ಒಂದು ಇಷ್ಟೂ ಬಗ್ಗೆ ವರದಿಯನ್ನು ಸರ್ಕಾರದ ಮುಂದೆ ಇಡಬೇಕಾಗಿತ್ತು. ಮೊದಲು ಒಂದು ಸಾರಿ ಈ ಬಗ್ಗೆ ನಮ್ಮನ್ನೆಲ್ಲಾ ಕರೆಯಿಸಿ ಹೇಳಿದರು. ಈ ಬಗ್ಗೆ ಒಂದು ಆರ್ಡರ್ ಹೊರಟು ಒಂದು ತಿಂಗಳಾದರೂ ಕೂಡ ಇದಕ್ಕೆ ಅಧ್ಯಕ್ಷರು ಯಾರು, ಸದಸ್ಯರು ಯಾರು ಎನ್ನುವುದು ಇನ್ನೂ ನೇಮಕವಾಗಿಲ್ಲ. ಇದಕ್ಕೆ ಎಷ್ಟು ಸಮಯ ಬೇಕಾಗುತ್ತದೆ? ಇದರ ಸಭೆ ಸೇರುವುದು ಯಾವಾಗ ಇದರ ಬಗ್ಗೆ ಕಾರ್ಯಕ್ರಮಗಳನ್ನು ತೆಗೆದು ಕೊಳ್ಳುವುದು ಯಾವಾಗ?

ಈ ರೀತಿ ಯಾವ ಕೆಲಸ ತೆಗೆದುಕೊಳ್ಳಿ ನಿಧಾನ ಗತಿ. ಇನ್ನೊಂದು ಉದಾಹರಣೆ ಹೇಳುವುದಾದರೆ ಕರ್ನಾಟಕ ರಾಜ್ಯದಲ್ಲಿ ವಿವಿಧ ಇಲಾಖೆಗಳಲ್ಲಿ ೫೫ ಸಾವಿರ ಹುದ್ದೆಗಳು ಖಾಲಿ ಇವೆ ಎಂದು ಹೇಳಿದಿರಿ. ಇದರ ಜೊತೆಗೆ ಇದುವರೆಗೆ ರಿಟೈರ್ಡ್ ಆಗಿರುವವರನ್ನು ಸೇರಿಸಿಕೊಂಡರೇ ೧೬ ಸಾವಿರ ಆಗುತ್ತದೆ. ಒಟ್ಟು ೭೧ ಸಾವಿರ ಹುದ್ದೆಗಳು ಖಾಲಿ ಇವೆ. ಈ ಹುದ್ದೆಗಳನ್ನು ಇದುವರೆಗೂ ಭರ್ತಿ ಮಾಡಿಲ್ಲ. ಎಷ್ಟೋ ಶಾಲೆಗಳಲ್ಲಿ ಉಪಾಧ್ಯಾಯರು ಇಲ್ಲ, ಟಿ. ಸಿ. ಹೆಚ್. ಮಾಡಿಕೊಂಡರೂ ಕೂಡ ಅವರಿಗೆ ಉದ್ಯೋಗ ಇಲ್ಲ. ತಹಸೀಲ್ದಾರರು ಹುದ್ದೆಗಳು ಇನ್ನೂ ಅನೇಕ ಆಫಿಸರ್ಸ್ ಇತರೇ ಅಧಿಕಾರಿಗಳ ಹುದ್ದೆಗಳು ಖಾಲಿ ಇವೆ. ಎಷ್ಟೋ ಕಡೇಗಳಲ್ಲಿ ಡಾಕ್ಟರ್ ಇಲ್ಲದೆ ವೈದ್ಯಕೀಯ ಸೌಲಭ್ಯಗಳು ಇಲ್ಲ. ಒಂದೊಂದರ ಕಡೆ ಒಂದು ಸೆಂಟರ್‌ನಲ್ಲಿ ಇರುವ ಅಧಿಕಾರಿಗೆ ಬೇರೆ ಕಡೆಯಲ್ಲೂ ಕೆಲಸ ಮಾಡುವ ಹಾಗೆ ಇನಛಾರ್ಜ ಎಂದು ಹಾಕಿರುತ್ತಾರೆ. ತಮಗೆ ಹೇಳಬೇಕಾದರೆ ಕಾರ್ಕಳ ಕ್ಷೇತ್ರದಲ್ಲಿರುವ ನಿಟ್ಟೆ ಎನ್ನುವ ಗ್ರಾಮದಲ್ಲಿ ಡಾಕ್ಟರ್ ಇಲ್ಲ ಎಂದು ಕೇಳಿದ್ದಕ್ಕೆ ಬೇರೆ ಸೆಂಟರ್‌ನಲ್ಲಿ ಇದ್ದಂಥ ವೈದ್ಯರನ್ನು ಅಲ್ಲಿಗೆ ಅಡಿಷನಲ್ ಛಾರ್ಜ ಎಂದು ಹಾಕಿದರು ಅವನನ್ನು ನೋಡಿದರೆ ಅವನು ಅಲ್ಲೂ ಕೆಲಸ ಮಾಡುವುದಿಲ್ಲ, ಇಲ್ಲೂ ಕೆಲಸ ಮಾಡುವುದಿಲ್ಲ. ಹೀಗಾಗಿ ಅಲ್ಲಿ ವೈದ್ಯರೇ ಇಲ್ಲದೆ ಜನಗಳು ಬಹಳ ಕಷ್ಟ ಪಡುತ್ತಿದ್ದಾರೆ. ಇದರ ಜೊತೆಗೆ ಇನ್ನೂ ಒಂದು ಉದಾಹರಣೆ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಸುಮಾರು ೧೩ ಸಾವಿರ ಜನ ಸ್ವೈಫಂಡರಿ ಗ್ರಾಜುಯೇಟ್ಸ್ ಇದ್ದಾರೆ. ಅವರಿಗೆ ಮೊದಲು ೧೫೦ ರೂಪಾಯಿಗಳನ್ನು ಕೊಡುತ್ತಿದ್ದರು, ಈಗ ೨೫೦ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಅವರನ್ನು ಇನ್ನೂ ಕೂಡ ರೆಗ್ಯುಲರೈಸ್ ಮಾಡಿಲ್ಲ. ಮೊದಲು ಇದಕ್ಕೆ ಹೈಕೋರ್ಟ್ ನಿರ್ಬಂಧ ಇತ್ತು. ಈಗ ಅದನ್ನು ತೆಗೆದು ಹಾಕಿದ್ದರೂ ಕೂಡ ಅವರು ನಮಗೆ ಒಂದು ನ್ಯಾಯವನ್ನು ಒದಗಿಸಿ ಕೊಡಬೇಕೆಂದು ಎಷ್ಟೋ ವಿಧದಲ್ಲಿ ಕೇಳಿ ಕೊಂಡರೂ ಕೂಡ ಇನ್ನೂ ಏನೂ ಕ್ರಮ ತೆಗೆದು ಕೊಂಡಿಲ್ಲ. ಈಗ ಎಷ್ಟೋ ಹುದ್ದೆಗಳು ಖಾಲಿ ಇವೆ. ಆದುದರಿಂದ ಅವರನ್ನು ರೆಗ್ಯುಲರೈಸ್ ಮಾಡುವುದಕ್ಕೆ ಸರ್ಕಾರದವರು ಕೂಡಲೇ ಕಾರ್ಯಕ್ರಮ ತೆಗೆದು ಕೊಳ್ಳಬೇಕು ಎಂದು ಹೇಳುತ್ತೇನೆ.

ಈಗ ಸರ್ಕಾರದವರು ನನಗೆ ತಿಳಿದ ಮಟ್ಟಿಗೆ ವಿವಿಧ ಇಲಾಖೆಗಳ ಬಗ್ಗೆ ೩೩ ನೇಮಕಾತಿ ಸಮಿತಿಗಳನ್ನು ಮಾಡಿದ್ದಾರೆ. ಇದು ಪೇಪರ್‌ನಲ್ಲಿ ಬಂದಿದೆ. ಇದರ ಬಗ್ಗೆ ಇನ್ನೂ ಯಾವ ಒಂದು ನೋಟಿಫಿಕೇಷನ್ ಹೊರಡಿಸಿಲ್ಲ. ಇವರು ಅಪ್ಲಿಕೇಷನ್ ಕರೆಯುವುದು ಯಾವಾಗ, ಅವರಿಗೆ ಇಂಟರ್‌ವ್ಯೂ ಮಾಡುವುದು ಯಾವಾಗ? ಅವರನ್ನು ನೇಮಕಾತಿ ಮಾಡಿಕೊಳ್ಳುವುದು ಯಾವಗ? ಈಗಾಗಲೇ ಸೆಪ್ಟೆಂಬರ್ ತಿಂಗಳು ಕಳೆದು ಹೋಗಿದೆ. ಹೀಗೆ ಯಾವುದರಲ್ಲಿ ನೋಡಲಿ ನಿಧಾನಗತಿಯನ್ನು. ನಾವು ಕಾಣುತ್ತಿದ್ದೇವೆ. ಈ ಸ್ಟೈಫಂಡರಿ ಗ್ರಾಜುಯೇಟ್ಸ್ ಅವರಿಗೆ ೫೦ ಪರ್ಸೆಂಟ್ ಎಂದು ರಿಸರ್ವ ಮಾಡಿದ್ದೀರಿ ಇನ್ನು ಉಳಿದ ೫೦ ಪರ್ಸೆಟ್ ಅನ್ನು ಆ ಬಗ್ಗೆ ಒಂದು ಫೇಸ್ಡ್ ಪ್ರೋಗ್ರಾಂ ಹಾಕಿಕೊಂಡು ಅವರನ್ನು ನೇಮಕಾತಿ ಮಾಡಿಕೊಳ್ಳಬೇಕು ಎಂದು ಹೇಳುತ್ತೇನೆ. ಇಲ್ಲದೇ ಹೋದರೆ ಕೊನೇಯಪಕ್ಷ ಅವರಿಗೆ ಈಗಿನ ಜೀವನಕ್ಕೆ ಸಲ್ಪ ಮಟ್ಟಿಗೆ ಸಾಕಾಗುವ ಹಾಗೆ ಅವರಿಗೆ ೫೦೦ ರೂಪಾಯಿ ಆದರೂ ಕೂಡ ಕೊಡುವ ಹಾಗೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಈಗ ಯುವಕರು ನಿರಾಸೆಯಾಗಿದ್ದಾರೆ. ಸ್ವೈಫಂಡರಿ ಗ್ರಾಜುಯೆಟ್ಸ್‌ನವರು ೧೩೬೦೦ ಜನ ಅದೇ ರೀತಿ ಲೋಕಲ್ ಕ್ಯಾಂಡಿಡೇಟ್ಸ್ ೪೬೦೦ ಜನ ಇದ್ದಾರೆ. ಒಟ್ಟು ೧೮೨೦೦ ಜನ ಏನು ಇದ್ದಾರೆ ಇವರನ್ನು ರೆಗ್ಯುಲರೈಸ್ ಮಾಡುವ ಹಾಗೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ ಈ ಸಂದರ್ಭದಲ್ಲಿ ನಾನು ತಮ್ಮನ್ನು ಒಂದು ಪ್ರಶ್ನೆಯನ್ನು ಕೇಳಬೇಕಾಗಿದೆ. ಅದೇನೆಂದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಮುಂದಿನ ಜೂನ್ ತಿಂಗಳು ಹೊತ್ತಿಗೆ ಶಾಲೆಗಳಿಗೆ ಅಧ್ಯಾಪಕರು ಎಷ್ಟು ಬೇಕಾಗುತ್ತಾರೆ? ಅದುವರೆಗೆ ಎಷ್ಟು ಜನ ಉಪಾಧ್ಯಾಯರು ನಿವೃತ್ತರಾಗಬಹುದು? ಎಷ್ಟು ಜನ ವಿದ್ಯಾರ್ಥಿಗಳು ಅಡ್ಮಿಷನ್ ಆಗಬಹುದು? ಇದರ ಒಂದು ಪ್ರೋಪರ್ಷನೇಟ್ ಲೆಕ್ಕ ಮಾಡಿಕೊಂಡರೆ ಒಳ್ಳೆಯದು. ನಿಮ್ಮ ಹತ್ತಿರ ಹೇಗಾದರೂ ಕೂಡ ಕಂಪ್ಯೂಟರ್ ಇದೆ, ಬೇಗನೆ ಇದರ ಒಂದು ಅಂದಾಜು ಸಿಗಬಹುದು. ಇದರ ಬಗ್ಗೆ ಹಾಗೆ ಅಂದಾಜು ಮಾಡಿಕೊಂಡು ಈಗಲೇ ಸೆಪ್ಟೆಂಬರ್ ತಿಂಗಳಿನಲ್ಲಿ ಈ ನೇಮಕಾತಿ ಬಗ್ಗೆ ಒಂದು ನೋಟಿಫಿಕೇಷನ್ ಹೊರಡಿಸಿದರೆ ಇದರ ಬಗ್ಗೆ ಅವರು ಅರ್ಜಿ ಹಾಕುವುದು ಕಾಲಾವಕಾಶ ಮತ್ತು ಇಂಟರ್‌ವ್ಯೂ ಇವೆಲ್ಲಾ ಮುಗಿದು ಅವರನ್ನು ಡಿಸೆಂಬರ್ ೩೧ ರೊಳಗೆ ಆಯ್ಕೆ ಮಾಡಿಕೊಳ್ಳಬಹುದು. ನಂತರ ಅವರನ್ನೆಲ್ಲಾ ಜೂನ್ ಒಂದನೆ ತಾರೀಖಿಗೆ ಅಪಾಯಿಂಟ್‌ಮೆಂಟ್ ಸಿಗುವ ಹಾಗೆ ಮಾಡಬಹುದು ಆಗ ಮಕ್ಕಳಿಗೂ ಸಹ ಒಳ್ಳೆಯ ವಿದ್ಯಾಭ್ಯಾಸ ಸಕಾಲದಲ್ಲಿ ಆಗುವಂತೆ ಅವಕಾಶವಾಗುತ್ತದೆ. ಈವೊತ್ತು ಸೆಪ್ಟೆಂಬರ್ ೨೦ನೇ ತಾರೀಖು

ಇದರ ಬಗ್ಗೆ ಇನ್ನೂ ಯಾವ ಕಾರ್ಯಕ್ರಮವನ್ನೂ ಸಹ ತೆಗೆದುಕೊಂಡಿಲ್ಲ. ನಾನು ಮೊನ್ನೆಯ ದಿವಸ ಮಾನ್ಯ ಶಿಕ್ಷಣ ಸಚಿವರಲ್ಲಿ ಈ ಬಗ್ಗೆ ಒಂದು ಪ್ರಶ್ನೆ ಕೇಳಿದಾಗ ಅವರು ಉತ್ತರ ಹೇಳಿದರು ಡಿ. ಎಲ್. ಆರ್. ಸಿ. ಮುಖಾಂತರ ಅಧ್ಯಾಪಕರನ್ನು ತೆಗೆದು ಕೊಳ್ಳುತ್ತೇವೆ. ಇದಕ್ಕೆ ಒಂದು ಡಿ. ಎಲ್. ಆರ್. ಸಿ. ಕಮಿಟಿಯನ್ನು ಮಾಡಿದ್ದೇವೆ ಎಂದು ಹೇಳಿದರು. ಸರ್ಕಾರೀ ಶಾಲೆಗಳಲ್ಲಿ ಈಗಾಗಲೇ ೫೦೦ ಅಧ್ಯಾಪಕರರಗಳ ಹುದ್ದೆಗಳು ಖಾಲಿ ಇವೆ ಎಂದು ಅವರು ಹೇಳಿದರು. ನೀವು ಇದರ ಬಗ್ಗೆ ನೋಟಿಫಿಕೇಷನ್ ಹೊರಡಿಸಿದರೆ ಅದಕ್ಕೆ ೫೧೪೦ ಜನ ಅಪ್ಲಿಕೇಷನ್ ಹಾಕುತ್ತಾರೆ. ನಾನು ಮೊದಲೇ ಹೇಳಿದ ಹಾಗೆ ಅವರು ಅರ್ಜಿ ಹಾಕುವುದು, ಸಂದರ್ಶನಕ್ಕೆ ಕರೆಯುವುದು ಅವರನ್ನು ಆಯ್ಕೆ ಮಾಡುವುದು ಇವೆಲ್ಲಾದಕ್ಕೂ ಕಾಲಾವಕಾಶ ಬೇಕಾಗಿರುವುದರಿಂದ ಈ ಕೆಲಸವನ್ನು ಈಗಿನಿಂದಲೇ ಮಾಡಿದರೆ ಬಹಳ ಅನುಕೂಲವಾಗುತ್ತದೆ. ಆದುದರಿಂದ ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ ಈಗ ತಾವು ಮಾಡಿರತಕ್ಕಂಥ ನೇಮಕಾತಿ ಸಮಿತಿಗಳನ್ನು ಚುರುಕುಗೊಳಿಸಿದರೆ ಮುಂದಿನ ೨—೩ ತಿಂಗಳೊಳಗೆ ಈ ಬಗ್ಗೆ ನೇಮಕಾತಿಯನ್ನು ಮಾಡುವುದಕ್ಕೆ ಅನುಕೂಲವಾಗುವುದಲ್ಲದೆ ಮಕ್ಕಳಿಗೂ ಕಾಲಕ್ಕೆ ಸರಿಯಾಗಿ ಪಾಠ ಪ್ರವಚನಗಳು ಆಗುವ ಹಾಗೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ.

ಇನ್ನು ಯೋಜನಾ ವೆಚ್ಚದ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಇತರೇ ಸಚಿವರೂ ಸಹ ಹೇಳಿದ್ದಾರೆ. ಈ ಬಜ್ಜೆಟ್ಟಿನ ಒಂದು ಅಂಕಿ ಅಂಶದ ಪ್ರಕಾರ ಹೇಳುವುದಾದರೆ? ನಮ್ಮ ರಾಜ್ಯದಲ್ಲಿ ಯೋಜನ ವೆಚ್ಚ ೧೯೮೨ರ ಮಾರ್ಚಿಯಲ್ಲೇ ೪೭೫ ಕೋಟಿ ರೂಪಾಯಿಗಳು ಇದ್ದುದು ೧೯೮೩ ರ ಮಾರ್ಚಿಯಲ್ಲಿ ೫೭೫ ಕೋಟಿ ರೂಪಾಯಿಗಳು ವೆಚ್ಚ ಆಗಿದೆ. ಅಲ್ಲಿಗೆ ಕಳೆದ ವರ್ಷದ ಬಡ್ಜೆಟ್ಟಿಗೂ ಈ ವರ್ಷದ ಬಡ್ಜೆಟ್ಟಿಗೂ ೧೦೦ಕೋಟಿ ರೂಪಾಯಿಗಳು ಹೆಚ್ಚಳ ಆಗಿದ್ದರೂ ಕೂಡ ಸರಿಯಾಗಿ ವಿನಿಯೋಗ ಮಾಡಲಿಕ್ಕೆ ಆಗಿದೆಯೋ ಇಲ್ಲವೇ ಎನ್ನುವುದನ್ನು ಹೇಳಲಿಕ್ಕೆ ಬರುವುದಿಲ್ಲ ಒಟ್ಟನಲ್ಲಿ ಹೇಳುವುದಾದರೆ, ಬೇರೆ ಬೇರೆ ಹಂತದಲ್ಲಿ ಇದರ ಕೆಲಸ ನಿಧಾನವಾಗಿರಬಹುದು. ಇದರ ಬಗ್ಗೆ ಆರ್ಗನೈಸೇಷನ್ ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ ಎಂದು ತಿಳಿಯಬೇಕಾಗುತ್ತದೆ. ಅದೇ ರೀತಿಯಾಗಿ ಈ ನೀರಾವರಿ ಪ್ರದೇಶಗಳಲ್ಲಿ ಯಾವ ರೀತಿ ಕಾರ್ಯಕ್ರಮಗಳೂ ಆಗಬೇಕೋ, ಹಾಗೆ ವಿದ್ಯಾ ಕ್ಷೇತ್ರದಲ್ಲಿ ಯಾವ ರೀತಿ ಕಾರ್ಯಕ್ರಮಗಳು ಆಗಬೇಕೋ ಆ ಕಾರ್ಯಕ್ರಮಗಳೂ ಸಹ ಒಂದು ಸುವ್ಯವಸ್ಥಿತವಾದ ರೀತಿಯಲ್ಲಿ ಆಗಿಲ್ಲ ಎಂದು ನಾನು ಹೇಳಬೇಕಾಗಿದೆ. ಹಾಗೆ ಯು. ಕೆ. ಪಿ. ಪ್ರೋಗ್ರಾಂ. ಘಟ ಪ್ರಭಾ ಯೋಜನೆಯ ಕೆಲಸದಲ್ಲೂ ಸಹ ನಿಧಾನವಾಗಿದೆ ಈ ಕಾರಂಜಿ ಪ್ರಾಜೆಕ್ಟ್ ಕೆಲಸ ಶುರುವಾದುದ್ದು ೧೯೭೨ ರ ಡಿಶೆಂಬರ್‌ನಲ್ಲಿ. ಇದಕ್ಕೆ ಪ್ರಾರಂಭದಲ್ಲೇ ೧೮.೬೬ ಲಕ್ಷ ಖರ್ಚಾಗಿದೆ. ಇದರಲ್ಲೂ ಹಾಗೆ, ಕೆಲಸ ಇಷ್ಟು ನಿಧಾನವಾಗುವುದಕ್ಕೆ ಕಾರಣ ಏನು? ಈ ವಿಚಾರದಲ್ಲಿ ನಾನು ಒಂದು ಪ್ರಶ್ನೆ ಕೇಳಿದ್ದೆ, ಅದಕ್ಕೆ ಇನ್ನೂ ಸಹ ಉತ್ತರ ಬಂದಿಲ್ಲ. ಈ ಕಾರಂಜಿ ಪ್ರಾಜೆಕ್ಟ್ ಕೆಲಸ ಶುರುವಾಗಿ ೧೧ ವರ್ಷವಾಗಿದ್ದರೂ ಕೂಡ ಇನ್ನೂ ಕಂಪ್ಲೀಟ್ ಮಾಡದೇ ಇರುವುದರಿಂದ, ನಿಧಾನ ಗತಿಯಲ್ಲಿ ಆಗುತ್ತಾ ಇರುವುದರಿಂದ ಆ ಜನರಿಗೆ ಇದರಿಂದ ಏನು ಉಪಯೋಗ ಸಿಕ್ಕುತ್ತಾ ಇಲ್ಲ. ಅಪ್ಪರ್‌ಕೃಷ್ಣ ಪ್ರಾಜೆಕ್ಟ್ ಕೆಲಸವೂ ಸಹ ಹಾಗೆಯೇ ಇದೆ.

ಇಂಜಿನಿಯರ್ಸ್ ಬೇರೆ ಒಬ್ಬರು ಬಾರದಿದ್ದರೆ ರಿಲೀವ್ ಮಾಡುವುದಿಲ್ಲ. ಅಲ್ಲಿ ಯಾರು ಇಂಜಿನಿಯರ್‌ಗಳು ಇದ್ದಾರೆ ಅವರಿಗೆ ಸರಿಯಾಗಿ ಕೆಲಸ ಇಲ್ಲದೆ ಅವರು ರಸ್ಟ್ ಹಿಡಿಯುತ್ತಿದ್ದಾರೆ, ಇರುವುದಕ್ಕೆ ಮನಸ್ಸಿಲ್ಲದ ಜೀವ ರಹಿತ ಪ್ರಾಣಿಗಳಂತೆ ಅವರು ಇರಬೇಕಾಗಿದೆ. ಬರಗಾಲ ಪರಿಹಾರದ ಬಗ್ಗೆ, ಕಾಳಿ ಯೋಜನೆಯ ಬಗ್ಗೆ ವರಾಹಿ ಆಗಲೀ ಆರ್.ಟಿ.ಪಿ. ಆಗಲೀ ಇಲ್ಲಿ ಯುದ್ಧದೋಪಾದಿಯಲ್ಲಿ ಕೆಲಸ ಮಾಡುತ್ತಾರೆಂದು ಹೇಳುತ್ತಾರೆ. ಅಲ್ಲಿ ಯುದ್ಧದೋಪಾದಿಯಲ್ಲಿ ಕೆಲಸ ಮಾಡುತ್ತಿರುವುದು ಕಾಣಿಸಲ್ಲಿಲ್ಲ. ನಾನು ಈ ಮಾತನ್ನು ಸರ್ಕ್ಯಾಸ್ಟಿಕ್ ಆಗಿ ಹೇಳಲಿಕ್ಕೆ ಬಯಸುವುದಿಲ್ಲ. ಆದರೆ ಯುದ್ಧ ದೋಪಾದಿಯಲ್ಲಿ ವಿಚಾರ ಮಾಡುವಂಥ ಆಲೋಚನೆ ತಮಗೆ ಇರಬೇಕು ಎಂದು ಮಾತ್ರ ನಾನು ಹೇಳುವುದಕ್ಕೆ ಬಯಸುತ್ತೇನೆ. ತಾವು ಹೇಳುವ ಮಾತು ಪುಸ್ತಕದಲ್ಲಿದೆಯೋ ಹೊರತು ಕಾರ್ಯರೂಪದಲ್ಲಿ ಇಲ್ಲ. ಬಡ್ಜೆಟ್ಟಿನಲ್ಲಿ ಯಾವ ಯಾವ ಯೋಜನೆಗಳ ಬಗ್ಗೆ ವಿಚಾರ ಮಾಡಿದ್ದೀರೋ ಅವುಗಳ ಬಗ್ಗೆ ಇಡಬೇಕಾದ ಪರಿಶ್ರಮವನ್ನು ತಾವು ತೋರಿದಂತೆ ಕಾಣಲಿಲ್ಲ. ಸಾಮಾನ್ಯ ಜನತೆಗೆ ಕೊಡಬೇಕಾದ ಅವಶ್ಯಕತೆಗಳಿಗೆ ತಾವು ೧೦೦ ಕೋಟಿ ರೂಪಾಯಿಗಳನ್ನು ತೋರಿಸಿದ್ದೀರಿ.

ಶ್ರೀ ಎಂ. ವೀರಪ್ಪಮೊಯಿಲಿ.—ಇದು ೫೧ಕೋಟಿ ರೂಪಾಯಿಗಳು ಮಾತ್ರ.

ಶ್ರೀ ವಿ.ಎಸ್.ಆಚಾರ್ಯ.—೫೧ ಕೋಟಿ ರೂಪಾಯಿಗಳ ಹೆಚ್ಚಳ ಮಾಡಿದಾರೆ. ಆದರೆ ಅದಕ್ಕೆ ಮಾಡತಕ್ಕ ಪರಿಶ್ರಮ, ತಮ್ಮ ವಿಚಾರ, ಕಾರ್ಯ ಶೈಲಿ ಇದರಲ್ಲಿ ಏನೂ ಕಾಣುತ್ತಿಲ್ಲ. ಈಗಾಗಲೇ ಆರು ತಿಂಗಳು ಇದರಲ್ಲಿಯೇ ಕಳೆದು ಹೋಯಿತು, ಇಂಥದ್ದರಲ್ಲಿ ನಾನು ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಏನಾದರೂ ಹಿಂಜರಿತವನ್ನು ತಡೆಹಿಡಿಯದೆ ಹೋದರೆ ನಿಜವಾಗಿಯೂ ನಮ್ಮ ಯೋಜನೆ ಕಾಮಗಾರಿಗಳನ್ನು ಅನುಷ್ಠಾನ ಮಾಡುವಂಥಾದ್ದು ಸಾಧ್ಯವಾಗುವುದಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ತಿಳಿಸಿದಹಾಗೆ, ಇವರು ಮೂರು ಶಬ್ಧಗಳಲ್ಲಿ ಕೊಟ್ಟಿರುವ ಆಶ್ವಾಸನೆಗಳು ದಾನ ಶುಲ್ಕ ರದ್ದಿಯಾತಿ ಏನೂ ಇವೆ ಅವುಗಳನ್ನು ಪ್ರತಿದಿವಸ ಇವರು ತಿರುವಿ ಹಾಕಬೇಕು ಮತ್ತು ಬೇಕಾದಂತ ಸ್ಫೂರ್ತಿಯನ್ನು ಪಡೆದು ಕೆಲಸಗಳನ್ನು ಮಾಡಬೇಕು ಎಂದು ನಾನು ಇವರ ಆಶ್ವಾಸನೆಗಳನ್ನು ವಿಶ್ಲೇಷಣೆ ಮಾಡುತ್ತಾ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಆಡಳಿತ ಯಂತ್ರದ ಮೇಲೆ ಸರಿಯಾದ ಹತೋಟಿಯನ್ನು ಇಟ್ಟುಕೊಳ್ಳಬೇಕಾಗಿದೆ. ಆಡಳಿತ ಯಂತ್ರದಲ್ಲಿ ನೇಮಕಾತಿಗಳನ್ನು ಮಾಡುವ ವಿಷಯ ಹಿಂದೆಯಾಗುತ್ತಿದೆ. ಹಿಂದೆ ಸಬ್ ಇನ್ಸ್‌ಪೆಕ್ಟರ್‌ಗಳನ್ನು ಅಥವಾ ತಹಸೀಲ್ದಾರ್ ಅಥವಾ ಅಸಿಸ್ಟೆಂಟ್ ಕಮಿಷನರ್‌ಗಳನ್ನು ನೇಮಕ ಮಾಡತಕ್ಕ ವಿಚಾರದಲ್ಲಿ ಯಾವ ರೀತಿಯಲ್ಲಿ ನಡೆಯಿತು ಎನ್ನುವುದು ಎಲ್ಲರಿಗೂ ಗೊತ್ತಿದೆ. ಇವತ್ತು ಶಾಸಕರ ಭವನದಲ್ಲಿ ಇರುವವರಿಗೆ ಇದು ಚೆನ್ನಾಗಿ ಗೊತ್ತಾಗುತ್ತದೆ. ತಾವು ನಮಗೆ ಪೊಲಿಟಿಕಲ್ ಇನ್‌ಫ್ಲೂಯನ್ಸ್ ಅಥವಾ ಮನಿ ಪವರ್ ಆಗಲೀ ಯಾವ ಒಂದು ಆಕರ್ಷಣೀಯಾ ನೇಮಕಾತಿ ವಿಷಯದಲ್ಲಿ ಇರಕೂಡದು ಇದು ನಡಯಲಿಕ್ಕೆ ಬಿಡುವುದಿಲ್ಲ ಎಂದು ಹೇಳಿದ್ದೀರಿ. ನಮಗೆ ಸ್ವಚ್ಛ ಆಡಳಿತವನ್ನು ಕೊಡುತ್ತೇವೆಂದೂ ಕೂಡ ಹೇಳಿದ್ದೀರಿ, ಆದರೆ ಇಂದು ಶಾಸಕರ ಭವನದಲ್ಲಿರುವಂಥ ನಮಗೆ ಜನರ ಇಂಟರವ್ಯೂ ಬಂದಿದೆ. ಒಂದು ಮಾತು ಹೇಳಬೇಕು, ಕೆ.ಪಿ.ಎಸ್.ಸಿ. ಇಂಟರ್‌ವ್ಯೂ ಬಂದಿದೆ, ಒಂದು ಮಾತನ್ನು ಹೇಳಬೇಕು ಎಂದು ಒತ್ತಾಯಮಾಡುತ್ತಿದ್ದಾರೆ, ತಾವು ಯೋಗ್ಯ ರೀತಿಯಲ್ಲಿ ನೇಮಕಾತಿಗಳು ನಡೆಯುತ್ತದೆ ಎಂದು ಜನತೆಗೆ ದೃಢ ವಿಶ್ವಾಸವನ್ನು ಕೊಟ್ಟಿದ್ದೀರಿ. ಯೋಗ್ಯರಾದವರನ್ನು ಅವರು ಎಂಥ ಬಡವರಿರಲಿ, ಹಿಂದುಳಿದ ವರ್ಗದವರು ಇರಲಿ, ವಿಶಾಸ ಲಾತಿಯ ಆಧಾರದ ಮೇಲೆ ನೇಮಕಾತಿಗಳನ್ನು ಮಾಡುತ್ತೇವೆ ಅನರಂತೆ ನಡೆಯುತ್ತೇ ಎನ್ನುವ ಮಾತನ್ನು ಹೇಳಿದ್ದೀರಿ ಈ ಭ್ರಷ್ಟಾಚಾರವನ್ನು ಒಂದೇ ದಿವಸದಲ್ಲಿ ನಿಲ್ಲಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಆದರೆ ಭ್ರಷ್ಟಾಚಾರದ ಉಗಮಗಳು ಏನು ಇವೆ ಅವುಗಳಲ್ಲಿ ಯೋಗ್ಯರಾದವರನ್ನು ಹಾಕಿ ಯೋಗ್ಯ ರೀತಿಯಲ್ಲಿ ನೇಮಕಾತಿಗಳು ಆದರೆ ಮುಂದೆ ಯೋಗ್ಯರಾದವರು ಕಾರ್ಯಾಲಯಗಳಲ್ಲಿರುವಾಗ ಒಳ್ಳೆಯರೀತಿಯಲ್ಲಿ ಕೆಲಸಗಳು ನಡೆಯುತ್ತವೆ. ಎನ್ನುವುದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಈ ರೀತಿಯಾಗಿ ಕೆಲಸ ಮಾಡುತ್ತೀರೆಂದು ನಾವು ನಿರೀಕ್ಷಣ ಮಾಡುತ್ತಿದ್ದೇವೆ. ಮೊನ್ನೆಯ ದಿವಸ ನಾನು ರಾಮಭಟ್ಟ ಅವರ ಕ್ಷೇತ್ರಕ್ಕೆ ಹೋಗಿದ್ದೆ. ಪುತ್ತೂರು ಕ್ಷೇತ್ರದ ಉಪ್ಪಿನಅಂಗಡಿ. ಅಲ್ಲಿ ನಡೆದಂಥ ಒಂದು ಘಟನೆಯನ್ನು ನಾನು ಇಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಅಲ್ಲಿ ಒಬ್ಬ ಹೊಸದಾಗಿ ಯುವಕ ಲಾರಿಯನ್ನು ಪಡೆದುಕೊಂಡು ಮಂಗಳೂರಿನಿಂದ ಒಳನಾಡಿನಲ್ಲಿ ಓಡಿಸುತ್ತಿದ್ದಾನೆ. ಅವನು ಡ್ರೈವಿಂಗ್ ಲೈಸೆನ್ಸ್, ಪರ್ಮಿಟ್ ಇನ್‌ಷ್ಯೂರೆನ್ಸ್ ಕವರ್ ಎಲ್ಲವನ್ನೂ ಆರ್.ಸಿ. ಬುಕ್‌ನ್ನೂ ಸಹ ಸರಿಯಾದ ರೀತಿಯಲ್ಲಿ ಇಟ್ಟುಕೊಂಡಿದ್ದಾನೆ ಒಂದು ಸಾರಿ ಲಾರಿ ಹೋಗಬೇಕಾದರೆ ಒಬ್ಬ ಸಬ್‌ಇನ್ಸ್‌ಪೆಕ್ಟರ ಹಿಡಿದು ನೂರು ರೂಪಾಯಿಗಳನ್ನು ಕೊಡಬೇಕು ಎಂದು ಕೇಳಿದ. ಇವನು ಹೇಳಿದ ಸ್ವಾಮಿ, ನಾನು ಎಲ್ಲವನ್ನೂ ಸರಿಯಾಗಿ ಇಟ್ಟುಕೊಂಡಿದ್ದೇನೆ. ನೂರುರೂಪಾಯಿಗಳನ್ನು ಏಕೆ ಕೊಡಬೇಕು ಎಂದು, ಅದಕ್ಕೆ ಸಬ್‌ಇನ್ಸ್‌ಪೆಕ್ಟರ್ ಹೇಳಿದ, ನೋಡು ನಾನು ಬಿ.ಕಾಂ. ಎಲ್ ಎಲ್ ಬಿ ಪಾಸ್ ಮಾಡಿದ್ದೇನೆ, ದೊಡ್ಡ ಮೀಸೆ ಇಟ್ಟುಕೊಂಡಿದ್ದೇನೆ. ಎಲ್ಲಾ ಸರಿಯಾಗಿದ್ದುದೇ ಕೆಲಸಕ್ಕೆ ೩೦ಸಾವಿರ ರೂಪಾಯಿಗಳನ್ನು ಖರ್ಚುಮಾಡಿಕೊಂಡು ಬರಬೇಕಾಯಿತು. ನೀವು ನೂರು ರೂಪಾಯಿಗಳನ್ನು ಕೊಡು ಎಂದರೆ ಇಷ್ಟು ಮಾತನಾಡುತ್ತೀಯ ಎಂದು ಹೇಳಿದ. ನಾನು ಇದನ್ನು ಏಕೆ ಪ್ರಸ್ತಾಪ ಮಾಡಿದೆ ಎಂದಿರೆ, ಈ ಒಂದು ಪರಿಸ್ಥಿತಿ ಏನು ಇದೆ. ಇದು ಬದಲಾವಣೆಯಾಗಬೇಕು. ತಾವು ಪುನ: ಇದೆ ಸ್ಥಿತಿಗೆ ಹೋದರೆ ಮುಂದೆ ಇಂಥ ಸನ್ನಿವೇಶಗಳನ್ನು ಎಷ್ಟು ಮಾತ್ರ ತಡೆಯಲಿಕ್ಕೆ ಸಾಧ್ಯವಾಗುತ್ತದೆಂದು ನಾನು ಕೇಳಬಯಸುತ್ತೇನೆ. ಬೇರೆ ಇಲಾಖೆಯ ನೇಮಕಾತಿಗಳು ಇರಬಹುದು ಇದರ ಬಗ್ಗೆ ಎಚ್ಚರಿಕೆಯಿಂದ ಯೋಗ್ಯರೀತಿಯಲ್ಲಿ ಬಡವರನ್ನು ಹಳ್ಳಿಗಾಡಿನ ಪ್ರದೇಶದವರನ್ನು ಯಾರು ವಿಧಾನಸೌಧವನ್ನು ನೋಡಲಿಕ್ಕೆ, ಬರಲಿಕ್ಕೆ ಗೊತ್ತಿಲ್ಲವೋ ಅಂಥ ಬಡ ಕುಟುಂಬದ ಜನರಿಗೆ

ಕೆಲಸಗಳನ್ನು ಕೊಟ್ಟು ಆಯ್ಕೆ ಮಾಡಿದರೆ ಆಡಳಿತ ಯೋಗ್ಯ ರೀತಿಯಲ್ಲಿ ನಡೆಯಲಿಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ನೇಮಕಾತಿಗಳು ಕೂಡಲೇ ಆಗಬೇಕು ಎಂದು ಎಲ್ಲರೂ ಹೇಳುತ್ತಿದ್ದಾರೆ. ಕರ್ನಾಟಕದ ಒಬ್ಬ ಯುವಕ ಉದ್ಯೋಗವಿಲ್ಲದ ಭಿಕ್ಷೆ ಬೇಡುತ್ತಿದ್ದರೆ ಅವನಿಗೆ ಯೋಗ್ಯ ಕೆಲಸಗಳನ್ನು ಕೊಡತಕ್ಕದ್ದು ಸರ್ಕಾರದ ಕರ್ತವ್ಯ. ಇಲ್ಲವಾದರೆ ನೀವು ಅಪವಾದಕ್ಕೆ ಕಾರಣರಾಗುತ್ತೀರಿ. ಇಂಥ ಕೆಲಸಗಳನ್ನು ಮಾಡಬೇಡಿ. ಕಳೆದ ಮೂರು ವರ್ಷಗಳಿಂದಲೂ ನೇಮಕಾತಿಗಳು ಸರಿಯಾಗಿ ಆಗಿಲ್ಲ. ೫೦ಸಾವಿರ ಹುದ್ದೆಗಳಿಗೆ ನೇಮಕಾತಿಗಳನ್ನು ಸರ್ಕಾರದವರು ಮಾಡಬೇಕಾಗಿದೆ. ಇದಕ್ಕೆ ಸೂಕ್ತ ಕ್ರಮ ಹಾಕಿಕೊಂಡು ಇದನ್ನು ವಾರ್ ಫುಟಿಂಗ್ ಬೇಸಿಕ್ ಮೇಲೆ ಮಾಡಬೇಕು. ಸಮಸ್ಯೆ ಬಹಳ ಎಕ್ಸ್ಟ್ರಾರ್ಡಿನರಿ ಪರಿಸ್ಥಿತಿಗೆ ಹೋಗಿದೆ. ದಯಮಾಡಿ ಯೋಗ್ಯ ಜನರನ್ನು ಹಿಂಸಿಸದೆ ತಮಗೆ ಏನೋ ಅವಕಾಶ ದೊರೆತಿದೆ ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಕೊಂಡು ದೊಡ್ಡ ಮಟ್ಟದ ಕೆಲಸವನ್ನು ಮಾಡಿ ಕರ್ನಾಟಕ ಸೇವಾ ಸಿಬ್ಬಂದಿಗೆ ಯೋಗ್ಯರನ್ನು ನೇಮಕ ಮಾಡಬೇಕು ಎಂದು ನಾನು ಕಳಕಳಿಯಿಂದ ತಮ್ಮನ್ನು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ರೈತರ ಬಗ್ಗೆ ಸಾಕಷ್ಟು ವಿವರವಾಗಿ ಹೇಳಿದ್ದಾರೆ. ೩೦-೬-೮೩ರೊಳಗೆ ರೈತರು ತೆಗೆದುಕೊಂಡಿರುವ ಸಾಲವನ್ನು ಮರುಪಾವತಿ ಮಾಡುವುದಾದರೆ ಅಂಥವರು ಬಡ್ಡಿಯನ್ನು ಕೊಡುವುದು ಬೇಡ ಎಂದು ಹೇಳಿದ್ದಾರೆ. ಶ್ರೀಮಂತರಾದವರು ಇದನ್ನು ಕೊಡುತಾರೆ ಆದರೆ ಸಣ್ಣ ರೈತರು ಏನು ಮಾಡಬೇಕು ? ಬಜೆಟ್ಟಿನಲ್ಲಿ ಹೇಳಿರುವ ಕಾರ್ಯಕ್ರಮಗಳನ್ನು ನಿಲ್ಲಿಸಬಿಡಬೇಕಾದ ಪ್ರಸಂಗ ಬರಬಹುದು ಎನ್ನುವ ಮಾತನ್ನು ಅವರು ಈ ಸಂದರ್ಭದಲ್ಲಿ ಹೇಳಿದ್ದಾರೆ. ಇದರಿಂದ ಯಾರಿಗೆ ತೊಂದರೆಯಾಗುತ್ತದೆ ಎನ್ನುವುದನ್ನು ನಾವು ಯೋಜನೆ ಮಾಡಬೇಕು. ಬಡವರು ಈ ಹಣವನ್ನು ಕೊಡುವುದಕ್ಕೆ ಸಾಧ್ಯವೇ ? ಇದನ್ನು ಜನವರಿ ತಿಂಗಳಿಗಾದರೂ ತಾವು ವಿಸ್ತರಣೆ ಮಾಡಿದರೆ ಸಾಮಾನ್ಯ ಬಡವರೂ ಸಹ ಒಂದು ಉಪಯೋಗವನ್ನು ಪಡೆಯುವುದಕ್ಕೆ ಅವಕಾಶವಾಗುತ್ತದೆ. ಇದನ್ನು ತಾವು ಮಾಡಲಿಲ್ಲ, ಇದೇ ರೀತಿಯಲ್ಲಿ ಬರಗಾಲ ಪರಿಹಾರ ಕಾಮಗಾರಿಗಳ ವಿಷಯದಲ್ಲಿಯೂ ಸಹ ತಾವು ಕೇಂದ್ರಕ್ಕೆ ೩೬ ಕೋಟಿ ರೂಪಾಯಿಗಳ ಬೇಡಿಕೆಯನು ಸಲ್ಲಿಸಿದ್ದೀರಿ. ಇದಕ್ಕೆ ತಮಗೆ ದೊರೆತ ನೆರವು ೧೫ಕೋಟಿ ರೂಪಾಯಿಗಳು ಮಾತ್ರ. ಅವರೇ ತಿಳಿಸಿದಂತೆ ೨೧ಕೋಟಿ ರೂಪಾಯಿಗಳು ರಾಜ್ಯಕ್ಕೆ ಬರಲಿಲ್ಲ. ತಾವು ಈ ಮನೆಯಲ್ಲಿ ಸ್ಕೇರಿಸಿಟಿ ಕೆಲಸಗಳನ್ನು ಕೈಗೆ ತೆಗೆದುಕೊಳ್ಳುತ್ತೇವೆಂದು ಭರವಸೆ ಕೊಟ್ಟಿದ್ದೀರಿ. ಇದು ಹೇಗೆ ಸಾಧ್ಯ. ನಾನು ಅನೇಕ ಜಿಲ್ಲಾಧಿಕಾರಿಗಳನ್ನು ಭೇಟಿಯಾಗಿದ್ದೇನೆ. ಅವರು ತಿಳಿಸಿದಂತೆ ಅನೇಕ ಜಿಲ್ಲೆಗಳಿಗೆ ಈ ಸ್ಕೇರ್ಸಿಟಿ ಕೆಲಸ ನಿಂತು ಹೋಗಿದೆ. ಬಡವರಿಗೆ ಮನೆಗಳನ್ನು ಕಟ್ಟುವ ಯೋಜನೆಯಾಗಲೀ, ಎನ್.ಎ.ಆರ್.ಡಿ. ಯೋಜನೆಗೆ ಈ ವರೆಗೆ ೭.೨೦ ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ತಾವು ಒಂದು ಮನೆಯನ್ನು ಮಂಜೂರು ಮಾಡಲಿಕ್ಕೆ ಕ್ರಮತೆಗೆದುಕೊಂಡಿದ್ದೀರಿ? ಹಿಂದೆ ಸ್ಯಾಂಕನ್ ಮಾಡಿದಂಥಾವುಗಳಿಗೆ ತಾವು ದುಡ್ಡು ಕೊಟ್ಟಿದ್ದೀರಿ. ಒಂದೊಂದು ತಾಲ್ಲೂಕಿನಲಿ ನೂರು ಮನೆಗಳನ್ನು, ಸಾವಿರ ಮನೆಗಳನ್ನು ಕಟ್ಟುತ್ತೇವೆಂದು ಘೋಷಣೆ ಮಾಡಿ ಕೊನೆಗೆ ಅವರು ದುಡ್ಡನ್ನು ಕೊಡಲಿಲ್ಲ. ತಾವು ಒಂದು ತಾಲೂಕಿಗೆ ನೂರು ಮನೆಗಳನ್ನು ಕಟ್ಟುತಕ್ಕ ಕೆಲಸಗಳನ್ನು ಮಾಡಬೇಕು. ೧೯-೩-೮೩ರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವ ಬಜೆಟಿನಲ್ಲಿ ನಮೂದಿಸಿರುವ ವಾಕ್ಯವನ್ನು ನಾನು ಇಲ್ಲಿ ಓದುವುದಕ್ಕೆ ಇಷ್ಟಪಡುತ್ತೇನೆ.

ಈ ಬಜೆಟ್ ಕೇವಲ ಯೋಜನೆಗಳ ಪಟ್ಟಿಯಲ್ಲಿ, ಜೀವರಹಿತ ಅಂಕಿಅಂಶಗಳ ಹೊತ್ತಗೆಯೂ ಅಲ್ಲ. ಜನತೆಯ ಸಂಕಷ್ಟಗಳನ್ನು ಆಕಾಂಕ್ಷೆಗಳನ್ನೂ ಆಶೋತ್ತರಗಳನ್ನು ಆ ಸಂಬಧವಾಗಿ ಸರ್ಕಾರದ ಪ್ರತಿಕ್ರಿಯೆಯನ್ನು ಬಜೆಟ್ ಸ್ಪಂದಿಸುತ್ತದೆ. ಜನತೆಯ ಬದುಕನ್ನು ಹಸನಾಗಿಸುವ ದಿಸೆಯಲ್ಲಿ ಸರ್ಕಾರವು ಭಾರಿ ಸವಾಲನ್ನು ಇದಿರಿಸಬೇಕಾಗುತ್ತದೆ ನಾವು ಕೃತಸಂಕಲ್ಪರಾದರೆ ಜನ ಸಮೂಹಯಿಂದ ಸಂಪೂರ್ಣ ಸಹಕಾರ ನಮಗೆ ದೊರೆತರೆ ಈ ಸವಾಲೇ ಸದವಕಾಶವಾಗಿ ಪರಿಣಮಿಸುವುದೆಂದು ನಾನು ನಂಬಿದ್ದೇನೆ. ಎಂದು ಬರೆದಿದ್ದಾರೆ. ಇವರು ಇನ್ನೂ ಕೃತಸಂಕಲ್ಪರಾಗಲಿಲ್ಲ ಎನ್ನುವ ಸಂಶಯ ನಮಗೆ ಬಂದಿದೆ. ಆದ್ದರಿಂದ ತಾವು ಜನತೆಯ ಪರವಾಗಿ ಕೃತಸಂಕಲ್ಪರಾಗಬೇಕೆಂದು ನಾನು ತಮ್ಮನ್ನು ಕೈಮುಗಿದು ಕೇಳಿಕೊಳ್ಳುತ್ತೇನೆ.

ಆ ಆದೇಶಕ್ಕೆ ಪ್ರತಿಯಾಗಿ ನಾವು ಬೆಂಬಲ ಕೊಟ್ಟಿದ್ದೇವೆ. ಮಾನ್ಯ ಮೊಯಿಲಿಯವರು ಹೇಳಿದ ಹಾಗೆ ಆ ಜನತೆಯ ಆದೇಶ ಕಾಂಗ್ರೆಸ್ಸೇತರ ಸರ್ಕಾರ ಬರಬೇಕು ಎಂದು ಹೇಳುವಂಥ ಆದೇಶವಿತ್ತು, ಆ ಆದೇಶವನ್ನು ಮನ್ನಿಸಿ ನಾವು ಬೆಂಬಲ ಕೊಟ್ಟೆವು. ಈ ಬೆಂಬಲವನ್ನು ನಿರರ್ಥಕ ಮಾತ್ರ ಮಾಡಬೇಡಿ. ಇದು ಜನತೆಯ ಉಪಕಾರಕೋಸ್ಕರ ಕೊಡತಕ್ಕಂಥ ಬೆಂಬಲ, ತಾವು ಜನತೆಯ ಕಲ್ಯಾಣದಲ್ಲಿ ತೊಡಗಬೇಕು ಎನ್ನುವ ಮಾತನ್ನು ಹೇಳುತ್ತೇನೆ,

ಇನ್ನು ಒಂದೊಂದೇ ಇಲಾಖೆಯ ಬಗ್ಗೆ ಸಂಕ್ಷಿಪ್ತವಾಗಿ ಹೇಳುತ್ತೇನೆ. ಮೊದಲನೆಯದಾಗಿ, ಮಾರಾಟ ತೆರಿಗೆ. ಇದು ನಮ್ಮ ರಾಜ್ಯದ ಖಜಾನೆಗೆ ಬರತಕ್ಕಂಥ ಬಹು ಪ್ರಾಮುಖ್ಯವಾದಂಥ ಆದಾಯದ ಮೂಲ. ಈ ಆದಾಯದ ಮೂಲ ಬರುವುದಕ್ಕೆ ಎಷ್ಟು ಪ್ರಯತ್ನ ಮಾಡಿದ್ದಾರೋ ಅಷ್ಟೇ ಅದನ್ನು ವಸೂಲ ಮಾಡುವಲ್ಲಿ ಸಂಪೂರ್ಣವಾದ ಪರಿಶ್ರಮ. ನಿಷ್ಟಬೇಕಾಗುತ್ತದೆ. ಇದು ಎಷ್ಟು ಬಾಕಿ ಇದೆ ಎಂದು ಕೊಟ್ಟಿದ್ದೀರಿ. ನೀವು ಕೊಟ್ಟಿರುವ ಸ್ಕೇಲ್ ಪ್ರಕಾರ ೧೯೭೨-೭೩ರಲ್ಲಿ ನಿಮ್ಮ ವರದಿಯಲ್ಲಿ ವರ್ಷದ ಅವಧಿಯಲ್ಲಿ ೧ ಲಕ್ಷ ೫೧ ಸಾವಿರದ ೧೫೧ ಕೇಸಸ್ ಅಸೆಸ್‌ಮೆಂಟಿಗೆ ಪೆಂಡಿಂಗ್ ಇದೆ ಪುನಃ ಆ ಚಾಲ್ತಿ ವರ್ಷದಲ್ಲಿ ಎಷ್ಟು ಎಂದು ಕೊಟ್ಟಿದೆ. ಫೈಲ್ ಕ್ಲಿಯರ್ ಆದದ್ದು: ೧ ಲಕ್ಷ ೭೮ ಸಾವಿರದ ೭೫೭ ಜನರಿಗೆ ನೋಟೀಸ್ ಕೊಟ್ಟಿದೆ, ಇದು ವರ್ಷದ ಆಖೈರಿಗೆ ಹೆಚ್ಚಾಯಿತು. ಪ್ರಾರಂಭದಲ್ಲಿ ೧ ಲಕ್ಷ ೮೧ ಸಾವಿರದ ೧೫೧ ಇದುದ್ದು ನಂತರ ೨ ಲಕ್ಷ. ೪೬ ಸಾವಿರದ ೯೩೮ ಕೇಸಸ್ ಪೆಂಡಿಂಗ್ ಆಯಿತು. ಇದನ್ನು ಪುನರ್ವ್ಯವಸ್ಥೆ ಮಾಡುವುದು ಅತ್ಯಾವಶ್ಯಕ. ೧೯೭೫-೭೬ನೇ ಇಸವಿಯಿಂದ ಅಸೆಸ್‌ಮೆಂಟ್ ಫೈನಲೈಸ್ ಮಾಡುವಂಥಾದ್ದು ಬಾಕಿ ಇದೆ. ಆದುದರಿಂದ ದಯವಿಟ್ಟು ಅಂತಹ ಒಂದು ಶಿಥಿಲತೆಗೆ ಅವಕಾಶ ಮಾಡಿಕೊಡಬಾರದು. ಮತ್ತೆ ೨೯ ಚೆಕ್‌ಪೋಸ್ಟ್‌ಗಳು, ವಿಜಿಲೆನ್ಸ್ ಕಮಿಷನ್ಸ್ ಸ್ಕ್ವಾಡ್‌ಗಳನ್ನು ಮಾಡಿರುವುದು ಸ್ಯಾಂಪಲ್ ಟೆಸ್ಟ್ ಎಂದು ಹೇಳುತ್ತೀರಿ. ಇದೆಲ್ಲಾ ಬರೀ ಅಕೆಡೆಮಿಕ್ ಆಗಿ ಹೋಗಬಾರದು, ನಿಜವಾದಂಥ ಅರ್ಥದಲ್ಲಿ ಇವುಗಳ ಕ್ರಮಗಳನ್ನು ತೆಗೆದುಕೊಂಡು ತಮ್ಮ ಕರ್ತವ್ಯ ಮಾಡುವಂತೆ ಮಾಡಬೇಕು ಸಾಮಾನ್ಯವಾದ ಅಸೆಸ್‌ಮೆಂಟ್ ಮಾಡಿದಮೇಲೆ ವಿಜಿಲೆನ್ಸ್ ಇಟ್ಟಿದ್ದೀರಿ, ಅದರ ಮೇಲೆ ಸ್ಕ್ವಾಡ್ ಇಟ್ಟಿದ್ದೀರಿ. ಈ ವಿಜಿಲೆನ್ಸ್ ಸ್ಕ್ವಾಡ್‌ಗಳು ತಮ್ಮ ಕೆಲಸವನ್ನು ಮಾಡುವುದರ ಬದಲಾಗಿ ಇನ್ನಷ್ಟು ಭ್ರಷ್ಟಾಚಾರಕ್ಕೆ ಆಸ್ಪದವಾಗುವ ಸಂದರ್ಭ ಬಂದಿದೆ. ಇದಕ್ಕೆ ಬೇಕಾದಷ್ಟು ಉದಾಹರಣೆ ಕೊಡಬಲ್ಲೆ, ಆದರೆ ಸಮಯದ ಅಭಾವವಿದೆ. ಆದರೂ ಸಂಕ್ಷೇಪವಾಗಿ ಹೇಳುತ್ತೇನೆ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಅಕ್ಕಿ ನೆರೆರಾಜ್ಯಕ್ಕೆ ಹೋಗುತ್ತಿತ್ತು. ಆ ಸಂದರ್ಭದಲ್ಲಿ ಅಲ್ಲಿರುವ ಶಾಸಕರು ಮಧ್ಯರಾತ್ರಿ ಒಂದು ಗಂಟೆಗೆ. ಎರಡು ಗಂಟೆಗೆ, ಮೂರು ಗಂಟೆಗೆ ರಾತ್ರಿಹಗಲು ಹೋಗಿ ನೋಡಿದ್ದೇವೆ. ನಾನು ಬಿ. ಬಿ. ಶೆಟ್ಟರು, ಮಾನ್ಯ ರುಕ್ಮಯ ಪೂಜಾರಿಯವರು, ನಾವೆಲ್ಲಾ ಶಾಸಕರು ಹೋಗಿದ್ದೇವೆ. ಒಂದು ಚೆಕ್‌ಪೋಸ್ಟ್‌ನಲ್ಲಿ ಲಾರಿ ನಂಬರ್ ಹಾಕಿದರು, ಅದೇ ಇನ್ನೊಂದು ಚೆಕ್‌ಪೋಸ್ಟ್‌ನಲ್ಲಿ ಆರಾಮವಾಗಿ ಹೊರ ರಾಜ್ಯಕ್ಕೆ ಹೋಗುತ್ತಿದೆ. ಬೂಸ ಎಂದು ಹೇಳಿಕೊಂಡು ಅಕ್ಕಿ ಮೂಟೆಗಳು ಹೋಗಿವೆ. ಸಾಮಾನುಗಳು ಬೇರೆ ಇರುತ್ತವೆ. ಇನ್‌ವಾಯ್ಸ್ ಬೇರೆ ಇರುತ್ತದೆ. ಆದುದರಿಂದ ಚೆಕ್‌ಪೋಸ್ಟ್‌ನವರು ಸರಿಯಾಗಿ ನೋಡಬೇಕಾಗಿದೆ. ಮತ್ತೆ ಟ್ಯಾಕ್ಸೇಷನ್ ಬಗ್ಗೆ ಹೇಳುವಾಗ ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದಂಥ ಬಜೆಟ್‌ನಲ್ಲಿ ತೆರಿಗೆಯ ಸರಳೀಕರಣ ಎಂದು ಹೇಳಿಕೊಂಡು ಮೂರು ಸಾರಿ ಉಲ್ಲೇಖಮಾಡಿದ್ದಾರೆ, ಎಲ್ಲಿ ತೆರಿಗೆಯ ಸರಳೀಕರಣವಾಗಿದೆ ? ಇವತ್ತು ಕರ್ನಾಟಕ ರಾಜ್ಯದಲ್ಲಿ ಒಂದು ಪೆನ್ನಿಗೆ ೪ ನಮೂನೆಯ ಟ್ಯಾಕ್ಸ್‌ಗಳಿವೆ. ಒಂದು, ಸೇಲ್ಸ್ ಟ್ಯಾಕ್ಸ್ ಒಂದು ಸರ್ಚಾರ್ಜ್, ಒಂದು ಎಂಟ್ರಿ ಟ್ಯಾಕ್ಸ್, ಒಂದು ಟರ್ನ್‌ಓವರ್ ಟ್ಯಾಕ್ಸ್, ಹೀಗೆ ರೀತಿನಾಲ್ಕು ನಮೂನೆಯ ತೆರಿಗೆಯ ವಸೂಲಿ ಇದೆ. ಇದನ್ನು ಕ್ಲಬ್ಬಿಂಗ್ ಆಫ್ ಟ್ಯಾಕ್ಸ್ ಮಾಡುವುದಕ್ಕೆ ಆಗುವುದಿಲ್ಲವೇ ? ಮಾರಾಟ ಮಾಡತಕ್ಕವರಿಗೆ ತಿಳುವಳಿಕೆ ಇರುವುದಿಲ್ಲ, ಯಾವ ವಸ್ತುಗಳಿಗೆ ಎಷ್ಟು ಟರ್ನ್‌ಓವರ್ ಟ್ಯಾಕ್ಸ್ ಎಷ್ಟು ಬೇರೆ ಟ್ಯಾಕ್ಸ್‌ಗಳು ಎಂದು ಗ್ರಾಹಕರಾದ ನಮಗೂ ತಿಳಿದಿರುವುದಿಲ್ಲ. ಹೀಗಾಗಿ ಇದು ದೊಡ್ಡ ರೀತಿಯ ಭ್ರಷ್ಟಾಚಾರಕ್ಕೆ ಕಾರಣವಾಗುತ್ತದೆ. ಆದುದರಿಂದ ದಯವಿಟ್ಟು ಈ ಟ್ಯಾಕ್ಸ್‌ಗಳನ್ನು ಹೊಂದಿಸಿಕೊಂಡು ಒಂದೇ ಟ್ಯಾಕ್ಸ್ ಮಾಡುವಂಥದ್ದು ಅಗತ್ಯವಿದೆ. ಇನ್ನು ಲೆವಿ ಪ್ಯಾಟ್ರನ್‌ನನ್ನು ಬದಲಾವಣೆ ಮಾಡುವುದಕ್ಕೆ ಬರುತ್ತದೆ ನೆರೆ ರಾಜ್ಯವಾದ ಮಹಾರಾಷ್ಟ್ರ ರಾಜ್ಯದಲ್ಲಿ ಅನೇಕ ವಿಷಯಗಳ ಬಗ್ಗೆ ಅನೇಕ ವಸ್ತುಗಳಿಗೆ ಸಿಂಗಲ್ ಪಾಯಿಂಟ್ ಟ್ಯಾಕ್ಸೇಷನ್ ಇದೆ. ಆದರೆ ನಮ್ಮಲ್ಲಿ ಕೆಲವಕ್ಕೆ ಮಾತ್ರ ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಇವೆ. ಅತೀ ಅವಶ್ಯಕವಾಗಿ ಯಾವುದಕ್ಕೆ ಇರಬೇಕೋ ಅಂಥಾದ್ದಕ್ಕೆ ಮಲ್ಟಿಪಾಯಿಂಟ್ ಟ್ಯಾಕ್ಸ್ ಇದೆ. ಈ ಸಿಂಗಲ್ ಪಾಯಿಂಟ್ ಮತ್ತು ಮಲ್ಟಿ ಪಾಯಿಂಟ್ ಟ್ಯಾಕ್‌ಗಳ

ಘರ್ಷಣೆಯಿದೆ. ಮೂಲತ. ಮಾರಾಟವಾಗುವಾಗ ಫಸ್ಟ್ ಸ್ಟೇಜ್‌ನಲ್ಲಿ ಸಿಂಗಲ್‌ಪಾಯಿಂಟ್ ಟ್ಯಾಕ್ಸ್ ಮಾಡುವುದು ಬಹಳ ಅಗತ್ಯವಿದೆ. ಅದೇ ರೀತಿ ಟರ್ನ್‌ಓವರ್ ಟ್ಯಾಕ್ಸ್ ಸಹ ಕೊನೆಯ ಪಕ್ಷ ಸಿಂಗಲ್ ಪಾಯಿಂಟ್ ಇರಬೇಕು. ಎಷ್ಟು ಸಾರಿ ಮಾರಾಟ ಮಾಡಿದರೂ ಅದಕ್ಕೆ ಮಲ್ಟಿ ಪಾಯಿಂಟ್ ಟ್ಯಾಕ್ಸ್ ಮಾಡುವಂಥದ್ದು ಹುಚ್ಚಾದ ವ್ಯವಸ್ಥೆಯಿದೆ. ಎಂಟ್ರಿ ಟ್ಯಾಕ್ಸ್ ಮೂರು ವಿಷಯಗಳಿಗೆ ಮಾತ್ರ ಇತ್ತು. ಕಾಟನ್ ಕ್ಲೋತ್, ಟೊಬ್ಯಾಕೊ ಮತ್ತು ಸಕ್ಕರೆಗೆ ಮಾತ್ರ ಇತ್ತು. ಇವತ್ತು ಇಡೀ ಈ ಜಾಲವನ್ನು ವಿಸ್ತರಣೆ ಮಾಡಿದ್ದೀರಿ. ಕಳೆದ ವರ್ಷ ಮಾನ್ಯ ನಗರಾಡಳಿತ ಸಚಿವರು ಕೊಟ್ಟಂಥ ವರದಿ ನೋಡಿದೆ. ಒಂದು ಊರಿನಲ್ಲಿ ಟ್ಯಾಕ್ಸ್ ವಸೂಲಾಗುತ್ತಿದೆ, ಎಂಟ್ರಿ ಟ್ಯಾಕ್ಸ್ ವಸೂಲಾಗುತ್ತಿದೆ ಈ ಟ್ಯಾಕ್ಸ್‌ನಿಂದಅಥವಾ ಆಕ್ಟ್ರಾಯನಿಂದರಿಹಾರ ಎಂದು ಹೇಳಿಕೊಳ್ಳುವಂಥ ಗ್ರಾಂಟ್ ಆ ಊರಿಗೆ ಸಿಕ್ಕಿಲ್ಲ. ಆದುದರಿಂದ ಅಲ್ಲಿ ಕೂಡಲೇನ್ಯಾಯ ದೊರಕಿಸಿಕೊಡುವ ಕೆಲಸಆಗಬೇಕು ಮತ್ತೊಂದು ಬಹಳಪ್ರಾಮುಖ್ಯವಾದಂಥ ವಿಷಯ ಇದೆ. ಬಹಳ ಜನ ಉಪಯೋಗಿಸುವಂಥ ವಿಷಯದ ಬಗ್ಗೆ Downward revision of salestax,commodities of mass consumption. ಎಂದು ಇದೆ. ಟೀ ಕಾಫಿ ಎಲ್ಲಾ ಆಹಾರ ಪದಾರ್ಥಗಳು,ಬಟ್ಟೆ, ಸೀಮೆಎಣ್ಣೆ,ಟಾಯ್ಲೆಟ್ ಸೋಪ್ ಮತ್ತು ಮೆಡಿಷನಲ್ ಪ್ರಿಪ್ರರೇಷನ್ ಇವೆ. ಇವು ಜನಸಾಮಾನ್ಯರು ಬಹಳ ಬಳಕೆ ಮಾಡುವಂಥ ವಸ್ತುಗಳು. ಜನಸಂಖ್ಯೆ ಜಾಸ್ತಿಯಾದ ಹಾಗೆ ಬಳಕೆಯೂ ಜಾಸ್ತಿ ಆಗುತ್ತದೆ. ಆದರೆ ಇವತ್ತು ಬೆಲೆ ಏರಿಕೆಯಿಂದ ತೆರಿಗೆಯ ಲಾಭ ಬರಲಿ ಎಂದರೆ ಟೀ ಕಾಫಿ, ಮುಂತಾದ ಆಹಾರಪದಾರ್ಥಗಳ ಬೆಲೆ ಏರಿಕೆಯಿಂದ ಸೇಲ್ಸ್ ಟ್ಯಾಕ್ಸ್ ರೂಪದಲ್ಲಿ ರಾಜ್ಯಸರ್ಕಾರಕ್ಕೆ ಬರಬೇಕು ಎಂದರೆ ಒಂದು ರೀತಿಯ ದರೋಡೆಯಾಗುತ್ತದೆ. ರಾಜ್ಯ ಸರ್ಕಾರ ಅಂತಹ ಸಂದರ್ಭದಲ್ಲಿ ಒಂದು ಸೇಲ್ ಇಂಡೆಕ್ಸ್ ಮಾಡಿಕೊಂಡು ಯಾವ ವಸ್ತುಗಳು ಬೆಲೆ ಏರಿಕೆ ಆಗುತ್ತಿವೆ, ನಿತ್ಯೋಪಯೋಗಿ ವಸ್ತುಗಳ ಬೆಲೆ ಏರಿಕೆಯಾದರೆ ಡೌನ್‌ವರ್ಡ್ ರಿವಿಜನ್ ಆಫ್ ಟಾಕ್ಸ್ ಮಾಡಿದರೆ, ಸೂಚ್ಯಂಕದಲ್ಲಿ ಇಷ್ಟು ಪಾಯಿಂಟ್ ರೈಸ್ ಆದರೆ ಈ ರೀತಿ ತೆರಿಗೆ ಕಡಿಮೆಯಾಗುತ್ತದೆ ಎನ್ನುವ ಸೂತ್ರವನ್ನೇನಾದರೂ ಮಾಡಿ ಜನತೆಯ ಬಚಾವ್ ಮಾಡಬೇಕಾಗುತ್ತದೆ. ಇದಕ್ಕೆ ನೀವು ಸರಳೀಕರಣ, ನಿರ್ಮೂಲೀಕರಣ ತೆರಿಗೆ ಎಂದು ಹೇಳಬಹುದು ಅದೇ ರೀತಿ ನಾನು ಮೊನ್ನೆ ಪ್ರಶ್ನೆ ಕೇಳಿದ್ದೆ, ಆ ದಿವಸಮಾನ್ಯ ಮುಖ್ಯ ಮಂತ್ರಿಗಳು ಇರಲಿಲ್ಲ ಇವತ್ತೂ ಕೂಡ ಇಲ್ಲ, ಅವರ ಬೇಡಿಕೆಗಳ ಬಗ್ಗೆ ಚರ್ಚೆಯಾಗುತ್ತಿದೆ, ಯಾರು ಬರೆದುಕೊಳ್ಳುತ್ತಾ ಇದ್ದಾರೋ ಕಾಣಿಸುತ್ತಾ ಇಲ್ಲ. ಅದು ಏನೆಂದರೆ. ಕರ್ನಾಟಕ ಸೇಲ್ಸ್ ಏನಿದೆ ಅದರ ವ್ಯಾಪ್ತಿಯಲ್ಲಿಯಾವ ವಸ್ತುಗಳು ಎಷ್ಟೆಷ್ಟು ತೆರಿಗೆ ಆಕರ್ಷಣೆ ಮಾಡುತ್ತಾ ಇವೆ. ಎಷ್ಟಕ್ಕೆ ಸರ್ಚಾರ್ಜ್, ಎಂಟ್ರಿ ಟ್ಯಾಕ್ಸ್ ಇದೆ. ಇದರ ಬಗ್ಗೆ ಕ್ಲಾರಿಫೀಕೇಷನ್ ಕೊಡುವುದು ಅಗತ್ಯವಿದೆ. ಒಂದು ಕಾಂಡು ಪೈಪ್‌ನ್ನು ಹಾರ್ಡ್‌ವೇರ್ ಅಂಗಡಿಯಲ್ಲಿ ತೆಗೆದುಕೊಂಡರೆ ಅದಕ್ಕೆ ಮಲ್ಟಿಪಾಯಿಂಟ್ ಟ್ಯಾಕ್ಸ್ ಎಂದು ೪ ಪರ್ಸೆಂಟ್ ಟ್ಯಾಕ್ಸ್ ತೆಗೆದುಕೊಳ್ಳುತಾರೆ. ಅದೇ ಪೈಪನ್ನು ಎಲೆಕ್ಟ್ರಿಕ್‌ಷಾಪ್‌ನಲ್ಲಿ ತೆಗೆದುಕೊಂಡರೆ ಸಿಂಗಲ್‌ಪಾಯಿಂಟ್ ಎಂದುಲೆ ಹೇಳಿಕೊಂಡು ೧೦-೧೧ ಪರ್ಸೆಂಟ್ ಟ್ಯಾಕ್ಸ್ ತೆಗೆದುಕೊಳ್ಳುತ್ತಾರೆ. ಈ ರೀತಿ ಅನೇಕ ವಸ್ತುಗಳ ಮೇ ತಪ್ಪಾದ ರೀತಿಯಲ್ಲಿ ತೆರಿಗೆಗಳು ಸಂಗ್ರಹವಾಗಿ ಶೋಷಣೆಯಾಗುತ್ತಿದೆ, ಈ ಒಂದು ರೀತಿಯಲ್ಲಿ ತೆರಿಗೆಯನ್ನು ವಸೂಲು ಮಾಡುವುದು ಸರ್ಕಾರಕ್ಕೆ ಸರಿಯಲ್ಲ. ಇದರ ಬಗ್ಗೆ ಕ್ಲಾರಿಫಿಕೇಷನ್ ಕೇಳುತ್ತಾರೆ. ಎಷ್ಟು ತೆರಿಗೆ ಎಂದು ಜನ ಕೇಳುತ್ತಾರೆ. ತಕ್ಷಣ ಸಂಬಂಧಪಟ್ಟ ಅಧಿಕಾರಿಗಳಿಂದ ಉತ್ತರಬೇಕಾಗುತ್ತದೆ. ಏನೆಂದರೆ, ಯಾವ ವಸ್ತುಗಳಿಗೆ ಎಷ್ಟು ಟಾಕ್ಸ್ ಎಂದು ೨-೩ ವರ್ಷಗಳ ಹಿಂದೆ ಕ್ವಾರ್ಟರ್ಲಿ ಬುಲೆಟಿನ್ ಬರುತ್ತಿತ್ತು, ಒಂದು ತ್ರೈಮಾಸಿಕ ಪುಸ್ತಕದಲ್ಲಿ ವಿವರ ಬರುತ್ತಿತ್ತು. ಈ ಕ್ವಾರ್ಟರ್ಲಿ ಬುಲೆಟಿನ್ ೨-೩ ವರ್ಷಗಳಿಂದ ನಿಂತುಹೋಗಿದೆ. ಅದನ್ನು ಪುನರಾರಂಭ ಮಾಡುವಂಥ ಗೋಜಿಗೆ ಯಾರೂ ಹೋಗಲಿಲ್ಲ. ಆ ಬುಲೆಟಿನ್ ಇದ್ದರೆ ಸ್ಪಷ್ಟೀಕರಣಗಳ ಅಗತ್ಯವಿಲ್ಲ. ಅಧಿಕಾರಿಗಳಿಗೆ ಡಿಸ್ಕ್ರಿಮಿನೇಟ್ ಮಾಡಲಿಕ್ಕೆ ಅನುಕೂಲವಾಗಲಿ ಎಂಬ ಅಭಿಪ್ರಾಯವೇನಾದರೂ ಸರ್ಕಾರಕ್ಕೆ ಇದೆಯೋ. ಇಷ್ಟು ಪ್ರಾಮುಖ್ಯವಾದಂಥ ತೆರಿಗೆ ಬಗ್ಗೆ ನಿಷ್ಕರ್ಷೆಯಾಗಬೇಕಾಗುತ್ತದೆ. ಆ ಒಂದು ದೃಷ್ಟಿಯಿಂದ ಕ್ವಾರ್ಟರ್ಲಿ ಬುಲೆಟಿನ್ ತರಬೇಕು ಎಂದು ನಾನು ಒತ್ತಾಯ ಪಡಿಸುತ್ತಾ ಇದ್ದೇನೆ. ಮೂರನೆಯದಾಗಿ. Weights and measurement department. ಇವರು ಎರಡು ವರ್ಷಕ್ಕೊಮ್ಮೆ ಸೀಲ್ ಹಾಕಿದರೆ ಸಾಕು. ನಾನು ಒಬ್ಬ ವೈದ್ಯಕೀಯ ಪ್ರಾಕ್ಟೀಷನರು.. ಫ್ಯಾಮಿಲಿ ಫಿಸಿಷಿಯನ್. ನಮ್ಮಲ್ಲಿರುವಂಥ ಸ್ಕೇಲನ್ನು ತೆಗೆದುಕೊಂಡಿದ್ದಾರೆ. ಎಲ್. ಐ. ಸಿ. ಮೆಡಿಕಲ್ ಎಕ್ಸಾಮಿನೇಷನ್‌ಗೆ ಯಾರೂ ಉಪಯೋಗ ಮಾಡುವುದಿಲ್ಲ, ತೂಕ ಮಾತ್ರ ಬರೆದುಕೊಡುತ್ತಾರೆ,

ನಮ್ಮಲ್ಲಿ ಒಳ್ಳೆಯ 'crooks' German Machine ಇತ್ತು. ಅದನ್ನು weights and measurement department. ನವರು ತೆಗೆದುಕೊಂಡು ಹೋದರು. ಅದು ಈಗ ಕನಿಷ್ಟ ಪಕ್ಷ ೫ ಕಿಲೋ ಆಚೀಚೆಗೆ ತೋರಿಸುವಂಥ ಮಟ್ಟಕ್ಕೆ ಮಾಡಿಹಾಕಿದರು. ನಾನು ವೈಟ್ಸ್ ಅಂಡ್ ಮೆಷರ್ ಮೆಂಟ್ ಡಿಪಾರ್ಟ್‌ಮೆಂಟ್‌ನವರಿಗೆ ಹೇಳುವುದೇನೆಂದರೆ, ಅವರದೇ ಅದಂಥ ರಿಪೇರಿಮಾಡತಕ್ಕಂಥ ವ್ಯವಸ್ಥೆ ಇಲ್ಲ, ಯಾರಿಗೋ ಕಂಟ್ರಾಕ್ಟ್ ಕೊಡುತ್ತಾರೆ. ಅವರು ಕೆಲಸವನ್ನು ವಹಿಸಿಕೊಂಡು ದುಡ್ಡು ತಿಂದುಹಾಕಿ ಒಳ್ಳೆಯ ಮಿಷನರಿಗಳನ್ನು ಕೆಡಿಸಿ ಹಾಕುತ್ತಾರೆ. ಆದುದರಿಂದ ಕನಿಷ್ಟ ಪಕ್ಷ ಎರಡು ವರ್ಷಕ್ಕೊಮ್ಮೆ ಇದನ್ನು ನೋಡುವಂಥ ವ್ಯವಸ್ಥೆ ಮಾಡಬೇಕು.

೩-೦೦ ಪಿ. ಎಂ.

ಸರ್ವಿಸ್ ಸೆಕ್ಟರ್‌ನಲ್ಲಿ ಈ ಹೋಟೆಲ್ ಉದ್ದಿಮೆ ಬಹಳ ಮುಖ್ಯವಾದುದು. ಅವರು ಅನೇಕ ವಿಧವಾದ ಸಾಮಾನುಗಳನ್ನು ತಂದು ಅದನ್ನು ತಯಾರು ಮಾಡಿ ವಿತರಣೆ ಮಾಡತಕ್ಕ ದೊಡ್ಡ ಜವಾಬ್ದಾರಿ ಇರುವಾಗ ಸಾಮಾನ್ಯ ಅಂಗಡಿಗೆ ೪೦ ಸಾವಿರದವರೆಗೆ ಎಕ್ಸೆಂಪ್‌ಷನ್ ಕೊಟ್ಟಿರುವಾಗ ಹೋಟೆಲ್‌ನವರಿಗೆ ಎಗ್ಜಂಪ್‌ಷನ್ ಕೊಟ್ಟಿಲ್ಲ. ಇವತ್ತು ಹೋಟೆಲ್‌ನವರು ತಯಾರು ಮಾಡತಕ್ಕ ವಸ್ತುಗಳನ್ನು ಇಟ್ಟು ಬಿಟ್ಟರೆ ಅದು ಕೆಲವೇ ಗಂಟೆಗಳಲ್ಲಿ ಹಾಳಾಗಿ ಹೋಗಿ ಬಿಡುತ್ತದೆ. ಇಂಥವರಿಗೆ ಸೇಲ್ಸ್ ಟ್ಯಾಕ್ಸ್ ಎಗ್ಜಂಪ್‌ಷನ್ ಬೇಕು ಆದುದರಿಂದ ಅವರಿಗೆ ರಿಯಾಯಿತಿಯನ್ನು ಕೊಡಬೇಕೆಂದು ಕೇಳುತ್ತೇನೆ. ಇನ್ನು ಕೈಮಗ್ಗಗಳ ಬಗ್ಗೆ ಹೇಳುವುದಾದರೆ ಒಂದು ಕಡೆಯಲ್ಲಿ ೧೦ ಕೈ ಮಗ್ಗಗಳವರೆಗೂ ಪವರ್‌ಲೂಂ ನಡೆಯುತ್ತಿರುತ್ತದೆ. ನಾನು ಸಹ ದೊಡ್ಡಬಳ್ಳಾಪುರಕ್ಕೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಅವರಲ್ಲಿಯೂ ಸಹ ಕೆಲವರು ಸಣ್ಣ ಸಣ್ಣ ಫ್ಯಾಕ್ಟರಿಗಳನ್ನು ಇಟ್ಟುಕೊಂಡು ಕೈ ಮಗ್ಗದ ಕೆಲಸವನ್ನು ನಡೆಸುತ್ತಿದ್ದಾರೆ ಅಂಥವರಿಗೆ ಈ ಸೇಲ್ಸ್ ಟ್ಯಾಕ್ಸ್ ವಿನಾಯಿತಿಯನ್ನು ಕೊಡುವುದು ಅವಶ್ಯಕವಿದೆ. ಇನ್ನು ಎಣ್ಣೆಗಾಣದವರು ಬಿಜಾಪುರ ಮತ್ತು ಗದಗ್ ಮುಂತಾದ ಕಡೆಗಳಲ್ಲಿ ಇದ್ದಾರೆ. ನೀವು ಒಂದು ಆಜ್ಞೆಯನ್ನು ಹೊರಡಿಸಿದ್ದೀರಿ ಅದು ಏನೆಂದರೆ ೧೨ ಸಾವಿರದವರೆಗೆ ಗಾಣದವರು ಇದ್ದರೆ ಅಂಥಲ್ಲಿ ಟ್ಯಾಕ್ಸ್ ಹಾಕಬೇಕೆಂದು ಮಾಡಿದ್ದೀರಿ. ಮುಂಚಿನಿಂದಲೂ ಅವರು ಅಲ್ಲಿಯೇ ಇರುತ್ತಾರೆ ಜನಸಂಖ್ಯೆ ಹೆಚ್ಚಾಗುತ್ತಾ ಹೋದಂತೆ ಅವರು ಗುಂಪು ಜಾಸ್ತಿಯಾಗುತ್ತಾ ಹೋಗುತ್ತದೆ ಅದಕ್ಕೆ ತವು ಅವರು ಉತ್ಪಾದನೆ ಮಾಡತಕ್ಕ ವಸ್ತುಗಳ ಮೇಲೆ ಟ್ಯಾಕ್ಸ್ ಹಾಕುವುದು ಸರಿಯಲ್ಲ. ಅದಕ್ಕೆ ಅವರಿಗೂ ಸಹ ರಿಯಾಯಿತಿಗಳನ್ನು ಕೊಡುವುದು ತುಂಬಾ ಅವಶ್ಯಕವಾಗಿದೆ ಆದುದರಿಂದ ಇದರ ಬಗ್ಗೆ ಸಹ ರಿಯಾಯಿತಿಯನ್ನು ಕೊಡುವ ಬಗ್ಗೆ ಘೋಷಣೆ ಮಾಡಬೇಕೆಂದು ಹೇಳಬಯಸುತ್ತೇನೆ.

ಇನ್ನು ಪೋಲೀಸ್ ಡಿಪಾರ್ಟ್‌ಮೆಂಟಿನ ಬಗ್ಗೆ ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ. ಯಾವ ಇಲಾಖೆಯಲ್ಲಿಯಾದರೂ ಅಸಡ್ಡೆ ಅಥವಾ ಅನ್ಯಾಯ ಅಥವಾ ಗುಂಪು ಘರ್ಷಣೆ ಉಂಟಾದರೆ ಅದರಿಂದ ತಲೆನೋವು ಬರತಕ್ಕದ್ದು ಕೊನೆಗೆ ಪೋಲೀಸ್ ಇಲಾಖೆಯವರಿಗೆ. ಈ ಇಲಾಖೆಯವರು ಸರಿಯಾದ ರೀತಿಯಲ್ಲಿ ಪ್ರಾಮಾಣಿಕತನದಿಂದ ನಡೆದುಕೊಳ್ಳಬೇಕಾಗುತ್ತದೆ. ಆದುದರಿಂದ ಅವರಿಗೆ ಸರಿಯಾದ ತರಬೇತಿಯನ್ನು ಕೊಡುವುದು ಅವಶ್ಯಕವಿದೆ. ಎಲ್ಲಿ ಏನೇ ಅಚಾತುರ್ಯವಾಗಲೀ ಅವನ್ನು ನಿಭಾಯಿಸತಕ್ಕ ಜವಾಬ್ದಾರಿ, ಹೊಣೆಗಾರಿಕೆ ಈ ಪೋಲೀಸ್ ಇಲಾಖೆಯವರ ಮೇಲೆಯೇ ಬೀಳುತ್ತದೆ. ಇನ್ನು ಗೋಲಿಬಾರ್ ಆಗಿರುವುದರ ಬಗ್ಗೆ ಹಿಂದೆ ಮಾತನಾಡಿರತಕ್ಕ ಸದಸ್ಯರುಗಳು ಈಗಾಗಲೇ ತಿಳಿಸಿದ್ದಾರೆ. ಈ ಹೊಸ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಏನೋ ಒಂದು ಹೊಸ ಬದಲಾವಣೆ ಯನ್ನು ತರುತ್ತೇವೆಂದು ಹೇಳಿದರೂ ಸಹ ಕಳೆದ ೯ ತಿಂಗಳಲ್ಲಿ ಇವರು ಸಹ ಹಾರಿಸಿರತಕ್ಕ ಗುಂಡುಗಳು ಮತ್ತು ಅದ್ದರಿಂದ ಜನರು ತೀರಿ ಹೋಗಿರತಕ್ಕದ್ದು ಮತ್ತು ಪೋಲೀಸ್ ಸ್ಟೇಷನ್‌ನಲ್ಲಿ ಜನರಿಗೆ ಹಿಂಸೆ ಕೊಡುತ್ತಿರತಕ್ಕುದು ನಡೆದಿದೆ ಮತ್ತು ಬೆಂಗಳೂರು, ಮೈಸೂರು ಮತ್ತು ಕುಂದಾಪುರದ ಪೋಲೀಸ್ ಸ್ಟೇಷನ್‌ಗಳಲ್ಲಿ ಯುವಕರಿಗೆ ಪೋಲೀಸಿನವರು ಹಿಂಸೆ ಕೊಟ್ಟದ್ದು ಅದ್ದರಿಂದ ನಿಧನರಾಗಿರತಕ್ಕ ಈ ಎಲ್ಲಾ ಅಪಾದನೆಗಳೂ ಸಹ ನಾವು ಕೇಳುತ್ತಿದ್ದೇವೆ. ಇದು ಏನು ಕಡಿಮೆ ಆಗಿಲ್ಲ. ಪೋಲೀಸ್‌ನವರೂ ಜನರ ಮೇಲೆ ಅನಾವಶ್ಯಕವಾಗಿ ಕೈ ಮಾಡಿದ ಎಷ್ಟೋ ವಿಷಯಗಳನ್ನು ನಾವು ಇಲ್ಲಿ ಈ ಸದನದಲ್ಲಿ ೩೩೪ ರ ಮುಖಾಂತರವಾಗಿ ಪ್ರಸ್ತಾಪ ಮಾಡಿದ್ದೇವೆ. ಮತ್ತು ಗಮನ ಸೆಳೆಯುವ ಸೂಚನೆ ಮುಖಾಂತರ ವಾಗಿ ಸರ್ಕಾರಕ್ಕೆ ತಿಳಿಸಿದ್ದೇವೆ. ಈ ಕ್ರಿಮಿನಲ್ಸ್‌ನ್ನು ಕಂಡು ಹಿಡಿಯುವುದಕ್ಕೆ ಒಂದು ತಜ್ಞರ ಸಮಿತಿಯನ್ನು ಮಾಡಿದರೆ ಒಳ್ಳೆಯದೆಂದು ಸಲಹೆ ಮಾಡಬಯಸುತ್ತೇನೆ, ಜಗತ್ತಿನಾದ್ಯಂತ ಈ ಕ್ರಿಮಿನಲ್ಸ್‌ನ್ನು ಹಿಡಿಯುವುದಕ್ಕೆ ಹೊಸ ಹೊಸ ವಿಧಾನವನ್ನು ಅನುಸರಿಸುತ್ತಿದ್ದಾರೆ ಅದರ ಬಗ್ಗೆ ನಮ್ಮ ಸರ್ಕಾರದವರೂ ಸಹ ಗಮನ ಹರಿಸಬೇಕಾಗಿದೆ. ಪೋಲೀಸಿನವರ ಬಿಹೇವಿಯರ್ ಕೂಡ ಬಹಳ

ಬದಲಾವಣೆ ಆಗಬೇಕಾಗಿದೆ. ತಪ್ಪಿತಸ್ಥ ಅಧಿಕಾರಿಯ ಮೇಲೆ ಡಿಸಿಪ್ಲಿನರಿ ಆ್ಯಕ್ಷನ್ ತೆಗೆದುಕೊಳ್ಳುವುದು ಅನಿವಾರ್ಯವಾಗಿದೆ. ಇವತ್ತು ಎಷ್ಟೋ ಅಧಿಕಾರಿಗಳು ಸಸ್‌ಪೆಂಡ್‌ನಲ್ಲಿ ಇಟ್ಟಿದ್ದೀರಿ ಆದರೆ ಅವರ ಮೇಲೆ ಪೂರ್ಣವಾದ ಕ್ರಮವನ್ನು ಕೈಗೊಳ್ಳದೇ ಇರುವುದರಿಂದ ಅವರು ೬-೮ ತಿಂಗಳಿಂದ ಇನ್ನೂ ಸಸ್‌ಪೆನ್ಸ್‌ನಲ್ಲಿಯೇ ಇದ್ದಾರೆ. ಇದರಿಂದ ಸಾರ್ವಜನಿಕರಿಗೂ ತೊಂದರೆಯಾಗುತ್ತಿದೆ. ಇಂಥದ್ದರ ಬಗ್ಗೆ ಕೂಡ ಸರ್ಕಾರದವರು ನಿಗಾವಹಿಸಿ ಕೂಡಲೇ ಕ್ರಮವನ್ನು ಕೈಗೊಳ್ಳಬೇಕೆಂದು ಹೇಳ ಬಯಸುತ್ತೇನೆ, ಇನ್ನು ಪೋಲೀಸ್ ಸಿಬಂದಿಯವರಿಗೆ ಸರಿಯಾದ ವಸತಿ ಸೌಕರ್ಯವಿಲ್ಲ. ಮತ್ತೆ ಪೋಲೀಸ್ ಸ್ಟೇಷನ್ ಸಹ ಸರಿಯಾಗಿ ಕಟ್ಟಡಗಳು ಇಲ್ಲ. ಹೊಸ ಸರ್ಕಾರದವರು ಇದರ ಬಗ್ಗೆ ಸೂಕ್ತವಾದ ಕ್ರಮ ಕೈಗೊಳ್ಳಬೇಕು. ಮತ್ತೆ ತಾಲ್ಲೂಕ್ ಮಟ್ಟಗಳಲ್ಲಿ ಒಂದೊಂದು ಅಡ್ವೈಜರಿ ಕಮಿಟಿ ಇರುವುದು ಒಳೆಯದು. ಏನಾದರೂ ಮಿಸ್ ಅಂಡರ್‌ಸ್ಟ್ಯಾಂಡಿಂಗ್ ಬಂದು ಕೋಮು ಗಲಭೆಗಳಾದಲ್ಲಿ ಅಥವಾ ಪಿಸುಮಾತಿನಿಂದ ಜಗಳ ಶುರುವಾದರೆ, ಕಮ್ಯೂನಲ್ ಹಾರ್ಮೋನಿ ಉಂಟಾದರೆ ಆಗ ಅಲ್ಲಿ ಒಂದು ಸಲಹಾ ಸಮಿತಿ ಇದ್ದರೆ ಅದರು ಪೋಲೀಸಿನವರಿಗೆ ಸಲಹೆ ಮತ್ತು ಸಹಕಾರವನ್ನು ಕೊಡಲು ಅನುಕೂಲವಾಗುತ್ತದೆ; ಮತ್ತೆ ಲಾಕಪ್‌ಗಳಲ್ಲಿ ಯಾರು ಯಾರಿದ್ದಾರೆ ಅವರ ಹೆಸರುಗಳನ್ನು ರಿಜಿಸ್ಟರ್‌ನಲ್ಲಿ ಇದೆಯೋ ಇಲ್ಲವೋ ಅವರಿಗೆ ಏನಾದರೂ ಚಿತ್ರಹಿಂಸೆ ಕೊಡುತ್ತಿದ್ದಾರೋ ಎನ್ನುವ ಬಗ್ಗೆ ನೋಡಲು ಅನುಕೂಲವಾಗುತ್ತದೆ, ಇನ್ನು ಜೈಲಿನ ವಿಚಾರ ಹೇಳಬಾರದೆಂದು ಇದೆ ಏತಕ್ಕೆಂದರೆ ನಮ್ಮ ಮುಖ್ಯಮಂತ್ರಿಗಳವರು, ಶ್ರೀ ದೇವೇಗೌಡರವರು, ಶ್ರೀ ಜೆ. ಎಚ್. ಪಟೇಲರವರು ಮತ್ತು ಶ್ರೀ ಸಿಂಧ್ಯಾರವರು ಮತ್ತು ನಾವು ಎಲ್ಲಾ ತುರ್ತು ಪರಿಸ್ಥಿತಿಯಲ್ಲಿ ಜೈಲ್ಲಿನಲ್ಲಿದ್ದೆವು. ಅವರು ಅಲ್ಲಿಯ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಏನಾದರೂ ಸುಧಾರಣೆ ಮಾಡುತ್ತಾರೆಂದು ತಿಳಿದು ಕೊಂಡಿದ್ದೆನು. ಅಲ್ಲಿಯ ಆಹಾರದ ಪರಿಸ್ಥಿತಿ ಇನ್ನೂ ಸುಧಾರಣೆಯಾಗಿಲ್ಲ. ಅದೇ ರೀತಿಯಾಗಿ ಅಲ್ಲಿರತಕ್ಕ ಸ್ಕಿಲ್ಡ್ ಪರ್ಸನ್ಸ್ ಏನಿದ್ದಾರೆ ಅವರು ಉತ್ಪನ್ನ ಮಾಡತಕ್ಕ ವಸ್ತುಗಳಿಗೆ ಹೆಚ್ಚಿನ ಇನ್‌ಸೆಂಟಿವ್ಸ್‌ನ್ನು ಹೆಚ್ಚಿಗೆ ಮಾಡಬೇಕು. ಅದರಿಂದ ಅವರು ಹೊರಗಡೆ ಬಂದಮೇಲೆ ಸ್ವತಂತ್ರವಾಗಿ ಜೀವನ ಮಾಡಲು ಅನುಕೂಲವಾಗುತ್ತದೆ. ಇನ್ನು ಮೈಸೂರು ಮತ್ತು ಬೆಂಗಳೂರು ಜೈಲ್‌ನ್ನು ಸ್ಥಳಾಂತರ ಮಾಡುವ ಪ್ರಶ್ನೆ ಇನ್ನು ಬಗೆಹರಿದಿಲ್ಲ ಆದುದರಿಂದ ಅದರ ಬಗ್ಗೆ ಕೂಡ ಸರ್ಕಾರದವರು ಸೂಕ್ತವಾದ ಕ್ರಮವನ್ನು ಕೈಗೊಳ್ಳಬೇಕೆಂದು ಹೇಳಬಯಸುತ್ತೇನೆ.

ಮೋಟಾರ್ ವೆಹಿಕಲ್ಸ್ ಡಿಪಾರ್ಟ್‌ಮೆಂಟಿನಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಅದರ ಬಗ್ಗೆ ಸರ್ಕಾರದವರು ಗಮನ ಹರಿಸಬೇಕು. ಇವತ್ತು ಈ ಮೋಟಾರ್ ವೆಹಿಕಲ್ಸ್‌ನಿಂದ ೭೪ ಕೋಟಿ ರೂಪಾಯಿಗಳ ಆದಾಯ ಬರುತ್ತಿದೆ. ಆದರೆ ಇವತ್ತು ಆರ್.ಟಿ.ಒ. ಕಛೇರಿಗೆ ಹೋದರೆ ಸರಿಯಾದ ಪೀಠೋಪಕರಣಗಳು ಇಲ್ಲ., ಫಾರಂಸ್ ಇಲ್ಲ ಆದುದರಿಂದ ಇದಕ್ಕೆ ತಾವು ಹೆಚ್ಚಿಗೆ ಹಣವನ್ನು ಕೊಡಬೇಕು. ಇನ್ನು ವಾಹನ ತೆರಿಗೆಯಿಂದ ಬರತಕ್ಕ ಪಾಲಿನಲ್ಲಿ ಹೆಚ್ಚಿನ ಭಾಗವನ್ನು ಸ್ಥಳೀಯ ಸಂಸ್ಥೆಗಳಿಗೆ ಕೊಡಬೇಕು ಈಗ ಕೊಡತ್ತಿರುವುದು ಏನೇನೂ ಸಾಕಾಗುವುದಿಲ್ಲ. ೭೪ ಕೋಟಿ ರೂಪಾಯಿಗಳ ಆದಾಯದಲ್ಲಿ ೧ ಕೋಟಿ ರೂಪಾಯಿಗಳನ್ನು ನಗರಸಭೆ, ಕಾರ್ಪೊರೇಷನ್‌ಗಳಿಗೂ ಕೊಡುತ್ತಿಲ್ಲ. ಮಂಗಳೂರು ಪುರಸಭೆಗೆ ೨೨ ಸಾವಿರ, ಬೆಂಗಳೂರಿಗೆ ೩೭ ಸಾವಿರ ಕೊಡುತ್ತಿದ್ದೀರಿ. ಇದು ಏನೇನೂ ಸಾಲುವುದಿಲ್ಲ. ವಾಹನಗಳು ತಿರುಗಾಡಿ ರಸ್ತೆಗಳೆಲ್ಲಾ ಹಾಳಾಗಿ ಹೋಗಿವೆ ಅವುಗಳನ್ನು ನಗರಸಭೆಯವರು ಮೇಂಟೇನ್ ಮಾಡುವುದಕ್ಕೆ ಹೆಚ್ಚಿನ ಹಣವನ್ನು ಕೊಡುವುದು ತುಂಬಾ ಅವಶ್ಯಕವಾಗಿದೆ.

ಮೀನುಗಾರಿಕೆಯ ಬಗ್ಗೆ ಹೇಳುವುದಾದರೆ ನಮ್ಮ ರಾಜ್ಯದಲ್ಲಿ, ೩೦೦ ಕಿ.ಮೀ. ಉದ್ದದ ಕರಾವಳಿ ಸಂಪತು ಇದೆ. ಕಂಟ್ರೋಲರ್ ಮತ್ತು ಆಡಿಟ್ ಜನರಲ್‌ರವರ ವರದಿಯಲ್ಲಿ ಹೇಳಿರುವಂತೆ ೬ನೇ ಯೋಜನೆಯಲ್ಲಿ ೬೧೧.೪೯ ಲಕ್ಷ ರೂಪಾಯಿಗಳ ಮೀನುಗಾರರ ಬಗ್ಗೆ ನಿಗದೆ ಪಡಿಸಿದರೆ ಅದರಲ್ಲಿ ನಮ್ಮ ರಾಜ್ಯ ಸರ್ಕಾರದವರು ಬರೀ ೫೩೮ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ಇನ್ನು ಹೆಚ್ಚು ಕಡಿಮೆ ೨೫ ಪರ್ಸೆಂಟ್ ಲ್ಯಾಪ್ಸ್ ಆಗಿದೆ. ಇನ್ನು ೧೯೮೨-೮೩ರಲ್ಲಿ ಬಹುದೊಡ್ಡ ಮೀನಿನ ಕ್ಷಾಮ ಬಂದಿತು ಆದರೆ ನಿಮ್ಮ ಪುಸ್ತಕದಲ್ಲಿ ತೆಗೆದು ನೋಡಿದರೆ ಆದರ ಬಗ್ಗೆ ಏನೂ ಹೇಳಿಲ್ಲ, ನಿಮ್ಮ ಇಲಾಖೆಯವರು ನಿದ್ರೆ ಹೊಡೆಯುತ್ತಿದ್ದಾನೆಂದು ಇದರಿಂದ ಗೊತ್ತಾಗುತ್ತದೆ.

೧೯೭೮-೭೯ರಲ್ಲಿ ಒಂದು ಲಕ್ಷ ಟನ್ ಮೀನು ಸಂಗ್ರಹವಾಗಿದೆ, ೮೨-೮೩ರಲ್ಲಿ ಅದರ ಅರ್ಧಾಂಶಕ್ಕೆ ಬಂದಿದೆ. ಇಂಥ ಒಂದು ದೊಡ್ಡ ಫಿಷ್ ಫ್ಯಾಮೈನ್ ಬಂದಿದೆ. ಆದ್ದರಿಂದ, ಅತಿ ಅಗತ್ಯವಾಗಿ ಮಾಡಬೇಕಾದ ಕೆಲಸ ಏನೆಂದರೆ, ಮೀನುಗಾರರ ಸಾಲವನ್ನು ರೀ-ಷೆಡ್ಯೂಲ್ ಮಾಡಬೇಕಾಗಿದೆ,

ನಬಾರ್ಡ್‌ನಿಂದ ಅಥವಾ ಕಮರ್ಷಿಯಲ್ ಬ್ಯಾಂಕುಗಳಿಂದ ನೆರವು ತೆಗೆದುಕೊಂಡು ಮಾಡಿದ ಸಾಲವನ್ನು ರೀ-ಷೆಡ್ಯೂಲ್ ಮಾಡಬೇಕಾಗಿದೆ. ಮಹಾರಾಷ್ಟ್ರ ರಾಜ್ಯದಲ್ಲಿ ಮೀನುಗಾರರು ಉಪಯೋಗಿಸುವ ಡೀಸಲ್ ಮತ್ತು ಲೂಬ್ರಿಕೇಟಿಂಗ್ ಆಯಿಲ್‌ಗಳಿಗೆ ಸೇಲ್ಸ್ ಟ್ಯಾಕ್ಸನ್ನು ರದ್ದು ಮಾಡಿದ್ದಾರೆ. ಕರ್ನಾಟಕದಲ್ಲೂ ಅದೇ ರೀತಿ ಮಾಡಬೇಕು. ಮತ್ತು ಕರಾವಳಿ ನದಿ ಪ್ರದೇಶದಲ್ಲಿರತಕ್ಕ ಅಳವೆಯನ್ನು ಸರಿಯಾಗಿ ಮಾಡಬೇಕು. ಮಂಗಳೂರು, ಮುಲ್ಕಿ, ಹಂಗರಕಟ್ಟೆ, ಕುಂದಾಪುರ, ಭಟ್ಕಲ್, ತೆಂಗಿನಗುಂಡಿ ಮತ್ತು ಹೊನ್ನಾವರದಲ್ಲಿರತಕ್ಕ ಬಾವಿಗಳನ್ನು ಡಿಗ್ಗಿಂಗ್ ಮಾಡಿ ಸರಿಪಡಿಸಬೇಕಾಗಿದೆ. ಮೊಯಿಲಿಯವರು ಸಚಿವರಾಗಿದ್ದಾಗ ಮೈಸೂರಿನಲ್ಲಿ ನಡೆದ ಕ್ಯಾಬಿನೆಟ್‌ನಲ್ಲಿ ತೀರ್ಮಾನ ತೆಗೆದುಕೊಂಡು ಫಿಷರೀಸ್ ರಸ್ತೆಗಳ ಸುಧಾರಣೆ ಆಗಬೇಕೆಂದು ೫೦ ಲಕ್ಷ ರೂಪಾಯಿಗಳನ್ನು ಇಟ್ಟಿದ್ದರು. ಹಿಡಿದಂತಹ ಮೀನುಗಳನ್ನು ಸಾಗಣೆ ಮಾಡಿ ವಾಹನಗಳು ಇರುವ ಜಾಗಕ್ಕೆ ತೆಗೆದುಕೊಂಡು ಹೋಗುವುದಕ್ಕೆ ಅನುಕೂಲವಾಗುವಂತೆ ಮಾಡಬೇಕೆಂಬುದು ಅವರ ಉದ್ದೇಶವಾಗಿತ್ತು. ಎಲ್ಲಿ ಫಿಷರೀಸ್ ರೋಡುಗಳ ಅವಶ್ಯಕತೆ ಇದೆ ಅಲ್ಲಿಗೆ, ಇಟ್ಟಿರತಕ್ಕ ೫೦ ಲಕ್ಷ ರೂಪಾಯಿಗಳನ್ನು ವಿತರಣೆ ಮಾಡಿ ಕಾರ್ಯ ನಡೆಯುವಂತೆ ಮಾಡಬೇಕು. ಕರಾವಳಿ ಮೀನುಗಾರರಿಗೆ ಒಳನಾಡಿಗೆ ಎಂದರೆ ಆಗುವುದಿಲ್ಲ. ಆದ್ದರಿಂದ, ಕರಾವಳಿ ಸಾಲಿನಲ್ಲಿ ಹೌಸ್ ಸೈಟುಗಳ ವಿತರಣೆ ಆಗಬೇಕು ಕೇಂದ್ರ ಸರ್ಕಾರದ ಯೋಜನೆ ಪ್ರಕಾರ ಶೇಕಡ ೫೦ ರಷ್ಟು ನೆರವು ಈ ಬಾಬಿಗಾಗಿ ಬರುತ್ತದೆ. ನಮ್ಮ ಸಾಗರದೀಪ ಯೋಜನೆ ಏನಿದೆ ಅದನ್ನು ಇದುವರೆಗೆ ಜಾರಿಗೆ ತರಲಿಲ್ಲ. ಹೊಸ ಸರ್ಕಾರ ಮೀನುಗಾರರಿಗೆ ಮನೆ ಕಟ್ಟಿಸಿಕೊಡುವ ಕೆಲಸ ಮಾಡಬೇಕು. ಕಾರವಾರದಲ್ಲಿ ಪೋರ್ಟ್ ಕಟ್ಟುವಾಗ ಮೀನುಗಾರರನ್ನು ಸ್ಥಳಾಂತರಿಸಿದರು. ಅವರಿಗೆ ಬೇರೆ ಜಾಗ ಕೊಡುತ್ತೇವೆಂದು ಸ್ಪಷ್ಟ ಭರವಸೆ ಕೊಟ್ಟರು. ಆದರೆ ಇವತ್ತಿಗೂ ಅವರಿಗೆ ಬೇರೆ ಜಾಗವನ್ನು ಕೊಡಲಿಲ್ಲ, ಅವರು ಅಲ್ಲಿಯೇ ಇದ್ದಾರೆ. ಮಂಗಳೂರಿನ ಬಂದರೂ ಏನಿದೆ ಅಲ್ಲಿ ಪರ್ಷಿಯನ್ ಬೋಟಿಗೆ ೨೫೦ ರೂಪಾಯಿಗಳ ಬಾಡಿಗೆ ಇದೆ. ಅದನ್ನು ಸ್ವಲ್ಪ ಕಡಿಮೆ ಮಾಡಬೇಕು. ಮೈನರ್ ಇರಿಗೇಷನ್ನಿಗೆ ಸಂಬಂಧಪಟ್ಟ ಹಾಗೆ ಸಿ-ವಾಲ್ ಅನ್ನು ಕಟ್ಟುವ ಬಗ್ಗೆ ಹೇಳುವುದಾದರೆ ಇದು ಮೀನುಗಾರರ ಜೀವನ ಮರಣದ ಪ್ರಶ್ನೆ. ರಾತ್ರಿ ಮಲಗಿರುವಾಗ ತೊರೆ ಬಂದು ಮನೆಯನ್ನು ಕೊಚ್ಚಿಕೊಂಡು ಹೋಗುವ ಪ್ರಸಂಗ ಬರಬಹುದು. ಮೀನುಗಾರಿಕೆ ಮತ್ತು ಮೈನರ್ ಇರಿಗೇಷನ್ ಇಲಾಖೆಯವರು ಕೂಡಿ ಸೀ-ಎರೋಜನ್ ದಂಡೆ ಕಟ್ಟಬೇಕು. ಐಸ್ ಪ್ಲಾಂಟ್ ಮತ್ತು ಫಿಷ್ ಪ್ಲಾಂಟ್ ಮಿಲ್ ಏನಿರುತ್ತದೆ ಅದರ ಟ್ಯಾರಿಫ್ ಅನ್ನು ಬದಲಾವಣೆ ಮಾಡಬೇಕು. ಒಂದು ನಿಖರವಾದ ಟ್ಯಾರಿಫ್ ಅನ್ನು ಮಾಡಬೇಕು, ಮತ್ತು ವಿದ್ಯುಚ್ಛಕ್ತಿ ಬಿಲ್‌ನಲ್ಲಿ ರಿಯಾಯಿತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮೀನುಗಾರರಿಗೆ ಅಪಘಾತವಾದರೆ ಇನ್‌ಶ್ಯೂರೆನ್ಸ್ ಇದೆ, ಅದಕ್ಕೆ ರಾಜ್ಯ ಸರ್ಕಾರ ಪ್ರೀಮಿಯಂ ಕಟ್ಟುತ್ತಿದೆ. ಅದಕ್ಕೆ ಮೀನುಗಾರರ ಕೋ-ಆಪರೇಟೀವ್ ಸೊಸೈಟಿಯ ಸದಸ್ಯರಾಗಬೇಕೆಂದು ಇದೆ. ನಮ್ಮ ಎರಡು ಜಿಲ್ಲೆಗಳಲ್ಲೂ ಕೋ-ಅಪರೇಟೀವ್ ಸೊಸೈಟಿಯ ಸದಸ್ಯರಾಗಿರತಕ್ಕವರು ಕಡಿಮೆ. ಆದ್ದರಿಂದ, ಆ ಸೌಲಭ್ಯ ಅನೇಕರಿಗೆ ದೊರೆಯುವುದಿಲ್ಲ. ಆದಕಾರಣ ಅಪಘಾತ ಪರಿಹಾರ ವಿಮೆ ಎಂದು ಮಾಡಿ ಯಾರು ಅಪಘಾತಕ್ಕೆ ಈಡಾಗುತ್ತಾರೆ ಅವರೆಲ್ಲರಿಗೂ ಹಣ ಸಿಗತಕ್ಕ ವ್ಯವಸ್ಥೆ ಆಗಬೇಕೆಂದು ಹೇಳುತ್ತೇನೆ. ಔಟ್ ಬೋರ್ಡ್ ಎಂಜಿನ್ ಎಂದು ಬರುತ್ತದೆ. ಅದನ್ನು ಸಣ್ಣ ಸಣ್ಣ ದೋಣಿಗಳಿಗೆ ಅಳವಡಿಸಬಹುದು. ಆದ್ದರಿಂದ ಅದರ ಮೇಲಿನ ಇಂಪೋರ್ಟ್ ಡ್ಯೂಟಿಯನ್ನು ರದ್ದು ಮಾಡಿದರೆ ಹೆಚ್ಚು ಜನರು ಬೋಟುಗಳನ್ನು ಇಟ್ಟುಕೊಳ್ಳುವುದಕ್ಕೆ ಬರುತ್ತದೆ. ನಾನು ಬಂದಿರತಕ್ಕದ್ದು ಉಡುಪಿ ಕ್ಷೇತ್ರದಿಂದ, ಮಲ್ಪೆ ನಮ್ಮ ರಾಜ್ಯದ ಪ್ರಮುಖ ಮೀನುಗಾರಿಕಾ ಕೇಂದ್ರ, ಅಲ್ಲಿ ಫಿಷರೀಸ್ ಹಾರ್ಬರ್ ಅನ್ನು ೩-೪ ಕೋಟಿ ರೂಪಾಯಿಗಳನ್ನು ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಮಿನಲ್ಲಿ ಖರ್ಚು ಮಾಡಿ ಕಟ್ಟಿದ್ದಾರೆ. ಆದರೆ ಅಲ್ಲಿ ಮೀನುಗಾರರ ಒಂದು ಆಡಳಿತ ಸಮಿತಿಯನ್ನು ಮಾಡಲಿಲ್ಲ. ೩-೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಿರತಕ್ಕ ಬಂದರಿಗೆ ಆಡಳಿತ ಸಮಿತಿಯನ್ನು ಮಾಡಲಿಲ್ಲವೆಂದರೆ ನಾವು ಎಷ್ಟು ಅಜಾಗರೂಕತೆಯಿಂದ ಇದ್ದೇವೆ ಅನ್ನಿಸುತ್ತದೆ. ಅಲ್ಲಿ ಫಿಷರೀಸ್ ಬಂದರನ್ನು ಬಿಟ್ಟರೆ ಐಸ್ ಪ್ಲಾಂಟ್ ಆಗಲಿ ಅಥವಾ ಫಿಷ್ ಮಿಲ್ ಪ್ಲಾಂಟ್ ಆಗಲಿ ಇಲ್ಲ. ಫಿಷ್ ಮಿಲ್ ಪ್ಲಾಂಟ್ ಇದ್ದರೆ ಮೀನುಗಾರರಿಗೆ ಒಂದು ಬೆಲೆ ಬರುತ್ತದೆ. ಇವತ್ತು ಅಲ್ಲಿ ಮೀನು ಎಲ್ಲಾ ಕೊಳೆತು ಹೋಗತಕ್ಕ ಪ್ರಸಂಗ ಇದೆ. ಅಲ್ಲಿ ಫಿಷ್ ಪ್ರೊಸೆಸಿಂಗ್ ಯೂನಿಟ್ ಇಲ್ಲ. ಅಲ್ಲಿ ಮಹಿಳೆಯರು ಮೀನನ್ನು ಒಣಗಿಸಲಿಕ್ಕೆ ಮತ್ತು ಸ್ವಚ್ಛ ಮಾಡಲಿಕ್ಕೆ ಇದ್ದಾರೆ. ಅವರಿಗೆ ಸ್ಥಳ ಬೇಕಾಗಿದೆ. ಮಲ್ಪೆ ಪೋರ್ಟ್ ಎಂದು ಇತ್ತು. ಅಲ್ಲಿ ಹಂಚು ಹೋಗುವುದು ಬರುವುದು ಇತ್ತು. ಅಲ್ಲಿ ಮೀನುಗಾರರು ಬಂದರು ಕಟ್ಟುತಕ್ಕ ಸಮಯದಲ್ಲಿ ಅವರು ಬಂದು ಕುಳಿತಿದ್ದಾರೆ. ಅವರಿಗೆ ಹೆಚ್ಚಿಗೆ ಸ್ಥಳ ಬೇಕಾಗಿದೆ. ಅಲ್ಲಿ ೧೦ ಎಕರೆ ಸ್ಥಳ ಕೊಡುವುದಕ್ಕೆ

ಯಾವ ರೀತಿಯ ತೊಂದರೆಯೂ ಇಲ್ಲ. ಪ್ರೀಟರ್ ಅಗತ್ಯವಾಗಿ ಬೇಕು. ಆ ದೃಷ್ಟಿಯಿಂದ ಮಹಿಳೆಯರಿಗೆ ಅದರಲ್ಲೂ ಆ ಪ್ರದೇಶದಲ್ಲಿ ಹೆಚ್ಚಾಗಿರುವ ಹರಿಜನ ಮಹಿಳೆಯರಿಗೆ ಮೀನುಗಾರಿಕಾ ಬಂದರಿನಲ್ಲಿ ಸ್ಥಳ ಕೊಡಬೇಕೆಂದು ಹೇಳುತ್ತೇನೆ. ಮೀನುಗಾರಿಕಾ ಕ್ಷೇತ್ರದಲ್ಲಿ ಕಳವ ಫಿಷಿಂಗ್ ಎಂದು ಬಂದಿದೆ. ಪರ್ಷಿಯನ್‌ನಲ್ಲಿ ಯಾವಾಗ ಆದಾಯ ಕಡಿಮೆ ಆಯಿತೋ ಆಗ ಕಳವ ಫಿಷಿಂಗ್ ಎಂದು ಮೀನುಗಾರಿಕಾ ಕ್ಷೇತ್ರದಲ್ಲಿ ಬಂತು. ಪರ್ಷಿಯನ್ ಇರುವವರು ಕೂಡ ಕಳವ ಫಿಷಿಂಗ್‌ಗೆ ಪರಿವರ್ತನೆ ಮಾಡಿಕೊಂಡರೆ ಅವರ ಆದಾಯ ಜಾಸ್ತಿಯಾಗುತ್ತದೆ. ಮೀನುಗಾರಿಕಾ ಇಲಾಖೆಯ ಡೈರೆಕ್ಟರ್ ಮತ್ತು ನಾನು ಹೋಗಿ ಕಳವ ಫಿಷಿಂಗ್ ಅನ್ನು ಉದ್ಘಾಟನೆ ಮಾಡಿದ್ದೇವೆ. ಈ ಬಗ್ಗೆ ಅಂದರೆ ಮೀನುಗಾರಿಕಾ ದೋಣಿ ಮಾಡುವ ಬಗ್ಗೆ ಒಂದು ಸ್ಕೀಮನ್ನು ಫೈನಲೈಸ್ ಮಾಡಬೇಕು. ಇನ್ನು ಪೆನ್‌ಷನ್ ವಿಷಯವನ್ನು ತೆಗೆದುಕೊಂಡರೆ ಅತ್ಯಂತ ದುಃಖದಾಯಕವಾದ ಚಿತ್ರ ನಮ್ಮ ಮುಂದೆ ಬರುತ್ತದೆ. ಅದನ್ನು ಸರಿಯಾಗಿ ಫಿಕ್ಸ್ ಮಾಡಿಲ್ಲ. ಇದರಿಂದ ಅನೇಕರಿಗೆ ಅನ್ಯಾಯವಾಗುತ್ತಿದೆ ಕಾಲು ಭಾಗ, ಅರ್ಧ ಭಾಗ ಪೆನ್‌ಷನ್ ಕೊಡುತ್ತಿದ್ದಾರೆ. ನಿವೃತ್ತರಾಗಿ ಎಷ್ಟು ವರ್ಷವಾದರೂ ಪೆನ್‌ಷನ್ ಸಿಕ್ಕುತ್ತಿಲ್ಲವೆಂದು ಹೇಳತಕ್ಕ ಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ೨೦–೩೦ ವರ್ಷ ಸೇವೆ ಸಲ್ಲಿಸಿದವರಿಗೂ ಪೆನ್‌ಷನ್ ಸಿಕ್ಕಿಲ್ಲ. ಕಂಬದಿಂದ ಕಂಬಕ್ಕೆ, ಕಛೇರಿಯಿಂದ ಕಛೇರಿಗೆ ಸುತ್ತತಕ್ಕ ಪರಿಸ್ಥಿತಿ ಬಂದಿದೆ. ನಮ್ಮ ರಾಜ್ಯದಿಂದ ಅತ್ಯಂತ ಉತ್ಕೃಷ್ಟವಾದ ಕಂಪ್ಯೂಟರ್ ಸಂಟರ್ ಇದೆ. ಮುಂದಿನ ವರ್ಷ ಜೂನ್‌ನಲ್ಲಿ ಯಾರ್ಯಾರು ನಿವೃತ್ತರಾಗುತ್ತಾರೆಂಬ ಪಟ್ಟಿಯನ್ನು ಕೂಡಲೇ ತರಿಸಬಹುದು. ಪಟ್ಟಿಯನ್ನು ತರಿಸಿ ಇಷ್ಟು ಪೆನ್‌ಷನ್ ಎಂದು ಗೊತ್ತು ಮಾಡಿ ಕೊಡಬಹುದು. ಇದೇ ರಾಜ್ಯೋತ್ಸವ ದಿನದಿಂದ ಯಾರ್‌ಯಾರು ನಿವೃತ್ತರಾಗುತ್ತಾರೆ ಅವರಿಗೆ ನಿವೃತ್ತರಾಗುವ ದಿವಸವೇ ಒಂದು ವಿದಾಯ ಸನ್ಮಾನವನ್ನು ಏರ್ಪಡಿಸಬೇಕು, ಅದಕ್ಕೆ ನೂರು ರೂಪಾಯಿ ಖರ್ಚು ಮಾಡಿದರೂ ಪರವಾಗಿಲ್ಲ. ಅವರು ಮನೆಗೆ ಹೋಗುವಾಗ ಗೌರವಿಸಿ ಕಳುಹಿಸಿಕೊಡಬೇಕು. ನಿವೃತ್ತಿಯ ದಿನ ಪೆನ್‌ಷನ್ ಪೇಪರ್ ಮತ್ತು ಚೆಕ್ ಕೊಡತಕ್ಕ ವ್ಯವಸ್ಥೆ ಮಾಡಬೇಕು. ಅವರಿಗೆ ರಾಜ್ಯದಲ್ಲಿ ಸೇವೆ ಮಾಡತಕ್ಕ ಸಿಬ್ಬಂದಿಯವರ ಭದ್ರತೆ ಬೇಕು. ಆಗ ಅವರಿಗೆ ನಾನು ನಿವೃತ್ತನಾಗುವ ದಿವಸ ನನ್ನನ್ನು ಸನ್ಮಾನಪೂರ್ವಕವಾಗಿ ಕಳುಹಿಸುತ್ತಾರೆ, ನನಗೆ ಪೆನ್‌ಷನ್ ಪೇಪರ್ ಮತ್ತು ಚೆಕ್ ಸಿಗುತ್ತದೆಂಬ ಭರವಸೆ ಇದ್ದರೆ ಬಹುಶಃ ಅವರು ನಿವೃತ್ತರಾಗುವ ಆರು ತಿಂಗಳ ಮೊದಲೇ ದುಡ್ಡು ಮಾಡಿಕೊಳ್ಳುತ್ತಾರೆಂಬ ಅಪವಾದ ಏನಿದೆ ಅದರ ಅಗತ್ಯ ಅವರಿಗೆ ಕಂಡುಬರುವುದಿಲ್ಲ. ಇದು ಅತ್ಯಂತ ಉತ್ತಮವಾದ ಸಲಹೆ ಎಂದು ನಾನಾದರೂ ಭಾವಿಸಿದ್ದೇನೆ. ಎಷ್ಟು ಜನ ನಿವೃತ್ತರಾದರೂ ಅವರಿಗೆ ಪೆನ್‌ಷನ್ ಕೊಡುವುದಕ್ಕೆ ಸರ್ಕಾರಕ್ಕೆ ತೊಂದರೆ ಏನು ಇರುವುದಿಲ್ಲ. ಆದ್ದರಿಂದ, ಅವರು ನಿವೃತ್ತರಾಗುವುದಕ್ಕೆ ಮುಂಚಿತವಾಗಿ ಪ್ರೊಸೆಸ್ ಅನ್ನು ಪ್ರಾರಂಭ ಮಾಡಿ ರಾಜ್ಯೋತ್ಸವ ದಿನದಿಂದ ನಿವೃತ್ತರಾಗುವ ಎಲ್ಲರಿಗೂ ನಿವೃತ್ತರಾಗುವ ದಿನವೇ ಪೆನ್‌ಷನ್ ಚೆಕ್ ಸಿಗುವ ಹಾಗೆ ಮಾಡಿದರೆ ನಮ್ಮ ರಾಜ್ಯದಲ್ಲಿರತಕ್ಕ ಲಕ್ಷಗಟ್ಟಲೆ ಸಿಬ್ಬಂದಿ ವರ್ಗದವರು ಮಾತ್ರವಲ್ಲ ಇಡೀ ದೇಶದಲ್ಲಿರತಕ್ಕವರು ಕರ್ನಾಟಕದಲ್ಲಿ ಹೊಸ ಯೋಜನೆಯನ್ನು ಮಾಡಿದ್ದಕ್ಕೆ ಮುಖ್ಯ ಮಂತ್ರಿಗಳನ್ನು ಮಂತ್ರಿಗಳನ್ನು ಮತ್ತು ಸರ್ಕಾರವನ್ನು ಅಭಿನಂದಿಸುತ್ತಾರೆ.

ಇಂಥ ಕೆಲಸವನ್ನು ತಾವು ಮಾಡಬೇಕೆಂದು ಹೇಳುತ್ತಿದ್ದೇನೆ. ಮಾತನಾಡಬೇಕಾದ್ದು ಇನ್ನೂ ಅನೇಕ ವಿಷಯ ಇತ್ತು. ಮಾನ್ಯ ಅಧ್ಯಕ್ಷರು ಸಮಾಧಾನದಿಂದ ಬೆಲ್ ಬಡಿಯಲಿಲ್ಲವೆಂದು ತಿಳಿದುಕೊಂಡಿದ್ದೇನೆ. ಆ ದೃಷ್ಟಿಯಿಂದ ನಾನು ಮುಂದುವರೆಸಿಕೊಂಡು ಹೋಗುವುದು ಒಳ್ಳೆಯದಲ್ಲ. ಈ ಸರ್ಕಾರದ ಮನಸ್ಸಿನಲ್ಲಿ ೨೨೪ ಜನರಲ್ಲಿ ೧೧೪ ಮಂದಿ ಇಲ್ಲ ಎಂಬ ಭಾವನೆ ಇರಬಹುದು. ರಾಜ್ಯದಲ್ಲಿ ಜನತಾ ಸರ್ಕಾರ ರಚನೆ ಮಾಡುವಾಗ ೧೧೪ ಮಂದಿ ಇರಲಿಲ್ಲ ಎಂಬುದು ನಿಜ. ಆ ಸಂದರ್ಭದಲ್ಲಿ ನಾವು ಬೆಂಬಲ ಕೊಟ್ಟಿದ್ದೇವೆ ಸಾಕಷ್ಟು ಜನರ ಬೆಂಬಲ ಇಲ್ಲದೆ ಮೈನಾರಿಟಿ ಗೌರ್ನಮೆಂಟ್ ಆಗಿರುವಾಗ ತಮಗೆ ಬೇಕಾದ ಬೆಂಬಲವನ್ನು ನಾವು ಬೇಷರತ್ತಾಗಿ ಕೊಟ್ಟಿದ್ದೇವೆ. ಆದ್ದರಿಂದ ಒಳ್ಳೆಯ ರೀತಿಯಲ್ಲಿ ಧೈರ್ಯವಾಗಿ ಕೆಲಸ ಮಾಡಿಕೊಂಡು ಹೋಗಬೇಕೆಂದು ಹೇಳುತ್ತೇನೆ. ಸರ್ಕಾರದ ನಿರ್ಧಾರದಲ್ಲಿ ನೀವು ಹೀಗೆ ಮಾಡಬೇಕು ಹಾಗೇ ಮಾಡಬೇಕು ಎಂದು ನಿಮ್ಮ ಕೈ ಕಟ್ಟಿದಂಥ ಪರಿಸ್ಥಿತಿ ನಾವು ನಿರ್ಮಾಣ ಮಾಡಲಿಲ್ಲ. ಮಾನ್ಯ ಬೊಮ್ಮಾಯಿಯವರು ಹೇಳಿದರು ಕೆಲಸ ಬೇಗ ಆಗಬೇಕೆಂದು ನಮ್ಮನ್ನು ಎಚ್ಚರಿಸುತ್ತಾ ಬಂದಿದ್ದೀರಿ ಎಂದು. ರಾಜ್ಯದ ಜನತೆ ತಮಗೆ ತೋರಿಸಿರುವ ವಿಶ್ವಾಸದ ಅವಕಾಶವನ್ನು ಸರಿಯಾಗಿ ಉಪಯೋಗ ಮಾಡಿಕೊಂಡು ನಾಳೆ ಮಾಡತಕ್ಕ ಕೆಲಸವನ್ನು ಇವತ್ತೇ ಮಾಡತಕ್ಕ ನಿರ್ಧಾರವನ್ನು ತಾವು ಮಾಡಬೇಕು. ಆಗಮಾತ್ರ ಜನತೆಗೆ ನಿಮ್ಮ ಮೇಲೆ ವಿಶ್ವಾಸ ಬರುತ್ತದೆ. ಆದ್ದರಿಂದ ಒಳ್ಳೆಯ

ಕೆಲಸ ಮಾಡಿ ಎಂದು ಹೇಳುತ್ತೇನೆ. ಇನ್ನೊಂದು ವಿಷಯವನ್ನು ನಾನು ಪ್ರಸ್ತಾಪ ಮಾಡಬೇಕಾಗಿದೆ. ೧೦೦೦ ಕೋಟಿಗಿಂತ ಹೆಚ್ಚು ಸಂಪನ್ಮೂಲ ಸಂಗ್ರಹ ಮಾಡುತ್ತೇವೆಂದು ಎರಡು ಮೂರು ಸಾರಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ನಾನ್‌ಟ್ಯಾಕ್ಸ್ ರೆವಿನ್ಯೂನಿಂದ ಬೇಕಾದರೆ ಸಂಪನ್ಮೂಲ ಹೆಚ್ಚು ಮಾಡಿಕೊಂಡರೆ ನಮ್ಮ ಆಕ್ಷೇಪಣೆ ಇಲ್ಲ. ಆದರೆ ಹೊಸ ತೆರಿಗೆ ಹಾಕುವಾಗ ಬಡವರ ಮೇಲೆ ಯಾವರೀತಿಯ ತೊಂದರೆಯಾಗದಂತೆ ನೋಡಿಕೊಳ್ಳಿ. ಈಗಾಗಲೇ ಆಹಾರವಸ್ತುಗಳ ಮೇಲೆ, ಇತರ ವಸ್ತುಗಳ ಮೇಲೆ ಇರತಕ್ಕ ತೆರಿಗೆ ಭಾರವನ್ನು ಕೆಳಗೆ ಇಳಿಸಬೇಕೆಂದು ಹೇಳುತ್ತಾ ಸಾಮಾನ್ಯ ಆಡಳಿತದ ಬಗ್ಗೆ ಒಂದು ಉದಾಹರಣೆ ಹೇಳುತ್ತೇನೆ. ನಮ್ಮ ರಾಜ್ಯದ ಮುಖ್ಯಮಂತ್ರಿಗಳ ಹೆಸರು ರಾಮಕೃಷ್ಣ ಹೆಗಡೆ. ಪಕ್ಕದ ತಮಿಳುನಾಡಿನ ಮುಖ್ಯಮಂತ್ರಿಗಳು ರಾಮಚಂದ್ರನ್ ಆಂಧ್ರದ ಮುಖ್ಯಮಂತ್ರಿಗಳು ರಾಮರಾವ್. ಆದ್ದರಿಂದ ಮೂರು ಜನರೂ ಸೇರಿಕೊಂಡು ರಾಮರಾಜ್ಯ ಮಾಡುತ್ತಾರೆಂದು ಭಾಷಣ ಮಾಡಿದ್ದುಂಟು. ಇಷ್ಟೆಲ್ಲಾ ರಾಮಕೃಷ್ಣರ ಬಗ್ಗೆ ಹೇಳುವಾಗ ಪರಿಸ್ಥಿತಿ ಏನಾಗಿದೆಯೆಂದರೆ ಹೈಸ್ಕೂಲ್ ಮತ್ತು ಜೂನಿಯರ್ ಕಾಲೇಜುಗಳಲ್ಲಿ ನೀತಿ, ಧರ್ಮ ಹೇಳಿಕೊಡುತ್ತಾ ರಾಮ ಯಾರು, ಕೃಷ್ಣ ಯಾರು, ಅವರು ಜನತೆಗೆ ಏನು ಸಂದೇಶ ಬೀರಿ ಹೋಗಿದ್ದಾರೆ, ಯಾವರೀತಿ ಒಳ್ಳೆಯ ಜನರಾಗಿ ನಾವು ನಡೆದುಕೊಳ್ಳಬಹುದು ಎಂಬುದನ್ನು ಹೇಳಿಕೊಡುವುದಕ್ಕೆ ಇದ್ದಂಥ ಅವಕಾಶವನ್ನು ತಪ್ಪಿಸಿದ್ದಾರೆ. ವಿಶ್ವ ಹಿಂದೂ ಪರಿಷತ್ತಿನವರು ರಾಮಾಯಣ, ಮಹಾಭಾರತದ ಬಗ್ಗೆ ಕಲಿಸುವುದಕ್ಕೆ ವ್ಯವಸ್ಥೆ ಮಾಡಿದ್ದರು. ಆದರಿಂದ ಸರ್ಕಾರಕ್ಕೆ ಏನೂ ತೊಂದರೆ ಇರಲಿಲ್ಲ. ಆ ಪರೀಕ್ಷೆ ೧೦ ವರ್ಷದಿಂದ ನಡೆಯುತ್ತಿತ್ತು. ಭಾರತ ಸಂಸ್ಕೃತಿ 'ಪರಿಚಯ' ಎಂಬ ಪರೀಕ್ಷೆಗೆ ಕಳೆದ ಸಲ ೨೦,೪೦೦ ಜನ ಕುಳಿತಿದ್ದರು. ಆದರೆ ಈ ವರ್ಷ ಸಾರಾಸಗಟಾಗಿ ಆ ಪರೀಕ್ಷೆಯನ್ನು ನಡೆಸಕೂಡದು, ಅದನ್ನು ನಡೆಸಿದರೆ ನಿಮ್ಮ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಡಿ. ಪಿ. ಐ. ಅವರು ಆಜ್ಞೆ ಮಾಡಿದ್ದಾರೆ. ಇದು ತಪ್ಪು. ರಾಮಾಯಣ ಮಹಾಭಾರತದಲ್ಲಿ ಕೆಟ್ಟ ಅಂಶ ಇದ್ದರೆ ಅದನ್ನು ಕಲಿಯುವುದು ಬೇಡ. ಒಳ್ಳೆಯ ಅಂಶವನ್ನು ಕಲಿಯೋಣ. ಅದನ್ನು ಮೈಗೂಡಿಸಿಕೊಂಡರೆ ನಮಗೆ ಮತ್ತು ನಮ್ಮ ಮುಂದಿನ ಜನಾಂಗಕ್ಕೆ ಒಳ್ಳೆಯದಾಗುವುದಾದರೆ ಏತಕ್ಕೆ ನಡೆಸಬಾರದು ? ಒಂದುವೇಳೆ ಮಾನ್ಯ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳ ಗಮನಕ್ಕೆ ಬರದೇ ಈ ಕೆಲಸ ಆಗಿದ್ದರೆ ಅದು ಇನ್ನೂ ಗಂಭೀರವಾದ ವಿಚಾರವಾಗುತ್ತದೆ. ನೀವು ಹೇಳಿದಂತೆ ಅವರು ಕೆಲಸ ಮಾಡುವುದಿಲ್ಲ, ಅವರು ಮಾಡಿದಂಥ ಕೆಲಸ ನಿಮಗೆ ಗೊತ್ತಾಗುವುದಿಲ್ಲ ಎಂದು ಹೇಳಿದರೆ ಜನ ನಿಮಗೆ ವಹಿಸಿಕೊಟ್ಟ ಕೆಲಸವನ್ನು ನೀವು ಸರಿಯಾಗಿ ಮಾಡಲಿಲ್ಲ ಎಂದು ಹೇಳಬೇಕಾಗುತ್ತದೆ. ಈ ಪರಿಸ್ಥಿತಿಯನ್ನು ಬದಲಾವಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಸಾಮಾನ್ಯ ಆಡಳಿತ ಯಾವರೀತಿ ನಡೆಯುತ್ತಿದೆ ಎಂಬುದನ್ನು ಹೇಳುತ್ತಿದ್ದೆ. ರಾಜ್ಯದ ಬೇರೆ ಬೇರೆ ಇಲಾಖೆಯಲ್ಲಿರತಕ್ಕ ಶಿಥಿಲತೆ, ಭ್ರಷ್ಟಾಚಾರವನ್ನು ದೂರ ಮಾಡಿ ಯೋಜನಾ ಕಾರ್ಯಕ್ರಮಗಳು ಆದಷ್ಟು ಜಾಗ್ರತೆ ಯಶಸ್ವಿಯಾಗುವಂತೆ ಮಾಡಬೇಕೆಂದು ಹೇಳುತ್ತಿದ್ದೇನೆ. ಅದು ಯಶಸ್ವಿಯಾಗುವಂತೆ ಮಾಡಿ ಸಾಮಾನ್ಯವರ್ಗ, ದುರ್ಬಲವರ್ಗ ಮತ್ತು ಹಿಂದುಳಿದ ವರ್ಗದ ಏಳಿಗೆ ಆಗುವಂತೆ ಮಾಡಬೇಕು. ಇವತ್ತು ಸ್ಟೈಫಂಡರಿ ಮತ್ತು ಲೋಕಲ್ ಕ್ಯಾಂಡಿಡೇಟ್ಸ್ ಪರಿಸ್ಥಿತಿ ಏನಾಗಿದೆಯೆಂದರೆ......

ಒಬ್ಬ ಸದಸ್ಯರು.—ಸಂಸ್ಕೃತದ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ವಿ. ಎಸ್. ಆಚಾರ್ಯ.—ಸಂಸ್ಕೃತ ಪರೀಕ್ಷೆ ಬಗ್ಗೆ ಗಂಡಾಂತರ ಪರಿಸ್ಥಿತಿ ಇದೆ. ಸಂಸ್ಕೃತವೇ ಗಂಡಾಂತರದಲ್ಲಿದೆ. ಏನೋ ಕಷ್ಟಪಟ್ಟು ಜೀವ ಹಿಡಿದುಕೊಂಡಿದೆ. ಎಲ್ಲ ಪರೀಕ್ಷೆಗಿಂತ ಮುಂಚೆ ಸಂಸ್ಕೃತ ಪರೀಕ್ಷೆಯನ್ನು ಸೆಕೆಂಡರಿ ಬೋರ್ಡಿನವರು ನಡೆಸುತ್ತಾರೆ. ಆದರೆ ಎಲ್ಲಾ ಪರೀಕ್ಷೆಗಳ ಫಲಿತಾಂಶ ಬಂದರೂ ಇದು ಬರುವುದಿಲ್ಲ. ಒಂದು ವೇಳೆ ಬಂದರೂ ೫೦ ಅಂಕಗಳನ್ನು ಕೊಡುವ ಕಡೆ ೫೨ ಅಂಕಗಳನ್ನು ಕೊಡುವುದು, ಪರೀಕ್ಷೆಗೆ ಕುಳಿತುಕೊಳ್ಳದೇ ಇರುವವರಿಗೆ ಪಾಸ್ ಎಂದು ಮಾರ್ಕ್ಸ್‌ಕಾರ್ಡ್ ಕೊಡುವುದು ಹೀಗೆ ನಡೆಯುತ್ತಿದೆ. ಅತೀ ಹೆಚ್ಚು ಅಂಕಗಳನ್ನು ಗಳಿಸುವ ವಿದ್ಯಾರ್ಥಿಗಳನ್ನು ಫೇಲ್ ಮಾಡಿದ್ದಾರೆ. ಈ ರೀತಿ ಅವ್ಯವಸ್ಥೆ ಅಲ್ಲಿ ನಡೆದಿದೆ. ಪರೀಕ್ಷೆಯಾಗಿ ಮೂರು ತಿಂಗಳಾದರೂ ಫಲಿತಾಂಶ ಪ್ರಕಟ ಮಾಡುವುದಿಲ್ಲ, ಇದರ ಬಗ್ಗೆ ತಾವು ಸ್ವಲ್ಪ ಗಮನ ಹರಿಸಬೇಕು. ನೀರಾವರಿ ಕಾಮಗಾರಿಗಳಾಗಲೀ, ಬರಗಾಲ ಪರಿಹಾರ ಕೆಲಸಗಳನ್ನಾಗಲೀ ಯುದ್ಧದೋಪಾದಿಯಲ್ಲಿ ಮಾಡಬೇಕು. ಈಗಿರತಕ್ಕ ವೇಗವನ್ನು ಹೆಚ್ಚಿಸಬೇಕು. ವಿವಿಧ ಇಲಾಖೆಗಳ ವರದಿಯಲ್ಲಿ ನಮ್ಮ

ಅನುಭವದಿಂದ ಏನೇನು ಲೋಪದೋಷಗಳನ್ನು ಕಂಡು ಹೇಳಿದ್ದೇವೆ ಅದು ಮುಂದಿನ ವರ್ಷ ಆಗದಂತೆ ನೋಡಿಕೊಳ್ಳಬೇಕು. ಈ ವರ್ಷದಲ್ಲಿ ಈಗಾಗಲೇ ೬ ತಿಂಗಳು ಮುಗಿದುಹೋಯಿತು. ಇನ್ನು ಆರು ತಿಂಗಳು ಮಾತ್ರ ಉಳಿದಿದೆ. ಅದರಲ್ಲಿ ತಮ್ಮ ಎಲ್ಲಾ ಕೆಲಸಗಳನ್ನು ಮುಗಿಸುವುದಕ್ಕೆ ಶ್ರದ್ಧೆ ತೋರಬೇಕೆಂದು ಹೇಳುತ್ತಾ ನಾನೇನು ಕೆಲವು ಸಲಹೆಗಳನ್ನು ಕೊಟ್ಟಿದ್ದೇನೆ ಅದರ ಬಗ್ಗೆ ತೀವ್ರ ಗಮನ ಹರಿಸಬೇಕೆಂದು ಹೇಳಿ ಮುಖ್ಯಮಂತ್ರಿಗಳು ಮತ್ತು ಎಲ್ಲಾ ಮಂತ್ರಿಗಳೂ ಶುದ್ಧ ಆಡಳಿತವನ್ನು ನೀಡಿ ಜನರ ಕಲ್ಯಾಣ ಮಾಡುವಂತಾಗಲಿ ಎಂದು ಹಾರೈಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಜಿ. ಮಹೇಶ್ವರಪ್ಪ (ಮಾಯಕೊಂಡ).—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರತಕ್ಕ ಎಲ್ಲಾ ಬೇಡಿಕೆಗಳನ್ನೂ ಸಮರ್ಥಿಸುತ್ತಾ ಕೆಲವು ಮಾತುಗಳನ್ನು ಆಡುವುದಕ್ಕೆ ಇಷ್ಟಪಡುತ್ತೇನೆ. ನಾನು ಪೋಲೀಸ್ ಇಲಾಖೆ ಬಗ್ಗೆ ಮಾತ್ರ ಮಾತನಾಡೋಣ ಎಂದಿದ್ದೆ. ಆದರೆ ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡಿದಮೇಲೆ ನನಗೂ ಸ್ವಲ್ಪ ಪ್ರಚೋದನೆ ಆಗಿ ನಮ್ಮ ರಾಜ್ಯದ ಆರ್ಥಿಕ ಸ್ಥಿತಿಯ ಬಗ್ಗೆಯೂ ನಾಲ್ಕು ಮಾತುಗಳನ್ನಾಡಬೇಕೆಂದು ಅನ್ನಿಸುತ್ತಿದೆ. ಮಾನ್ಯ ವಿರೋಧಪಕ್ಷದ ನಾಯಕರು ಹಿಂದೆ ಅರ್ಥಸಚಿವರಾಗಿದ್ದರು. ಬಹಳ ಅನುಭವವನ್ನು ಪಡೆದು ಕೊಂಡಿದ್ದಾರೆ. ಅವರು ಈ ರಾಜ್ಯದ ಆರ್ಥಿಕ ಪರಿಸ್ಥಿತಿ ಬಗ್ಗೆ ಅರ್ಥಗರ್ಭಿತವಾದ ವಿಶ್ಲೇಷಣೆ ಮಾಡುತ್ತಾರೆ ಮತ್ತು ಉಪಯುಕ್ತವಾದ ಸಲಹೆಗಳನ್ನು ಕೊಡುತ್ತಾರೆ ಎಂದು ನಿರೀಕ್ಷೆ ಮಾಡಿದ್ದೆವು. ಆದರೆ ಅವರು ಒಂದುರೀತಿಯ hard hitting speech ಮಾಡಿದರು. substance ಅಷ್ಟೇನೂ ಕಾಣಲಿಲ್ಲ. ಇವತ್ತಿನ ಪರಿಸ್ಥಿತಿಯಲ್ಲಿ ಇಡೀ ರಾಷ್ಟ್ರದಲ್ಲಿ ಚರ್ಚೆಯಾಗುತ್ತಿರತಕ್ಕ ಕೇಂದ್ರ ಮತ್ತು ರಾಜ್ಯದ ಆರ್ಥಿಕ ಸಂಬಂಧದ ವಿಷಯವಾಗಿ ಅವರು ಮಾತನಾಡಬೇಕಾಗಿತ್ತು. ನಮ್ಮ ಅಭಿವೃದ್ಧಿ ಕಾರ್ಯಗಳ ವೆಚ್ಚ. ಅದರ ಹೊರೆ ಎಷ್ಟಾಗಿದೆ ಎಂಬ ಅರ್ಥ ಅವರಿಗಾಗಿದೆ. ಆ ಅಭಿವೃದ್ಧಿ ಕಾರ್ಯಗಳ ವೆಚ್ಚದ ಹೊರೆಯನ್ನು ತೂಗಿಸತಕ್ಕ ವಿಧಾನಗಳು ಯಾವುವು. ಸಂಪನ್ಮೂಲಗಳನ್ನು ಹೆಚ್ಚಿದ ಹೊರೆಯನ್ನು ತೂಗಿಸತಕ್ಕ ವಿಧಾನಗಳು ಯಾವುವು ಸಂಪನ್ಮೂಲಗಳನ್ನು ಹೆಚ್ಚಿಸತಕ್ಕ ಕ್ರಮ ಯಾವುವು ಎಂಬುದನ್ನು ಅವರು ಸೂಚನೆ ಮಾಡಿದ್ದರೆ ಅವರಿಗೆ ನಾವು ವಂದನೆಗಳನ್ನು ಸಲ್ಲಿಸಬಹುದಾಗಿತ್ತು. ಕೇಂದ್ರ ರಾಜ್ಯ ಆರ್ಥಿಕ ಸಂಬಂಧದ ವಿಷಯವಾಗಿ ನಾವೆಲ್ಲರೂ ಪಕ್ಷಬೇಧವಿಲ್ಲದೆ ಮುಖ್ಯಮಂತ್ರಿಗಳು ತೆಗೆದುಕೊಂಡಿರತಕ್ಕ ನಿಟ್ಟ ನಿಲುವಿಗೆ ಅಭಿನಂದಿಸಬೇಕಾಗಿತ್ತು. ಮಾನ್ಯ ಅರ್ಥ ಸಚಿವರು ಇತ್ತೀಚೆಗೆ ಬೆಂಗಳೂರಿಗೆ ಬಂದಿದ್ದ ೮ನೇ ಹಣಕಾಸಿನ ಆಯೋಗದ ಮುಂದೆ ಮಂಡಿಸಿರತಕ್ಕ ವಾದವನ್ನು ಮಾನ್ಯ ಸದಸ್ಯರು ಸ್ವಲ್ಪ ವಿಚಾರ ಮಾಡಬೇಕಾಗಿತ್ತು. ಕಳೆದ ೨೦ ವರ್ಷಗಳಿಂದ ತಮಗೆ ಗೊತ್ತಿರುವ ಹಾಗೆ ಡಿಫಿಸಿಟ್ ಪ್ರಮಾಣ ಏನಾಗಿದೆ ಎಂಬುದನ್ನು ತಾವು ನೋಡಿದ್ದೀರಿ. ಸುಮಾರು ೨೦ ರಷ್ಟು ಜಾಸ್ತಿ ಡಿಫಿಸಿಟ್ ಬಜೆಟ್ಟನ್ನು ರಾಜ್ಯಸರ್ಕಾರಗಳು ಮಂಡಿಸುತ್ತಾ ಬಂದಿವೆ. ಆದರೆ ಈ ಯೋಜನಾ ಕಾರ್ಯಗಳಿಗೆ ವಿನಿಯೋಗಿಸತಕ್ಕ ಸಂಪನ್ಮೂಲಗಳು ಹೆಚ್ಚಳ ಆಗುತ್ತಿಲ್ಲ. ಸಂಪನ್ಮೂಲಗಳನ್ನು ಯಾವರೀತಿ ಹೆಚ್ಚಿಸಬೇಕು ಎಂಬುದನ್ನು ನೋಡಬೇಕು. ರಾಜ್ಯಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ಸೇಲ್ಸ್ ಟ್ಯಾಕ್ಸ್‌ನಿಂದ, ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್‌ನಿಂದ ಅಥವಾ ಸ್ಟೇಟ್ ಎಕ್ಸೈಜ್‌ನಿಂದ ಮಾಡಬೇಕು. ಇವುಗಳ ಹೊರತಾಗಿ ನಮಗೆ ಸಲ್ಲತಕ್ಕ ಸಂಪನ್ಮೂಲಗಳು, ಕೇಂದ್ರಸರ್ಕಾರಕ್ಕೆ ಹೋಗತಕ್ಕ ಸಂಪನ್ಮೂಲಗಳು ಇವುಗಳನ್ನು ತುಲನಾತ್ಮಕವಾಗಿ ನೋಡತಕ್ಕ ಪರಿಸ್ಥಿತಿಯನ್ನು ಕಾಣುತ್ತಿದ್ದೇವೆ. ಇವತ್ತು ಸಾರ್ವಜನಿಕ ಹಣಕಾಸಿನ ಪರಿಸ್ಥಿತಿಯನ್ನು ನೋಡುವಾಗ ಈ ರಾಜ್ಯಕ್ಕೆ ಬರತಕ್ಕ ಲೆಜಿಟಿಮೇಟ್ ಷೇರ್ ಏನಿದೆ ಅದು ಕೇಂದ್ರದಿಂದ ಇವತ್ತು ಸಿಗುತ್ತಾ ಇಲ್ಲ. ಸಂವಿಧಾನಾತ್ಮವಾಗಿ ಬರತಕ್ಕ ಡೆವಲ್ಯೂಷನ್ ಆಫ್ ಫೈನಾನ್ಸ್ ಆಗುತ್ತಾ ಇದೆಯೇ ? ಇದರ ಬಗ್ಗೆ ಸರ್ಕಾರಕ್ಕೆ ಸಲಹೆಯನ್ನು ವಿರೋಧ ಪಕ್ಷದ ನಾಯಕರು ಕೊಟ್ಟಿದ್ದಾರೆಯೇ ? ಒಂದೇ ಒಂದು ಉದಾಹರಣೆ ಹೇಳಬೇಕೆಂದರೆ, ಇವತ್ತು ಒಂದು ಕಂಪಲ್ಸರಿ ಡಿಪಾಸಿಟ್ಸ್ ತೆಗೆದುಕೊಳ್ಳುತ್ತೀರಿ. ಅದು ೯೬೪ ಕೋಟಿ ರೂಪಾಯಿಗಳು ಇದ್ದು ಕೇಂದ್ರಕ್ಕೆ ಹೋಗುತ್ತಿದೆ. ಅದರಿಂದ ರಾಜ್ಯಕ್ಕೆ ಪಾಲು ಇಲ್ಲ. ಮತ್ತು ರೆಸೀಟ್ ಫ್ರಮ್ ಕಾರ್ಪೊರೇಟ್ ಟ್ಯಾಕ್ಸೆಸ್‌ನಲ್ಲಿ ಕೇಂದ್ರಕ್ಕೆ ಸುಮಾರು ೪೧೨೬ ಪರ್ಸೆಂಟ್ ಜಾಸ್ತಿ ಆಗಿದೆ. ಕಾರ್ಪೊರೇಟ್ ಟ್ಯಾಕ್ಸ್ ನಿಂದ ರಾಜ್ಯಕ್ಕೆ ಯಾವ ಷೇರೂ ಕೂಡಾ ಸಿಗುತ್ತಿಲ್ಲ. ಆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಬಹಳ ಒತ್ತಾಯ ಪೂರ್ವಕವಾಗಿ ಕೇಂದ್ರದ ಮುಂದೆ ತಮ್ಮ ವಾದವನ್ನು ಮಂಡಿಸಿದ್ದಾರೆ. ಇದು ಕೇಂದ್ರ ರಾಜ್ಯಕ್ಕೆ ಸಂಬಂಧಿಸಿದ ಆರ್ಥಿಕ ವಿಷಯ. ಇದನ್ನು ಸ್ಪಷ್ಟವಾಗಿ, ಬಲವತ್ತರವಾಗಿ ಮಂಡಿಸತಕ್ಕ ಪ್ರಯತ್ನವನ್ನು ಯಾವ ರಾಜ್ಯದ ಮುಖ್ಯಮಂತ್ರಿಗಳು ಮಾಡಿದರು ಎಂದರೆ ಅವರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿ

ಗಳು ಎಂದು ನಾನು ಹೇಳಬೇಕಾಗುತ್ತದೆ. ಈ ಹಿಂದೆ ಇದನ್ನು ಏಕೆ ಮಾಡಿಲ್ಲ? ಇದರಲ್ಲೂ ರಾಜಕೀಯ ಹುಡುಕುವುದು ಎಂದರೆ, ಪ್ರತಿಯೊಂದರಲ್ಲೂ ರಾಜಕೀಯವನ್ನು ಹೇಳುವುದಾದರೆ ಇವರು ಬಣ್ಣದ ಕನ್ನಡಕ ಹಾಕಿಕೊಂಡು ನೋಡುತ್ತಿದ್ದಾರೆಂದು ಹೇಳುತ್ತೇನೆ. ಇಂತಹ ಒಂದು ವಿಚಾರದಲ್ಲಿ ಮಾಜಿ ಅರ್ಥಮಂತ್ರಿಗಳು ಸರ್ಕಾರಕ್ಕೆ ಅದೂ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿಯ ಸಾಧಾರಣೆ ಬಗ್ಗೆ ಹೇಳಬೇಕಾಗಿತ್ತು. ಇವತ್ತು ಆದಾಯ ತೆರಿಗೆಯ ರೆಸೀಟ್‌ನಲ್ಲಿ ೮೭೫ ಪರ್ಸೆಂಟ್ ಜಾಸ್ತಿಯಾಗಿದೆ ಇದಲ್ಲದೆ ಸರ್‌ಚಾರ್ಜ್ ಇದೂ ಕೇಂದ್ರಕ್ಕೆ ಹೋಗುತ್ತದೆ. ಆದರಿಂದ ಯಾವ ಪಾಲೂ ಇಲ್ಲ. ಇವು ಕೆಲವು ನಿದರ್ಶನಗಳು ಮಾತ್ರ. ಮತ್ತು ಸೆಂಟ್ರಲ್ ಎಕ್ಸೈಸಿನಿಂದ...

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.---ಮಾನ್ಯ ಅಧ್ಯಕ್ಷರೇ, ಮಾನ್ಯ ಮಹೇಶ್ವರಪ್ಪನವರು ಮಾತನಾಡುತ್ತಾ ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರದ ಮುಂದೆ ಈ ವಿಷಯಗಳ ಬಗ್ಗೆ ಬಹಳ ಧೈರ್ಯವಾಗಿ ಮಂಡಿಸಿದ್ದಾರೆಂದು ಹೇಳಿದರು, ನಾನು ೧೯೬೭ ರಲ್ಲಿ ಈ ಸದನದಲ್ಲಿ ಸದಸ್ಯನಾಗಿರಲಿಲ್ಲ. ಆದರೆ ಆಗ ಅವರು ಈ ರಾಜ್ಯದ ಅರ್ಥಮಂತ್ರಿಗಳಾಗಿದ್ದರು. ಆಗ ಕೂಡ ಇದೇ ವಾದವನ್ನು ಕೇಂದ್ರದ ಮುಂದೆ ಇವರು ಇಟ್ಟಿದ್ದರೋ ಹೇಗೆ ಎಂಬುವನ್ನು ಮಾನ್ಯ ಸದಸ್ಯರು ತಿಳಿಸಬೇಕು.

ಶ್ರೀ ಕೆ. ಜಿ. ಮಹೇಶ್ವರಪ್ಪ.—ನಮ್ಮ ರಾಜ್ಯದಲ್ಲಿ ನೀರಾವರಿ ಯೋಜನೆಗಳು ತ್ವರಿತಗತಿಯಿಂದ ಕಾರ್ಯಗತವಾಗುತ್ತಿಲ್ಲವೆಂದು, ನಮ್ಮ ರಾಜ್ಯದಲ್ಲಿ ವಿದ್ಯುತ್ ಕೊರತೆ ಇದೆಯೆಂದು ವಿರೋಧ ಪಕ್ಷದ ಸದಸ್ಯರು ಹೇಳಿದರು. ಆದರೆ ಈ ನೀರಾವರಿ ಕಾರ್ಯಕ್ರಮಗಳನ್ನು ತ್ವರಿತ ಗತಿಯಲ್ಲಿ ಜಾರಿಗೆ ತರುವುದಕ್ಕೆ ನಮ್ಮಲ್ಲಿ ಸಂಪನ್ಮೂಲಗಳು ಎಲ್ಲಿವೆ ? ನಮ್ಮ ರಾಜ್ಯದಲ್ಲಿ ಕೇವಲ ೧೪ ಪರ್ಸೆಂಟ್ ನೀರಾವರಿ ಆಗಿದೆ. ಉಳಿದ ಭಾಗ ಒಣ ಬೇಸಾಯ ಮಾಡತಕ್ಕ ಪ್ರದೇಶವಾಗಿದ್ದು ಅಲ್ಲಿ ಬಹಳ ಕಡಿಮೆ ಪ್ರಮಾಣದಲ್ಲಿ ಮಳೆ ಬರುತ್ತದೆ. ಆದುದರಿಂದ ಇವತ್ತು ಈ ನೀರಾವರಿ ಯೋಜನೆಗಳಿಗಾಗಲಿ, ವ್ಯವಸಾಯ ಅಭಿವೃದ್ಧಿಗಾಗಲೀ ನಾವು ಸಂಪನ್ಮೂಲಗಳನ್ನು ಶೇಕರಣೆ ಮಾಡುವುದು ಎಲ್ಲಿ ? ಡಾಕ್ಟರ್ ಆಚಾರ್ ಅವರು ಮಾರಾಟ ತೆರಿಗೆ ಜಾಸ್ತಿ ಮಾಡುವುದಕ್ಕಾಗುವುದಲ್ಲವೆಂದರು. ಹೌದು. ಏಕೆಂದರೆ ಒಂದೊಂದು ವಸ್ತುಗಳ ಮೇಲೆಯೂ ಈಗ ಕೇಂದ್ರದ ತೆರಿಗೆಗಳು ಜಾಸ್ತಿ ಇರುವುದರಿಂದ ಮತ್ತು ಮಾರಾಟ ತೆರಿಗೆಯನ್ನು ಜಾಸ್ತಿ ಮಾಡಿದರೆ ವಸ್ತುಗಳ ಬೆಲೆ ಜಾಸ್ತಿಯಾಗುತ್ತದೆ ಬೇರೆ ಟ್ಯಾಕ್ಸ್‌ಗಳನ್ನು ಹಾಕುವಹಾಗೆ ಇಲ್ಲ. ಇವತ್ತು ಏನಾದರೂ ರಾಜ್ಯಗಳು ತಮ್ಮ ಯೋಜನೆಗಳಿಗೆ ಸಂಪನ್ಮೂಲ ಬೇಕಾದರೆ ಕೇಂದ್ರವನ್ನು ನೋಡಬೇಕೇ ಹೊರತು ಹೊಸದಾಗಿ ಸಂಪನ್ಮೂಲಗಳನ್ನು ರೂಢಿಸಲು ಆಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಯವರು alarming feature of the development of Union-State Relations... ಬಗ್ಗೆ ಹೇಳುತ್ತಾ ಅವರು "we have to meet that alarming feature" ಎಂದಿದ್ದಾರೆ. ಇದರ ಬಗ್ಗೆ ವಿರೋಧ ಪಕ್ಷದವರು ಏನೂ ಹೇಳಿಕೆ ಮಾಡಲಿಲ್ಲ. ಕೇಂದ್ರ ಹಾಗೂ ರಾಜ್ಯಕ್ಕೆ ಸಂಬಂಧಿಸಿದ ವಿಚಾರಸಂಕಿರಣ ಮಾಡಿದ್ದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮುಕ್ಕಾಲುಗಂಟೆ ಮಾತನಾಡಿದರು. ಇದರಲ್ಲಿ ಏನು ತಪ್ಪು ಇದೆ ? ತಮಿಳುನಾಡಿನಲ್ಲಿ ರಾಜಮನ್ನಾರ್ ಕಮಿಷನ್ ಅಪಾಯಿಂಟ್‌ಮೆಂಟ್ ಮಾಡಲಿಲ್ಲವೇ ? ಬೇಕಾದಷ್ಟು ಕಮಿಷನ್‌ಗಳನ್ನು ಮಾಡಿದರು. ಪ್ರಧಾನಮಂತ್ರಿಯವರೇ ಸರ್ಕಾರಿಯಾ ಕಮಿಷನ್ ಮಾಡಿದರು. ಅದರಲ್ಲಿ ರಾಜಕೀಯ ಇದೆಯೆಂದು ನಾವು ಹೇಳಲಿಲ್ಲ. ಕೇಂದ್ರ ಹಾಗೂ ರಾಜ್ಯಕ್ಕೆ ಸಂಬಂಧಪಟ್ಟ ಆರ್ಥಿಕ ಅಭಿವೃದ್ಧಿ ವಿಷಯ ಸದನದ ಮುಂದೆ ಇದೆ. ರಾಜ್ಯಕ್ಕೆ ನ್ಯಾಯವಾಗಿ ಸಲ್ಲತಕ್ಕ ಪಾಲನ್ನು ನಾವು ದೊರಕಿಸಿಕೊಳ್ಳಬೇಕಾಗಿದೆ. ಈ ಬಗ್ಗೆ ಕೇಂದ್ರದ ಮೇಲೆ ಒತ್ತಡ ತರುವುದಕ್ಕೆ ವಿರೋಧಪಕ್ಷದವರು ಸಹಕಾರ ಮಾಡಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ಸಂಪನ್ಮೂಲಗಳನ್ನು ವಿಸ್ತರಿಸುವ ವಿಚಾರದಲ್ಲಿ ಅಡಿಷನಲ್ ರಿಸೋರ್ಸ್ ಮೊಬಲೈಸೇಷನ್ ಬಗ್ಗೆ ಹೇಳುವುದಾದರೆ, ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ನಮಗೆ ೪೫೭ ಕೋಟಿ ರೂಪಾಯಿಗಳ ಫಿಕ್ಸೆಡ್ ಟಾರ್ಜೆಟ್ ಇತ್ತು. ಇವತ್ತು ನಾವು ೬೭೦ ಕೋಟಿ ರೂಪಾಯಿಗಳನ್ನು ಆಗಲೇ ಮೊಬಿಲೈಸ್ ಮಾಡಿದ್ದೇವೆ. ಆದುದರಿಂದ ಎಷ್ಟು ಶಕ್ತಿ ಮೀರಿ ಮೊಬಲೈಸ್ ಮಾಡುವುದಕ್ಕೆ ಸಾಧ್ಯವೋ ಅಷ್ಟನ್ನೂ ರಾಜ್ಯ ಸರ್ಕಾರ ಮಾಡಿದೆ. ಆದುದರಿಂದ ಇವತ್ತು ನಮ್ಮ ನೀರಾವರಿ ಯೋಜನೆಗಳಿಗಾಗಲೀ, ವಿದ್ಯುಚ್ಛಕ್ತಿ ಉತ್ಪಾದನೆಗಳಿಗಾಗಲೀ ನೂರಾರು ಕೋಟಿ ರೂಪಾಯಿಗಳನ್ನು ನಾವು ವಿನಿಯೋಗಿಸಬೇಕಾಗುತ್ತದೆ. ಇವತ್ತು ಪ್ರಕೃತಿ ವಿಕೋಪಕ್ಕೆ ಒಳಗಾದ ಪ್ರದೇಶಗಳ ಬಗ್ಗೆ, ಬರಗಾಲ ಬಂದ ಪ್ರದೇಶಗಳಿಗೆ ಪರಿಹಾರ ಒದಗಿಸುವ ಬಗ್ಗೆ ನಮ್ಮ ಯೋಜನೆ ಯೊಳಗಿರುವ ಹಣವನ್ನು ಖರ್ಚು ಮಾಡದೇ ಎಲ್ಲಿಂದ ಹಣವನ್ನು ತರಬೇಕು ?

ಬರಗಾಲ ಪರಿಹಾರದ ಬಗ್ಗೆ ನಾವು ಕೇಂದ್ರದಿಂದ ಏನು ಹಣವನ್ನು ಅಪೇಕ್ಷೆ ಪಡುತ್ತೇವೆ ಅದು ನೂರಕ್ಕೆ ನೂರಷ್ಟು ಬರಬೇಕಾಗುತ್ತದೆ. ಆ ಬಗ್ಗೆ ನಾವು ಪ್ರಯತ್ನ ಮಾಡಿ ಒತ್ತಡ ಮಾಡಿ ಹಣ ಪಡೆಯಬೇಕು. ಇಲ್ಲದಿದ್ದ ಪಕ್ಷದಲ್ಲಿ ನೀರಾವರಿಗೆ ಖರ್ಚು ಮಾಡುವ, ವಿದ್ಯುತ್ ಉತ್ಪಾದನೆಗೆ ಖರ್ಚು ಮಾಡುವ ಹಣ ವನ್ನು ಇವತ್ತು ನಾವು ಪರಿಹಾರ ಕಾಮಗಾರಿಗಳಿಗೆ ಕೊಟ್ಟರೆ ನಮ್ಮ ಆರ್ಥಿಕ ಪರಿಸ್ಥಿತಿ ಏನಾಗುತ್ತದೆಂ ಬುದನ್ನು ಗಮನಿಸಬೇಕು. ಆದ್ದರಿಂದ ಕೇಂದ್ರ ಈ ಬಗ್ಗೆ ಗಮನಿಸಬೇಕಾಗುತ್ತದೆ. ಬರಗಾಲ ಪರಿಹಾರ ಕಾಮಗಾರಿಗಾಗಿ ಕೇಂದ್ರದಿಂದ ನೂರಕ್ಕೆ ನೂರರಷ್ಟು ಹಣ ಯೋಜನೇತ್ತರ ವೆಚ್ಚದಲ್ಲಿ ಕೊಡ ತಕ್ಕದ್ದು ಅದರ ಮೇಲೆ ಇರುವ ಜವಾಬ್ದಾರಿ. ಈ ಬಗ್ಗೆ ನಾವು ನೀವೆಲ್ಲರೂ ಸೇರಿ ಒತ್ತಾಯ ಮಾಡ ಬೇಕಾಗುತ್ತದೆ. ಇಷ್ಟು ಹಣಕಾಸಿನ ವಿಚಾರದಲ್ಲಿ ಹೇಳಿ, ಹಣಕಾಸಿನ ಇಲಾಖೆ ಮುಖ್ಯಮಂತ್ರಿಗಳ ಕೈಯಲ್ಲಿ ಇರಬಾರದೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಅದು ಯಾವ ನಿಯಮ ದಲ್ಲಿ ಇದೆಯೋ ಅಥವಾ ಬಹಶಃ ಮುಖ್ಯ ಮಂತ್ರಿಗಳನ್ನು ಆರ್ಥಿಕ ವಿಚಾರದಲ್ಲಿ ಸಂಪೂರ್ಣ ಹಿಡಿತದಿಂದ ತಪ್ಪಿಸುವುದಕ್ಕೆ ಅದನ್ನು ಹೇಳಿದರೋ ಗೊತ್ತಾಗಲಿಲ್ಲ. ಆದರೆ ಕೇಂದ್ರ ರಾಜ್ಯದ ಆರ್ಥಿಕ ಸಂಬಂಧದ ವಿಚಾರವಾಗಿ ನಿಜವಾದ, ಉಪಯುಕ್ತವಾದ ಸಲಹೆಗಳನ್ನು ವಿರೋಧ ಪಕ್ಷದ ನಾಯಕರು ಕೊಟ್ಟಿಲ್ಲ ವೆಂದು ನಾವು ಹೇಳಬೇಕಾಗುತ್ತದೆ. ಬೇರೆ ಬೇರೆ ರಾಜಕೀಯದ ವಿಚಾರವಾಗಿ, ಪಕ್ಷಾಂತರದ ವಿಚಾರ, ವರ್ಗಾವಣೆ ವಿಚಾರ, ಪೋಲೀಸ್ ವಿಚಾರ ಇವುಗಳ ಬಗ್ಗೆ ಗಂಟೆಗಟ್ಟಲೆ ಭಾಷಣ ಮಾಡಿ ಮೂಲಭೂತ ವಾಗಿ ಸಂಪನ್ಮೂಲಗಳನ್ನು ಹೂಡುವುದಕ್ಕಾಗಿ ಏನೇನು ಕಾರ್ಯಕ್ರಮ ತೆಗೆದುಕೊಳ್ಳಬೇಕು. ಕೇಂದ್ರ ದೊಡನೆ ರಾಜ್ಯ ಸರ್ಕಾರ ಯಾವ ರೀತಿ ಒತ್ತಾಯ ತರಬೇಕು ಎನ್ನುವ ಬಗ್ಗೆ ಒಂದು ವಾಕ್ಯವನ್ನು ಸಹಾ ವಿರೋಧ ಪಕ್ಷದ ನಾಯಕರು ಹೇಳದಿರುವುದು ವಿಷಾದನೀಯವೆಂದು ನಾನು ಹೇಳುವುದಕ್ಕೆ ಇಷ್ಟಪಡು ತ್ತೇನೆ.

ಮಾನ್ಯ ಸದಸ್ಯರಾದ ಆಚಾರ್ಯರವರು ಮಾರಾಟ ತೆರಿಗೆಯನ್ನು ತೀವ್ರವಾಗಿ ವಸೂಲು ಮಾಡ ಬೇಕು, ಇನ್ನಿತರ ಕಾರ್ಯಗಳನ್ನು ತೀವ್ರವಾಗಿ ಕಾರ್ಯಗತ ಮಾಡಬೇಕೆಂದು ಹೇಳಿದ್ದಾರೆ, ಅದರ ಬಗ್ಗೆ ಯಾರದೂ ಭಿನ್ನಾಭಿಪ್ರಾಯ ಇಲ್ಲ. ಯೋಜನೆಗಳು ಯುದ್ಧಗತಿಯಲ್ಲಿ ನಡೆಯಬೇಕೆಂದು ಹೇಳಿದ್ದಾರೆ. ನಿಜ ಹಣಕಾಸಿನ ಸವಲತ್ತು ಇಲ್ಲದೆ, ಯಾವ ಯೋಜನೆಗಳು ತಾನೇ ಯುದ್ಧಗತಿಯಲ್ಲಿ ಮುಗಿಯುತ್ತವೆ? ಇವತ್ತು ಕರ್ನಾಟಕ ರಾಜ್ಯ ಅತ್ಯಂತ ಕ್ಲಿಷ್ಟವಾದ ಆರ್ಥಿಕ ಪರಿಸ್ಥಿತಿಯಲ್ಲಿ ಇದೆ, ರಾಜ್ಯದ ಸಂಪನ್ಮೂಲ ಗಳನ್ನು ವೃದ್ಧಿಪಡಿಸುವ ದಿಸೆಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗಿದೆ, ಅಭಿವೃದ್ಧಿ ಕಾರ್ಯ ಗಳಿಗೆ ಹಣ ಒದಗಿಸಬೇಕಾಗಿದೆ. ಇವತ್ತು ಶಾಲೆಗಳಿಲ್ಲ, ಕಾಲೇಜುಗಳು ಇಲ್ಲ, ಆಸ್ಪತ್ರೆಗಳು ಇಲ್ಲ, ನೀರಾವರಿ ಯೋಜನೆಗಳಿಲ್ಲ ಎನ್ನುವ ಕೂಗು ಇದೆ ಇವುಗಳಿಗೆ ಹಣಕೊಡುವುದು ಎಲ್ಲಿಂದ ? ಹರಿಜನ ಗಿರಿಜನರ ಕಾರ್ಯಕ್ರಮಗಳಿಂದಿಯಾಗಿ ಕರ್ನಾಟಕದಲ್ಲಿ ಸರ್ವಾಂಗೀಣ ಸಮೃದ್ಧಿಯನ್ನು ತರುವುದಕ್ಕಾಗಿ ಜನತಾ ಸರ್ಕಾರ ನಿಷ್ಠೆಯಿಂದ ಕೆಲಸ ಮಾಡುತ್ತಿದೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಇವತ್ತು ಪೋಲೀಸ್ ಇಲಾಖೆ ಯಾವಪಕ್ಷದ ಸರ್ಕಾರವೇ ಬರಲಿ, ಇದು ಇದ್ದೇ ಇರುತ್ತದೆ. ಇದರ ಬಗ್ಗೆ ಮಾತನಾಡುವಾಗ ಪೋಲೀಸ್ ಇಲಾಖೆಯ ಇತಿಹಾಸವನ್ನು ಸ್ವಲ್ಪಮಟ್ಟಿಗೆ ಗಮನದಲ್ಲಿಟ್ಟು ಕೊಳ್ಳಬೇಕಾಗುತ್ತದೆ. ಬ್ರಿಟಿಷರ ಕಾಲದ, ಸಾಮ್ರಾಜ್ಯಶಾಹಿ ರಕ್ಷಣೆಗೋಸ್ಕರವಾಗಿ ಮೂಲ ಉದ್ದೇಶ ದಿಂದ ನಿರ್ಮಾಣವಾದಂಥ ಈ ಸಂಸ್ಥೆ. ಇಂಡಿಯನ್ ಪೋಲೀಸ್ ೧೮೬೧ ಆಂದಿನ ಪೋಲೀಸ್ ವ್ಯವಸ್ಥೆ ಯನ್ನು ಇನ್ನೂ ಕೂಡ ನಡಸಿಕೊಂಡು ಬರುತ್ತಿದ್ದೇವೆ. ಸುಮಾರು ೧೨೦ ವರ್ಷಗಳ ಪೋಲೀಸ್ ವ್ಯವಸ್ಥೆಯನ್ನು ಈ ದೇಶದಲ್ಲಿ ನಡೆಸಿಕೊಂಡು ಬರುತ್ತಿದ್ದೇವೆ. ಇದು ಅಪವಾದದ ಸುಳಿಯಿಂದ ಈಚೆ ಬರುವುದಕ್ಕಾಗಿಲ್ಲ. ಯಾವುದೇ ಪರಿಣಾಮಕಾರಿಯಾದ ಕ್ರಾಂತಿಕಾರವಾದ ಬದಲಾವಣೆಯನ್ನು ಮಾಡು ವುದಕ್ಕೆ ಆಗಿಲ್ಲ. ಈ ಸಂಸ್ಥೆಯ ಮನೋವೃತ್ತಿ ಬದಲಾವಣೆಯಾಗಿಲ್ಲ. ಸಾಮ್ರಾಜ್ಯಶಾಹಿ ಕಾಲ ದಲ್ಲಿದ್ದಂಥ ಮನೋವೃತ್ತಿ ಇನ್ನೂ ಬದಲಾವಣೆಯಾಗಿಲ್ಲ. ಒಂದು ಸಂತೋಷ ಏನೆಂದರೆ ಕರ್ನಾಟಕ ಪೋಲೀಸ್ ಇಲಾಖೆ ಬಗ್ಗೆ ಅಭಿಮಾನ ಪಡತಕ್ಕಂಥ ಪರಿಸ್ಥಿತಿ ಇದೆ. ಬಿಹಾರದಲ್ಲಿ ಕಣ್ಣು ಕೀಳಿದಂಥ ನಿದರ್ಶನಗಳಾಗಲೀ, ಒರಿಸ್ಸಾದಲ್ಲಿ ಕಂಡಲ್ಲಿ ಗುಂಡು ಹಾರಿಸಿ ಕೊಲ್ಲತಕ್ಕಂಥ ನಿದರ್ಶನಗಳಾಗಲೀ ಕರ್ನಾಟಕ ದಲ್ಲಿ ನಡೆದಿಲ್ಲದಿರುವುದರಿಂದ ಈ ಸಂಸ್ಥೆ ಬಗ್ಗೆ ನಾವು ಅಭಿಮಾನ ಇಟ್ಟುಕೊಳ್ಳಬೇಕಾಗಿದೆ. ಆದರೂ ಕೂಡ ಪೋಲೀಸ್ ಇಲಾಖೆಗೆ ಸಂಬಂಧಪಟ್ಟಂತೆ ಬದಲಾವಣೆಗಳನ್ನು ತರಬೇಕಾಗಿದೆ, ಐ.ಪಿ.ಎಸ್. ಅಧಿಕಾರಿಗಳು ಕರ್ನಾಟಕಕ್ಕೆ ಬರುವುದಕ್ಕೆ ಆತುರೆಯುತ್ತಾರೆಂದು ಮಾನ್ಯ ಸದಸ್ಯರು ಹೇಳಿದರು.

ಇದಕ್ಕೆ ಕಾರಣ ಏನೆಂದರೆ ಕರ್ನಾಟಕಕ್ಕೆ ಬಂದವರು ೧೦-೧೫ ವರ್ಷಗಳಲ್ಲಿ ಡಿ.ಜಿ.ಸಿ.ಪಿ. ಆಗಬಹುದು. ರಿಟೈರ್ ಆಗುವ ಹೊತ್ತಿಗೆ ಐ.ಜಿ.ಪಿ. ಆಗುತ್ತಾರೆ. ಈ ಸಂಸ್ಥೆಯಲ್ಲಿ ಪ್ರೊಮೋಷನ್ ವ್ಯವಸ್ಥೆ ಚೆನ್ನಾಗಿದೆ, ೪ ಜನ ಡಿ.ಜಿ.ಪಿ.ಗಳ ಅವಶ್ಯಕತೆ ನಮಗೆ ಕಾಣಲಿಲ್ಲ. ಒಬ್ಬರು ಡಿ.ಜಿ.ಪಿ. ಇರಲಿ, ಡಿ.ಜಿ.ಪಿ. ಮತ್ತು ಐ.ಜಿ.ಪಿ.ಗಳ ಸಂಖ್ಯೆ ಜಾಸ್ತಿ ಮಾಡುವ ಬದಲು ಪೋಲೀಸ್ ಪೇದೆಗಳ ಸಂಖ್ಯೆಯನ್ನು ಜಾಸ್ತಿ ಮಾಡಿ, ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಪೋಲೀಸಿನವರನ್ನು ಹಾಕಬೇಕು.

(ಡಿ. ಬಿ. ಚಂದ್ರೇಗೌಡರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇನ್ನು ಅಪರಾಧಗಳ ತನಿಖೆ ವಿಚಾರದಲ್ಲಿ ಹೇಳುವುದಾದರೆ, ಅಂಕಿಸಂಖ್ಯೆಗಳ ಬಗ್ಗೆ ನಮಗೆ ವಿಶ್ವಾಸ ಇಲ್ಲ. ಸಂಖ್ಯೆಗಳ ಆಧಾರದಮೇಲೆ ಅಪರಾಧಗಳು ಕಡಿಮೆಯಾಗುತ್ತವೆ, ಹೆಚ್ಚಾಗುತ್ತವೆಂದು ಜಡ್ಜ್ ಮಾಡುವುದಕ್ಕೆ ಸಾಧ್ಯವಿಲ್ಲ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಒಂದು ಲಕ್ಷ ಪ್ರಜಾಸಂಖ್ಯೆ ಇರತಕ್ಕ ಪ್ರದೇಶಗಳಲ್ಲಿ ೪೦೦೦-೭೦೦೦ರವರೆಗೆ ಕಾಗ್ನಿಸಿಬಲ್ ಅಫೆನ್ಸ್‌ಗಳ ಮೇಲೆ ಚಾರ್ಜಷೀಟ್ ಹಾಕುತ್ತಾರೆ. ನಮ್ಮಲ್ಲಿ ಒಂದು ಲಕ್ಷ ಪ್ರಜಾಸಂಖ್ಯೆ ಇರತಕ್ಕ ಪ್ರದೇಶಗಳಲ್ಲಿ ೨೦೦ ಕಾಗ್ನಿಸಿಬಲ್ ಅಫೆನ್ಸ್‌ಗಳ ಬಗ್ಗೆ ಚಾರ್ಜ್‌ಷೀಟ್ ಹಾಕುತ್ತಾರೆ. ಇವುಗಳ ಆಧಾರದ ಮೇಲೆ ಅಪರಾಧಗಳು ಕಡಿಮೆಯಾಗುತ್ತವೆಂದು ನನಗೆ ಕಾಣುವುದಿಲ್ಲ. ಜಿಲ್ಲಾ ಮಟ್ಟದಲ್ಲಿ ಹಾಗೂ ಗ್ರಾಮಾಂತರ ಮಟ್ಟದಲ್ಲಿ ಪೋಲೀಸರ ಸಂಖ್ಯೆಯನ್ನು ಹೆಚ್ಚು ಮಾಡಬೇಕು. ಜಿಲ್ಲಾ ಮ್ಯಾಜಿಸ್ಟ್ರೇಟರಿಗೂ ಮತ್ತು ಜಿಲ್ಲಾ ಪೋಲೀಸ್ ಅಧಿಕಾರಿಗಳಿಗೂ ಇರತಕ್ಕ ಅಧಿಕಾರದ ವ್ಯಾಪ್ತಿಯ ಬಗ್ಗೆ ಸ್ಪಷ್ಟ ನಿರ್ದೇಶನ ಇರಬೇಕಾದುದು ಬಹಳ ಮುಖ್ಯ. ಮ್ಯಾಜಿಸ್ಟ್ರೇಟ್ ಜಿಲ್ಲಾ ಪೋಲೀಸ್ ಅಧಿಕಾರಿಗಿಂತ ಮೇಲಾಧಿಕಾರಿಯೆ? ಅವರು ಯಾವ ಯಾವ ಸಂದರ್ಭದಲ್ಲಿ ಪ್ರವೇಶ ಮಾಡಬಾರದು ಎಂಬ ಬಗ್ಗೆ ಸ್ಪಷ್ಟವಾಗಿ ನಿಯಮಾವಳಿಗಳನ್ನು ರೂಪಿಸತಕ್ಕಂಥಾದ್ದು ಅವಶ್ಯಕವೆಂದು ನನಗನ್ನಿಸುತ್ತದೆ. ಇವತ್ತು ೮೦ ರಿಂದ ೧೦೦ ಹಳ್ಳಿಯವರೆಗೆ ಈ ಒಂದು ಪೋಲೀಸ್ ಠಾಣೆ ಇದೆ, ಬೆಂಗಳೂರು ನಗರದಂಥಹ ದೊಡ್ಡ ದೊಡ್ಡ ನಗರಗಳಲ್ಲಿ ಪ್ರತಿಯೊಂದು ರಸ್ತೆ ಹಾಗೂ ವೃತ್ತಗಳಲ್ಲಿಯೂ ಪೋಲೀಸ್ ಠಾಣೆಗಳು ಇವೆ. ನನ್ನ ಕ್ಷೇತ್ರವಾದ ಮಾಯಕೊಂಡ ಸಣ್ಣ ಟೌನ್ ಅಲ್ಲಿ ಒಬ್ಬರು ಸಬ್ ಇನ್ಸ್‌ಪೆಕ್ಟರು, ಇಬ್ಬರು ಹೆಡ್ ಕಾನ್‌ಸ್ಟೇಬಲುಗಳು ನಾಲ್ಕು ಜನ ಪೋಲೀಸಿನವರು ಇದ್ದಾರೆ, ಇವರಿಗೆ ವಾಹನ ಸೌಕರ್ಯ ಇಲ್ಲ. ಇವರ ವ್ಯಾಪ್ತಿಯಲ್ಲಿ ಬರತಕ್ಕ ಹಳ್ಳಿಗಳು ಸುಮಾರು ೩೦-೩೦ ಮೈಲಿ ದೂರದಲ್ಲಿವೆ. ಇವರಿಗೆ ವಾಹನ ಸೌಕರ್ಯಗಳನ್ನು ಕೊಡಬೇಕೆಂದು ನಾನು ಸೂಚನೆ ಮಾಡುತ್ತೇನೆ. ಗ್ರಾಮಾಂತರ ಪ್ರದೇಶದಲ್ಲಿ ಪ್ರತಿಯೊಂದು ಪಂಚಾಯ್ತಿ ಮಟ್ಟದಲ್ಲಿಯೂ ವಾಹನ ಸೌಕರ್ಯ ಮತ್ತು ವೈರಲೆಸ್ ಸೆಟ್ಟುಗಳಿಂದ ಕೂಡಿದ ಪೋಲೀಸರನ್ನು ಇಡಬೇಕೆಂದು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಇನ್ನು ಈ ಪೋಲೀಸ್ ಇಲಾಖೆಯ ಮುಖ್ಯಾಧಿಕಾರಿಗಳ ನೇಮಕದ ಬಗ್ಗೆ ಸ್ವಲ್ಪ ಆಲೋಚನೆ ಮಾಡತಕ್ಕಂಥ ಸ್ಥಿತಿ ಇದೆ ಎಂದು ನನಗನಿಸುತ್ತದೆ. ಕೆಲವರು ತಜ್ಞರು ಸಲಹೆ ಮಾಡಿದ್ದಾರೆ, ಮತ್ತು ಅನೇಕ ವರದಿಗಳು ಇಲ್ಲಿ ಬಂದಿವೆ ಪೋಲೀಸ್ ಕಮೀಷನ್ ವರದಿಯಾಗಲಿ, ಇನ್ನೂ ಅನೇಕ ಕಮಿಷನ್‌ಗಳ ವರದಿ ಇವೆ. ಪೋಲೀಸ್ ಇಲಾಖೆ ಮುಖ್ಯಾಧಿಕಾರಿಗಳು ನೇಮಕ ಕೇವಲ ಸರ್ಕಾರದ ಸ್ವೇಚ್ಛೆ, ಆ ಒಂದು ಡಿಸ್‌ಕಷನ್‌ಗೆ ಬಿಡಬೇಕೆ, ಅಥವಾ ಯಾವುದಾದರೂ ಒಂದು ಬೇರೆ ಕೋರಮ್ ಕೆಲಸ ಮಾಡಬೇಕೆ, ಇದು ಬಹಳ ಮುಖ್ಯವಾದ ವಿಚಾರ. ಒಳ್ಳೆಯ ಅಮೂಲ್ಯವಾದ ಸಲಹೆಯನ್ನು ಮಾನ್ಯ ಅಯ್ಯರ್ ಅವರು ಕೊಟ್ಟಿದ್ದಾರೆ. ಮುಖ್ಯಾಧಿಕಾರಿಗಳವರಿಗೆ ಒಂದು ಟೆನ್ಯೂರ್ ಫಿಕ್ಸ್ ಮಾಡಬೇಕು. ಆ ಅವಧಿ ಫಿಕ್ಸ್ ಮಾಡಿ ಅಪಾಯಿಂಟ್ ಮಾಡಬೇಕು ಆ ಟೆನ್ಯೂರ್ ಪೀರಿಯಡ್‌ನಲ್ಲಿ ಕ್ರಮ ತೆಗೆದುಕೊಳ್ಳಲಿಕ್ಕೆ ಸ್ಪಷ್ಟವಾದ ನಿಯಮಾವಳಿ ರಚನೆ ಮಾಡಬೇಕು. ಯಾವ ತರಹ ಎಂದರೆ ಪಬ್ಲಿಕ್ ಸರ್ವೀಸ್ ಕಮೀಷನ್ ಛೇರ್‌ಮನ್ ತೆಗೆಯಬೇಕಾದರೆ ಯಾವ ರೀತಿ ಇದೆ, ಆ ರೀತಿ ಮಾಡಿ ಆ ಅಧಿಕಾರಿಗಳನ್ನು ನೇಮಕ ಮಾಡತಕ್ಕ ಒಂದು ಕಾನೂನನ್ನು ತರತಕ್ಕ ಅವಶ್ಯಕತೆ ಇವೊತ್ತು ಕಾಣುತ್ತದೆ. ಅನೇಕ ಕಡೆ ಈ ಪೋಲೀಸರಿಗೆ ಮತ್ತು ಸಾರ್ವಜನಿಕರಿಗೆ ಇರತಕ್ಕ ಸಂದರ್ಭ, ಪೋಲೀಸರಿಗೆ ಮತ್ತು ರಾಜಕಾರಣಿಗಳಿಗೆ ಇರತಕ್ಕ ಸಂದರ್ಭ, ಪೋಲೀಸ್ ಅಧಿಕಾರಿಗಳಿಗೆ ಮತ್ತು ಮೇಲಧಿಕಾರಿಗಳಿಗೆ ಇರತಕ್ಕ ಸಂದರ್ಭ ಇವುಗಳಬಗ್ಗೆ ವಾದವಿವಾದಗಳು ರಾಷ್ಟ್ರದಲ್ಲಿ ನಡೆಯುತ್ತವೆ. ಪೋಲೀಸ್ ಇಲಾಖೆಯನ್ನು ಆಮೂಲಾಗ್ರವಾಗಿ ಪುನರ್ ನಿರ್ಮಾಣ ಮಾಡಲಿಕ್ಕೆ ಅದನ್ನು ಸುಧಾರಿಸಲಿಕ್ಕೆ ಯಾವುದಾದರೂ ತೀರ್ಮಾನ, ಕ್ರಮ ತೆಗೆದುಕೊಳ್ಳತಕ್ಕ ಬಗ್ಗೆ ಸರ್ಕಾರ ಯೋಚನೆ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಅದೇರೀತಿ ಪೋಲೀಸ್ ಬಗ್ಗೆ, ಪೋಲೀಸ್ ಅಧಿಕಾರಿಗೆ ವಿರುದ್ಧವಾಗಿ ಸಾರ್ವಜನಿಕರಿಂದ ಕಂಪ್ಲೇಂಟ್ ಬಂದರೆ ಅವುಗಳನ್ನು ತೆಗೆದು ಕೊಳ್ಳುವುದಕ್ಕೆ

ಒಂದು ಕಮಿಟಿ ರಚನೆ ಮಾಡುವುದು ಅಗತ್ಯ ಇದೆ. ಅದು ಕಂಟ್ರೋಲಿಂಗ್ ಕಮಿಟಿ ಎಂದು ತಿಳಿದುಕೊಳ್ಳಿ ಅದನ್ನು ಮಾಡಬೇಕಾಗಿದೆ. ಈಗ ಪಬ್ಲಿಕ್ ಗ್ರಿವೆನ್ಸಸ್ ಪ್ರಾರಂಭವಾಗಿದೆ, ಅದು ಒಂದು ತರಹ ಆಮ್ನಿಬಸ್ ಇಲಾಖೆಯಾಗಿದೆ. ಪೋಲೀಸರ ಬಗ್ಗೆ ದೂರುಗಳು ಬಂದರೆ ಪೋಲೀಸ್ ಅಧಿಕಾರಿಗಳ ಬಗ್ಗೆ ದೂರು ಬಂದರೆ ಅದರಬಗ್ಗೆ ವಿಚಾರ ಮಾಡತಕ್ಕ ಒಂದು ತಜ್ಞರ ಅಥವಾ ರಾಜಕೀಯಕ್ಕೆ ಸಂಬಂಧಪಡದೇ ಇರತಕ್ಕವರ, ನ್ಯಾಯಾಂಗ ಪರಿಣಿತರ, ಮಾಜಿನ್ಯಾಯಾಧೀಶರ, ಅಥವಾ ಒಳ್ಳೆಯ ಸಾರ್ವಜನಿಕರು, ತಜ್ಞರಿಂದ ಕೂಡಿರತಕ್ಕ ಒಂದು ಚಿಕ್ಕ ಕಮಿಟಿಯನ್ನು ಮಾಡುವುದು ಅಗತ್ಯವಿದೆ, ಅದನ್ನು ಗ್ರಿವೆನ್ಸಸ್ ಕಮಿಟಿ ಎಂದೇ ಕರೆಯೋಣ. ಪೋಲೀಸ್ ಇಲಾಖೆ ಅಧಿಕಾರಿಗಳ ಬಗ್ಗೆ ಬರತಕ್ಕ ಎಲ್ಲಾ ಕಂಪ್ಲೇಂಟುಗಳ ಬಗ್ಗೆ ವಿಚಾರ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳತಕ್ಕ ಕಮಿಟಿ ಮಾಡತಕ್ಕದ್ದು ಅವಶ್ಯಕತೆ ಇದೆ ಎಂದು ಹೇಳುತ್ತೇನೆ. ಇನ್ನು ಪೋಲೀಸ್ ಇಲಾಖೆ, ಕೆಲಸ ಮಾಡತಕ್ಕ ಕ್ರಮ ಅದರ ಬಗ್ಗೆ ಹೆಚ್ಚಿಗೆ ಹೇಳಬಹುದು. ಆದರೆ ಎಲ್ಲರ ಅನುಭವ ಇವತ್ತು ಪೋಲೀಸ್ ಎಕ್ಸೆಸ್ ಬಗ್ಗೆ ಹೇಳಿದ್ದಾರೆ, ಮಾನ್ಯ ವಿರೋಧ ಪಕ್ಷದ ನಾಯಕರೂ ಸಹ ಹೇಳಿದರು. ಅವರ ಕಾಲದಲ್ಲೂ ಕೂಡ ಪೋಲೀಸ್ ಎಕ್ಸೆಸ್ ಆಗಿದೆ. ನಮ್ಮ ಕಾಲದಲ್ಲಿ ಆಗಿರತಕ್ಕದ್ದು ವರದಿಯಿಂದ ತಿಳಿದು ಬಂದಿದೆ. ಮಾನ್ಯ ವಿರೋಧಪಕ್ಷದ ನಾಯಕರು ಯಾವ ರೀತಿ ಸುಧಾರಣೆ ಮಾಡಬಹುದು ಆ ಬಗ್ಗೆ ಸಲಹೆ ಕೊಟ್ಟಿದ್ದರೆ ಚನ್ನಾಗಿತ್ತು. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ, ಸರ್ಕಾರದಲ್ಲಿ ಕೆಲವು ಮಂತ್ರಿಗಳು ಪ್ರಭಲವಾದ ಮಂತ್ರಿಗಳಿದ್ದಾರೆ, ಕೆಲವರು ಅದಕ್ಕಿಂತಲೂ ಕಡಿಮೆ ಇದ್ದಾರೆ ಎಂದು ಹೇಳಿದರು. ಅವರು ಹೇಳಿದ್ದು ನೋಡಿ ನನಗೆ ಆಶ್ಚರ್ಯವಾಯಿತು. ಅವರ ಮಂತ್ರಿ ಮಂಡಲದಲ್ಲಿ ಯಾರು ಯಾರು ಏನೇನು ಆಗಿದ್ದರು ಅದನ್ನು ಅವರು ಸ್ಪಷ್ಟವಾಗಿ ಹೇಳಬಹುದಾಗಿತ್ತು. ಹಣಕಾಸಿನ ವಿಚಾರದಲ್ಲಿ ದೇವೇಗೌಡರಿಗೆ ಕೊಟ್ಟಿದ್ದಾರೆ, ಎಂದರೆ ಅವರು ನೀರಾವರಿ ಕಾರ್ಯ ಮಾಡಬೇಕಾಗುತ್ತದೆ, ಅದಕ್ಕೆ ಅವರಿಗೆ ಹೆಚ್ಚು ಹಣ ಕೊಟ್ಟಿದ್ದಾರೆಯೇ ಹೊರತು ಬೇರೆ ಏನೂ ಇಲ್ಲ. ಮಂತ್ರಿ ಮಂಡಲದಲ್ಲಿ ಯಾರು ಯಾರೋ ಪ್ರಭಲರಾಗಿದ್ದಾರೆ ಎಂದು ಹೇಳುವುದು ಅನವಶ್ಯಕವಾಗಿತ್ತು ಎಂದು ಹೇಳುತ್ತೇನೆ. ಇನ್ನು ಜೈಲಿನ ವಿಚಾರದ ಬಗ್ಗೆ ಹೇಳಬೇಕೆಂದರೆ ಜೈಲಿನಲ್ಲಿ ಅನೇಕ ಸಂದರ್ಭಗಳಲ್ಲಿ ಬಹಳ ದಿವಸ ನಾನು ಇದ್ದೆ. ಅಲ್ಲಿ ಇನ್ನೂ ಬಹಳ ಸುಧಾರಣೆ ತರತಕ್ಕ ಅವಶ್ಯಕತೆ ಇದೆ ಅಲ್ಲಿ ಕೊಡತಕ್ಕ ಊಟದ ವ್ಯವಸ್ಥೆಯನ್ನು ಕಂಟ್ರಾಕ್ಟರಿಗೆ ವಹಿಸದೆ ಜೈಲಿನ ಅಧಿಕಾರಿಗಳೆ ಅದರ ವ್ಯವಸ್ಥೆ ಮಾಡಬೇಕು. ಊಟ, ಬಟ್ಟೆ ಅಲ್ಲಿರತಕ್ಕ ವ್ಯವಸ್ಥೆ ಸರಿಯಾಗಿರಬೇಕು. ದಿನನಿತ್ಯದ ಕರ್ಮಗಳನ್ನು ಮಾಡತಕ್ಕಂಥಾದ್ದನ್ನು ಮೊದಲನೆಯದಾಗಿ ಸರಿ ಪಡಿಸಬೇಕು. ಹೊಟ್ಟೆ ತುಂಬಾ ಊಟ ಕೊಡಲಿಕ್ಕೆ ಆಗದೇ ಇದ್ದರೂ ದಿನನಿತ್ಯದ ಕರ್ಮದ ವ್ಯವಸ್ಥೆ ಸರಿಪಡಿಸಬೇಕೆಂದು ಹೇಳಿ, ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† SRI MANIKRAO PATIL (Aurad).— Sir, while opposing the demands presented by the hon. Chief Minister, I would like to express my view on the Police Department. Many of my friends have spoken on other Departments, My leader Sri Veerappa Moily has elaborately explained about the various Departments. One of the very relavent and important issue he has raised is regarding the total seil out of Krishna water to Andhra Pradesh. It is costing very hevily the interests of Karnataka State in general and Gulbarga division in particular. I don't like to debate on that here on this occasion I will take some other opportunity to bring that matter before this house At the moment I will confine myself to the debate on the Police Department.

Sir, you are well aware that in a democratic setup if we want to build up an orderly society, maintain social order give political stability and bring economic prosperity, the role of police is very impartant. Unless this Department plays a very significant role, probably

the entire developmental activities and political stability will be dislocated. This Government has presented an Annual Report on the Police Department in the form of a small hand-bill probably just to meet the procedural requirement of presenting an Administrative Report to this House. They did not think it better to elaborate the functioning of this Department. If you go through this report you will come to know that this is only a piece of paper which contains nothing but adhoc figures as a result of which it will be very difficult for everyone of us to scrutinise the entire Department. Now we have to confine our scrutiny only on the basis of this Report. If the figures given in this report are any indication of the functioning of this Department, we will have to feel a regret. Sir, it has reached a stage where possibly no Government can repair it. I will quote some statistics right from 1956-57 onwards up to this date to show to what extent they have succeeded in controling crime and detecting crime, in maintaining law and order and public morale as well as police morale.

4.00 P. M.

Sir, in 1957 the total cognisable offences reported in this State were about 24,051 and in 1958 it has come down to 23,480. Whereas in 1981 it has gone up to 43,091 and in 1982 it was 37,721. Murders in 1957 were about 643, in 1958 -645, in 1981—842 and in 1982 it was 886. Dacoits : 1957 --122, 1958—119, 1981-231 ann in 1982-177 House-breaking in 1957—4,758, 1958—4,130, 1981—9,559 and in 1982—8,019. Robbery - 251 cases in 1957, 119 in 1958, 723 in 1981 and 530 in 192. Thus you can see there is a marked difference and constant increase in all these offences. The total strength of the police force during the year 1958 in Karnataka, both officers and men was about 21,360. Whereas the strength of officers and men now has gone upto 41,679. During the last few years i.e. right from 1958 to 1981 the police strength has gone up twice than what it was in 1958, whereas the rate of crime has also gone considerably. So far as the detection of cases is concerned this report doesn't reveal anything about 1981-82. But if you go through the percentage of detection, in the year 1957 it was somewhere about 45.8% and in 1957 it was 47.4%. If we take into account the constant increase in crimes and deterioration in the efficiency of the police force we can guess the percentage of detection might have also come down very heavily during this year since the department has not given the percentage of detection here. Whereas if you take the functioning of the police department about the detection of the crimes in neighbouring States you will come to know how they have been performing their job and

retaining the confidence of the people. Regarding Andhra Pradesh I have got the details with regard to the detection of cognisable offences, In 1972 the percentage of crime detection in Andhra Pradesh was 79-41%, in 1973 it was 78.63% and in 1974 it was 75.03%. This shows to what extent our police force is performing its duties with regard to control of crimes, detection and other things. Now during the last few years the police force has been provided all necessary aids by the Government right from increasing the total strength and providing an atmosphere wherein they could be in a position to give efficient service. Their vehicle strength has also been considerably increased. In those days the vehicle strength of this department was about 66 i.e. in 1958, whereas now they have got the facility of nearely 1,686 vehicles with a good network of roads. wireless and telephone facilities, etc. In spite of this, I don't know what is the reason for so much deterioration in the efficiency of this department. Secondly, they have said in the report that the object of this department is "protection of life and property of the people is the basic functioning of the police department. In the discharge of this vital function its duties are onerous and responsibilities are heaxy. By maintaining law and order, preventing and detecting crimes, it ensures order, peace and security in the society". Sir you can see very well whether we are anywhere near to the point of the declared obj ctive. The facts and figures which I have just now indicated will clearly show to what extent this force has deteriorated during the last ten or 15 years.

With regard to law and order sometimes I feel wonder why the society has become so much allergetic to this important organ of the home department. On many occasions either they will be arresting some man or else search anybody's house or arrest some innocent citizens and thereby some sort of casuality takes place. So these are things that are to be throughly studied are examined. People are getting allergetic to this department. So the police and the Government should make some efforts why that psychology is increasing in the minds of the people. The fact is, as one of my friends rightly pointed out, this is an institution created by the then masters — British Government — for ruling this country. There after it has become a symbol of operation. That is why whethhr the police is doing its lawful duty or it is acting excessively beyond its power the people have become allergetic. These are some aspects and you must find out ways and means to enlighten the people and take it to the masses. Otherwise, I am sorry to say, the people would themselves lead rather than having this inhuman police force which doesn't have a human heart.

Sir, in their report they say 'Public Relation' a sort of technical word. I am seeing this for the last 15 years in our Administrative Report. They say Public Relation is cordial and generally good. If that is so I would like to know what are the programmes chalked out by the Government to strengthen the Public Relation in our State. What is that you have done to gain confidence of the masses, to convince them that police is there to protect their life and property. Let this House know what exactly you have done. I think the Government has not done anything in this regard till this day. They have not created any cordial atmosphere. The department is totally blank in this respect. You do not apply your mind, you do not bother about the welfare of the people so long as you are in power. I am not blaming this Government or this party or that party. In a democracy the party ruling a State is immaterial but its policy is very very important. Here we have to look to the economic prosperity of the country and the political stability. That is very much necessary. If you are not going to ponder and think over and find solutions to various basic problems immediately probably you will be failing in your duty. Sir, one more aspect I want to tell here is that in spite of all these facts every successive Government I am not prepare to blame only this Government - every successive Government gone on creating posts every year. In Karnataka huge paraphernalia - we have so many DGPs, DIGs posts. The Chief Minister has not come out with all those details. Sir, you know what will be the state of affairs with these huge paraphernalia. What function they are doing in the State ? ಈವತ್ತು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಮಾನ್ಯ ಬೊಮ್ಮಾಯಿಯವರು ಅಡಿಷನಲ್ ಚೀಫ್‌ಮಿನಿಸ್ಟರ್‌ಮಾಡಿಬಿಡಿ ಮಾನ್ಯ ದೇವೇಗೌಡರನ್ನು ಸ್ಪೆಷಲ್ ಚೀಫ್ ಮಿನಿಸ್ಟರ್ ಮಾಡಿಬಿಡಿ. ಮಾನ್ಯ ರಘುಪತಿಯವರನ್ನು ಅಸಿಸ್ಟೆಂಟ್ ಚೀಫ್ ಮಿನಿಸ್ಟರ್ ಮಾಡಿಬಿಡಿ. ಆಗ ನೋಡಿ ಸ್ವಾಮಿ ಎಲ್ಲಿ ಹೋಗಿ ನಿಲ್ಲುತ್ತದೆ ಎನ್ನುವುದನ್ನು.

It is some sort of strange novel thinking in our administrative set up especially in the police department. Therefore, through you I request the Government to stop this sort of adhoc arrangement. To-day we are having so many Deputy Inspector general of Police, Superintendents of Police, Special DIGs. Do we require such a huge force to maintain law and order ? ಈವತ್ತು ತಾವು ನೋಡಬೇಕು, ತಾವು ಈ ಪೋಲೀಸ್ ವಿಂಗ್ ಎಂದು ಮಾಡಿ ಈ ರಾಜ್ಯದಲ್ಲಿ ಟ್ರೈನಿಂಗ್ ಕೊಡುತ್ತಿದ್ದೀರಿ. ನೀವು ಕೊಡತಕ್ಕಂಥ ಟ್ರೈನಿಂಗ್ ಒಂದು ತೋಳಕ್ಕೆ ಗುಂಡಿಕ್ಕಿ ಹೊಡೆಯತಕ್ಕಂಥ ಮನುಷ್ಯ ಸಿಕ್ಕುತ್ತಿಲ್ಲ. ಈಪ್ರೊತ್ತು ಬೇರೆ ರಾಜ್ಯದಿಂದ ಹಂಟರ್ಸ‌ನ್ನು ಕರೆಯಿಸಿಕೊಳ್ಳಂಥ ಪರಿಸ್ಥಿತಿಯಲ್ಲಿರುತ್ತೀರಿ. ಈಪ್ರೊತ್ತು ಪ್ರತಿಯೊಂದು ಪೋಲೀಸ್ ಸ್ಟೇಷನ್‌ನಲ್ಲೂ ರೈಫಲ್ಸ್ ಇವೆ. ಏನು ಪ್ರಯೋಜನ ? ಒಂದು ತೋಳವನ್ನು ಹಿಡಿಯಲಿಕ್ಕೆ ಆಗಲಿಲ್ಲವೆಂದರೆ ಹೇಗೆ ? Government has perpetuated the institution. I am not blaming either you or anybody else, I am only expressing my views impartially and objectively. ಸ್ವಾಮಿ ಹಳ್ಳಿಯ ಬಡ ಬೋರೆಗೌಡನ ಹಣ ಅನೇಕ ರೀತಿಯಲ್ಲಿ ವ್ಯಯವಾಗುತ್ತಿದೆ. ಬಹುಶಃ ಇದು ಬದಲಾವಣೆಯಾಗದೆ ಹೋದರೆ ನೀವು

ಏನು ನಿರೀಕ್ಷಣೆ ಮಾಡಿರುತ್ತಿರಿ ಅದನ್ನು ಪೂರೈಸಲಿಕ್ಕೆ ಸಾಧ್ಯವಾಗುವುದಿಲ್ಲ. ಈವೊತ್ತು ಹಳ್ಳಿಗಳಲ್ಲಿ ಹೋಗಿ ನೋಡಿದರೆ ಒಂದು ಪೋಲೀಸ್ ಕ್ರೈಮ್ ಆದತಕ್ಷಣ ಅನೇಕ ಸಂದರ್ಭದಲ್ಲಿ ಪಂಚಾಯಿತ್ ನಲ್ಲಿಯೇ ತೀರ್ಮಾನ ಮಾಡಿಬಿಡುತ್ತಾರೆ. ಹೀಗಿರಬೇಕಾದರೆ ಏತಕ್ಕೆ ಇಲಾಖೆ ಇರಬೇಕು ? ಮಾನ್ಯ ಮುಖ್ಯಮಂತ್ರಿಗಳೇ ಪ್ರಾಮಾಣಿಕವಾಗಿ ನೋಡಲಿ, ಅವರಿಗೆ ವರ್ಕ್‌ಲೋಡ್ ಏನು ಇದೆ. ಡಿ.ಐ.ಜಿ.ಗೆ ಎಷ್ಟು ಫೈಲ್‌ಗಳು ಬರುತ್ತವೆ ಎಷ್ಟು ಫೈಲು ದಿವಸಕ್ಕೆ ಡಿಸ್‌ಪೋಸ್ ಮಾಡುತ್ತಾರೆ, ಈವೊತ್ತು ಅವರಿಗೆ ಕೆಲಸ ಕೊಡುವ ಬದಲಾಗಿ ಅವರನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಈವೊತ್ತು ಅನೇಕ ಜನ ಐಎಎಸ್, ಐಪಿಎಸ್ ಅಧಿಕಾರಿಗಳನ್ನು ಒತ್ತಾಯಮಾಡಿ ಕಳುಹಿಸಿಕೊಟ್ಟರೆ ರಾಜ್ಯ ಸರ್ಕಾರ ಒಪ್ಪುತ್ತದೆ ಎಂದರೆ ಬಹುಶಃ ರಾಜ್ಯ ಸರ್ಕಾರದ ಯೋಗ್ಯತೆಯನ್ನು ತೋರಿಸುತ್ತದೆ ತಮಗೆ ಗೊತ್ತಿರಬಹುದು. ಮಾನ್ಯ ಕಾಮರಾಜನಾಡರ್ ಮುಖ್ಯಮಂತ್ರಿಗಳಾಗಿದ್ದಾಗ ಐ.ಎ.ಎಸ್ ಮತ್ತು ಐಪಿಎಸ್ ಅಧಿಕಾರಿಗಳನ್ನು ರಾಜ್ಯಕ್ಕೆ ಕಳುಹಿಸಿಕೊಟ್ಟಾಗ ಇಷ್ಟೊಂದು ಆಫೀಸರ್ ನಮಗೆ ಬೇಕಾಗಿಲ್ಲ. ನಮಗೆ ಎಷ್ಟು ಜನರು ಬೇಕೋ ಅಷ್ಟು ಜನರನ್ನು ಮಾತ್ರ ತಗೆದುಕೊಳ್ಳುತ್ತೇವೆಂದು ಹೇಳಿರುತ್ತಾರೆ.

Why should not we adopt that principal ? You should adopt such administrative procedures and take a couraeous decision otherwise, a day may come where your entire Government will be only a disbursing agency out of consolidated fund of the State. There will be neither funds available for the road development nor to repair the schools, hospitals etc., so, it is better to realise early rather than to late. ಅಧ್ಯಕ್ಷರೇ ತಮಗೆ ನಾನು ಏನು ಹೇಳುತ್ತಿದ್ದೇನೆ ಎಂದರೆ ಅಕಸ್ಮಾತ್ ಎಸ್‌ಟಿ, ಸಿವಿಲ್ ಎನ್‌ಫೋರ್ಸ್‌ಮೆಂಟ್ ಸೆಲ್ ಎಂದು ಇದೆ. ಇದಕ್ಕೆ ಒಬ್ಬರು ಡಿ,ಐ.ಜಿ.ಡಿ.ಐ.ಜಿ. ಕೆಳಗೆ ಎಸ್.ಪಿ. ಎಸ ಪಿ. ಕೆಳಗೆ ಒಬ್ಬರು ಸರ್ಕಲ್ ಇನ್‌ಸ್ಪೆಕ್ಟರ್ ಇಷ್ಟು ಇದ್ದರೂ ಕೂಡ ಇಡೀ ರಾಜ್ಯದಲ್ಲಿ ಆರನೂರು ಕೇಸ್‌ಗಳನ್ನು ಮಾತ್ರ ಹಿಡಿದಿದ್ದಾರೆ ಇದಕ್ಕೆ ನಾವು ಏನು ಹೇಳಬೇಕೋ ತಿಳಿಯುತ್ತಿಲ್ಲ.

There is one Civil Rights Enforcement Cell. For that, there is one D.I.G., one S.P., 2 Circle Inspectors and so many constablas are given. For the entire State, they have filed about 600 cases, only. ಹಳ್ಳಿಗಳಲ್ಲಿರುವ ಹೋಟೇಲ್‌ಗಳಲ್ಲಿ ಕಾಫಿ ಕೊಡಲಿಲ್ಲವೆಂದು ಯಾರಾದರೂ ಬಂದು ಹೇಳಿದರೆ ಕೇಸ್ ಹಾಕುವುದು, ಕಛೇರಿಗಳಲ್ಲಿರುವ ನಾಲ್ಕನೇ ದರ್ಜೆಯ ನೌಕರರನ್ನು ಮೇಲಿನ ಅಧಿಕಾರಿಗಳು ಏನಾದರೂ ಜಾತಿ ಹೆಸರಿನಿಂದ ಬೈದರೆ ಕೇಸ್ ಹಾಕುವುದು, ಇಷ್ಟೇ ಇವರು ಮಾಡುವ ಕೆಲಸ. Are they really committed to enforce these Civil Rights Enforcement Act? In many villages, still the land-lords never permit the Harijans to take water from the wells and they never allow them in the temples for making prayers but this Government has never taken any action nor any person from the Civil Rights Cell has visited those places. ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತೆ ಇವರು ಕೇವಲ ೬೦೦ ಕೇಸ್‌ಗಳನ್ನು ಹಾಕಿರುವುದನ್ನು ನೋಡಿದರೆ ಇದು ಒಂದೊಂದು ಪೋಲೀಸ್ ಸ್ಟೇಷನ್‌ಗೆ ಒಂದೊಂದು ಕೇಸ್‌ನಂತೆ ಕೂಡ ಬರುವುದಿಲ್ಲ, ಆದರೂ ಇದಕ್ಕೇ ಒಂದು ಪ್ರತ್ಯೇಕ ವಿಭಾಗ ಇರಬೇಕೇ ? ಇಲ್ಲಿರುವವರು ಏನಾದರೂ ಗೋಲಿ ಆಡಿಕೊಂಡು ಕುಳಿತ್ತಿದ್ದಾರೆಯೇ? ಇವರಿಗಾಗಿ ಖರ್ಚು ಮಾಡುತ್ತಿರುವ ಹಣ ಯಾರದು?. Why can,t you entrust the job to the respective Sps? Why can't you call for a monthly report as to how many cases he has taken up under Civil Rights Enforcement Act? It is only just to throw the dust in the eye of the people you want to creat on Cell? If you are sincere enough, you does not require any Cell. You must have a political will to implement it. It is not the quantum of force that is required. It is the quality of force that is required. Therefore, Sir, through you,

I suggest you to scrutinise the whole police force and police department; otherwise a day may come that you will be the first casuality by for the huge force created in this State You have said that District Scientific Units are located at the Headquarters of all the Police Districts. Afterall how many murders which requires scientific investigation are committed in the State? To-day, 90% of the murders are committed in the broad day light. They are using weapons which are easily available to the common man. It is not a big job to detect these offences If a Senior Police Officer sits for 8 hours and work, it is not difficult for him to find out the culprit. They require only one stick, rifle and their Bible ie., IPC book. that is all, what they want to do the job. If there is any complicated muder, they conveniently say "It is unnatural death", and they close the file. In Pol ce Station itselft so many people die and we will not be aware of all the cases. Whatever is known to us, we will mention here. That is all. Regarding third degree method also, I have said about it several times. I am a hard realistic. I am the last man to just talk like a hypocrat. There are hardened criminals, but you have sufficient wisdom to deal with each case. You must have a comm nsense to understand the different situations. You cannot go by a same hand-made formula with every one and that is the reason for the entire trouble here. In the case of investigations, if the investigating ageniy down below Dy.S.P. or your supervisory staff is not properly discharging their duties, then, what can be done? I fully agree there are quite a good number of intelligent officers. With all sincerity at their commond, they want to discharge their duties. But unfortunately, they have become just a dead wood. They does not like to take pains When there is a murder, the Officer will go to the spot only after taking his break-fast. Panchayat Chairman and others don't go to the spot. 90% of the people are innocent and if we ask them in a strong tone, they will tell everything i.e., they will tell the entire truth. In connivance with the police, there may be in 10-15% cases where somthing will be done. That possibility cannot be ruled out. If a Sub-Inspestor does not like a person, there may be a possibility of filing FIR against that person. Mostly, superior officers visit the spot and sign whatever the Police constable or the Inspector had written. They visit the spot and return without any additional information. If he has a mind to study the situation, then only we can expect something good.

Sir, unfortunately, these superior Officers have become totally dead woods. The [illegible] to account themselves with the responsibility. If [illegible] case on a person whom they don't like, then that person will have to go to Court several times un-

necessarily. This is happening in some places. Even the superior officers when there is an enquiry. ask–Have you written the FIR. He says–Yes. Have you registered the complaint–he says–Yes. Have you maintained personal search register. He says–Yes So, finally, they say-Law will take its own course. So, it may be the misdeeds of lower subordinates or the lower staff but I will hold the responsibility to all the supervisory officers right above the rank of SPs and Dy.SPs. Therefore, I appeal to the Government to pay a serious thought of holding a Conference of these Officers and advise them properly so that they could understand their inherited responsibilities cast on them.

Regarding recruitment, I would say, the Police has got some special type of jobs to be done. You should not adopt normal recruitment methods while recruiting police personnel. If you recruit them in the normal course and pay salaries for 30 years, it won't serve the purpose. You should have a separate civil service rules and recruitment rules for Police. In every 10 years of service, they must go before the Scrutiny Committee wherein his physical fitness, ability to understand the issues and his capacity to deal with the crime, men and matters should be tested. If you do like this, you can eliminate irresponsible police officers and also the number of atrocities committed on the people by these police personnel. ಇಂತಹ ಒಂದು ಕ್ರಮದಿಂದ ಸಾಮಾನ್ಯ ಜನರಿಗೆ ತಾಪತ್ರಯ ಕೊಡುವಂತಹ ಪ್ರಸಂಗಗಳೂ ಸಹ ಬರುವುದಿಲ್ಲವೆಂದು ನನಗನ್ನಿಸುತ್ತದೆ.

೪–೩೦ ಪಿ. ಎಂ.

ಇನ್ನೊಂದು ವಿಚಾರ ಪಬ್ಲಿಕ್ ರಿಲೇಷನ್ ಎಂದು ಹೇಳುತ್ತೀರಿ, ಅದನ್ನು ಇವತ್ತಿನ ತನಕ ಏನೂ ಮಾಡಿಲ್ಲ. ಪ್ರತಿಯೊಂದು ಜಿಲ್ಲೆಯಲ್ಲಿ ಅಡ್ವೈಜರಿ ಕಮಿಟಿ ನೇಮಕಮಾಡಿ, ಆ ಕಮಿಟಿಯೊಳಗೆ ಇರತಕ್ಕವರು ಯಾವುದೇ ಪಾರ್ಟಿಯಲ್ಲಿರಲಿ, ನಿಷ್ಪಕ್ಷಪಾತವಾಗಿ ಮಾಡಿ. ಇವತ್ತು ಸಮಾಜವಾದಿಗಳು ಇದ್ದಾರೆ, ಗವರ್ನ್‌ಮೆಂಟ್ ಸರ್ವೆಂಟ್ಸ್ ಇದ್ದಾರೆ. All these people should form an advisory committee and they must be in touch with their district SPs. At least, once in two months or three months or at least once in a year they must have a meeting with the S.P. and the D.G.P. and they should keep them informed of the District Administration.

ಅಧ್ಯಕ್ಷರು.—ತಾವು ಭಾಷಣ ಮಾಡಲಿಕ್ಕೆ ಶುರುಮಾಡಿ ೪೦ ನಿಮಿಷಗಳಾಯಿತು.

ಶ್ರೀ ಮಾಣಿಕ್‌ರಾವ್ ಪಾಟೀಲ್.—ಮಾನ್ಯ ಅಧ್ಯಕ್ಷರೆ ತಾವು ಮೊದಲೇ ನನಗೆ ಎಚ್ಚರಿಕೆ ಕೊಟ್ಟಿದ್ದೀರಿ, ನಾನು ಬೇಗ ಮುಗಿಸುತ್ತೇನೆ. I think, if this is done. there will be lot of harmony between the people and the police also. Before, I face your seriousness, I don't like to create embarrasment, therefore, I conclude my speech with these few remarks and finally I thank the Chair for having given me an opportunity to speak a few words on this Bill.

† ಶ್ರೀ ಎಸ್. ಸೂರ್ಯನಾರಾಯಣ ರಾವ್ (ವರ್ತೂರು). –ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಸಭೆಯ ಮುಂದೆ ಇಟ್ಟಿರತಕ್ಕ ಬೇಡಿಕೆಗಳ ಬಗ್ಗೆ ಮಾತನಾಡಲಿಕ್ಕೆ ನಾನು ಇಷ್ಟಪಡುತ್ತೇನೆ. ನಾನು ಬೆಳಿಗ್ಗೆಯಿಂದ ಮಾನ್ಯ ವಿರೋಧಪಕ್ಷದ ನಾಯಕರಾದ ವೀರಪ್ಪಮೊಯಿಲಿಯವರು ಮಾತನಾಡಿದ್ದನ್ನು ಬಹಳ ಸೂಕ್ಷ್ಮವಾಗಿ ಮತ್ತು ಎಲ್ಲಾ ವಿಚಾರಗಳನ್ನು ಕೂಲಂಕುಷವಾಗಿ ಕೇಳಿದ್ದೇನೆ. ಅವರು ಮಾತನಾಡುವಾಗ ಯೋಜನೆಗಳಿಗೆ ಸಾಕಷ್ಟು ಹಣವನ್ನು ಒದಗಿಸಿಲ್ಲ. ಅದು ಡಿಫಿಸಿಟ್ ಫೈನಾನ್ಸ್ ಆಗುತ್ತದೆ. ಇದು ಯಾವುದಕ್ಕೆ ಕಾರ್ಯಗತವಾಗುತ್ತದೆ ಎಂದು ಹೇಳುತ್ತಿದ್ದರು. ಮಾನ್ಯ ಮುಖ್ಯಮಂತ್ರಿಯವರು ೮ನೇ ಆರ್ಥಿಕ ಆಯೋಗಕ್ಕೆ ಒಂದು ವರದಿಯನ್ನು ಕೊಟ್ಟಿದ್ದೇವೆ, ನಮಗೆ ಹೆಚ್ಚಿನ ಸಂಪನ್ಮೂಲಗಳು ಬೇಕೆಂದು ಮತ್ತು ಎಲ್ಲದರ ಬಗ್ಗೆ ಸಹ ಅವರ ಗಮನವನ್ನು ಸ್ವಲ್ಪ ಸೆಳೆದು ಎಲ್ಲದರ ಕಡೆಗೆ ಗಮನಹರಿಸಿದ್ದೇವೆಂದು ಹೇಳಿದ್ದಾರೆ. ಮಾನ್ಯ ವೀರಪ್ಪಮೊಯಿಲಿಯವರು ಕೇಂದ್ರ ನಮಗೆ ಸಾಕಷ್ಟು ಹಣವನ್ನು ಒದಗಿಸಿಲ್ಲವೆಂದಾ ಹೇಳಿದ್ದರೆ ನನಗೆ ಅರ್ಥವಾಗುತ್ತಿತ್ತು. ಅವರು ಹಿಂದೆ ಫೈನಾನ್ಸ್ ಮಿನಿಸ್ಟರ್ ಆಗಿದ್ದರು, ಕೇಂದ್ರವನ್ನು ಹೆಚ್ಚಿನ ಹಣ ಕೊಡಬೇಕೆಂದು ಕೇಳಿ. ಸರ್ಕಾರಗಳಿಗೆ ಕೊಟ್ಟಿರತಕ್ಕ ಹಣ ಎಷ್ಟು ಎಂದು ಆರ್ಥಿಕ ಆಯೋಗದ ವರದಿಯನ್ನು ನೋಡಿದರೆ ನಮಗೆ ಗೊತ್ತಾಗುತ್ತದೆ. ಕೇಂದ್ರ ಸರ್ಕಾರ ಬಹಳ ಬುದ್ಧಿವಂತಿಕೆಯಿಂದ ರಾಜ್ಯಸರ್ಕಾರಗಳಿಗೆ ಕೊಡತಕ್ಕದ್ದನ್ನು ತಪ್ಪಿಸಿದ್ದಾರೆ ಎಂದು ಗೊತ್ತಾಗುತ್ತದೆ. Now, I would like to quote a few lines from the Proceeding of the 7th Finance Commission meeting with the Hon. Chief Minister.

"By an amendment to the Income-tax Act. the Income-tax paid by the companies has been brought under the definition of corporation tax and this has been taken out of the divisible pool. This has, thereby, been made an exclusive source of central revenue thereafter. The receipts from the Corporation Tax have gone up from Rs. 54 crores in 1958-59 to Rs. 2,282 crores in 1983-84. (A 4126 percentage rise) Again the receipts from Corporation Tax have for exceeded the receipts from Income-tax. The receipts from the latter in the year 1958-59 were Rs. 173 crores and in 1983-84 they are only Rs. 1,686 crores (A 875 percentage rise)."

ಕಾರ್ಪೊರೇಷನ್ ಟ್ಯಾಕ್ಸ್ ಡಿವಿಡೆಂಟ್ ಫುಲ್ ಆಗದೇ ಬರುವುದಿಲ್ಲ. ಅದು ಇನ್‌ಕಂಟ್ಯಾಕ್ಸ್ ಅಲ್ಲ. ದೊಡ್ಡಪ್ರಮಾಣದಲ್ಲಿ ರಾಜ್ಯಗಳಿಗೆ ಹಣ ಸಿಗದೇ ಅಭಿವೃದ್ಧಿ ಕಾರ್ಯಗಳು ಬಹಳ ಕುಂಟಿತವಾಗುತ್ತವೆ. ಆದ್ದರಿಂದ ಈ ಸದನ ರಾಜ್ಯದ ಹಿತದೃಷ್ಟಿಯಿಂದ ಕೇಂದ್ರದ ಮೇಲೆ, ಈಗ ಏನು ಅನ್ಯಾಯವಾಗಿದೆ ಅದನ್ನು ಪಡೆಯುವುದಕ್ಕೆ ನಾವು ಪ್ರಯತ್ನ ಮಾಡಬೇಕಾಗುತ್ತದೆ. ರಿಸೋರ್ಸ್ ಮೊಬಲೈಸೇಷನ್ ಮಾಡುವಾಗ ನೀವು ಏನು ಮಾಡಿದ್ದೀರಿಸ್ವಾಮಿ ? ಕರ್ನಾಟಕ ರಾಜ್ಯಕ್ಕೆ ಸೆಕೆಂಡ್ ಫೈನಾನ್ಸ್ ಕಮಿಷನ್‌ನಲ್ಲಿ ೭ ಪರ್ಸೆಂಟ್ ಬಂದರೆ ಲಾಸ್ಟ್ ಫೈನಾನ್ಸ್ ಕಮಿಷನ್‌ನಲ್ಲಿ ೪.೮೭ ಬಂದಿದೆ. In the case of Bihar under the award of second Finance Commission, it was 9%, whereas the last Finance Commission has awarded 10.63%. In respect of Uttar Pradesh, under the Second Fince Commission, it was 13.5% and according to the 7th Finance Commission it is 15.91%.

ನಮ್ಮ ರಾಜ್ಯಕ್ಕೆ ಕೇಂದ್ರದಿಂದ ಎಷ್ಟು ಅನ್ಯಾಯವಾಗಿದೆ, ಅದನ್ನು ಸರಿಪಡಿಸಬೇಕಾದರೆ ಇವತ್ತು ಇರತಕ್ಕಂತಹ ಸೆಂಟ್ರಲ್ ಸ್ಟೇಟ್ ರಿಲೇಷನ್, ಫೆಡರಲ್ ಸ್ಟ್ರಕ್ಚರ್ ಎಂದು ತಿಳಿದು ಆದರಿಂದ ರಾಜ್ಯಕ್ಕೆ ಅಗತ್ಯ ಭಾಗವನ್ನು ಹಿಂದಿನ ಸರ್ಕಾರ ತೆಗೆದುಕೊಳ್ಳುವುದಕ್ಕೆ ಹೆಚ್ಚಿನ ಗಮನ ಕೊಟ್ಟಿದ್ದರೆ ಬಹಳ ಅನುಕೂಲವಾಗುತ್ತಿತ್ತು. ಈ ದಿಸೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಏನು ಕ್ರಮ ತೆಗೆದುಕೊಂಡಿದ್ದಾರೆ ಅದು ಬಹುಶಃ ಕರ್ನಾಟಕ ಜನತೆಗೆ ನಮ್ಮ ರಾಜ್ಯಕ್ಕೆ ಇಡೀ ದೇಶದ ಸಮಗ್ರತೆಗೆ ಇಂಟರ್ ಸ್ಟೇಟ್

ರಿಲೇಷನ್‌ಗೆ ಬಹಳ ಮುಖ್ಯವಾದ ವಿಷಯ. ಅದರ ಬಗ್ಗೆ ಗಮನಹರಿಸಿದರೆ ಯಾವುದೇ ರಿಸೋರ್ಸಸ್ ನಿಂದ ಹಣ ನಮಗೆ ಬರುವುದಕ್ಕೆ ಅನುಕೂಲವಾಗುತ್ತದೆ. ನಮಗೆ ಈಗ ಸೇಲ್ಸ್‌ಟ್ಯಾಕ್ಸನ ಒಂದೇ ಒಂದು ವರಮಾನ ಬರುತ್ತಿದೆ. ಆ ಸೇಲ್ಸ್‌ಟ್ಯಾಕ್ಸನ್ನು ಕೂಡ ನಮಗೆ ಬಿಟ್ಟುಬಿಡಿ ಎಂದು ಕೇಂದ್ರ ಹೇಳಿದರೆ ಸೇಲ್ಸ್ ಟ್ಯಾಕ್ಸನಲ್ಲಿ ಸ್ವಲ್ಪ ಪೋರ್ಶನ್ ಕೊಡುತ್ತೇವೆ ಎಂದು ಹೇಳತಕ್ಕ ಈ ಒಂದು ತ್ರಿಪಾಟಿ ಕಮಿಟಿಯಿಂದ ನಮಗೆ ಅನ್ಯಾಯವಾಗುತ್ತಿದೆ. ಬಹಳವಟ್ಟಿಗೆ ಬರತಕ್ಕ ಎಲ್ಲಾ ವರಮಾನವನ್ನು ಕಿತ್ತು ಕೊಂಡು, ನಮ್ಮ ರಾಜ್ಯಕ್ಕೆ ಯಾವುದೇ ಹಣವನ್ನು ಖರ್ಚುಮಾಡಬೇಕಾದರೂ ಓವರ್‌ಡ್ರಾಫ್ಟ್ ಎಂದು ಹೇಳುವುದು ಸರಿಯೇ ? ಸರ್ಕಾರಿ ನೌಕರರ ಸಂಬಳ ಜಾಸ್ತಿಮಾಡಿದರೆ ಓವರ್ ಡ್ರಾಫ್ಟ್‌ಯೆಂದು ನಮಗೆ ಹೇಳುತ್ತಾರೆ. ಕೇಂದ್ರ ಸರ್ಕಾರಕ್ಕೆ ಓವರ್ ಡ್ರಾಫ್ಟ್ ಪ್ರಶ್ನೆ ಬರುವುದಿಲ್ಲ, ಏಕೆಂದರೆ ಸಾಲ ತೆಗೆದುಕೊಳ್ಳಬಹುದು. ಹೊರದೇಶಗಳಿಂದ ತರಬಹುದು, ಡಿಫಿಸಿಟ್ ಫೈನಾನ್ಸ್ ಮಾಡಬಹುದು, ನೋಟ್ ಪ್ರಿಂಟ್ ಮಾಡಬಹುದು. ರಾಜ್ಯಗಳಿಗೆ ಸೇಲ್ಸ್‌ಟ್ಯಾಕ್ಸ್ ಬಿಟ್ಟರೆ ಬೇರೆ ಏನೂ ಇರುವುದಿಲ್ಲ. ಇಂತಹ ವಿಷಯಗಳಿಗೆ ನಾವು ನಮ್ಮ ಮಂತಿಗೆಯನ್ನು ಪಡೆಯಲಿಕ್ಕೆ ಕೇಂದ್ರದಲ್ಲಿ ಯಾರೇ ಪ್ರಧಾನಮಂತ್ರಿಗಳು ಇರಲಿ, ಯಾರೇ ಅಧಿಕಾರದಲ್ಲಿರಲಿ ನಾವು ಹೋರಾಟ ಮಾಡಬೇಕು. ಇಲ್ಲದಿದ್ದರೆ ನಮ್ಮ ರಾಜ್ಯ ಮುಂದುವರಿಯುವುದಕ್ಕೆ ಸಾಧ್ಯವಾಗುವುದಿಲ್ಲ. ನಮ್ಮ ಯೋಜನೆಗಳಿಗೆ ಹಣ ಸಾಕಾಗುವುದಿಲ್ಲ. ಜವಾಬ್ದಾರಿ ಯೋಜನೆಗಳನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಮ್ಮಲ್ಲಿ ನೀರಾವರಿ ಯೋಜನೆಗಳಿಗೆ ಬರತಕ್ಕ ಹಣದಲ್ಲಿ ೧೦ಪರ್ಸೆಂಟ್ ಕಡಿಮೆ ಮಾಡಿದ್ದಾರೆಂದು ಹೇಳಿದ್ದಾರೆ. ನಮ್ಮ ನೀರಾವರಿ ಇಲಾಖೆಯ ಕಾರ್ಯದರ್ಶಿಯವರು ಹೇಳುತ್ತಿದ್ದಾರೆ. ಬರತಕ್ಕ ವರಮಾನ ಕಡಿಮೆಯಾಗಿದೆ. ಹೆಚ್ಚಿನ ಜವಾಬ್ದಾರಿ ಇದೆ, ಯೋಜನೆಗಳಿಗೆ ೧೫ ಪರ್ಸೆಂಟ್ ಹಣ ಕೊಟ್ಟಿದ್ದೇವೆ ಸರಿಯಾದ ಲೆಕ್ಕ ಕೊಟ್ಟಿಲ್ಲವೆಂದು ಫೈನಾನ್ಸ್ ಕಮಿಷನ್‌ನವರು ಹೇಳಿದ್ದಾರೆ. ೬೪ ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದೇವೆಂದು ಹೇಳಿದ್ದಾರೆ. For instance, during the current year itself we have spent about Rs 63 crores.................................ನಮ್ಮ ಅಧಿಕಾರಿಗಳು ಹೋಗಿ ನಮ್ಮ ರಾಜ್ಯಕ್ಕೆ ಹೆಚ್ಚಿನ ಹಣ ಬೇಕೆಂದು ಹೇಳಿದಾಗ, ಅವರು ತಪ್ಪು ರಿಪೋರ್ಟ್‌ನಿಂದ ಹಣ ಕೊಟ್ಟಿಲ್ಲವೆಂದು ಕೇಂದ್ರದಿಂದ ಒಂದು ರಿಪೋರ್ಟ್ ಬಂತು. ಅವರು ೨೩ ಕೋಟಿ ರೂಪಾಯಿಗಳಿಗೆ ರೆಕಮೆಂಡ್ ಮಾಡಿದರೆ, ಆಗ ಬಂದಿರುವುದು ೧೫ ಕೋಟಿ ರೂಪಾಯಿಗಳು. ಹಣ ಕೊಟ್ಟಿದ್ದರೂ ಸಹ ಅದನ್ನು ಲೋನ್ ಎಂದು ಕೊಟ್ಟು ಅದರಲ್ಲಿ ೭೦ ಪರ್ಸೆಂಟ್ ಮರುಪಾವತಿ ಮಾಡಬೇಕೆಂದು ಹೇಳಿದ್ದಾರೆ. ಕ್ಷಾಮ ಬಂದರೆ, ನೆರೆ ಬಂದರೆ ಕೇಂದ್ರದಿಂದ ಸಹಾಯ ಬರುತ್ತದೆಂದು ಹಣ ತೆಗೆದುಕೊಂಡರೆ ಅದರಲ್ಲಿ ೭೦ ಪರ್ಸೆಂಟ್ ಹಣವನ್ನು ಮರುಪಾವತಿ ಮಾಡಬೇಕೆಂದು ಹೇಳಿದ್ದಾರೆ. ೭೦ ಪರ್ಸೆಂಟ್ ಹಣವನ್ನು ಮರು ಪಾವತಿ ಮಾಡಿದರೆ ೩೦ ಪರ್ಸೆಂಟ್ ಹಣ ಮಾತ್ರ ಉಳಿಯುತ್ತದೆ. ಅದರಿಂದ ಏನಾಗುತ್ತದೆ ? ಕೊಡುವಾಗ ಪೂರ್ತಿ ಗ್ರಾಂಟ್ ರೂಪದಲ್ಲಿ ಕೊಡಬೇಕೆಂದು ಮಾನ್ಯ ವೀರಪ್ಪ ಮೊಯಿಲಿಯವರು ವಾದ ಮಾಡಿದ್ದರೆ ಅದು ಖಂಡಿತವಾಗಿಯೂ ಸಾಧ್ಯವಾಗುತ್ತಿತ್ತು, ಅದರಿಂದ ನಾವು ಮುಂದೆ ಹೋಗುವುದಕ್ಕೆ ಸಾಧ್ಯವಾಗುತ್ತಿತ್ತು. ಹಾಗೆಯೇ ಮುಂದೆ ಮಾತನಾಡುತ್ತಾ ೨೦ ಅಂಶಗಳ ಕಾರ್ಯಕ್ರಮದ ಬಗ್ಗೆ ಈ ಸರ್ಕಾರಕ್ಕೆ ಕಾಳಜಿಯಿಲ್ಲ. ನಮ್ಮ ರಾಜ್ಯ ಮೊದಲನೇ ಸ್ಥಾನದಲ್ಲಿತ್ತು ಈಗ ಮೊದಲನೇ ಸ್ಥಾನದಿಂದ ೫ನೇ ಸ್ಥಾನಕ್ಕೆ ಡಿಮೋಟ್ ಆಗಿದೆ, ೨೦ ಅಂಶಗಳ ಕಾರ್ಯಕ್ರಮದ ಬಗ್ಗೆ ಈ ಸರ್ಕಾರ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲವೆಂದು ಹೇಳಿದರು. ೨೦ ಅಂಶಗಳ ಕಾರ್ಯಕ್ರಮದ ಬಗ್ಗೆ ನಾನು ಹೇಳುತ್ತೇನೆ. ಕೇಂದ್ರ ಸರ್ಕಾರ ತುರ್ತುಪರಿಸ್ಥಿತಿ ತಂದು ೨೦ ಅಂಶಗಳ ಕಾರ್ಯಕ್ರಮದ ಮೂಲಕ ದಬ್ಬಾಳಿಕೆ ಮಾಡಿ ಜನಗಳ ಬಾಯಿಗೆ ಬೀಗ ಹಾಕಬೇಕೆಂದು ಹೇಳಿ, ಈ ೨೦ ಅಂಶಗಳ ಕಾರ್ಯಕ್ರಮವನ್ನು ಜಾರಿಗೆ ತಂದರು.

ಮಾನ್ಯ ಅಧ್ಯಕ್ಷರೇ ಹಿಂದಿನ ಸರ್ಕಾರದವರು ಹಾಕಿಕೊಂಡಿದ್ದಂಥ ೨೦ ಅಂಶಗಳ ಕಾರ್ಯಕ್ರಮದಲ್ಲಿ ಏನಾದರೂ ರೈತರಿಗೆ ಅನುಕೂಲವಾಗುವಂಥ ಕಾರ್ಯಕ್ರಮ ಇತ್ತೇ ಎಂದು ನಾನು ನೋಡಿದಾಗ ಅದರಿಂದ ರೈತರಿಗೆ ಯಾವುದೇ ವಿಧವಾದಂಥ ಪ್ರಯೋಜನವಿಲ್ಲ. ಮತ್ತೆ ಆ ೨೦ ಅಂಶಗಳ ಕಾರ್ಯಕ್ರಮದಲ್ಲಿ ಕೃಷಿ ಕಾರ್ಮಿಕರಿಗೆ ಏನಾದರೂ ಪ್ರಯೋಜನವಾಗುತ್ತಿತ್ತೇ ಎಂದು ನೋಡಿದಾಗ ಯಾವುದು ಕೂಡ ಇಲ್ಲ ಎಂದು ನನಗೆ ಮನದಟ್ಟಾಗುತ್ತಿತ್ತು. ಆದ್ದರಿಂದ ನಾನು ಹೇಳುವುದೇನೆಂದರೆ ತಮ್ಮ ೨೦ ಅಂಶಗಳ ಕಾರ್ಯಕ್ರಮ ಸಂಪೂರ್ಣವಾಗಿ ನಿರಾಶಾದಾಯಕವಾದುದು. ತಮ್ಮ ೨೦ ಅಂಶಗಳ ಕಾರ್ಯಕ್ರಮದಲ್ಲಿ ಏನಾದರೂ ಒಂದು ಕೆಲಸವನ್ನು ಪ್ರಾರಂಭ ಮಾಡಿದರೆ ತಾವು ಕೊಡತಕ್ಕಂಥ ಹಣ ಕೇವಲ

ಒಂದು ದಿನಕ್ಕೆ ೫ ರೂಪಾಯಿಗಳ ಕೂಲಿ. ಆದರೆ ರೈತರ ಕೆಲಸಕ್ಕೆ ಹೋದರೆ ಅವರು ಒಂದು ದಿವಸಕ್ಕೆ ೧೦ ರೂಪಾಯಿಗಳ ಕೂಲಿ ಕೊಡುತ್ತಾರೆ. ಆದ್ದರಿಂದ ಕೃಷಿ ಕಾರ್ಮಿಕನಿಗೆ ಈ ೨೦ ಅಂಶಗಳ ಕಾರ್ಯಕ್ರಮದಲ್ಲಿ ಯಾವ ಪ್ರಯೋಜನ ಕೂಡ ಇಲ್ಲ. ಈ ೨೦ ಅಂಶಗಳ ಕಾರ್ಯಕ್ರಮದಲ್ಲಿ ರೈತರಿಗೆ ಪುಕ್ಕಟೆಯಾಗಿ ಭೂಮಿ ಕೊಡತಕ್ಕಂಥದ್ದು ಆಗಲಿ ಅಥವಾ ಕೃಷಿ ಕಾರ್ಮಿಕನಿಗೆ ಸಂಬಳ ಜಾಸ್ತಿ ಮಾಡುವುದಾಗಲಿ ಯಾವುದೇ ರೀತಿಯ ಕಾರ್ಯಕ್ರಮ ಇಲ್ಲವೆಂದು ನಾನು ಹೇಳುತ್ತೇನೆ. ನಮ್ಮ ರಾಜ್ಯ ಪ್ರಗತಿಯನ್ನು ಕಾಣಬೇಕಾದರೆ ಕೆಲವಾರು ಮೂಲ ಭೂತವಾದಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಇಲ್ಲವಾದರೆ ನಾವು ಏಕಾಏಕಿ ಯಾವ ಕೆಲಸವನ್ನು ಮಾಡುವುದಕ್ಕೆ ಆಗುವುದಿಲ್ಲ. ನಾನು ಹೇಳುವುದೇನೆಂದರೆ ನಮ್ಮ ದೇಶದಲ್ಲಿರತಕ್ಕಂಥ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವಂಥ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಕೃಷಿ ಕಾರ್ಮಿಕನಿಗೆ ಸರಿಯಾದಂಥ ಕೆಲಸವನ್ನು ಒದಗಿಸಿ ಕೊಟ್ಟು ಅವನಿಗೆ ಸಂಬಳ ಜಾಸ್ತಿ ಕೊಡುವಂಥ ವ್ಯವಸ್ಥೆಯನ್ನು ಮಾಡಬೇಕು, ಮತ್ತು ಭೂಮಿ ಇಲ್ಲದವನಿಗೆ ಭೂಮಿಯನ್ನು ಕೊಡುವಂಥ ಕೆಲಸವಾಗಬೇಕು. ಅದು ಬಿಟ್ಟು ಕಾಂಗ್ರೆಸ್ ಸರ್ಕಾರದವರು ಹಾಕಿಕೊಂಡಿದ್ದ ಕಾರ್ಯಕ್ರಮದಲ್ಲಿ ಬರೀ ಅವರ ಪಕ್ಷಕ್ಕೆ ಸಂಬಂಧಪಟ್ಟಂತಹ ಕಾರ್ಯಕ್ರಮಗಳು ಆಗಿದ್ದವು, ಆದ್ದರಿಂದಲೇ ದೇಶದಲ್ಲಿ ಇವತ್ತು ದಿನೇ ದಿನೇ ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿದೆ ಎಂದು ನಾನು ಹೇಳುತ್ತೇನೆ. ಮತ್ತೆ ಇವತ್ತು ರಾಜ್ಯದಲ್ಲಿ ಎಲ್ಲಿ ನೋಡಿದರೂ ಕೂಡ ಬೆಲೆ ಏರಿಕೆಯ ಬಗ್ಗೆ ಜನತೆಯಲ್ಲಿ ಅಶಾಂತಿಯುಂಟಾಗಿದೆ. ಇದಕ್ಕೆ ಕಾರಣ ಜನತಾ ಸರ್ಕಾರವೆಂದು ತಿಳಿಯದ ಜನತೆಯಲ್ಲಿ ಮೂಡಿ ಬಂದಿದೆ. ಆದರೆ ಇದರ ಮೂಲ ಭೂತವಾದಂಥ ವಿಷಯಕ್ಕೆ ನಾವು ಹೋದಾಗ ಇದರ ಸಂಪೂರ್ಣ ಹೊಣೆಗಾರಿಕೆ ಕೇಂದ್ರ ಸರ್ಕಾರಕ್ಕೆ ಸೇರಿದ್ದಾಗಿರುತ್ತದೆ. ಕೇಂದ್ರ ಸರ್ಕಾರದವರು ಇದನ್ನು ಗಮನಿಸುವುದಿಲ್ಲ. ಇವತ್ತು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಹೆಚ್ಚು ಮಾಡಿದ್ದಾರೆ. ಆದರೆ ಇದರಿಂದ ಬರತಕ್ಕಂಥ ಆದಾಯ ಸಾಮಾನ್ಯವಾಗಿ ಕೇಂದ್ರ ಸರ್ಕಾರಕ್ಕೆ ಹೋಗುತ್ತದೆ. ಬೆಲೆ ಮಾತ್ರ ಹೆಚ್ಚು ಮಾಡಿದ್ದಾರೆ. ಈ ಬೆಲೆಯನ್ನು ಹತೋಟಿಗೆ ತರುವುದಕ್ಕೆ ರಾಜ್ಯ ಸರ್ಕಾರದ ಅಧಿಕಾರವಾಪ್ತಿಗೆ ಬರುತ್ತದೆಯೇ? ಅಥವಾ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ ಅಥವಾ ಇಲ್ಲವೆ ಎಂಬುದನ್ನು ಕೂಡ ಯೋಚನೆ ಮಾಡಬೇಕು. ಒಂದು ವೇಳೆ ಕೇಂದ್ರ ಸರ್ಕಾರದವರು ಬೆಲೆಯನ್ನು ಹೆಚ್ಚು ಮಾಡಿದರೆ ರಾಜ್ಯ ಸರ್ಕಾರದವರು ರಿಯಾಯಿತಿಯನ್ನು ತೋರಿಸುವುದಕ್ಕೆ ಆಗುತ್ತದೆಯೇ? ಕೇಂದ್ರ ಸರ್ಕಾರದವರು ತಪ್ಪು ಮಾಡಿದರೆ ಅದು ರಾಜ್ಯ ಸರ್ಕಾರದ ತಪ್ಪು ಎಂದು ಹೇಳಿದರೆ ಹೇಗೆ? ಆದ್ದರಿಂದ ನಾನು ಹೇಳುವುದಾದರೂ ಏನೆಂದರೆ ಕೇಂದ್ರ ಸರ್ಕಾರದವರು ಇಂಥದ್ದನ್ನು ಯೋಚನೆ ಮಾಡಬೇಕು. ರಾಜ್ಯ ಸರ್ಕಾರಗಳಿಗೆ ಹೊರೆಯಾಗದಂಥ ರೀತಿಯಲ್ಲಿ ನಡೆದುಕೊಳ್ಳಬೇಕು. ಆದರೆ ನಮ್ಮ ರಾಜ್ಯದಲ್ಲಿ ಜನತಾ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ಅಲ್ಪಸ್ವಲ್ಪವಾದರೂ ಒಳ್ಳೆಯ ಕೆಲಸ ಮಾಡಲು ಪ್ರಯತ್ನ ಮಾಡುತ್ತಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆದರೆ ಪೂರ್ತಿಯಾಗಿ ನಾನು ಜನತಾ ಸರ್ಕಾರವನ್ನು ಹೊಗಳುತ್ತೇನೆಂದು ಯಾರೂ ತಿಳಿಯಬಾರದು. ಎಲ್ಲಿ ತಪ್ಪು ಮಾಡಿದರೆ ಆ ತಪ್ಪನ್ನು ನಾವು ಎತ್ತಿ ತೋರಿಸತಕ್ಕಂಥ ಒಂದು ಜವಾಬ್ದಾರಿಯು ಕೂಡ ನಮಗೆ ಇದೆ. ಇನ್ನು ನಮ್ಮ ಅಧಿಕಾರಿಗಳು ಕೆಲವರು ಐ.ಎ.ಎಸ್ ಪಾಸ್ ಮಾಡಿಕೊಂಡು ಉನ್ನತ ಮಟ್ಟದ ಅಧಿಕಾರಿಗಳಾಗಿ ಬರುತ್ತಾರೆ. ಆದರೆ ಅವರು ಅಭಿವೃದ್ಧಿ ಕೆಲಸ ಕಾರ್ಯಗಳ ಬಗ್ಗೆ ಹೆಚ್ಚು ಗಮನಹರಿಸಬೇಕಾಗುತ್ತದೆ. ಮತ್ತು ಸರ್ಕಾರದವರು ಯಾವ ಯಾವ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಾರೆಯೋ ಆ ಎಲ್ಲಾ ತೀರ್ಮಾನಗಳನ್ನು ಅನುಷ್ಠಾನಕ್ಕೆ ತರತಕ್ಕಂಥ ಒಂದು ಜವಾಬ್ದಾರಿ ಆ ಅಧಿಕಾರಿಗಳಿಗೆ ಸೇರಿರುತ್ತದೆ. ಆ ಅಧಿಕಾರಿಗಳ ಮೇಲೆ ಮಾನ್ಯ ಮಂತ್ರಿಗಳು ಗಮನವಿಟ್ಟು ಸರಿಯಾದ ರೀತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಆದ್ದರಿಂದ ಜನತಾ ಸರ್ಕಾರದವರು ಈಗ ಹೊಸದಾಗಿ ಒಂದು ಬಿಲ್ ತರುತ್ತಿದ್ದಾರೆ. ಆ ಬಿಲ್ ಯಾವುದೆಂದರೆ ಜಿಲ್ಲಾ ಪರಿಷತ್ತು ಬಿಲ್. ಈ ಬಿಲ್‌ನ್ನು ಜಾರಿಗೆ ತರುವುದರಿಂದ ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಅಧಿಕಾರವನ್ನು ವಿಕೇಂದ್ರೀಕರಣ ಮಾಡುವಂಥಾಗುತ್ತದೆ. ಆಗ ಜನರ ಕೈಯಲ್ಲಿಯೇ ಅಧಿಕಾರವನ್ನು ಕೊಡುವಂಥಾಗುತ್ತದೆ. ಆಗ ಜಿಲ್ಲಾ ಮಟ್ಟದಲ್ಲಿ ಒಳ್ಳೆಯ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಮಾಡಬಹುದು. ಆದ್ದರಿಂದ ನಾನು ನಿಜವಾಗಿಯೂ ಕೂಡ ಆ ಬಿಲ್‌ನ್ನು ಸ್ವಾಗತ ಮಾಡುತ್ತೇನೆ. ಆ ಬಿಲ್ ಈಗ ಜಾಯಿಂಟ್ ಸೆಲೆಕ್ಟ್ ಕಮಿಟಿಯ ಮುಂದೆ ಪರಿಶೀಲನೆಯಲ್ಲಿ ಇದೆ. ಅದು ಪರಿಶೀಲನೆಯಾದ ತಕ್ಷಣ ಜಾರಿಗೆ ಕೊಟ್ಟರೆ ಒಳ್ಳೆಯದೆಂದು ನನ್ನ ಭಾವನೆ. ಈ ಬಿಲ್‌ನ್ನು ಆದಷ್ಟು ಬೇಗ ಜಾರಿಗೆ ತಂದರೆ ಇದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ. ಮತ್ತು ಅವರ ಸಮಸ್ಯೆಗಳನ್ನು ಬಗೆಹರಿಸಲು ಸಹಾಯಕವಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ನಮ್ಮ ದೇಶದಲ್ಲಿರತಕ್ಕಂಥ ಇರಿಗೇಷನ್ಸ್ ಬಗ್ಗೆ ಹೇಳುವುದಾದರೆ ನಮ್ಮ ದೇಶದಲ್ಲಿ ಇರಿಗೇಷನ್ಸ್ ವರ್ಷ ವರ್ಷೇ ಜಾಸ್ತಿಯಾಗುತ್ತಿವೆ. ಮತ್ತು ನಾವು ಹಾಕಿಕೊಂಡಂತಹ ಯೋಜನೆಗಳನ್ನು ಆಯಾ ಅವಧಿಯಲ್ಲಿ ಮುಗಿಸಿಕೊಟ್ಟು ರೈತರಿಗೆ ಅನುಕೂಲ ಮಾಡಿಕೊಡಬೇಕಾಗುತ್ತದೆ. ಇವತ್ತು ನಾವು ಒಂದು ಯೋಜನೆಗೆ ಸುಮಾರು ೧೦೦೦ ಕೋಟಿ ರೂಪಾಯಿಗಳ ಅಂದಾಜು ಮಾಡಿದ್ದರೆ, ಆ ಯೋಜನೆ ಆ ಅವಧಿಯಲ್ಲಿ ಮುಗಿಸಲು ಆಗದಿದ್ದರೆ ಆ ಅಂದಾಜು ಹೆಚ್ಚು ಜಾಸ್ತಿಯಾಗುವುದಿಲ್ಲವೇ? ಇದರಿಂದ ರಾಜ್ಯ ಸರ್ಕಾರಕ್ಕೆ ನಷ್ಟವಾಗುವುದಿಲ್ಲವೇ? ಇವನ್ನು ನಾವು ಕೂಡ ಯೋಚನೆ ಮಾಡಿ ಕೆಲಸ ಮಾಡಬೇಕಾಗುತ್ತದೆ. ನಮ್ಮ ಸರ್ಕಾರಕ್ಕೆ ಆಧಾಯ ಬರುವಂಥ ಕೆಲಸ ಕಾರ್ಯಗಳನ್ನು ಮಾಡಬೇಕಾಗುತ್ತದೆ. ಮತ್ತೆ ಸೇಲ್ಸ್ ಟ್ಯಾಕ್ಸ್ ರವಿನ್ಯೂ ನಮಗೆ ವರ್ಷೇ ವರ್ಷೇ ಕಡಿಮೆಯಾಗುತ್ತಿದೆ ಎನ್ನುವ ಮಾತನ್ನು ಮಾನ್ಯ ಸದಸ್ಯರು ಹೇಳಿದರು. ಆದರೆ ನಾನು ಆ ಮಾತನ್ನು ಒಪ್ಪಿಕೊಳ್ಳುವುದಿಲ್ಲ. ಆದರೆ ನಮ್ಮ ರಾಜ್ಯ ಸರ್ಕಾರಕ್ಕೆ ಬರಬೇಕಾದಂಥ ಸೇಲ್ಸ್ ಟ್ಯಾಕ್ಸನ್ನು ಸರಿಯಾದ ಪ್ರಮಾಣದಲ್ಲಿ ವಸೂಲು ಮಾಡಲಾಗುತ್ತಿದೆಯೋ ಇಲ್ಲವೇ ಎಂಬುದನ್ನು ಸರ್ಕಾರ ಸ್ವಲ್ಪ ಯೋಚನೆ ಮಾಡಬೇಕು. ಇವತ್ತು ನಮ್ಮ ರಾಜ್ಯಕ್ಕೆ ಬರಬೇಕಾದಂಥ ಸೇಲ್ಸ್ ಟ್ಯಾಕ್ಸನ್ನು ಕೊಡದೆ ಕೆಲವರು ಮೋಸ ಮಾಡುತ್ತಿದ್ದಾರೆ. ಅಂಥವರು ಯಾರು ಇದ್ದಾರೆ, ಅವರನ್ನು ನಾವು ಕಂಡುಹಿಡಿದು ಕಡ್ಡಾಯವಾಗಿ ಸೇಲ್ಸ್ ಟ್ಯಾಕ್ಸ್ ವಸೂಲು ಮಾಡಬೇಕೆಂದು ನಾನು ಹೇಳುತ್ತೇನೆ. ಇನ್ನು ಒಂದು ಮಾತನ್ನು ನಾನು ಹೇಳುವುದಾದರೆ ನಮ್ಮ ಸರ್ಕಾರದಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳಲ್ಲಿ ಒಂದು ಮನೋಭಾವನೆ ಬೆಳದಿದೆ. ಆ ಮನೋಭಾವನೆ ಏನೆಂದರೆ ಈ ಜನತಾ ಸರ್ಕಾರ ಕೇವಲ ೩-೪ ತಿಂಗಳು ಕೂಡ ಕೆಲಸ ಮಾಡುತ್ತದೆಯೋ ಇಲ್ಲವೋ ಎಂದು. ಆದರೆ ದೇವರ ದಯೆಯಿಂದ ಈ ಸರ್ಕಾರ ೫ ವರ್ಷಗಳ ಕಾಲ ಇದ್ದು ಒಳ್ಳೆಯ ಜನೋಪಯುಕ್ತ ಕೆಲಸ ಕಾರ್ಯಗಳನ್ನು ಮಾಡಲೆಂದು ನಾನು ಹಾರೈಸುತ್ತೇನೆ. ಕೆಲವು ಅಧಿಕಾರಿಗಳಲ್ಲಿ ಕನಕಪುರದ ಚುನಾವಣೆ ಆಕರ್ಷಣೆಯನ್ನು ಕೊಟ್ಟಿತ್ತು. ಆದರೆ ಆಗ ಮೂರು ತಿಂಗಳು ಕೂಡ ಈ ಸರ್ಕಾರ ಇರುವುದಿಲ್ಲವೆಂದು ಇತ್ತು. ಮತ್ತೆ ಈಗಲೂ ಲಾಬಿಯಲ್ಲಿ ಹೇಳಿಕೊಳ್ಳುತ್ತಿದ್ದಾರೆ ಈ ಸರ್ಕಾರ ನಾಳೆ ೨೧ನೇ ತಾರೀಖಿನೊಳಗೆ ಬಿದ್ದು ಹೋಗುತ್ತದೆಂದು. ಆ ಮಾತು ಎಷ್ಟು ನಿಜವೋ ಅದು ಎಷ್ಟು ಸುಳ್ಳೋ ಆ ದೇವರಿಗೆ ಗೊತ್ತು. ಮತ್ತೆ ಜನತಾ ಪಕ್ಷದಿಂದ ಕಾಂಗ್ರೆಸ್ ಪಕ್ಷಕ್ಕೆ ಯಾರೋ ಬೆಂಬಲ ಕೊಡುತ್ತಾರೆಂದು ಕೂಡ ಸುದ್ದಿ ಹಬ್ಬಿದೆ. ಆದ್ದರಿಂದ ನಾಳೆ ೨೧ನೇ ತಾರೀಖು ಏನಾಗುತ್ತದೆ ಎಂಬುದನ್ನು ನೋಡಬೇಕಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ,—ಬರೀ ೨೧ನೇ ತಾರೀಖು ಮಾತ್ರ ಹೇಳಿದ್ದಾರೆ. ಯಾವ ವರ್ಷವೆಂದು ಹೇಳಿಲ್ಲ. ಆದ್ದರಿಂದ ನಾವು ಸಂಪೂರ್ಣವಾಗಿ ೫ ವರ್ಷಗಳು ಅಧಿಕಾರದಲ್ಲಿ ಇರುತ್ತೇವೆ, ಅದರಲ್ಲಿ ನಿಮಗೆ ಯಾವ ಅನುಮಾನ ಬೇಡ.

ನನಗೆ ಗಾಬರಿಯಾಗುವುದಕ್ಕೆ ಏನೂ ಇಲ್ಲ ಸ್ವಾಮಿ ಡಿಫೆಕ್ಷನ್ ಬಗ್ಗೆ ಪ್ರಸ್ತಾಪ ಆಗಿದೆಯಲ್ಲ ಅದಕ್ಕೆ ಹೇಳಿದೆ. ನಾವಂತೂ ತೊಂದರೆ ಪಟ್ಟುಕೊಂಡೇ ಇರುವವರು ನಾಳೆಯೂ ತೊಂದರೆಯನ್ನು ಅನುಭವಿಸುತ್ತೇವೆ. ಆದ್ದರಿಂದ, ನಮ್ಮ ಸರ್ಕಾರಿ ಅಧಿಕಾರಿಗಳು ನಿರ್ಭೀತವಾದ ರೀತಿಯಲ್ಲಿ ಕೆಲಸ ಮಾಡತಕ್ಕಂಥ ವಾತಾವರಣ ನಿರ್ಮಾಣ ಮಾಡಬೇಕು. ಕೆಲವು ಸಂದರ್ಭಗಳಲ್ಲಿ ಒತ್ತಡಕ್ಕೆ ಒಳಗಾಗಿ ಕೆಲಸ ಮಾಡತಕ್ಕಂಥ ಪರಿಸ್ಥಿತಿ ಅಧಿಕಾರಿಗಳಿಗೆ ಬರಬಹುದು. ಆದ್ದರಿಂದ, ಈ ಆಗುಹೋಗುಗಳನ್ನು ವಿಮರ್ಶೆ ಮಾಡಿ ಜನಗಳಿಗೆ ಅನುಕೂಲವಾಗತಕ್ಕಂಥ ರೀತಿಯಲ್ಲಿ ವಾತಾವರಣವನ್ನು ಏರ್ಪಾಡು ಮಾಡಬೇಕು. ಕೆಲವು ಅಧಿಕಾರಿಗಳು ದಕ್ಷರಾಗಿದ್ದಾರೆ ಅವರು ಪ್ರಾಮಾಣಿಕರು ಕೂಡ ಆಗಿದ್ದಾರೆ. ಕೆಲವರ ಬಗ್ಗೆ ಆ ರೀತಿಯಾಗಿ ಹೇಳುವುದಕ್ಕೆ ಆಗುವುದಿಲ್ಲ. ಆದರೆ ಯಾವುದೇ ಒತ್ತಡಕ್ಕೆ ಒಳಗಾಗಿ ಅವರು ಕೆಲಸ ಮಾಡುವಂತ ಪರಿಸ್ಥಿತಿ ಬರಬಾರದು. ಮೇಲಿನವರ ತೀರ್ಮಾನಕ್ಕೆ ಬದ್ಧವಾಗಿ ಅವರು ನಡೆದುಕೊಳ್ಳದಿದ್ದರೆ ರಾಜೀನಾಮೆ ಕೊಡಬೇಕಾಗುತ್ತದೆ, ಇಂತಹ ವಾತಾವರಣವನ್ನು ಸೃಷ್ಟಿ ಮಾಡಬಾರದು, ಇವತ್ತು ನಮ್ಮ ಜನಗಳಲ್ಲಿ ಅಧಿಕಾರ ಕೊಟ್ಟು ಬಿಟ್ಟರೆ ದೊಡ್ಡ ಅನಾಹುತವೇ ಆಗಿಬಿಡುತ್ತದೆ. ಸಂಘಟನೆ ಆಗುವುದಕ್ಕೆ ಅವಕಾಶ ಕೊಟ್ಟರೆ ಅನಾಹುತವಾಗುತ್ತದೆ ಎಂಬ ಅಭಿಪ್ರಾಯದಿಂದ ಸರ್ಕಾರಿ ನೌಕರರಿಗೆ ಟ್ರೇಡ್ ಯೂನಿಯನ್ ರೆಫರ್ ಮಾಡುವುದಕ್ಕೆ ಹಿಂದು ಮುಂದೆ ನೋಡುತ್ತಿದ್ದಾರೆ. ಪೋಲೀಸ್ ನೌಕರರಿಗೆ ಕಾನ್‌ಸ್ಟೇಬಲ್‌ರಿಗೆ ಸಂಘಟನೆ ಮಾಡಿಕೊಳ್ಳುವುದಕ್ಕೆ ಹಿಂದೆ ಮುಂದೆ ನೋಡುತ್ತಿದ್ದಾರೆ. ಎಲ್ಲಿಯವರೆಗೆ ಅವರನ್ನು ಭಯಗ್ರಸ್ತರನ್ನಾಗಿ ಇಟ್ಟಿರುತ್ತಾರೋ, ಅಲ್ಲಿಯವರೆಗೆ ಪ್ರಾಮಾಣಿಕವಾಗಿ ಅವರಿಂದ ಕೆಲಸ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಇದರ ಅನುಭವ ನಮಗೆ ಇದೆ. ಒಬ್ಬ ಹಿರಿಯ

ಪೋಲೀಸ್ ಅಧಿಕಾರಿ ಬಂದರೆ ಅವರ ಕೈಕೆಳಗಿನವರು ಕೆಳದರ್ಜೆಯವರು ನಮ್ರತೆ ವ್ಯಕ್ತಪಡಿಸಿ ನಮಸ್ಕಾರ ಮಾಡುತ್ತಾರೆ. ಆದರೆ ಅಧಿಕಾರಿ ಆ ಕಡೆಗೆ ಹೋದರೆ ಎಷ್ಟು ಸಲ ಬರುತ್ತಾನಪ್ಪ ಈತ ಎಂದು ಬಯ್ದುಕೊಳ್ಳುತ್ತಾರೆ. ಸರ್ಕಾರಿ ನೌಕರರಿಗೆ ಟ್ರೇಡ್ ಯೂನಿಯನ್ ರೈಟ್ಸ್ ಪಡೆದುಕೊಳ್ಳಲು ಪಶ್ಚಿಮ ಬಂಗಾಳದಲ್ಲಿ ಇರುವ ರೀತಿಯಲ್ಲಿ ಸಂಘಟಿತವಾಗಲು ಅವಕಾಶ ಕೊಡಬೇಕು. ಅಲ್ಲಿ ಪೋಲಿಸಿನವರಿಗೆ ಸಹ ಸಂಘಟನೆ ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ. ಕೆಳದರ್ಜೆಯ ಕಾನ್‌ಸ್ಟೇಬಲ್ ದಫೇದಾರ್‌ಗಳನ್ನು ಮೇಲಿನವರು ಸರಿಯಾಗಿ ನೋಡಿಕೊಳ್ಳುವುದಿಲ್ಲ. ಮೇಲಿನ ಅಧಿಕಾರಿಗಳು ಕೆಟ್ಟ ಪದಗಳನ್ನು ಉಪಯೋಗಿಸಿ ಅವರನ್ನು ಬಯ್ಯುತ್ತಾರೆ. ಆದ್ದರಿಂದ ಅವರು ಈ ಕೋಪವನ್ನೆಲ್ಲಾ ಅತ್ತೆಯ ಮೇಲಿನ ಕೋಪ ಕೊತ್ತಿಯ ಮೇಲೆ ಎಂದು ಜನರ ಮೇಲೆ ಹರಿಸಿ ಹಾರಿ ಬೀಳುವ ಪರಿಸ್ಥಿತಿ ಇದೆ. ಇವೊತ್ತಿನ ಪರಿಸ್ಥಿತಿಯಲ್ಲಿ ಪೋಲೀಸಿನವರಿಗೆ ಒಂದು ಟ್ರೈನಿಂಗ್ ಕೊಡುವ ವ್ಯವಸ್ಥೆಯಾಗಬೇಕು. ಕ್ರಿಮಿನಲ್ ಪ್ರೊಸಿಜರ್ ಕೋಡ್ ಮತ್ತು ಬೇರೆ ಬೇರೆ ವಿಷಯಗಳ ಬಗ್ಗೆ ಅವರಿಗೆ ಟ್ರೈನಿಂಗ್ ಕೊಡುವ ವ್ಯವಸ್ಥೆ ಇದೆ. ಇಂಗ್ಲೀಷರ ಕಾಲದಲ್ಲಿ ಇದ್ದಂತಹ ಜನರ ದಬ್ಬಾಳಿಕೆ ಮಾಡತಕ್ಕಂಥ ಪದ್ಧತಿ ಇನ್ನೂ ಬದಲಾಗಿಲ್ಲ. ಈಗಲೂ ಕೂಡ ಅದು ಮುಂದುವರೆಯುತ್ತಿದೆ. ತಮ್ಮ ಹಕ್ಕು ಬಾಧ್ಯತೆಗಳ ಅರಿವು ಈಗ ಜನರಲ್ಲಿ ಬಂದಿರುವಾಗ, ಅವರೆದುರು ಹೇಗೆ ನಡೆದುಕೊಳ್ಳುವುದು, ಹೇಗೆ ತಾಳ್ಮೆಯಿಂದ ನಡೆದುಕೊಳ್ಳಬೇಕು ಎಂಬುದರ ಬಗ್ಗೆ ಪೋಲೀಸಿನವರಿಗೆ ಸರಿಯಾದ ತರಬೇತಿ ಕೊಡಬೇಕಾಗುತ್ತದೆ.

ಇನ್ನು ನಮ್ಮ ಸ್ಟೈಫಂಡರಿ ಪದವೀಧರರ ವಿಷಯ ಹಿಂದೆ ಸದನದಲ್ಲಿ ಬಂದಿದ್ದಾಗ ಹೈಕೋರ್ಟಿನ ತಡೆಯಾಜ್ಞೆ ತೆರವು ಆಗಿರುವುದರಿಂದ ಅವರಿಗೆ ಐವತ್ತು ಪರ್ಸೆಂಟ್ ಉದ್ಯೋಗ ಮೀಸಲಾತಿ ಕೊಡುತ್ತೇವೆ ಎಂದು ಹೇಳಿ ಈಗಾಗಲೇ ಐದಾರು ತಿಂಗಳಾಯಿತು ರಿಕ್ರೂಟ್‌ಮೆಂಟ್ ಕಮಿಟಿಯನ್ನು ಕೂಡ ಮಾಡಿದರು. ಆದರೆ ಐವತ್ತು ಪರ್ಸೆಂಟಿನಲ್ಲಿ ಒಬ್ಬರಿಗಾದರೂ ಕೆಲಸ ಖಾಯಂ ಆಗಿಲ್ಲ. ಬೆಲೆಯೇರಿಕೆಯ ಇಂದಿನ ಪರಿಸ್ಥಿತಿಯಲ್ಲಿ ಅವರು ಕೇವಲ ಇನ್ನೂರು ರೂಪಾಯಿ ತೆಗೆದುಕೊಂಡು ಜೀವನ ಮಾಡುವುದಕ್ಕೆ ಆಗುವುದಿಲ್ಲ. ಸಾವಿರಾರು ಜನರು ಬಂದು ಕಬ್ಬನ್ ಪಾರ್ಕಿನಲ್ಲಿ ಕುಳಿತಿದ್ದಾರೆ. ಅವರ ಬೇಡಿಕೆ ನ್ಯಾಯ ಸಮ್ಮತವಾದದ್ದು, ಐವತ್ತು ಪರ್ಸೆಂಟ್ ಮೀಸಲಾತಿ ಕೊಡುತ್ತೇವೆ ಎಂದು ಸರ್ಕಾರ ಒಪ್ಪಿಕೊಂಡಿದೆ. ಆದರೆ ಹಾಗೆ ಒಪ್ಪಿಕೊಂಡ ಮಾತ್ರಕ್ಕೇ ಇರತಕ್ಕಂಥ ಅಬ್‌ಸ್ಟೇಕಲ್ಸ್ ನಿವಾರಣೆ ಮಾಡಿ, ರಿಕ್ರೂಟ್‌ಮೆಂಟ್ ಕಮಿಟಿ ರಚನೆಯನ್ನು ತೀವ್ರಗೊಳಿಸಲು ಇರುವ ತೊಂದರೆಯಾದರೂ ಏನು? ಪದವೀಧರರಾಗಿ ದಿವಸಕ್ಕೆ ಎಂಟು ರೂಪಾಯಿಗಳನ್ನು ಸಂಪಾದನೆ ಮಾಡಿ ಅವರು ಜೀವನ ಸಾಗಿಸಬೇಕೆಂದರೆ, ಈ ಬೆಲೆಯೇರಿಕೆಯಲ್ಲಿ ಅವರ ಮನೆಯವರು ಏನು ಮಾಡಬೇಕು? ನಾಳೆ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ನಿರ್ದಿಷ್ಟವಾಗಿ ಹೇಳಬೇಕು, ಡಿಸೆಂಬರ್ ತಿಂಗಳೊಳಗೆ ಅವರನ್ನು ಐವತ್ತು ಪರ್ಸೆಂಟ್‌ನಷ್ಟು ಖಾಯಂ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ, ಅಷ್ಟರವರೆಗೆ ಅವರ ವೇತನವನ್ನು ತಾತ್ಕಾಲಿಕವಾಗಿ ಸ್ಥಳೀಯ ಅಭ್ಯರ್ಥಿಗಳಿಗೆ ಕೊಟ್ಟಷ್ಟು ಹಣ ಕೊಟ್ಟರೆ ಒಳ್ಳೆಯದು. ಇದನ್ನು ಕೊಡುವ ಸಾಧ್ಯತೆ ಇದ್ದರೆ ಸರ್ಕಾರದವರು ಪುನರ್ ವಿಮರ್ಶೆ ಮಾಡಬೇಕು...

ಅಧ್ಯಕ್ಷರು.— ತಮ್ಮ ಭಾಷಣವನ್ನು ಬೇಗ ಮುಗಿಸಬೇಕು ನೀವು.

ಶ್ರೀ ಎಸ್. ಸೂರ್ಯನಾರಾಯಣರಾವ್.—ನಾನು ಹದಿನೈದು ನಿಮಿಷ ಕೂಡ ಮಾತನಾಡಿಲ್ಲ ಸ್ವಾಮಿ.

ಅಧ್ಯಕ್ಷರು.— ಹದಿನೈದು ನಿಮಿಷ ಅಲ್ಲ, ಅರ್ಧ ಗಂಟೆ ಆಯಿತು.

ಶ್ರೀ ಎಸ್. ಸೂರ್ಯನಾರಾಯಣರಾವ್,— ಅಷ್ಟು ಸಮಯ ಆಗಿಲ್ಲ.

ಅಧ್ಯಕ್ಷರು.— ಆಗಿದೆ, ನನ್ನ ಲೆಕ್ಕದಲ್ಲಿ ಆಗಿದೆ.

ಶ್ರೀ ಎಸ್. ಸೂರ್ಯನಾರಾಯಣರಾವ್,— ಆಯಿತು ಸ್ವಾಮಿ, ಬೇಗ ಮುಗಿಸುತ್ತೇನೆ. ಇನ್ನು, ಇಪ್ಪತ್ತೊಂದು ಸಾವಿರ ದಿನಗೂಲಿ ನೌಕರರನ್ನು ಖಾಯಂ ಮಾಡುತ್ತೇನೆ ಎಂದು ಮಾನ್ಯ ದೇವೇಗೌಡರು ಹೇಳಿದ್ದಾರೆ. ಆದರೆ ಇನ್ನೂ ಕೂಡ ಇದರ ಬಗ್ಗೆ ಸರ್ಕಾರದ ಆಜ್ಞೆ ಹೊರಡಿಸಿಲ್ಲ. ಅವರಿಗೆ ಸಂಬಳ ಜಾಸ್ತಿ ಇಲ್ಲ. ಅರ್ಥ ಇಲಾಖೆಯವರದು ಏನಾದರೂ ಅಡ್ಡಿ ಇದ್ದರೆ ಕ್ಯಾಬಿನೆಟ್‌ನಲ್ಲಿ ಇದರ ಬಗ್ಗೆ ಚರ್ಚಿಸಿ ತೀರ್ಮಾನಿಸಿ ಕೂಡಲೇ ಸರ್ಕಾರಿ ಆಜ್ಞೆ ಬರುವ ಹಾಗೆ ಮಾಡಬೇಕು. ಹಿಂದೆ ಒಂದು ದೊಡ್ಡ ಘಟನೆ ಆಯಿತು. ಪಬ್ಲಿಕ್ ಸೆಕ್ಟರ್‌ನಲ್ಲಿ ಸ್ಟ್ರೈಕ್ ಆಯಿತು. ಅಲ್ಲಿ ಮಿಲಿಟರಿ ವಾತಾವರಣ ಇತ್ತು. ವಿಧಾನಸೌಧ

ಜೈಲು ತರಹ ಆಗಿತ್ತು. ಕಬ್ಬನ್ ಪಾರ್ಕಿಗೆ ಹೋದರೆ ಹಿಂದಕ್ಕೆ ಬರುವ ಹಾಗೆ ಇರಲಿಲ್ಲ. ಸೆಕ್ಷನ್ ೩೫ ಜಾರಿಯಲ್ಲಿತ್ತು. ಜಾಸ್ತಿ ವರ್ತನಮಾಡಿದರೆ ಒಳಗೆ ಹಾಕುತ್ತಿದ್ದರು. ಚಾಕು ಚೂರಿ ಕಲ್ಚರ್‌ನಿಂದಾಗಿ ನೂರು ಜನ ಮೈಕೊ ಕಾರ್ಮಿಕರು ಹಲ್ಲೆಗೀಡಾಗಿದ್ದರು ಆಗಿದ್ದಂತಹ ಚಾಕು ಚೂರಿ ಕಲ್ಚರ್ ಈಗ ಇಲ್ಲ. ಈ ೩೫ನೇ ಸೆಕ್ಷನ್ ಪ್ರಕಾರ ಅರೆಸ್ಟ್ ಮಾಡಿ ಕೇಸು ದಾಖಲು ಮಾಡಿಕೊಳ್ಳುವುದನ್ನು ನಿಲ್ಲಿಸಬೇಕು ಇಲ್ಲದಿದ್ದರೆ ಒಂದು ಸ್ಟೇಷನ್‌ನಿಂದ ಇನ್ನೊಂದು ಸ್ಟೇಷನ್‌ಗೆ ತೆಗೆದುಕೊಂಡು ಹೋಗುವುದು ತಪ್ಪುವುದಿಲ್ಲ. ಇದರಿಂದ ಎಷ್ಟು ಮಾನಸಿಕವಾಗಿ ನೋವು ಆಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಜನತಾ ಸರ್ಕಾರದಲ್ಲಿ ಸಂಘಟನಾ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ ಕಾರ್ಯಗತವಾಗ ಬೇಕಾದರೆ ಪೋಲೀಸಿನವರ ನಿಲುವಿನಲ್ಲಿ ಆಮೂಲಾಗ್ರವಾದ ಬದಲಾವಣೆ ಆಗಬೇಕಾಗಿದೆ. ಮೊದಲು ಅವರು ಥರ್ಡ್ ಡಿಗ್ರಿ ಮೆಥಡನ್ನು ನಿಲ್ಲಿಸಬೇಕು.

ಶ್ರೀ ಪಿ. ರಾಮದೇವ್— ವೆಸ್ಟ್ ಬೆಂಗಾಲ್‌ನಲ್ಲಿ ಥರ್ಡ್ ಡಿಗ್ರಿ ಮೆತಡ್ ಉಪಯೋಗ ಮಾಡುತ್ತಿದ್ದಾರೆ. ಥರ್ಡ್ ಡಿಗ್ರಿ ಮೆತಡ್ ಉಪಯೋಗ ಇಲ್ಲದೇ ರಾಷ್ಟ್ರವೇ ಇಲ್ಲ.

ಶ್ರೀ ಜೆ. ಡಿ. ಸೋಮಪ್ಪ— ಅಧ್ಯಕ್ಷರೇ ಐದು ಗಂಟೆ ಆಗಿದೆ,

೫-೦೦ ಪಿ.ಎಂ.

ಇನ್ನು ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್ ವಿಚಾರದಲ್ಲಿ ಹೇಳುವುದಾದರೆ, ಇದನ್ನು ಇವರು ವಸೂಲುಮಾಡುತ್ತಿದ್ದಾರೆ, ಆದರೆ ಇದರಲ್ಲಿ ನ್ಯಾಯವಾಗಿ ಬರಬೇಕಾದ ಭಾಗವನ್ನು ಕಾರ್ಪೊರೇಷನ್‌ಗೆ ಅಥವಾ ಮುನಿಸಿಪಾಲಿಟಿಗಳಿಗೆ ಕೊಡುತ್ತಿಲ್ಲ. ಇವತ್ತು ರಸ್ತೆಗಳನ್ನು ರಿಪೇರಿ ಮಾಡುವವರು ಕಾರ್ಪೊರೇಷನ್‌ನವರು ಅಥವಾ ಮುನಿಸಿಪಾಲಿಟಿಯವರು. ಆ ರಸ್ತೆಗಳ ಮೇಲೆ ಓಡತಕ್ಕ ವಾಹನಗಳು ಕೇಂದ್ರ ಸರ್ಕಾರಕ್ಕೆ ರಾಜ್ಯಸರ್ಕಾರಕ್ಕೆ ಮತ್ತು ಖಾಸಗಿಯವರಿಗೆ ಸಂಬಂಧಪಟ್ಟವು ಇದರಿಂದಾಗಿ ಹೆಚ್ಚು ಹೆಚ್ಚು ರಸ್ತೆಗಳು ಕಿತ್ತುಹೋಗುತ್ತವೆ. ಆದ್ದರಿಂದ ಕಾರ್ಪೊರೇಷನ್ ಅಥವಾ ಮುನಿಸಿಪಾಲಿಟಿಯವರಿಗೆ ಹೆಚ್ಚಿನ ಹಣವನ್ನು ಕೊಡದೆಹೋದರೆ ಅವರು ಈ ರಸ್ತೆಗಳನ್ನೆಲ್ಲಾ ಹೇಗೆ ರಿಪೇರಿ ಮಾಡುವುದಕ್ಕೆ ಸಾಧ್ಯವಾಗುತ್ತದೆ ? ಉದಾಹರಣೆಗೆ ಹೇಳುವುದಾದರೆ, ಬೆಂಗಳೂರು ನಗರದ ರಸ್ತೆಗಳಲ್ಲಿ ಬೀಳತಕ್ಕ ಹಳ್ಳಿಗಳನ್ನು ಮುಚ್ಚುವುದಕ್ಕೆ ಇವರು ಕೊಡತಕ್ಕ ಹಣ ಸಾಲುವುದಿಲ್ಲ.

ಇನ್ನು ಎರಡನೆಯದಾಗಿ, ಹೇಳುವುದಾದರೆ, ದ್ವಿಚಕ್ರ ವಾಹನಗಳನ್ನು ಸಾಮಾನ್ಯವಾಗಿ ಮಧ್ಯಮ ವರ್ಗದವರು ಉಪಯೋಗಿಸುತ್ತಾರೆ. ಇದರಲ್ಲಿ ಸರ್ಕಾರೀ ನೌಕರರೂ ಸೇರುತ್ತಾರೆ. ಈ ದ್ವಿಚಕ್ರ ವಾಹನಗಳಮೇಲೆ ಸರ್ಕಾರದವರು ಹಾಕಿರತಕ್ಕ ತೆರಿಗೆಯನ್ನು ಕಡಿಮೆಮಾಡಬೇಕು. ಅದೇರೀತಿ ಆಕ್ಟ್ರಾಯ್‌ನ್ನು ರದ್ದುಮಾಡುವಾಗ, ಮನರಂಜನಾ ತೆರಿಗೆ ಯಲ್ಲಿ ಈ ನಷ್ಟವನ್ನು ತುಂಬಿಕೊಡುವುದಾಗಿ ಹೇಳಿದ್ದು ಅದರ ಪ್ರಕಾರ ಸ್ವಲ್ಪ ಭಾಗ ಹಣವನ್ನು ಮಾತ್ರಕೊಡುತ್ತಿದ್ದಾರೆ, ಇವತ್ತು ಆಕ್ಟ್ರಾಯ್‌ನ್ನು ರದ್ದುಮಾಡಿರುವುದರಿಂದ ಬಹಳಷ್ಟು ಮುನಿಸಿಪಾಲಿಟಿಗಳಿಗೆ ಸಂಬಳ ಕೊಡುವುದಕ್ಕೂ ಹಣ ಇಲ್ಲದಂತಾಗಿದೆ. ಆದ್ದರಿಂದ ನೀವು ಮನರಂಜನಾ ತೆರಿಗೆಯನ್ನು ಪೂರ್ತಿಯಾಗಿ ಕೊಡದಿದ್ದರೆ ಅವರು ಯಾವುದೇ ಅಭಿವೃದ್ಧಿ ಕಾರ್ಯಕ್ರಮವನ್ನೂ ಮಾಡುವುದಕ್ಕಾಗುವುದಿಲ್ಲ.

ಇನ್ನು ಜೈಲಿನ ವಿಚಾರದಲ್ಲಿ ಹೇಳುವುದಾದರೆ ಇದರಲ್ಲಿ ಸ್ವಲ್ಪಮಟ್ಟಿಗೆ ಸುಧಾರಣೆಯಾಗಿದೆ ನಾನು ಏತಕ್ಕೆ ಹೀಗೆ ಹೇಳುತ್ತಿದ್ದೇನೆಂದರೆ ನಾವು ಅನೇಕ ಸಾರಿ ಜೈಲಿಗೆ ಹೋಗಿದ್ದೇವೆ. ಆದ್ದರಿಂದ ಅಲ್ಲಿಯ ವಾತಾವರಣದ ಪರಿಚಯ ನಮಗೆ ಸಾಕಷ್ಟು ಇದೆ. ಯಾರು ಜೈಲಿಗೆ ಹೋಗಿಲ್ಲ ಅಂಥವರಿಗೆ ಅದರ ವಿಚಾರ ಗೊತ್ತಿರುವುದಿಲ್ಲ. ನಾವು ರಾಜಕೀಯ ಕಾರಣದಮೇಲೆ ಜೈಲಿಗೆ ಹೋಗಿದ್ದೇವೆಯೇ ಹೊರತು ಬೇರೆ ಯಾವ ಕಾರಣದಿಂದಲೂ ಅಲ್ಲ. ಅಲ್ಲಿ ಅನೇಕ ಜನ ಖೈದಿಗಳಿರುತ್ತಾರೆ. ಅವರು ಬಹಳ ಚೆನ್ನಾಗಿ ಕೆಲಸಮಾಡುತ್ತಾರೆ. ಅವರಿಗೆ ಹಿಂದೆ ಕೊಡುತ್ತಿದ್ದ ೧.೫೦ ರೂಪಾಯಿಗಳ ಕೂಲಿಯನ್ನು ಇವತ್ತು ೨ ರೂಪಾಯಿಗಳಿಗೆ ಏರಿಸಿದ್ದಾರೆ. ಇದನ್ನು ಇನ್ನೂ ಸ್ವಲ್ಪ ಜಾಸ್ತಿಮಾಡಬೇಕು. ಪ್ರತಿಯೊಂದು ಹಬ್ಬಕ್ಕೂ ೧ ರೂಪಾಯಿನಂತೆ ಏನು ಕೊಡುತ್ತಿದ್ದಾರೆ ಅದು ಏನೇನೂ ಸಾಲುವುದಿಲ್ಲ. ಆದ್ದರಿಂದ ಇದನ್ನು ಇನ್ನೂ ಸ್ವಲ್ಪ ಜಾಸ್ತಿ ಮಾಡಬೇಕು. ಅಲ್ಲಿ ಇನ್ನೊಂದು ಏನು ನಡೆಯುತ್ತಿದೆ ಎಂದರೆ, ಖೈದಿಗಳನ್ನು ನೋಡುವುದಕ್ಕೆ ಯಾರಾದರು ಹೋದರೆ ಅವರು ಮಾಮೂಲಿಯನ್ನು ಕೊಟ್ಟರೆ ಒಳಗೆ ಬಿಡುತ್ತಾರೆ. ಇಲ್ಲದಿದ್ದರೆ ನಾಳೆ ಬಾ ಎಂದು ಹೇಳುತ್ತಾರೆ. ಇದು ಬದಲಾವಣೆಯಾಗಬೇಕು.

ಅಂಡರ್ ಟ್ರಯಲ್‌ಗಳನ್ನು ಎಲ್ಲರನ್ನೂ ಒಂದೇಕಡೆ ಹಂದಿಗಳನ್ನು ಹಾಕುವಂತೆ ಹಾಕುತ್ತಾರೆ. ಅದು ಸರಿಯಲ್ಲ. ಜೈಲು ಎಂದರೆ ಒಂದುಸಾರಿ ಅಪರಾಧಿ ಆಗಿರಬಹುದು, ಆದರೆ ಯಾವಾಗಲೂ ಅಪರಾಧಿ ಎನ್ನುವಂತಿರಬಾರದು ಅವರನ್ನು ಬದಲಾವಣೆ ಮಾಡತಕ್ಕ ರೀತಿಯು ಯೋಚನೆ ಮಾಡಿ. ಇದಕ್ಕೆ ವಿಶಾಲವಾದ ರೀತಿಯಲ್ಲಿ ವಾತಾವರಣವನ್ನು ಸೃಷ್ಟಿಮಾಡಬೇಕು. ಇವತ್ತು ಏನಾಗಿದೆ ಎಂದರೆ ಯಾರಾದರೂ ಒಬ್ಬ ತಿಳುವಳಿಕೆ ಇಲ್ಲದೆ ಏನೋ ಒಂದು ತಪ್ಪು ಮಾಡಬಹುದು, ಅವನಮೇಲೆ ಪೋಲೀಸರು ಕೇಸುಹಾಕಿ ಮುಂದೆ ಎಲ್ಲೋ ಕಳ್ಳತನವಾಗಲಿ, ದೊಂಬಿಯಾಗಲಿ ಆದರೆ ತಕ್ಷಣ ಅವನನ್ನು ಹಿಡಿದುಕೊಂಡು ಬರುವುದು, ಇಲ್ಲವೇ ಅವನನ್ನು ಖಾಯಂ ಆಗಿ ಕೇಡಿ ಲಿಸ್ಟ್‌ನಲ್ಲಿ ಸೇರಿಸುವುದು ಮಾಡಬಾರದು. ಸಮಾಜ ಸುಧಾರಣೆ ಮಾಡುವ ದಿಸೆಯಲ್ಲಿ ಪೋಲೀಸ್ ಇಲಾಖೆಯವರು ಕೆಲಸ ಮಾಡಬೇಕು. ಪೋಲೀಸ್ ಇಲಾಖೆಯಲ್ಲಿ ಹೆವಿ ಅಡ್ಮಿನಿಸ್ಟ್ರೇಷನ್ ಇರಬಹುದು, ಆದರೆ ಎಲ್ಲರಿಗೂ ಅಷ್ಟು ಕೆಲಸ ಇರುವುದಿಲ್ಲ. ಆದ್ದರಿಂದ ಅವರನ್ನು ಬೇರೆ ಕೆಲಸಕ್ಕೆ ಉಪಯೋಗ ಮಾಡಿಕೊಳ್ಳಬೇಕು. ಅವರಲ್ಲೂ ದಕ್ಷರಿದ್ದಾರೆ. ಬೆಂಗಳೂರು ನಗರದಲ್ಲಿರತಕ್ಕ ಸಣ್ಣ ಪೋಲೀಸ್ ಅಧಿಕಾರಿಗಳು ಹಳ್ಳಿಗಳಿಗೆ ಹೋದರೆ ಒಳ್ಳೆಯದೆಂದು ಹೇಳಬಯಸುತ್ತೇನೆ. ಯಾವನೇ ಅಧಿಕಾರಿಯಾಗಲಿ ತಪ್ಪುಮಾಡಿದಾಗ ಅವನ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. ಇನ್ನು ಪೋಲೀಸ್ ಇಲಾಖೆಯ ಬಗ್ಗೆ ಒಂದು ವರದಿಯನ್ನು ಇಲ್ಲಿ ಕೊಟ್ಟಿದ್ದೀರಿ. ಇದರಲ್ಲಿ "Labour unions protested against rise etc." ಈ ಅನುಬಂಧದಲ್ಲಿ ಸೆಕ್ಷನ್ ೧೪೪ನ್ನು ಮುರಿದರು, ಸೆಕ್ಷನ್ ೩೫೩ನ್ನು ಮುರಿದರು ಎಂದು ಸಾವಿರಾರು ಜನರಮೇಲೆ ಪೋಲೀಸ್ ಕೇಸ್ ಹಾಕಿದೆ ಅದನ್ನು ವಾಪಸು ತೆಗೆದುಕೊಳ್ಳಬೇಕು. ಇದೇರೀತಿ ಎಕ್ಸ್‌ಟರ್ನ್‌ಮೆಂಟ್ ಆರ್ಡರ್ ನಮ್ಮ ರಾಜ್ಯದ ಟ್ರೇಡ್ ಯೂನಿಯನ್ ಲೀಡರ್ಸ್ ಮೇಲೆ ಹಾಕಿದೆ ಅದನ್ನು ಅವರು ವಾಪಸು ತೆಗೆದುಕೊಳ್ಳಬೇಕು. ಲೇಬರ್ ಡಿಸ್‌ಪ್ಯೂಟ್‌ನಲ್ಲಿ ಪೋಲೀಸರು ಮಧ್ಯೆ ಪ್ರವೇಶ ಮಾಡುವುದು ಕಡಿಮೆಯಾಗಬೇಕು. ಪ್ರೊಟೆಕ್ಷನ್ ಆಫ್ ಸಿವಿಲ್ ರೈಟ್ಸ್‌ನಲ್ಲಿ ಹೀಗೆ ಹೇಳಿದ್ದಾರೆ. "The Civil Right Enforcement Cell continued to do good work. The object of creation of the cell was for the effective implementation of the provisions of Protection of Civil Rights Act and redressal of the grievances of SCs/STs. During the year 1982 as many as 674 cases were reported under the provisions of the Protection of Civil Rights Act and 369 cases in respect of attrocities on SCs/STs." ಆದರೆ ಇವರು ಏನು ಮಾಡಿದ್ದಾರೆಂದು ಹೇಳಿಲ್ಲ. ಅವರು ಏನು ಕ್ರಮ ತೆಗೆದುಕೊಂಡರು ಏನು ಶಿಕ್ಷೆ ಕೊಟ್ಟರು ಎಂಬುದು ಇದರಲ್ಲಿಲ್ಲ. ಇವರು ಕೊಡತಕ್ಕ ವರದಿಯನ್ನು ನೋಡಿಕೊಂಡೇ ನಾವು ತೃಪ್ತಿಯಾಗಬೇಕೆ ? ಇದರಿಂದ ನಮಗೆ ಏನು ಗೊತ್ತಾಗುತ್ತದೆ ? ಅವನಿಗೆ ಯಾವರೀತಿ ಶಿಕ್ಷೆಯಾಯಿತು ? ಕನ್ವಿಕ್ಷನ್ ಆಯಿತೇ ಅಥವಾ ಫಾಲ್ಸ್ ಕೇಸ್ ಬಂದಿತ್ತೆ ? ಎಂಬುದು ಇಲ್ಲ. ಅಧಿಕಾರಿಗಳಲ್ಲಿ ನಾನು ಮೇಲುಜಾತಿಯವನು ಎನ್ನುವ ಭಾವನೆ ಬರಬಾರದು. ಅಂಥ ಭಾವನೆ ಬಂದರೆ ಹರಿಜನಗಿರಿಜನರಿಗೆ ನಿಜವಾಗಿಯೂ ನ್ಯಾಯ ದೊರೆಯುವುದಿಲ್ಲ. ಅವನ ಮನಸ್ಸಿನಲ್ಲಿ ಇವನನ್ನು ಊರಿನಿಂದ ಹೊರಗೆ ಹಾಕಬೇಕೆಂದು ಭಾವನೆ ಇದ್ದರೆ ಇವನಿಗೆ ನ್ಯಾಯ ಹೇಗೆ ಸಿಕ್ಕುತ್ತದೆ ?

ಈ ಒಂದು ಮನೋಭಾವನೆ ಅಧಿಕಾರಿಗಳ ಮನಸ್ಸಿಂದ ಹೋಗಬೇಕು. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ ಇಲ್ಲಿರತಕ್ಕ ಅಧಿಕಾರಿಗಳನ್ನು ಕರೆಯಿಸಿ ಒಂದು ಸಭೆಯನ್ನು ಮಾಡಿ. ನೂರಾರು ವರ್ಷದಿಂದ ಶೋಷಣೆಯಾಗಿರುವವರಿಗೆ ಯಾವರೀತಿ ನಾವು ರಕ್ಷಣೆಯನ್ನು ಕೊಡಬೇಕೆಂಬುದು ಅವರ ಮನಸ್ಸಿನಲ್ಲಿ ಬರುವಂತೆ ಮಾಡಬೇಕು, ಇಲ್ಲದಿದ್ದರೆ ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡುವುದು ಕಷ್ಟವಾಗುತ್ತದೆಂದು ಹೇಳಬಯಸುತ್ತೇನೆ.

ಇನ್ನು ಕ್ರೈಂ ವಿಚಾರದಲ್ಲಿ ಒಂದು ಮಾತನ್ನು ಹೇಳುವುದಾದರೆ, ಪೋಲೀಸರ ಕೈಗೆ ಒಬ್ಬ ವ್ಯಕ್ತಿ ಕಳ್ಳ ಎಂದು ಸಿಕ್ಕಿಬಿದ್ದರೆ ಅವನನ್ನು ಪೋಲೀಸರು ಎಲ್ಲಿ ಇಟ್ಟಿರುತ್ತಾರೋ ಗೊತ್ತೇ ಆಗುವುದಿಲ್ಲ. ಬೆಳಗ್ಗೆ ಹೊತ್ತಿಗೆ ಮೃತದೇಹ ವಾಪಸಿಂದ ಬಂದಿರುತ್ತದೆ.

ಶ್ರೀ ಪಿ. ರಾಮದೇವ್.—ತಾವು ಜೈಲಿಗೆ ಅನೇಕಸಾರಿ ಹೋಗಿರುವುದಾಗಿ ಹೇಳಿದಿರಿ. ಅಲ್ಲಿ ಥರ್ಡ್ ಡಿಗ್ರಿ ಎಂದರೆ ಏನು ಎಂಬುದನ್ನು ಹೇಳುತ್ತೀರಾ ?

ಶ್ರೀ ಎಸ್. ಸೂರ್ಯನಾರಾಯಣರಾವ್.—ಅದು ಅನುಭವಿಸಿದವರಿಗೆ ಮಾತ್ರ ಗೊತ್ತಾಗುತ್ತದೆ. ಆದರೆ ಥರ್ಡ್ ಡಿಗ್ರಿ ಮೆಥಡ್‌ನ್ನು ಉಪಯೋಗ ಮಾಡಬಾರದೆಂದು ಕೋರ್ಟ್‌ನಲ್ಲಿ ಹೇಳಿದ್ದಾರೆ.

ಶ್ರೀ ಪಿ. ರಾಮದೇವ್,—ಫಸ್ಟ್ ಡಿಗ್ರಿ ಯಾವುದು ? ಸೆಕೆಂಡ್ ಡಿಗ್ರಿ ಯಾವುದು ? ಥರ್ಡ್ ಡಿಗ್ರಿ ಯಾವುದು ?

ಶ್ರೀ ಎಸ್. ಸೂರ್ಯನಾರಾಯಣರಾವ್.—ಏರೋಪ್ಲೇನ್ ಎತ್ತುವುದು, ರೂಲರ್ ಮಾಡುವುದು, ಉಗುರು ಕೀಳುವುದು, ಸೂಜಿ ಹಾಕುವುದು, ಇದೆಲ್ಲಾ ಥರ್ಡ್ ಡಿಗ್ರಿ ಮೆಥೆಡ್ಸ್. ಜನತಾ ಸರ್ಕಾರ ಬಂದಿರುವುದರಿಂದ ನಮಗೆಲ್ಲ ಒಳ್ಳೆಯ ಆಡಳಿತ ಸಿಕ್ಕುತ್ತದೆ, ನಮಗೆಲ್ಲಾ ಒಳ್ಳೆಯದಾಗುತ್ತದೆಂಬ ಭಾವನೆ ಜನರಲ್ಲಿ ಬರಬೇಕು. ಈ ದಿಸೆಯಲ್ಲಿ ಕೆಲಸಮಾಡಲು ಏನಾದರೂ ಎರಡು ತೊಡರುಗಳಿದ್ದರೆ ಅದನ್ನು ಈ ಸದನದಲ್ಲಿಟ್ಟು ಬಗೆಹರಿಸಿಕೊಂಡು ಜನರ ಸೇವೆ ಮಾಡಲು ಅನುಕೂಲವಾಗುವಂತೆ ಕೆಲಸ ಮಾಡಿ.

ಶ್ರೀ ಎಂ. ಎಸ್. ಕೃಷ್ಣನ್.—ಅಬ್‌ಸ್ಟಕಲ್ಸ್ ಬಗ್ಗೆ ಹೇಳುವುದಾದರೆ ಮುಖ್ಯ ಮಂತ್ರಿಗಳಿಗೆ ಎಡಕ್ಕೆ, ಬಲಕ್ಕೆ, ಅಥವಾ ಅವರ ಸುತ್ತ ಇರುವವರಿಂದಲೇ ಅಬ್‌ಸ್ಟಕಲ್ಸ್ ಜಾಸ್ತಿ ಇರುತ್ತದೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಒಟ್ಟಿನಲ್ಲಿ ಜನರ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ೫ ವರ್ಷಕಾಲ ಆಡಳಿತ ನಡೆಸಿಕೊಂಡು ಹೋಗಬೇಕೆಂದು ಹೇಳಿ ಈ ಬೇಡಿಕೆಯನ್ನು ಬೆಂಬಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ್).—ಮಾನ್ಯ ಅಧ್ಯಕ್ಷರೇ,......

ಒಬ್ಬ ಸದಸ್ಯರು.—ಅಧ್ಯಕ್ಷರೇ, ಈಗಲೇ ೫ ಗಂಟೆ ಆಯಿತು. ನಾಳೆಗೆ ಮುಂದುವರೆಸಲಿ. ನಾವು ಬೆಳಿಗ್ಗೆ ೯ ಗಂಟೆಯಿಂದಲೇ ಇಲ್ಲಿ ಕುಳಿತಿದ್ದೇವೆ.

ಅಧ್ಯಕ್ಷರು.—ನಿಮ್ಮಹಾಗೆ ನಾನೂ ಸಹ ನಿಮ್ಮ ಜೊತೆಯಲ್ಲೇ ಕುಳಿತಿದ್ದೇನಲ್ಲ. ಬಿಸಿನೆಸ್ ಅಡ್ವೈಸರಿ ಕಮಿಟಿ ಪ್ರಕಾರ ನಾಳೆ ಸಭೆ ಮುಗಿಯಬೇಕು. ತಾವುಗಳು ನಾಳೆ ಎಷ್ಟು ಹೊತ್ತಾದರೂ ಕೂತುಕೊಂಡು ಮುಗಿಸುತ್ತೇವೆನ್ನುವುದಾದರೆ ಈಗ ಎಳೋಣ.

ಒಬ್ಬ ಸದಸ್ಯರು.—ಅಧ್ಯಕ್ಷರೇ, ನಾವು ಬೆಳಿಗ್ಗೆ ೯ ಗಂಟೆಯಿಂದ ೫ ಗಂಟೆಯವರೆಗೂ ಕುಳಿತಿದ್ದೇವೆ. ದಯುವಿಟ್ಟು ನಾಳೆಗೆ ಇದನ್ನು ಕಂಟಿನ್ಯೂ ಮಾಡಿ.

ಅಧ್ಯಕ್ಷರು.—ಈ ಬಡ್ಜೆಟ್ಟಿನ ಮೇಲೆ ಎಲ್ಲರೂ ಮಾತನಾಡಲು ಅಪೇಕ್ಷೆ ಉಳ್ಳವರಾದುದರಿಂದ ಎಲ್ಲರಿಗೂ ಕಲಾವಕಾಶ ಕೊಡಬೇಕಾಗಿರುವುದರಿಂದ ಸದನ ಕೂಡಲು ಹೆಚ್ಚು ಕಾಲಾವಕಾಶ ಬೇಕಾಗುತ್ತದೆ.

ಶ್ರೀ ಕೆ. ರಾಮಭಟ್.—ಅಧ್ಯಕ್ಷರೇ, ಈಗ ಸದನ ಕೂಡುವ ಟೈಂ ಬೆಳಿಗ್ಗೆ ೯ ಗಂಟೆಯಿಂದ ೫ ಗಂಟೆ ಎಂದು ಏನು ಇದೆ ಅದನ್ನು ಬೇಕಾದರೆ ಬದಲಾಯಿಸಬಹುದಲ್ಲ.

ಅಧ್ಯಕ್ಷರು.—ದೊಡ್ಡಮೇಟಿಯವರೇ ತಾವು ಮಾತನಾಡಿ.

ಶ್ರೀ ಜೆ. ಎಸ್. ದೊಡ್ಡಮೇಟಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದಂಥ ಬೇಡಿಕೆಗಳ ಬಗ್ಗೆ ನನಗೆ ಕೊಟ್ಟಂಥ ಅವಕಾಶದಲ್ಲೇ ನನ್ನ ಮಾತನ್ನು ಮುಗಿಸುವುದಕ್ಕೆ ಪ್ರಯತ್ನಪಟ್ಟು ಅದರ ಕೆಲವು ಮಾತುಗಳನ್ನಾಡಲು ಅಪೇಕ್ಷೆಪಡುತ್ತೇನೆ.

ಒಬ್ಬ ಸದಸ್ಯರು.—ಸ್ವಾಮಿ, ಲೇಬರ್ ಆಕ್ಟ್ ಪ್ರಕಾರ ೮ ಗಂಟೆ ಮೇಲೆ ಕೆಲಸ ಮಾಡಿದರೆ ಓವರ್ ಟೈಂ ಅಲೋಯೆನ್ಸ್ ಕೊಡಬೇಕಾಗುತ್ತದೆ.

ಅಧ್ಯಕ್ಷರು.—ತಾವು ದಯವಿಟ್ಟು ಸೂರ್ಯನಾರಾಯಣರಾವ್ ಅವರನ್ನು ಸಾಕ್ಷಿಗೆ ತೆಗೆದುಕೊಂಡರೆ ಓವರ್‌ಟೈಂ ಅಲೋಯೆನ್ಸ್ ಕೊಡುತ್ತಾರೆಯೋ ಇಲ್ಲವೇ ಎನ್ನುವುದು ಗೊತ್ತಾಗುತ್ತದೆ.

ಒಬ್ಬ ಸದಸ್ಯರು.—ಅಧ್ಯಕ್ಷರೇ, ಈಗಾಗಲೇ ೫ ಗಂಟೆ ಆಗಿಹೋಗಿದೆ, ದಯವಿಟ್ಟು ನಾಳೆಗೆ ಮುಂದುವರೆಸಿ.

ಅಧ್ಯಕ್ಷರು.—ಶ್ರೀಮಾನ್ ದೊಡ್ಡಮೇಟಿಯವರ ಭಾಷಣ ಒಂದಾದರೂ ಮುಗಿಸಲಿಲ್ಲ. ಶ್ರೀಮಾನ್ ದೊಡ್ಡಮೇಟಿಯವರು ಭಾಷಣ ಮಾಡಬಹುದು.

ಶ್ರೀ ಜೆ.ವಿಸ್. ದೊಡ್ಡಮೇಟಿ.— ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯ ಮಂತ್ರಿಗಳು ಈ ಸದನದ ಮುಂದೆ ಇಟ್ಟಿರುವ ಬೇಡಿಕೆಗಳನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸಿ ಆ ಬಗ್ಗೆ ತಾವು ನನಗೆ ಕೊಟ್ಟಿರುವಂಥ ಕಾಲ ಮಿತಿಯೊಳಗೆ ಕೆಲವು ಸೂಚನೆಗಳನ್ನು ಕೊಡುವುದಕ್ಕೆ ಬಯಸುತ್ತೇನೆ. ಮೊಟ್ಟ ಮೊದಲನೆಯದಾಗಿ ಹೇಳಬೇಕಾದರೆ, ಈ ಅಭಿವೃದ್ಧಿ ಕಾರ್ಯಕ್ರಮಗಳು, ಏನು ಇವೆ ಅವು ಕಾರ್ಯಗತ ಗೊಳ್ಳಲು ರಾಜಕೀಯ ಹಾಗೂ ಆಡಳಿತದ ಯಂತ್ರ ಎರಡನ್ನೂ ಕೂಡ ಚುರುಕುಗೊಳಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ, ಈಗ ಮೊದಲಿನ ಹಾಗೆ ಇಲ್ಲ. ಈಗ ಏನಾಗಿದೆ ಎಂದರೆ ನಮ್ಮ ರಾಜ್ಯದ ಆಡಳಿತದ ಕೆಲಸಗಳು ಬಹಳ ಚುರುಕಾಗಿವೆ, ಈಗ ''ಸೂಕ್ತ ಕ್ರಮ ಕೈಕೊಳ್ಳಲು'' ಎಂದು ಹೇಳಿದ ಕಾಗದಗಳು ಸುಖವಾಗಿ ನಿದ್ರಿಸುವ ಕಾಲ ಇದಲ್ಲ. ಇದನ್ನು ಅಧಿಕಾರೀ ಶಾಹಿ ವರ್ಗ ಚೆನ್ನಾಗಿ ತಿಳಿದುಕೊಳ್ಳಬೇಕು, ಇದರಲ್ಲಿ ಕೇವಲ ರಾಜಕೀಯ ಯಂತ್ರ ಮಾತ್ರ ಚುರುಕಾಗಿದ್ದರೆ ಸಾಲದು, ಇದರಲ್ಲಿ ಆಡಳಿತ ಯಂತ್ರವೂ ಸಹ ಚುರುಕಾಗಿರಬೇಕು ಎಂದು ಹೇಳುತ್ತೇನೆ.

ಎರಡನೆಯದಾಗಿ ಮುಖ್ಯವಾಗಿ ''ವಿಳಂಬ'' ಎನ್ನುವ ಮಾತನ್ನು ಕೆಲವು ಸದಸ್ಯರು ಹೇಳಿದ್ದಾರೆ. ಈ ಕ್ರೂರ ವಿಳಂಬಕ್ಕೆ ಅನೇಕ ಪ್ರಕರಣಗಳು ತುತ್ತಾಗಿವೆ. ಎಂದು ಹೇಳಿದ್ದಾರೆ. ನಾನು ಹೇಳುತ್ತೇನೆ. ಯಾವುದೇ ವಿಳಂಬವಿಲ್ಲದೆ ಪ್ರಕರಣಗಳ ಶೀಘ್ರ ವಿಲೇವಾರಿ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ವಿಶೇಷ ಆಸಕ್ತಿ ವಹಿಸಿದ್ದಾರೆ. ಎಲ್ಲಾ ಜಿಲ್ಲಾಧಿಕಾರಿಗಳು ಇಲಾಖಾ ಮುಖ್ಯಸ್ಥರು ಮತ್ತು ಸರ್ಕಾರದ ಕಾರ್ಯದರ್ಶಿಗಳು ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡತಕ್ಕದ್ದೆಂದು ಸರ್ಕಾರವು ಈ ಸಂದರ್ಭದಲ್ಲಿ ಒಂದು ಸುತ್ತೋಲೆಯನ್ನು ಹೊರಡಿಸಿದೆ. ವಿಳಂಬವಾದರೆ ಇಷ್ಟರಲ್ಲೇ ಕಠಿಣ ಕ್ರಮ ಕೈ ಕೊಳ್ಳುವುದು ಎಂದು ಹೊರಡಿಸಿದೆ ಇದು ನಿಜ ಆದರೂ ಸಹ ಕೆಲವು ಪ್ರಕರಣಗಳು ಕಣ್ಣು ತಪ್ಪಿಸಿ ಉಳಿದಿರುವ ಪ್ರಸಂಗಗಳು ಇವೆ. ಇಲ್ಲ ಎನ್ನುವುದಿಲ್ಲ. ಆದರೆ ಅದು ಕಾನೂನಿನ ಚೌಕಟ್ಟಿನಲ್ಲಿ ತೂಗಾಡುತ್ತಿದೆ ಎನ್ನುವ ಮಾತನ್ನು ಹೇಳುತ್ತೇನೆ.

ಮೂರನೆಯದಾಗಿ, ಹೇಳುವುದಾದರೆ ನೌಕರಿಯಿಂದ ನಿವೃತ್ತರಾದವರ ಪೆನ್‌ಷನ್ ಪ್ರಕರಣಗಳು ಹೆಚ್ಚಾಗಿವೆ. ಕಾನೂನು ಇರುವುದು ಬಡವರ ಹಿತಕ್ಕಾಗಿ ಎನ್ನುವುದನ್ನು ತಿಳಿದುಕೊಳ್ಳಬೇಕು, ತಮಗೆ ಒಂದು ಉದಾಹರಣೆ ಹೇಳುವುದಾದರೆ ಗದಗ ನಗರಸಭೆಯಲ್ಲಿ ಕೆಲಸ ಮಾಡುತ್ತಿದ್ದ ಕೆಲವು ನೌಕರರಿಗೆ ೧೯೭೭ನೇ ಇಸವಿಗೆ ಮುಂಚೆ ನಿವೃತ್ತರಾಗಿದ್ದರೂ ಕೂಡ ಇದುವರೆಗೆ ಅವರಿಗೆ ಯಾವುದೇ ರೀತಿಯ ಪೆನ್‌ಷನ್ ಸೌಲಭ್ಯ ಸಿಕ್ಕಿಲ್ಲ ಇದರ ಬಗ್ಗೆ ಮಾನ್ಯ ಸಚಿವರು ಗಮನ ಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಆಡಳಿತ ಸುಧಾರಣೆಯ ಬಗ್ಗೆ ಕೆಲವು ಸೂಚನೆಗಳು ಇವೆ. ಇದನ್ನು ಸ್ವಾಗತಿಸುವೆ. ಇದರಲ್ಲಿ ಒಂದು ವಿಶೇಷ ಏನೆಂದರೆ ರಾಜ್ಯ ಮಟ್ಟದ, ಜಿಲ್ಲಾ ಮಟ್ಟದ ತಾಲ್ಲೂಕು ಮಟ್ಟದ ಆಡಳಿತದಲ್ಲಿ ಏನು ಇದೆ ಇದು ಒಂದು ಜಟಕಾಬಂಡಿ ಇದ್ದ ಹಾಗೆ, ಈ ಜಟಕಾಬಂಡಿಯ ಸಾಹೇಬ್ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಕೆಂಪು ಪಟ್ಟಿ ಕತ್ತರಿಸಬೇಕು ಕಡತ ಯಜ್ಞಕ್ಕೆ ಅವಕಾಶ ಮಾಡಿಕೊಡಬೇಡಿ. ಜಟಕಾಗಾಲಿಗಳಿಗೆ ಎಣ್ಣೆ ಉಣಿಸಬೇಕು ಎಣ್ಣೆ ಮಜ್ಜನಮಾಡಿ ಕಾನೂನುಕೂದಲು ಸೀಳುವ ಕೆಲಸ ಬೇಡ, ತೊಡಕಿದ್ದರೆ ತಿದ್ದುಪಡಿ ಮಾಡಿ ಸಮಸ್ಯೆ ಬಗೆಹರಿಸಿಕೊಳ್ಳಬೇಕು, ಈ ಬಗ್ಗೆ ಪೂರಾ ವಿಳಂಬಕ್ಕೆ ಎಷ್ಟು ತುತ್ತಾಗಿವೆ ಅದು ನಿನ್ನದಲ್ಲ ೩೦ ವರ್ಷದಿಂದ ಬಂದದ್ದು ಆಡಳಿತವನ್ನು ಚುರುಕುಗೊಳಿಸುವ ''ಚುಚ್ಚುಮದ್ದು...ಕೊಟ್ಟರೂ ಸಹ ಚುರುಕು ಕಾಣದಾಗಿದೆ. ಈ ಬಗ್ಗೆ ನನಗೆ ಈ ಸಂದರ್ಭದಲ್ಲಿ ದಿನಕರ ದೇಸಾಯಿಯವರ ಒಂದು ಪದ್ಯ ಜ್ಞಾಪಕಕ್ಕೆ ಬರುತ್ತದೆ ಅದು ಹೀಗ ಇದೆ,—

''ಚುಚ್ಚು ಮದ್ದಿನ ಕಾರ್ಯಕ್ರಮ ಬಲು ಜೋರು
ಆದರೂ ಆಡಳಿತ ಆಗದು ರೋಗ ಹುಷಾರು,
ಮುವತ್ತು ವರುಷಗಳ ದುಷ್ಕರ್ಮದಿಂದ
ಅಂಟಿಕೊಂಡಿದೆ ರೋಗ ಬಿಡುವುದಿಲ್ಲೆಂದು.''

ಹೀಗೆ ಈಗ ರೋಗ ಉಲ್ಬಣಗೊಂಡಿದೆ. ಇನ್ನೊಮ್ಮೆ ಚುಚ್ಚು ಮದ್ದಾದರೂ ಕೊಟ್ಟು ಅದನ್ನು ಎಬ್ಬಿರಿಸುವಂತೆ ಮಾಡಬೇಕಾಗಿದೆ, ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಇದನ್ನು ಇನ್ನಷ್ಟು ಚುರುಕುಗೊಳಿಸಬೇಕಾಗಿದೆ.

ಇನ್ನೊಂದು ವಿಷಯ ಏನೆಂದರೆ ವಿದ್ಯಾ ಇಲಾಖೆಯಲ್ಲಿ ವಿಪರೀತ ದೂರುಗಳು ಇವೆ. ನಾನು ಒಬ್ಬರದ್ದು ಮಾತ್ರ ಈ ಸಂದರ್ಭದಲ್ಲಿ ಉದಾಹರಣೆಯನ್ನು ಕೊಡುತ್ತೇನೆ. ನರೇಗಲ್ ಸುರೇಶ ದ ಕುಲಕರ್ಣಿ ಇವರ ತಂದೆ ಸೇವೆಯಲ್ಲಿರುವಾಗಲೇ ತೀರಿ ಹೋದರು. ಈತನ ನೌಕರಿಗೆ ಬರೆದುಕೊಂಡ. ಅದಕ್ಕೆ ಉತ್ತರವಾಗಿ ''ಅದು ಪರಿಶೀಲನೆಯಲ್ಲಿದೆ ... ಎಂದು ಬಂದಿದೆ. ಈ ಕೇಸು ಶಿಕ್ಷಣ ಇಲಾಖೆಯಲ್ಲಿ ೧೯೭೭ ರಿಂದಲೂ ಕೂಡ ನನೆಗುದಿಗೆ ಬಿದ್ದಿದೆ, ಬಹುತೇಕವಾಗಿ ಈಗ ಯಾವುದಾದರೂ ಕಾಗದಕ್ಕೆ ಪರಿಶೀಲನೆಯಲ್ಲಿದೆ ಎನ್ನುವುದಾಗಲಿ ಅಥವಾ ಸೂಕ್ತ ಕ್ರಮ ತೆಗೆದುಕೊಳ್ಳುವೆ ಎಂದು ಏನಾದರೂ ಬಂದರೆ ಇದಕ್ಕೆ ಏನು ಅರ್ಥ ಕಟ್ಟಿದ್ದಾರೆ ಎಂದರೆ ಪರಿಶೀಲನೆಯಲ್ಲಿದೆ ಎನ್ನುವ ಅರ್ಥಕ್ಕೆ ಸಮಾಧಿಯಾಗಿದೆ ಎನ್ನುವ ಅರ್ಥ ಕಟ್ಟಿದ್ದಾರೆ, ಹಾಗೆಯೇ ಸೂಕ್ತಕ್ರಮ ತೆಗೆದುಕೊಳ್ಳುವೆ ಎನ್ನುವುದಕ್ಕೆ ಅಂತ್ಯ ಕ್ರಿಯೆ ಎನ್ನುವ ಅರ್ಥ ಕಟ್ಟಿದ್ದಾರೆ. ಇನ್ನೊಂದು ವಿಷಯ ಹೇಳುವುದಾದರೆ, ನಮ್ಮ ಪರಿವಾರ ಒಳ್ಳೆಯವರಾಗಿರಬೇಕು, ಬಡವರ ಮನವೊಲಿಸುವಂತೆ ಕೆಲಸ ಮಾಡಬೇಕು. ಯಾರಾದರೂ ಕ್ರೂರ ಮಾರ್ಗಕ್ಕೆ ಹೋದರೆ ಅವರನ್ನು ಸರಿಮಾಡಬೇಕು. ನಮ್ಮ ಪರಿವಾರವನ್ನು ನಾವು ಸರಿಯಾಗಿ ಇಟ್ಟುಕೊಳ್ಳಬೇಕು ;

ಈ ಸಂದರ್ಭದಲ್ಲಿ ಇನ್ನೊಂದು ಉದಾಹರಣೆ ಕೊಡುತ್ತೇನೆ. ಕುಮಾರವ್ಯಾಸನ ಒಂದು ಭಾಗದಲ್ಲಿ ಬರೆದಿದೆ. ಅದು ಏನೆಂದರೆ ಬಡವನ ಬಿನ್ನಪವ ಇನ್ನಾರು ಕೇಳುದರು ? ಯಾವುದಾದರೂ ಪ್ರಕರಣದ ಮೇಲೆ ''ಅರ್ಜೆಂಟ್'' ಚೀಟಿ ಅಂಟಿಸುತ್ತಾರೋ ಅದರ ಬಗ್ಗೆ ಈರೀತಿ ಸೂಚಿಸಿದೆ. ಅದು ಈರೀತಿ ಇದೆ.—

''ಜೋಗಾಗಿ ಚೀಟಿ ಹಚ್ಚಿದರು ''ಅರ್ಜೆಂಟು''

ಅರ್ಜಿಯೂ ಎನ್ನುವುದು ನೂರೆಂಟು
ಇಲ್ಲಿಂದ ಆ ಕಡೆಗೆ ಓಡಿ
ಕೊನೆಗೆ ಆ ಫೈಲುಗಳೇ ಗತಿಗೇಡಿ

ಹೀಗೆ ಇದೆ. ಆದುದರಿಂದ ನಾನು ಹೇಳುವುದೇನೆಂದರೆ ಈ ಆಡಳಿತ ಸಾಧಾರಣೆ ಬಗ್ಗೆ ಸಾಕಷ್ಟು ಪ್ರಯತ್ನ ಇನ್ನೂ ಆಗಬೇಕು. ತಾವು ಸಾರ್ವಜನಿಕ ಕುಂದು ಕೊರತೆಗಳ ಒಂದು ವಿಭಾಗವನ್ನು ಈಗಾಗಲೇ ತೆಗೆದಿದ್ದೀರಿ. ಆದರೆ ಆ ಕೆಲಸವನ್ನು ಇನ್ನೂ ಚುರುಕುಗೊಳಿಸಬೇಕು. ಜನರ ಚಿಂತನೆ ಏನು ಇದೆ ಅದನ್ನು ಆದಷ್ಟು, ಮಟ್ಟಿಗೆ ಸಾಧಾರಣೆ ಮಾಡಲು ತಾವು ಮನಸ್ಸು ಇನ್ನೂ ಕೊಡಬೇಕೆಂದು ಹೇಳುತ್ತೇನೆ. ಇಂದಿನ ಸಚಿವರ ಬಗ್ಗೆ ಹೇಳಬೇಕಾದರೆ ಅವರು ವಾಸವಾಗಿರುವ ಮನೆಗಳನ್ನು ನೋಡಿ ಗೊತ್ತಾಗುತ್ತದೆ,

ಶ್ರೀ ಜೆ.ಡಿ. ಸೋಮಪ್ಪ.— ಹಿಂದೆ ಇದ್ದಂಥ ಮಂತ್ರಿಗಳ ಮನೆಯಲ್ಲೇ ಇವರೂ ಇದ್ದಾರೆ. ಅದರಲ್ಲೇನೂ ವ್ಯತ್ಯಾಸ ಕಾಣುತ್ತಾ ಇಲ್ಲವಲ್ಲ.

ಶ್ರೀ ಜೆ.ಎಸ್ ದೊಡ್ಡಮೇಟಿ.— ಇಂದಿನ ಸಚಿವರು ಬಹಳ ಪ್ರಾಮಾಣಿಕರಾಗಿದ್ದಾರೆ. ಇಂದಿನ ಮಾನ್ಯ ಸಚಿವರಿಗೆ ಹಿಂದಿನವರ ಹಾಗೆ ಪೋಲೀಸ್ ರಕ್ಷಣೆ ಇಲ್ಲ, ಯಾವುದೇ ವೈಭವ ಪೂರಿತವಾದ ಜೀವನ ಸಾಗಿಸುವುದಿಲ್ಲ. ಸಾದಾ ಸೀದ ಜೀವನವನ್ನು ಕೆಲವರಾದರೂ ಸಹ ಸಾಗಿಸುತ್ತಿದ್ದಾರೆ. ಅವರಿಗೆ ಪೋಲೀಸ್ ರಕ್ಷಣೆ ಬೇಕಾಗಿಲ್ಲ, ಅವರಿಗೆ ಜನರ ರಕ್ಷಣೆ ಇದೆ, ಆದುದರಿಂದ ಅವರಿಗೆ ಯಾರ ರಕ್ಷಣೆಯೂ ಬೇಕಾಗಿಲ್ಲ. ಆದುದರಿಂದ ಮಾನ್ಯ ವಿರೋಧ ಪಕ್ಷದ ನಾಯಕರು ಈಗ ಇಲ್ಲ. ಅವರಿಗೆ ಹೇಳುತ್ತೇನೆ ಅವರೇನೂ ಈ ಬಗ್ಗೆ ಚಿಂತನೆ ಇಟ್ಟುಕೊಳ್ಳಬೇಕಾಗಿಲ್ಲ. ಈ ಸಚಿವರ ತೂಕವನ್ನು ಅಳತೆ ಮಾಡಬೇಕಾಗಿಲ್ಲ. ತಮ್ಮನ್ನು ಇನ್ನೊಬ್ಬರೊಂದಿಗೆ ತೂಕಮಾಡಿ ಇನ್ನೊಬ್ಬರಿಗೆ ನೀರು ಬಿಡುವ ಕೆಲಸ ಮಾಡಬಾರದು ಎಂದು ಅವರನ್ನು ಕೈಮುಗಿದು ಕೇಳಿಕೊಳ್ಳುತ್ತೇನೆ. ಈ ಸರ್ಕಾರ ಅಂಥ ಅನಿಶ್ಚಿತೆಯುಯಲ್ಲೂ ಇಲ್ಲ ಎನ್ನುವುದನ್ನು ನಾನು ದೃಢಪಡಿಸುತ್ತೇನೆ.

ಇನ್ನು ಮಾನ್ಯ ಸಚಿವರಿಗೆ ಕೆಲವು ಕಿವಿ ಮಾತುಗಳನ್ನು ಹೇಳಬಯಸುತ್ತೇನೆ. ಅದೇನೆಂದರೆ ಇನ್ನು ಮುಂದೆ ಅಡಿಗಲ್ಲನ್ನು ಎಂದರೆ ಫೌಂಡೇಷನ್ ಸ್ಟೋನ್ ಹಾಕುವುದಕ್ಕೆ ಹೋಗಬೇಡಿ ಎಂದು. ಏಕೆಂದರೆ ಈ ಅಡಿಗಲ್ಲು ಬೆಳೆಯುವುದಿಲ್ಲ. ಅದರಲ್ಲಿ ಕಲ್ಲು ಮಾತ್ರ ಬೆಳೆಯುವುದಿಲ್ಲ, ಈ ಬಗ್ಗೆ ದಿನಕರ ದೇಸಾಯಿಯವರು ಏನು ಹೇಳಿದ್ದಾರೆ ಎನ್ನುವುದನ್ನು ನೆನಪಿಗೆ ತರುತ್ತೇನೆ. ಅದು ಈ ರೀತಿ ಇದೆ.—

ಕಟ್ಟಬೇಕೆಂದು ಹಾಕಿದರು ಅಡಿಗಲ್ಲು
ಅಡಿಗಲ್ಲ ಮೇಲೆ ಹುಟ್ಟಿದ್ದೇ ಭರ್ತಿ ಹುಲ್ಲು
ದನಗಳಿಗೆ ಮೇಯಲಿಕ್ಕೆ ಬಹಳ ಅನುಕೂಲ
ಕೇಳಲನೋಡುವ ಬಾರೇ ವೇಣುಗೋಪಾಲ ಎಂದು

ಆದ್ದರಿಂದ ಸಚಿವರುಗಳು ಕೂಡ ಬಹಳ ಜಾಗರೂಕತೆಯಾಗಿರಬೇಕು ಏಕೆಂದರೆ ಒಮ್ಮೊಮ್ಮೆ ಏನಾಗುತ್ತದೆ ಎಂದರೆ ಅಧಿಕಾರ ಇದ್ದಾಗ ಅನೇಕ ಆಸೆಗಳನ್ನು ಇಟ್ಟುಕೊಂಡು ಜನರು ಬರುತ್ತಾರೆ. ಆಮೇಲೆ ಅವರು ಏನು ಮಾಡುತ್ತಾರೆ ಎಂದರೆ ಸಚಿವರ ಮೇಲೆ ಗಂಟು ಬೀಳುತ್ತಾರೆ. ಆದುದರಿಂದ ಎಚ್ಚರಿಕೆ ಇರಬೇಕು ಎಂದು ಹೇಳುತ್ತೇನೆ. ಇದರಲ್ಲಿ ರಾಜಕೀಯ ಏಜೆಂಟರು ಸಹ ಇರುತ್ತಾರೆ. ಈ ಬಗ್ಗೆ ದಿನಕರ ದೇಸಾಯಿಯವರು ಬರೆದ ಒಂದು ಪದ್ಯ ನೆನಪಿಗೆ ಬರುತ್ತದೆ. ಅದು ಹೀಗೆ ಇದೆ,—

'. ಇವನಾರು ಗೊತ್ತೆ, ಸಚಿವರ ಬಗಲ ಬಚ್ಚಾ,
ಬೇರೆ ಯಾರೂ ಇಲ್ಲ ಇವನಷ್ಟು ಉಚ್ಚಾ.
ಇವನ ಮುಖ ನೋಡಿದರೆ ಬಹಳ ನಾಜೂಕು,
ಈ ಪ್ರಜಾರಾಜ್ಯದಲ್ಲಿ ಇಂಥಾವರೇ ಬೇಕು.

ಇಂಥಾವರ ಸಂಖ್ಯೆಯನ್ನು ಕಡಿಮೆ ಮಾಡಿದಷ್ಟೂ ಕೂಡ ಸರ್ಕಾರಕ್ಕೆ ಕೀರ್ತಿ.

ಅಧಿಕಾರಿಗಳಿಗೆ ನೀಡುವ ಮೊದಲು ಬಡ್ತಿ ಸರಿಯಾಗಿ ತೆಗೆದುಕೊಳ್ಳಿರಿ ಅವರ ಜೆಡ್ತಿ ಪ್ರತಿಯೊಂದು ಕಿಸೆಯೊಳಗೆ ಸರಿಯಾಗಿ ನೋಡಿ. ಟೋಪಿಯಲ್ಲೊ ಸಿಗಬಹುದು ರಾಡಿ ಇನ್ನು ಕೊನೆಯ ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಅಗ್ನಿಶಾಮಕ ದಳದ ಬಗ್ಗೆ ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ಒಂದು ಮಾತನ್ನು ತರಬಯಸುತ್ತೇನೆ. ಅಗ್ನಿಶಾಮಕ ದಳ ತಾಲ್ಲೂಕು ಮಟ್ಟದಲ್ಲಿ ಇಲ್ಲ. ಹಳ್ಳಿಗಾಡಿನಲ್ಲಿ ಎಲ್ಲಿಯಾದರೂ ಬೆಂಕಿ ಬಿದ್ದರೆ ಬಣವೆಗಳು, ಮನೆಗಳು ಉರಿದು ಹೋಗುತ್ತವೆ. ಆದ್ದರಿಂದ ಈ ಅಗ್ನಿಶಾಮಕ ದಳವನ್ನು ತಾಲ್ಲೂಕು ಮಟ್ಟದಲ್ಲಿ ಇಡಬೇಕು, ವಾಹನಗಳಿಗೆ ಚಾಲಕರಿಗೆ ಲೈಸೆನ್ಸ್ ಕೊಡುವಾಗ ಮಧ್ಯವರ್ತಿಗಳು ಹೆಚ್ಚಿನ ಕಾಟವನ್ನು ಕೊಡುತ್ತಿದ್ದಾರೆ ಇದನ್ನು ಸಹ ತಾವು ತಪ್ಪಿಸಬೇಕು.

ಶ್ರೀ ಮಹದೇವ್.—ಮಾನ್ಯ ಸದಸ್ಯರು ಪಕ್ಷಾಂತರದ ಬಗ್ಗೆ ಹೇಳಬೇಕು.

ಶ್ರೀ ಜೆ. ಎಸ್. ದೊಡ್ಡಮೇಟಿ.—ನಾನು ಇನ್ನು ಹರಿಜನರ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ನಮಗೂ ಹರಿಜನರೂ ದೇವಲಯದ ಒಳಗೆ ಬರಬೇಕು ಎನ್ನುವ ಕಳಕಳಿ ಆಕಾಂಕ್ಷೆ ಇದೆ. ಆದರೆ ಸಮಾಜಿಕ ಬದಲಾವಣೆಯಾಗಿಲ್ಲ. ಪ್ರತಿಯೊಂದು ಹಳ್ಳಿಯಲ್ಲಿಯೂ ಯಾವ ರಾಜಕೀಯ ವ್ಯಕ್ತಿಗಳು ಯಾವ ಸಾಮಾಜಿಕ ಕಾರ್ಯಕರ್ತರು ಈ ಸಾಮಾಜಿಕ ಬದಲಾವಣೆಗೆ ಪ್ರಯತ್ನ ಮಾಡು ತ್ತಿದ್ದಾರೆಂದು ನಾನು ಪ್ರಶ್ನೆ ಮಾಡಬೇಕಾಗಿದೆ. ನಾನು ಒಮ್ಮೆ ಹರಿಜನ ಬಂಧುಗಳನ್ನು ನಮ್ಮ ಗುಡಿಯೊಳಗೆ ಹೋಗಿರಿ ಎಂದು ಹೇಳಿದೆ ಅವರು ನಾವು ಹೋಗುವುದಕ್ಕೆ ತಯಾರಿಲ್ಲ ಎಂದು ಹೇಳಿದರು. ಏಕೆಂದರೆ ನೀವು ಅವರನ್ನು ಈ ಒಂದು ಪದ್ಧತಿಯಲ್ಲಿಯೇ ಬೆಳೆಸಿಕೊಂಡು ಬಂದಿದ್ದೇವೆ. ಅವರನ್ನು ನಾವು ಗುಲಾಮಗಿರಿಯಲ್ಲಿ ಮಾನಸಿಕ ಭಯದಲ್ಲಿಯೇ ಇನ್ನೂ ಬೆಳೆಸಿಕೊಂಡು ಬರು ತ್ತಿದ್ದೇವೆ. ಅವರ ಈ ಮಾನಸಿಕ ಭಯ, ಮಾನಸಿಕ ಕಳಂಕವನ್ನು ಎಲ್ಲಿಯವರೆಗೆ ನಾವು ಹೋಗಲಾಡಿ ಸುವುದಿಲ್ಲವೋ ಅಲ್ಲಿಯವರಿಗೆ ನಾವು ಅವರ ಆರ್ಥಿಕ ಸ್ಥಿತಿಯನ್ನು ಮೇಲೆತ್ತಲಿಕ್ಕೆ ಮುಂದೆಯೂ ಸಾಧ್ಯವಾಗುವುದಿಲ್ಲ. ಇವರನ್ನು ಈ ಒಂದು ಮಾನಸಿಕ ಭಯದಿಂದ ನಾವು ಮುಕ್ತರನ್ನಾಗಿ ಮಾಡ ಬೇಕಾಗಿದೆ. ಇದನ್ನು ಮಾಡಲಿಕ್ಕೆ ನಾವು ದೃಢವಾದ ಪ್ರಯತ್ನವನ್ನು ಮಾಡಬೇಕು.

ಅಧ್ಯಕ್ಷರು.—ಮಾನ್ಯ ಸದಸ್ಯರು ಹೇಳುವುದು ಯಾವ ಡಿಮ್ಯಾಂಡ್‌ನಲ್ಲಿ ಬರುತ್ತದೆ ?

ಶ್ರೀ ಜೆ. ಎಸ್. ದೊಡ್ಡಮೇಟಿ.—ಇಲ್ಲಿ ವಿರೋಧ ಪಕ್ಷದ ನಾಯಕರು, ವಿರೋಧ ಪಕ್ಷದವರು ಏನು ಏನು ಮಾತನಾಡಿದ್ದಾರೆ ಅವರಲ್ಲಿ ಒಳ್ಳೆಯದನ್ನು ನಾವು ಅರಿಸಿಕೊಳ್ಳಬೇಕು ಕೆಟ್ಟದ್ದನ್ನು ಅಲ್ಲಿಯೇ ಬಿಡಬೇಕು. ನಮ್ಮ ಸರ್ಕಾರ ಒಳ್ಳೆಯದನ್ನು ಮಾತ್ರ ಮಾಡಬೇಕು ಎಂದು ನಾನು ಹೇಳುತ್ತೇನೆ.

ಪಕ್ಷಾಂತರ. ಇದು ಇಂದು ನಿನ್ನೆಯದಲ್ಲ. ರಾಮಾಯಣ ಮಹಾ ಭಾರತದ ಕಾಲದಿಂದಲೂ ಪಕ್ಷಾಂತರ ನಡೆದುಕೊಂಡು ಬರುತ್ತಿದೆ. ರಾಮ ರಾವಣನನ್ನು ಕೊಲ್ಲುವುದಕ್ಕೆ ವಿಭೀಷಣನನ್ನು ತನ್ನ

ಕಡೆಗೆ ತೆಗೆದುಕೊಳ್ಳಲಿಲ್ಲವೇ ? ಇಂಥಾದ್ದರಲ್ಲಿ ಪ್ರಜಾ ಹಿತಕ್ಕಾಗಿ, ರಾಕ್ಷಸ ಸಂಹಾರಕ್ಕಾಗಿ ನಾವು ಕೆಲವು ರಾಜಕೀಯ ತಂತ್ರಗಳನ್ನು ಮಾಡಲೇ ಬೇಕಾಗಂತ್ತದೆ. ಆದರೆ ಇದು ಪಕ್ಷಾಂತರವಲ್ಲ. ದಯವಿಟ್ಟು ಇದನ್ನು ಪಕ್ಷಾಂತರ ಎನಿಸಬೇಡಿ.

ಶ್ರೀ ವಿ. ಧನಂಜಯಕುಮಾರ್.— ಪಕ್ಷಾಂತರ ಅಲ್ಲದಿದ್ದರೆ ಸದಸ್ಯರನ್ನು ಕ್ರಯಕ್ಕೆ ಪಡೆದು ಕೊಳ್ಳುವುದನ್ನು ಹೇಳೋಣವೇ ?

ಶ್ರೀ ಜೆ. ಎಸ್. ದೊಡ್ಡಮೇಟಿ.—ದುಷ್ಟ ವ್ಯಕ್ತಿಗಳನ್ನು ಸಂಹಾರ ಮಾಡಲಿಕ್ಕೆ ನಾವು ಅನೇಕ ತಂತ್ರಗಳನ್ನು ಉಪಯೋಗ ಮಾಡಬೇಕು. ಜನ ಹಿತಕ್ಕಾಗಿ ಈ ಕೆಲಸಗಳನ್ನು ಮಾಡುತ್ತಿದ್ದೇವೆ. ರಾಜಕೀಯ ಹಿತಕ್ಕಾಗಿ ಅಲ್ಲ. ಜನ ಶಕ್ತಿಯ ನಿಯಂತ್ರಣಕ್ಕಾಗಿ ನಾವು ಎಲ್ಲಾ ಶಾಸಕರು, ನಮ್ಮ ಸಚಿವರು ಬಪ್ಪಿಕೊಂಡಿದ್ದೇವೆ. ಜನ ಶಕ್ತಿ ಯಾವಾಗ ನಮ್ಮ ಕೈ ಬಿಡುತ್ತದೆಯೋ ಆಗ ನಮ್ಮ ಸರ್ಕಾರ ಬೀಳುತ್ತದೆ. ಇಲ್ಲಿ ಯಾವುದೇ ಪಕ್ಷಾಂತರ ನಡೆದಿಲ್ಲ. ನಡೆಯುವುದೂ ಇಲ್ಲ, ಇಷ್ಟು ಮಾತುಗಳನ್ನು ಹೇಳುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸುತ್ತೇನೆ.

† ಶ್ರೀ ಎಚ್. ಡಿ. ಚೌಡಯ್ಯ (ಕೆರಗೋಡು).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಸನ್ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರತಕ್ಕ ೧೫–೧೬ ಬೇಡಿಕೆಗಳು ಏನು ಇವೆ ಅವುಗಳನ್ನು ನಾನು ವಿರೋಧಿಸುತ್ತಾ ಕೆಲವು ವಿಷಯಗಳ ಮೇಲೆ ಮಾತನಾಡುವುದಕ್ಕೆ ಇಷ್ಟಪಡುತ್ತೇವೆ. ನನಗೆ ಹೆಚ್ಚು ಕಾಲಾವಕಾಶ ಇಲ್ಲದೆ ಇದ್ದುದರಿಂದ ಕೆಲವು ವಿಷಯಗಳ ಮೇಲೆ ನನ್ನ ಅನಿಸಿಕೆಗಳನ್ನು ಇಲ್ಲಿ ಹೇಳುತ್ತೇನೆ. ಮೊದಲನೆಯದಾಗಿ, ಪೋಲೀಸ್ ಇಲಾಖೆ, ಸರ್ಕಾರವರು ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ಇದರ ಬಗ್ಗೆ ನೋಡಿದ್ದೇ ಆದರೆ ಪ್ರತಿಯೊಂದು ಪೋಲೀಸ್ ಠಾಣೆಯ ವ್ಯಾಪ್ತಿ ಏನು ಇದೆ ಅದರಲ್ಲಿಯೂ ಕೂಡ ಗ್ರಾಮಾಂತರ ಪ್ರದೇಶಗಳಲ್ಲಿ ಅಲ್ಲಿರತಕ್ಕ ಜನಸಂಖ್ಯೆಗೆ ಅನುಗುಣವಾಗಿ ಪೋಲೀಸ್ ಪೇದಗಳನ್ನು ಕೊಟ್ಟಿಲ್ಲ. ಇದನ್ನು ಮೊದಲು ತಾವು ಜಾಸ್ತಿ ಮಾಡಬೇಕು. ಮತ್ತು ಅನೇಕ ಕಡೆಗಳಲ್ಲಿ ಪೋಲೀಸ್ ಠಾಣೆಗಳನ್ನು ಪ್ರಾರಂಭ ಮೊಡತಕ್ಕ ಕಾರದಲ್ಲಿ. ಉದಾಹಣೆಗೆ ನನ್ನ ತಾಲ್ಲೂಕಿನಲ್ಲಿ ಜನ ಸಂಖ್ಯೆಯನ್ನು ಹೋಲಿಕೆ ಮಾಡಿದ್ದೇ ಆದರೆ ಅಲ್ಲಿರತಕ್ಕ ಠಾಣೆಗಳು ಬಹಳ ಕಡಿಮೆ ಇವೆ. ಕಳೆದ ಎರಡು ವರ್ಷಗಳಿಂದಲೂ ನನ್ನ ಕ್ಷೇತ್ರದ ಕೇಂದ್ರ ಸ್ಥಳವಾದ ಕೆರಗೋಡು ಗ್ರಾಮದಲ್ಲಿ ಒಂದು ಪೋಲೀಸ್ ಠಾಣೆಯನ್ನು ಪ್ರಾರಂಭ ಮಾಡಬೇಕು ಎಂದು ಸತತವಾಗಿ ಪ್ರಯತ್ನ ನಡೆಸಿದರೂ ಕೂಡ ಸಂಬಂದಪಟ್ಟ ಕಡಿತ ಹಣಕಾಸಿನ ಇಲಾಖೆಗೆ ಹೋಗಿ ವಾಪಸ್ ಬಂದಿದೆ. ಅದು ಮೇಲಕ್ಕೂ ಕೆಳಕ್ಕೂ ಜಗ್ಗಾಡಿಕೊಂಡು ಕುಳಿತಿದೆ. ಇದನ್ನು ಮಾನ್ಯ ಮುಖ್ಯ ಮಂತ್ರಿಗಳು ಅರ್ಥ ಮಾಡಿಕೊಳ್ಳಬೇಕು. ಕೆರಗೋಡು ಗ್ರಾಮದಲ್ಲಿ ಇದರ ಬಗ್ಗೆ ಏನು ಪ್ರಪೋಜಲ್ಸ್ ಇವೆ ಅದಕ್ಕೆ ಆದಷ್ಟು ಜಾಗ್ರತೆಯಾಗಿ ಮಂಜೂರಾತಿಯನ್ನು ತಾವು ಕೊಟ್ಟು ಅಲ್ಲಿಗೆ ಒಂದು ಪೋಲೀಸ್ ಠಾಣೆಯನ್ನು ಕೊಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ,

ಅದೇ ರೀತಿ ಶಿವಳ್ಳಿ ಎನ್ನತಕ್ಕ ಗ್ರಾಮ ಇದೆ. ಆ ಶಿವಳ್ಳಿ ಗ್ರಾಮದಲ್ಲೂ ಕೂಡ ಒಂದು ಪೋಲೀಸು ಠಾಣೆಯ ಅಗತ್ಯತೆ ಬಹಳವಾಗಿದೆ. ಈ ವಿಷಯವನ್ನು ಜಿಲ್ಲಾಧಿಕಾರಿಗಳು ಮತ್ತು ಎಸ್. ಪಿ.ಯವರ್ ಸರ್ಕಾರದ ಗಮನಕ್ಕೆ ಈಗಾಗಲೇ ತಂದಿದ್ದಾರೆ, ದಯಮಾಡಿ ಅದಕ್ಕೂ ಕೂಡ ಮಂಜೂರಾತಿ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಾಲದ ಮಿತಿ ಇರುವುದರಿಂದ ಪೋಲೀಸ್ ಇಲಾಖೆಯ ವೈಖರಿಯ ಬಗ್ಗೆ ಒಂದೇ ಒಂದು ನನ್ನ ಸ್ವಂತ ಅನುಭವವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸುಮಾರು ಒಂದು–ಒಂದೂವರೆ ತಿಂಗಳಾಯಿತು ಈ ಅಧಿವೇಶನ ಪ್ರಾರಂಭವಾಗಿ ನನಗೆ ಮಂಡ್ಯ ಬಹಳ ಹತ್ತಿರದಲ್ಲಿರುವುದರಿಂದ ಒಂದು ವಾರದಲ್ಲಿ ಎರಡು ಸಾರಿ ಹೋಗಿ ಬರುತ್ತೇನೆ ಸುಭಾಷ್‌ನಗರದ ಬಸ್ ಸ್ಟ್ಯಾಂಡ್ ಬಳಿ ಒಂದು ಆಟೋರಿಕ್ಷ ಸ್ಟ್ಯಾಂಡ್ ಇದೆ. ಇದು ನನ್ನ ದಿನನಿತ್ಯದ ಒಂದು ಅನುಭವ. ಮೊನ್ನೆ ಶುಕ್ರವಾರ ಡಿಜಿಪಿ ಗರುಡಾಚಾರರವರಲ್ಲಿ ನಾನು ಇದನ್ನು ಪ್ರಸ್ತಾಪ ಮಾಡಿದೆ. ನಿನ್ನೆಯ ದಿವಸ ನಾನು ೧೦–೧೫ಕ್ಕೆ ಬಂದು ನಿಂತಾಗ ಉದ್ದೇಶ ಪೂರ್ವಕವಾಗಿ ನೋಡಿದೆ, ಒಬ್ಬ ಪಿ.ಸಿ. ಕೂಡ ಇರುವುದಿಲ್ಲ. ಆಟೋರಿಕ್ಷಾ ಚಾಲಕರು ನಮ್ಮ ಬಟ್ಟೆ ಎರೆ ನೋಡುತ್ತಾರೆ. ಇವರಾ

† ಈ ಚಿನ್ಹೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶಾಸಕರ ಭವನಕ್ಕೋ ವಿಧಾನಸೌಧಕ್ಕೋ ಹೋಗುತ್ತಾರೆ, ಅಲ್ಲಿಂದ ಪುನಃ ವಾಪಸ್ ಬರುವುದಕ್ಕೆ ಗಿರಾಕಿಗಳು ಸಿಗುವುದಿಲ್ಲ ಎಂದು ಆಗಲೇ ಎಂಗೇಜಾಗಿದೆ ಎಂದು ಹೇಳುತ್ತಾರೆ. ಬೇರೆ ಸಾಮಾನ್ಯ ಪ್ರವಾಸಿಗರಿಗೂ ಕೂಡ ಇವರು ಹತ್ತಿರದ ಸ್ಥಳಕ್ಕೆ ಹೋಗುವುದಿಲ್ಲ. ಜಯನಗರಕ್ಕೆ ಹೋಗುವುದಕ್ಕೆ ರಿಸರ್ವ್ ಆಗಿದೆ, ಪಾರ್ಟೀಸ್ ಹೋಗಿದ್ದಾರೆ, ಬರುತ್ತಾರೆ ಎಂದು ಹೇಳುತ್ತಾರೆ. ಇದು ದಿನನಿತ್ಯದ ಒಂದು ಕಸುಬಾಗಿದೆ. ಕಳೆದ ಶುಕ್ರವಾರ ಈ ಸಭೆ ಮುಗಿದು ಹೊರಗಡೆ ಹೋಗತಕ್ಕ ಸಂದರ್ಭದಲ್ಲಿ ಈ ವಿಷಯಾವನ್ನು ಡಿಜಿಪಿಯವರಲ್ಲಿ ಪ್ರಸ್ತಾಪ ಮಾಡಿದೆ. ಇದು ಒಂದು ದಿವಸ ಅಲ್ಲ, ಎರಡು ದಿವಸದ ಅನುಭವವಲ್ಲ. ದಿನನಿತ್ಯದ ಅನುಭವವಾಗಿದೆ. ಬಹು ಮುಖ್ಯವಾದಂಥ ಬೆಂಗಳೂರು ನಗರದಲ್ಲಿರತಕ್ಕ ಬಸ್ ಸ್ಟೇಷನ್ನಿನಲ್ಲಿ ಈ ರೀತಿ ಪ್ರವಾಸಿಗರಿಗೆ ತೊಂದರೆಯಾಗುವುದಾದರೆ, ಬೇರೆ ಬೇರೆ ಕಡೆ ಯಾವ ರೀತಿ ತೊಂದರೆಗಳು ಆಗಬಹುದು ಎಂದು ಉದಾಹರಣೆ ಕೊಡುವುದಕ್ಕೆ ಇಚ್ಛೆಪಟ್ಟೆ ಅಷ್ಟೆ.

ಇನ್ನು ಫೈರ್ ಸ್ಟೇಷನ್ ವಿಚಾರದ ಬಗ್ಗೆ ಹೇಳಬೇಕಾಗಿದೆ. ಮಂಡ್ಯ ಜಿಲ್ಲಾ ಕೇಂದ್ರದಲ್ಲಿ ಫೈರ್ ಸ್ಟೇಷನ್ ಇಲ್ಲಿಲ್ಲ ಹಿಂದಿನ ಸರ್ಕಾರ ಫೈರ್ ಸ್ಟೇಷನ್ ಮಂಜೂರು ಮಾಡಿದೆ, ಆದರೆ ಅದನ್ನು ಇನ್ನೂ ಕಾರ್ಯಗತ ಮಾಡತಕ್ಕಂಥ ಕೆಲಸವನ್ನು ಪ್ರಾರಂಭ ಮಾಡಲಿಲ್ಲ ಎಂದು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಅಡ್ಮಿನಿಸ್ಟ್ರೇಷನ್ ವಿಷಯದಲ್ಲಿ ಹೇಳುವುದಾದರೆ, ಬಹುಶಃ ಯಾವುದೇ ಸರ್ಕಾರವಾಗಲಿ' ಆ ಸರ್ಕಾರ ಹೇಗಿದೆ, ಮನುಷ್ಯ ಹೇಗಿದ್ದಾನೆ. ಆ ಮನುಷ್ಯ ಪ್ರಾಮಾಣಿಕನೋ, ನಿಷ್ಠಾವಂತನೋ ಎನ್ನುವ ಪ್ರಶ್ನೆ ನಮ್ಮ ಮುಂದೆ ಬರುತ್ತದೆ. ಭ್ರಷ್ಟಾಚಾರ ಎನ್ನತಕ್ಕಂಥಾದ್ದು ಇವತ್ತು ಎಲ್ಲೆಲ್ಲೂ ಕೂಡ ತಾಂಡವವಾಡುತ್ತಿದೆ. ಇದಕ್ಕೆ ಬಹುಶಃ ನಮ್ಮ ಮಿತ್ರರು, ನಿಮ್ಮ ಸರ್ಕಾರ ಇದ್ದಾಗ ೩ ವರ್ಷಗಳ ಹಿಂದೆ ಭ್ರಷ್ಟಾಚಾರ ಇರಲಿಲ್ಲವೇ ೧೦ ವರುಷಗಳ ಹಿಂದೆ ಭ್ರಷ್ಟಾಚಾರ ಇರಲಿಲ್ಲವೇ ಎಂದು ಕೇಳಬಹುದು. ಜನತಾ ಪಕ್ಷದ ಪ್ರಣಾಳಿಕೆಯಲ್ಲಿ ಹೇಳಿದ್ದಾರೆ. ಭ್ರಷ್ಟಾಚಾರವನ್ನು ತೊಡೆದುಹಾಕಬೇಕು ಎಂದು ಬಹುಶಃ ನಾನು ಪಕ್ಷಾತೀತವಾಗಿ ಈ ಮಾತನ್ನು ಹೇಳುತ್ತಾ ಇದ್ದೇನೆ. ಎಲ್ಲೂ ಕೂಡ ಇದನ್ನು ತೊಡೆದು ಹಾಕುವುದಕ್ಕೆ ಪ್ರಯತ್ನ ಪಟ್ಟಿದ್ದಾರೋ ಇಲ್ಲವೊ ಗೊತ್ತಿಲ್ಲ. ಅದು ಹೋಗಿಲ್ಲ. ವಿಲೇಜ್ ಅಕೌಂಟೆಂಟ್‌ನಿಂದ ಹಿಡಿದು ವಿಧಾನಸೌಧದವರೆಗೆ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಇದು ಇನ್ನೂ ಹಾಗೆಯೇ ತಾಂಡವ ನೃತ್ಯ ಆಗುತ್ತಿದೆ. ಇದು ದಿನನಿತ್ಯದ ಅನುಭವ ಜನಗಳು ಬಂದು ಹೇಳುತ್ತಾ ಇರುತ್ತಾರೆ. ತಾಲ್ಲೂಕು ಆಫೀಸಿಗೆ, ಜಿಲ್ಲಾ ಕಛೇರಿಗೆ ಹೋದರೂ ಕೂಡ ಈ ಭ್ರಷ್ಟಾಚಾರ ಒಂದು ರೀತಿ ವೃತ್ತಿಯಾಗಿಬಿಟ್ಟಿದೆ. ಪಕ್ಕದ ಟೇಬಲ್‌ನವನು ಅಷ್ಟು ಮಾಡಿದ, ಆ ಆಫೀಸರ್ ಅಷ್ಟು ಮಾಡಿದ ನಾನು ಏತಕ್ಕೆ ಇಷ್ಟು ಮಾಡಬಾರದು ಎನ್ನುವ ಒಂದು ಮನೋಭಾವ ಬಂದುಬಿಟ್ಟಿದೆ. ಇದು ಸಮಾಜದ ಒಂದು ದೊಡ್ಡ ಪಿಡುಗು, ಈ ಒಂದು ಪಿಡುಗಿಗೆ ಸಮಾಜ ಬೀಳಬಾರದು. ಆದುದರಿಂದ ಈ ಒಂದು ದಿಕ್ಕಿನಲ್ಲಿ ಸರ್ಕಾರ ಮುಂದೆ ಯೋಜನೆ ಮಾಡಬೇಕಾಗಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಏನು ಒಂದು ಆಡಳಿತ ಇದೆ ಇದರ ಬಗ್ಗೆ ಬಹುಶಃ ಕಳೆದ ೬ ವರ್ಷಗಳಿಂದ ನಾನು ಮಾತನಾಡತಕ್ಕ ಸಂದರ್ಭದಲ್ಲಿ ಹೇಳಿಕೊಂಡು ಬಂದಿದ್ದೇನೆ. ಏನು ಹೇಳಿದರೂ ಕೂಡ ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಸುಧಾರಣೆಯಾಗಿಲ್ಲ ಎನ್ನತಕ್ಕ ಮಾತನ್ನು ನಾನು ಬಹಳ ವ್ಯಥೆಯಿಂದ ಹೇಳಬೇಕಾಗಿದೆ. ಇವತ್ತು ಸಾರ್ವಜನಿಕರಿಗೆ ಬಹು ಮುಖ್ಯವಾದಂಥ ಗ್ರಾಮಾಂತರ ಪ್ರದೇಶದ ಜನರಿಗೆ ಅವರ ಕೆಲಸ ಕಾರ್ಯಗಳು ಆಗಬೇಕಾದರೆ ಅವರು ಆಫೀಸಿಗೆ ತಿರುಗತಕ್ಕಂಥಾದ್ದು ನಿಲ್ಲಬೇಕಾದರೆ ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿರತಕ್ಕ ವಿವಿಧ ಇಲಾಖೆಗಳ ಅಧಿಕಾರಿಗಳು ಹೆಚ್ಚಿನ ಗಮನವನ್ನು ವಹಿಸಬೇಕಾಗುತ್ತದೆ. ಆಸಕ್ತಿಯನ್ನು ವಹಿಸಬೇಕಾಗುತ್ತದೆ. ಮಂಡ್ಯದಿಂದ ಹೊರಡತಕ್ಕಂಥ ಸಿವಿಲ್ ಬಸ್‌ಗಳಲ್ಲಿ ಒಳಗಡೆ ಎಷ್ಟು ಜನ ಇರುತ್ತಾರೆ. ಎರಡು ಬಸ್ಸಿನ ಜನ ಇರುತ್ತಾರೆ. ಉದಾಹರಣೆಗೆ ಒಂದು ನಿದರ್ಶನ ಕೊಟ್ಟೆ. ಬಹುಶಃ ಈ ರೀತಿ ಜನರು ಪಟ್ಟಣಗಳಿಗೆ ಬಂದು ಹೋಗಬೇಕಾದರೆ ಇರತಕ್ಕಂಥ ಅನೇಕ ಕಾರಣಗಳಲ್ಲಿ ಇದು ಬಹು ಮುಖ್ಯವಾದಂಥ ಕಾರಣ, ಸರ್ಕಾರಿ ಕಛೇರಿಗಳಲ್ಲಿ ಸಾರ್ವಜನಿಕರಿಗೆ ಕೆಲಸ ಆಗಬೇಕಾದರೆ ಒಂದು ಸಾರಿ ಹೋಗಿ ಆಗಬೇಕಾದ ಕೆಲಸಕ್ಕೆ ೧೦ ಸಾರಿ ಅದೇ ಕೆಲಸಕ್ಕೆ ಹೋಗಿ ಬರಬೇಕಾಗುತ್ತದೆ. ಒಂದು ಊರಿನಿಂದ ೧೦ ಜನ ಎಂದರೆ ನೂರು ಜನ ಹೋಗಿ ಬರಬೇಕಾಗುತ್ತದೆ. ಜಿಲ್ಲೆಗಳಿಂದ ಬರತಕ್ಕಂಥ ಜನರ ಸಂಖ್ಯೆ ಜಾಸ್ತಿ ಇರುವುದಿಲ್ಲ. ಹೀಗಾಗಿ ಇವತ್ತಿನ ದಿವಸ ಜನರು ಕಾನೂನಿಗೆ ವಿರುದ್ಧವಾಗಿಯಾದರೂ ಸಹ ಬಸ್ಸಿನ ಟಾಪ್ ಮೇಲೆ ಹೋಗಬೇಕಾಗುತ್ತದೆ. ಕಳೆದ ಸಾರಿ ಒಂದು ಪ್ರಸಂಗ

ನಡೆಯಿತು. ಶಿವಳ್ಳಿ ಗ್ರಾಮ ಇದೆ, ಅಲ್ಲಿ ನಮ್ಮ ಮಂಡ್ಯ ಮೇಲ್ಕೋಟೆ ರಸ್ತೆಯಲ್ಲಿ ಒಂದು ಸಿವಿಲ್ ಬಸ್ ಬರುತ್ತಿತ್ತು. ವಿ.ಸಿ. ಫಾರಂನಿಂದ ಹೈಸ್ಕೂಲಿಗೆ ಗಂಡು ಮಕ್ಕಳು, ಹೆಣ್ಣು ಮಕ್ಕಳು ಹೋಗ ಬೇಕಾದರೆ ಬಸ್ಸಿನ ಟಾಪ್‌ನಲ್ಲಿ ಕುಳಿತುಕೊಂಡಿದ್ದರು. ಅಸಿಸ್ಟೆಂಟ್ ಕಮಿಷನರ್ ಆ ಕಡೆಯಿಂದ ಜೀಪ್‌ನಲ್ಲಿ ಹೋಗುತ್ತಾ ಇದ್ದರು ಅವರು ಐ.ಎ.ಎಸ್. ಆಫೀಸರ್, ಯುವಕರು, ಬಹಳ ನಿಷ್ಠಾವಂತರು. ಅವರು ಅದನ್ನು ನೋಡಿದ ಕೂಡಲೆ ಜೀಪನ್ನು ನಿಲ್ಲಿಸಿ ಎಲ್ಲರನ್ನೂ ಕೆಳಗೆ ಇಳಿಸಿದರು. ನೀವು ಈ ರೀತಿ ಟಾಪ್‌ನಲ್ಲಿ ಹೋಗಬಾರದು. ಇದು ಕಾನೂನಿಗೆ ವಿರುದ್ಧ, ಪ್ರಾಣಾಪಾಯವಾಗುತ್ತದೆ ಎಂದು ಹೇಳಿದರು. ಅದಕ್ಕೆ ಹುಡುಗರು ಹೌದು, ಬೇರೆ ಬಸ್ ತರಿಸಿಕೊಡಿ ಎಂದು ಹೇಳಿದರು. ಹೈಸ್ಕೂಲಿಗೆ ಹೋಗತಕ್ಕ ಗಂಡು ಮಕ್ಕಳು, ಹೆಣ್ಣು ಮಕ್ಕಳು ಇವರ ಜೀಪಿನ ಮುಂದೆ ಅಡ್ಡಲಾಗಿ ಕುಳಿತು ಬಿಟ್ಟರು. ಆಗ ಅಸಿಸ್ಟೆಂಟ್ ಕಮಿಷನರ್ ನಿಸ್ಸಹಾಯಕರಾಗಿ ಏನೂ ಮಾತನಾಡಲಿಕ್ಕೆ ಆಗದೆ ಹೇಗೋ ಹೋಗಿ ಎಂದು ಹೇಳಿದರು. ಪುನಃ ಟಾಪ್ ಮೇಲೆ ಕುಳಿತು ಶಾಲೆಗೆ ಬರಬೇಕಾದಂಥ ಪ್ರಸಂಗ ಬಂತು. ಇದು ಪ್ರತಿನಿತ್ಯ ನಡೆಯುತಕ್ಕ ವಿಷಯವಾಗಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ ಇವತ್ತಿನ ದಿವಸ · ಇದು ನೋಡುವುದಕ್ಕೆ ಸಣ್ಣ ವಿಷಯ ಇರಬಹುದು. ನಮ್ಮ ಮಂಡ್ಯ ಜಿಲ್ಲಾ ಕಚೇರಿಯನ್ನು ಸನ್ಮಾನ್ಯ ಮುಖ್ಯ ಮಂತ್ರಿಗಳು ನೋಡಿದ್ದಾರೆ. ಅವರು ಅಭಿವೃದ್ಧಿ ಮಂತ್ರಿಗಳಾಗಿದ್ದಾಗ ಎಸ್. ಕೆ. ಡೇ ಅವರ ಜೊತೆಯಲ್ಲಿ ಬಂದಿದ್ದರು ಅಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಮೀಟಿಂಗ್ ಇತ್ತು. ಅದು ಸುಂದರವಾಗಿದೆ ಮತ್ತು ಕಲ್ಲು ಕಟ್ಟಡ, ೧೯೩೯ರಲ್ಲಿ ಮೈಸೂರು ಜಿಲ್ಲೆಯಿಂದ ಪ್ರತ್ಯೇಕವಾದಂಥ ಸಂದರ್ಭದಲ್ಲಿ ಕಟ್ಟಿದಂಥ ಕಟ್ಟಡ. ಶ್ರೀಮಾನ್ ದೇವರಾಜ ಅರಸರವರು ಮುಖ್ಯಮಂತ್ರಿಗಳಾಗಿದ್ದಾಗ ಕೂಡ ಹೇಳಿದೆ. ಆ ಒಂದು ಕಟ್ಟಡವನ್ನು ಆ ಒಂದು ಕಟ್ಟಡವನ್ನು ತಾವು ನೋಡಿದ್ದೀ ಆದರೆ ಮೇಲ್ಗಡೆಯಿಂದ ಕಸ ಬೀಳುತ್ತಾ ಇರುತ್ತದೆ. ಕೆಳಗಡೆ ಬೀಡಿ ತುಂಡುಗಳು, ಬೆಂಕಿ ಕಡ್ಡಿ ಚೂರುಗಳು ಬಿದ್ದಿರುತ್ತವೆ ಒಂದು ವಾರ, ೧೫ ದಿವಸವಾದರೂ ಕಸ ಗುಡಿಸಿರುವುದಿಲ್ಲ, ಹಕ್ಕಿಗಳ ಗೂಡುಗಳು ಇರುತ್ತವೆ. ಇದು ನಮ್ಮ ಆಸ್ತಿ, ಇದನ್ನು ಇಟ್ಟುಕೊಂಡಿರತಕ್ಕ ರೀತಿ ನೀತಿ ಇದು, ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇವತ್ತಿನ ದಿವಸ ಯಾವುದೇ ಒಂದು ಕಟ್ಟಡವಾಗಲಿ ಅದು ನನ್ನ ಮನೆ ಎನ್ನತಕ್ಕಂಥ ವಿಶ್ವಾಸ ಯಾರಿಗೆ ಬರಬೇಕು ಎಂದರೆ, ಅಲ್ಲಿಯ ಜವಾನ ನಿಗೆ ಬರುವುದಿಲ್ಲ. ಅಲ್ಲಿಯ ಅಧಿಕಾರಿಗೆ ಬರಬೇಕು. ಅಧಿಕಾರಿಗಳಲ್ಲಿ ಈ ಒಂದು ಮನೋಭಾವನೆ ಇದೆಯೋ ಎನ್ನತಕ್ಕಂಥ ಪ್ರಶ್ನೆಯನ್ನು ಇವತ್ತಿನ ದಿವಸ ನಮಗೆ ನಾವೇ ಹಾಕಿಕೊಳ್ಳತಕ್ಕಂಥ ಪರಿಸ್ಥಿತಿ ಇದೆ.

ಸರ್ಕಾರದ ಆಸ್ತಿಯನ್ನು ಕಾಪಾಡತಕ್ಕ ಹೊಣೆ, ಜವಾಬ್ದಾರಿ ಯಾರದು ? ಮಂತ್ರಿಗಳದೋ ಅಥವಾ ವಿಧಾನ ಸೌಧದ ಮುಖ್ಯ ಕಾರ್ಯದರ್ಶಿಗಳದೊ ? ಇಲ್ಲ ಆಯಾಯ ಸ್ಥಳೀಯ ಅಧಿಕಾರಿಗಳು, ತಹಶೀಲ್ದಾರ್, ಇಂಜಿನಿಯರ್ ಯಾರೇ ಆಗಿರಲಿ ಈ ಒಂದು ಜವಾಬ್ದಾರಿಯನ್ನು ಅವರಿಗೆ ವಹಿಸಿ ಎಂದು ಮಾನ್ಯ ಮುಖ್ಯ ಮಂತ್ರಿಗಳವರಲ್ಲಿ ಹೇಳುವುದಕ್ಕೆ ನಾನು ಬಯಸುತ್ತೇನೆ. ಇನ್ನು ನಮ್ಮ ಮಂಡ್ಯ ಜಿಲ್ಲಾ ಖಜಾನೆ ಏನಿದೆ ಅದು ಬಹಳ ದೊಡ್ಡದಾದರೂ ಕೂಡ ಸಿಬ್ಬಂದಿ ಸಾಕಷ್ಟು ಇಲ್ಲ. ಓಲ್ಡ್ಏಜ್ ಪೆನ್‌ಷನ್ ಫಿಜಿಕಲಿ ಹ್ಯಾಂಡಿಕ್ಯಾಪ್‌ಗೆ ಪೆನ್‌ಷನನ್ನು ಒಂದು ಸಾರಿ ಕಳುಹಿಸಿದಾಗ ಅವರು ಏನಾದರೂ ಎಂ.ಒ. ಪಡೆಯದೇ ಇದ್ದರೆ ಅದು ವಾಪಸ್ಸು ಬಂತು ಎಂದರೆ ಅದನ್ನು ಅವರು ಪುನಃ ತಿರುಗಿ ಪಡೆಯಬೇಕಾದರೆ ಒಂದು, ಒಂದೂವರೆ ವರ್ಷವಾದರೂ ಸಿಕ್ಕುವುದಿಲ್ಲ. ಅಂಥಾ ಪರಿಸ್ಥಿತಿ ಇದೆ. ಇದರ ಬಗ್ಗೆ ನಾನು ಅನೇಕ ಸಾರಿ ಅಲ್ಲಿಯ ಡಿಸ್ಟ್ರಿಕ್ಟ್ ಟ್ರೆಜರಿಯವರಿಗೆ ಫೋನ್ ಮಾಡಿದ್ದೇನೆ. ಅದಕ್ಕೆ ಅವರು ಏನು ಹೇಳುತ್ತಾರೆ ಎಂದರೆ ಇಷ್ಟು ಕೆಲಸ ಮಾಡಲು ೧೫ ಜನ ಸಿಬ್ಬಂದಿ ಬೇಕಾಗುತ್ತದೆ ಅಂಥಾದ್ದರಲ್ಲಿ ನಾವು ಕೇವಲ ೩ ಜನ ಮಾಡುತ್ತಿದ್ದೇವೆ. ಬಹಳ ತೊಂದರೆಯಾಗುತ್ತಿದೆಂದು ಅವರು ಸಹ ತಮ್ಮ ಕಷ್ಟವನ್ನು ಹೇಳಿಕೊಳ್ಳುತ್ತಿದ್ದಾರೆ. ಎಷ್ಟೋ ಸಾರಿ ಮುದುಕ ಮುದುಕಿಯರು ನನ್ನ ಹತ್ತಿರ ಬಂದು ಅವರ ಗೋಳನ್ನು ಹೇಳಿಕೊಂಡಾಗ ನಾವು ಅವರಿಗೆ ಒಂದು ಹೊತ್ತು ಊಟ ಹಾಕಿಸಿ ಅವರಿಗೆ ಒಂದೆರಡು ರೂಪಾಯಿಗಳನ್ನು ಕೊಟ್ಟು ಕಳುಹಿಸಿರತಕ್ಕ ಸಂದರ್ಭಗಳೂ ಇವೆ. ಆದುದರಿಂದ ಈ ಅವ್ಯವಸ್ಥೆಯನ್ನು ಸರಿಪಡಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಮಂಡ್ಯ ಜಿಲ್ಲೆಯಲ್ಲಿ ಒಂದು ಜೈಲು ಇದೆ. ನಾನು ಅಲ್ಲಿಗೆ ಯಾವಾಗಲೂ ಹೋಗಿದ್ದು ಇಲ್ಲ, ಒಂದು ಸಾರಿ ಯಾವಾಗಲೋ ವಿಜಿಟರ್ಸ್ ಕಮಿಟಿಯಲ್ಲಿದ್ದಾಗ ಅಲ್ಲಿಗೆ ಹೋಗುವಂಥ ಸಂದರ್ಭ

ಬಂದಿತ್ತು. ಅಲ್ಲಿಗೆ ಹೋಗಿ ನೋಡಿದಾಗ ಏನು ಪರಿಸ್ಥಿತಿ ಇತ್ತು ಇವತ್ತಿಗೂ ಕೂಡ ಅದೇ ರೀತಿ ಯಲ್ಲಿದೆ, ಏನೂ ಸುಧಾರಣೆ ಕಾಣುತ್ತಿಲ್ಲ. ಮಾನ್ಯ ಸೂರ್ಯನಾರಾಯಣ ರಾವ್‌ರವರಿಗೆ ಅನುಭವವಿದೆ, ಅವರು ಬೇರೆ ಬೇರೆ ಕಾರಣಗಳಿಗೋಸ್ಕರ ಜೈಲಿಗೆ ಹೋಗಿ ಬಂದಿದ್ದಾರೆ. ಅವರಿಗೆ ಇದರಲ್ಲಿ ಒಳ್ಳೆಯ ಅನುಭವವಿದೆ. ಅವರು ಹೇಳಿದ ಹಾಗೆ ಜೈಲುಗಳ ಪರಿಸ್ಥಿತಿ ಸುಧಾರಣೆ ಮಾಡಬೇಕಾಗಿದೆಯೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಮಲ್ಲಿಕಾರ್ಜುನ ಬನ್ನಿ (ಗುಳೇದ ಗುಡ್ಡ).—ಮಾನ್ಯ ಸಭಾಪತಿಗಳೇ, ಕರ್ನಾಟಕದ ೧೦ನೇ ಮುಖ್ಯ ಮಂತ್ರಿಗಳವರು ಪ್ರಪ್ರಥಮವಾಗಿ ಕಾಂಗ್ರೆಸ್ಸೇತರ ಸರ್ಕಾರದ ಚುಕ್ಕಾಣಿಯನ್ನು ಹಿಡಿದಿದ್ದಾರೆ. ಇವರು ಗೃಹ ಖಾತೆ ಅಲ್ಲದೇ ತಮಗೆ ಅನುಭವವಿರತಕ್ಕ ಅರ್ಥ ಸಚಿವ ಶಾಖೆಯನ್ನು ತಮ್ಮ ಕೈಯಲ್ಲಿಟ್ಟುಕೊಂಡಿದ್ದಾರೆ. ಅಲ್ಲದೇ ಅವರು ಮಂಡಿಸಿದ್ದಂಥ ಬೇಡಿಕೆಗಳ ಸಂಖ್ಯೆ ಕೂಡ ಬಹಳ ಇದೆ. ಅವರು ಮಂಡಿಸಿರತಕ್ಕ ಬೇಡಿಕೆಗಳನ್ನು ಬೆಂಬಲಿಸುತ್ತಾ ಒಂದೆರಡು ಮಾತುಗಳನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಕರ್ನಾಟಕ ರಾಜ್ಯ ಮೋಟಾರ್ ವಾಹನ ತೆರಿಗೆಯಿಂದ ೧೯೮೨-೮೩ನೇ ಇಸ್ವಿಯಲ್ಲಿ ಬರತಕ್ಕ ಆದಾಯ ೬ ಕೋಟಿ ರೂಪಾಯಿಗಳು ಇದೆ, ಇದರ ಜೊತೆಗೆ ಇನ್ನೂ ತೆರಿಗೆ ಬಾಕಿಯನ್ನು ಆದಷ್ಟು ಜಾಗ್ರತೆ ವಸೂಲ್ಮಾಡಬೇಕು ಅಲ್ಲದೇ ದಿನೇ ದಿನೇ ಅಪಘಾತಗಳು ಹೆಚ್ಚಾಗುತ್ತವೆ. ಅದಕ್ಕೋಸ್ಕರವಾಗಿ ಚಾಲಕರಿಗೆ ಮತ್ತು ಕಂಡಕ್ಟರ್‌ರವರಿಗೆ ಲೈಸೆನ್ಸ್ ಕೊಡತಕ್ಕ ಕಾಲದಲ್ಲಿ ಬಿಗಿಯಾದ ಕ್ರಮವನ್ನು ಕೈಗೊಂಡು ಸರಿಯಾಗಿ ಪರಿಶೀಲನೆ ಮಾಡಿ ನಂತರ ಲೈಸೆನ್ಸ್ ಕೊಡಬೇಕೆಂದು ಸಲಹೆ ಮಾಡುತ್ತೇನೆ.

ಮಾನ್ಯ ಸಭಾಪತಿಗಳೇ, ಪೋಲೀಸ್ ಇಲಾಖೆ ಇತ್ತೀಚೆಗೆ ಪೋಲಿ ಇಲಾಖೆಯಾಗುತ್ತಿದೆ. ಏತಕ್ಕೆಂದರೆ ಇವರು ಶಿಸ್ತಿನ ಸಿಪಾಯಿಗಳಾಗಿದ್ದು ಜನತೆಯ ಸೇವೆಯನ್ನು ಮಾಡಬೇಕೆಂದು ಇರುವಾಗ, ಪೋಲೀಸ್ ಇಲಾಖೆಯ ಅಧಿಕಾರಿಗಳವರ ಮನೆಗಳಲ್ಲಿಯೇ ಕಳವು ಆಗುತ್ತಿದೆ. ಪೋಲೀಸ್ ಅಧಿಕಾರಿಗಳೇ ತಮ್ಮ ಮನೆಯಲ್ಲಿ ಕಳುವು ಆಗಿದೆಯೆಂದು ಎಷ್ಟೋ ಪೋಲೀಸ್ ಸ್ಟೇಷನ್‌ಗಳಲ್ಲಿ ಕೇಸನ್ನು ನೋಂದಾಯಿಸಿದ್ದಾರೆ ಎನ್ನತಕ್ಕ ಮಾತನ್ನು ಕೇಳಿದ್ದೇನೆ. ಅಧ್ಯಕ್ಷರೇ, ತಮಗೆ ಗೊತ್ತಿದ್ದ ಹಾಗೆ ಪೋಲೀಸ್ ಎನ್ನುವ ಒಂದೊಂದು ಶಬ್ದಕ್ಕೂ ಒಂದೊಂದು ಅರ್ಥ ಬರುತ್ತದೆ. 'P' ಎಂದರೆ Politeness, O-Obedient L-Loyalty ಎಂದು ಹೇಳಿಕೊಳ್ಳುತ್ತಾರೆ ಆದರೆ ಇಲಾಖೆಯವರು ಇದರಲ್ಲಿ ಒಂದು ಗುಣವನ್ನಾದರೂ ಹೊಂದಿದ್ದಾರೆಯೇ ಎಂದು ಕೇಳಬೇಕಾಗಿದೆ. ಪೋಲೀಸ್ ನಾಯಿಗಳನ್ನು ಏನಾದರೂ ಕ್ರೈಮ್ ಮಾಡಿದವರನ್ನು ಹಿಡಿಯಬೇಕೆಂದು ಬಿಟ್ಟರೆ ಅವು ಮೊದಲು ಪೋಲೀಸಿನವರ ಮನೆಯ ಮುಂದೆಯೇ ಹೋಗಿ ನಿಲ್ಲುತ್ತವೆ. ಇದಕ್ಕೆ ಕಾರಣವೇನೆಂಬುದು ತಿಳಿಯುತ್ತಿಲ್ಲ. ಇದರ ಬಗ್ಗೆ ಸಹ ಸರ್ಕಾರದವರು ಸೂಕ್ತವಾದ ಕ್ರಮವನ್ನು ಕೈಗೊಳ್ಳಬೇಕೆಂದು ಹೇಳಬಯಸುತ್ತೇನೆ. ಇನ್ನು ಒಂದು ಆಶ್ಚರ್ಯದ ಸಂಗತಿ ಏನೆಂದರೆ ನಮ್ಮ ಗುಳೇದ ಗುಡ್ಡ ನನ್ನ ಮತ ಕ್ಷೇತ್ರ, ಆ ಊರಿನಲ್ಲಿದ್ದ ಪೋಲೀಸ್ ಸ್ಟೇಷನ್ನಿನ ಬಿಲ್ಡಿಂಗೇ ಕಳುವು ಆಗಿ ಹೋಗಿದೆ. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ೩೦ ಸಾವಿರ ಜನಸಂಖ್ಯೆ ಇದ್ದರೂ ಕೂಡ...

ಅಧ್ಯಕ್ಷರು.—ಬಿಲ್ಡಿಂಗ್ ಕಳುವು ಆಗಿದೆಯೋ ಅಥವಾ ಬಿಲ್ಡಿಂಗ್‌ನಲ್ಲಿರತಕ್ಕ ವಸ್ತುಗಳು ಏನಾದರೂ ಕಳುವು ಆಗಿದೆಯೋ ? ಹೇಗೆ ?

ಶ್ರೀ ಮಲ್ಲಿಕಾರ್ಜುನ ಬನ್ನಿ.—ಬಿಲ್ಡಿಂಗೇ ಕಳುವು ಆಗಿದೆ ಅದಕ್ಕೋಸ್ಕರವಾಗಿಯೇ ನಾನು ಹೇಳುತ್ತಿರುವುದು. ಗುಳೇದ ಗುಡ್ಡದಲ್ಲಿದ್ದುದನ್ನು ಕಿತ್ತು ಹಾಕಿ ಅಲ್ಲಿಂದ ೨ ಕಿಲೋ ಮೀಟರ್ ದೂರದಲ್ಲಿರತಕ್ಕ ಕೊಟೇಕಲ್ ಗ್ರಾಮಕ್ಕೆ ಅದನ್ನು ವರ್ಗಾಯಿಸಿದ್ದಾರೆ. ಆದುದರಿಂದ ನಾನು ಸರ್ಕಾರದವರಲ್ಲಿ ಕೇಳುವುದೇನೆಂದರೆ ಆ ಪೋಲೀಸ್ ಸ್ಟೇಷನ್ ಗುಳೇದ ಗುಡ್ಡಕ್ಕೆ ಇದೆಯೋ ಅಥವಾ ಒಂದು ಚಿಕ್ಕ ಗ್ರಾಮವಾಗಿರತಕ್ಕ ಕೊಟೇಕಲ್‌ಗೋಸ್ಕರವಾಗಿ ಹಾಕಿದ್ದಾರೋ ಎಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೊಂದು ಈ ಓ.ಸಿ. ಆಡುವುದನ್ನು ಬಂದ್ ಮಾಡಿದ್ದೇವೆಂದು ಸರ್ಕಾರದವರು ಹೇಳಿದ್ದಾರೆ. ಆದರೆ ನಿಮ್ಮ ಸರ್ಕಾರದಲ್ಲಿ ಓಸಿ, ಇಸ್ಪೀಟ್ ಆಡುವುದಕ್ಕೆ ಬೇಕಾದಷ್ಟು ಪರವಾನಿಗೆ ಸಿಗುತ್ತಿದೆ ಇದು ಏತಕ್ಕೆ ಆಗುತ್ತಿದೆ ಎಂಬುದನ್ನು ತಿಳಿಸಬೇಕು.

ಇನ್ನು ಒಂದೊಂದು ಮುನಿಸಿಪಾಲಿಟಿಗಳಿಗೂ ಒಂದೊಂದು ಅಗ್ನಿಶಾಮಕ ದಳ ಇರುವುದು ಸೂಕ್ತವೆಂದು ಸಲಹೆ ಮಾಡಬಯಸುತ್ತೇನೆ. ಅದರ ಉಸ್ತುವಾರಿಯನ್ನು ಸರ್ಕಾರದವರೇ ನೋಡಿ

ಕೊಳ್ಳಬೇಕು. ಏತಕ್ಕೆ ಎಂದರೆ ಮುನಿಸಿಪಾಲಿಟಿಗಳಿಗೆ ಆದಾಯವೇ ಸರಿಯಾಗಿ ಬರುತ್ತಿಲ್ಲ, ಆಕ್ಟ್ರಾಯ್ ರದ್ದು ಮಾಡಿರುವುದರಿಂದ ಬಹಳ ಕಷ್ಟವಾಗಿದೆ. ಮತ್ತೆ ಅಗ್ನಿಶಾಮಕ ದಳದವರಿಗೆ ೩೦ ದಿನಗಳ ಟ್ರೈನಿಂಗ್ ಕೊಡುತ್ತಾರೆ ಅದು ಏನೇನು ಸಾಲುವುದಿಲ್ಲ ಅವರಿಗೆ ಸುಮಾರು ೬೦ ದಿನಗಳ ತರಬೇತಿಯನ್ನಾದರೂ ಕೊಡಬೇಕೆಂದು ಕೇಳಬಯಸುತ್ತೇನೆ.

ಅಧಿಕಾರ ವಿಕೇಂದ್ರೀಕರಣವಾಗಬೇಕೆಂಬುದು ಸರ್ಕಾರದ ನೀತಿಯಾಗಿದ್ದರೂ ಮುಖ್ಯ ಮಂತ್ರಿಗಳು ಇಷ್ಟೊಂದು ಖಾತೆಗಳನ್ನು ಹೊಂದಿರುವುದು ಸರಿಯೆ? ಆದ್ದರಿಂದ, ಮುಖ್ಯ ಮಂತ್ರಿಗಳ ಖಾತೆಗಳು ಮೊದಲು ವಿಕೇಂದ್ರೀಕರಣಗಬೇಕೆಂದು ಒತ್ತಾಯಪೂರ್ವವಾಗಿ ಕೇಳಿಕೊಳ್ಳುತ್ತೇನೆ.

ನನಗೆ ಮೀನಿನ ವಾಸನೆ ಎಂದರೆ ಆಗುವುದಿಲ್ಲ. ಆದರೂ ಸಹ ಅದರ ಬಗ್ಗೆ ಒಂದೆರಡು ಮಾತುಗಳನ್ನು ಆಡಬಯಸುತ್ತೇನೆ. ಮೀನುಗಾರರ ಪರಿಸ್ಥಿತಿ ಹೇಗಿದೆ ಎಂಬುದು ಮುಖ್ಯ ಮಂತ್ರಿಗಳಿಗೆ ಗೊತ್ತು ಮತ್ತು ಇಲ್ಲಿರತಕ್ಕ ಅನೇಕ ಸ್ನೇಹಿತರಿಗೆ ಗೊತ್ತಿದೆ. ಅವರ ಜೀವನವನ್ನು ಸುಧಾರಿಸಬೇಕು. ಅವರು ಎಂತಹ ಪರಿಸ್ಥಿತಿಯಲ್ಲಿದ್ದಾರೆಂಬುದು ಅವರ ವೇಶ ಭೂಷಣಗಳನ್ನು ನೋಡಿದರೆ ಗೊತ್ತಾಗುತ್ತದೆ. ಅತ್ಯಂತ ಕಡುಬಡತನದಲ್ಲಿರುವವರಿಗೆ ಮನೆ ಕಟ್ಟಿಸಿಕೊಡುವ ವ್ಯವಸ್ಥೆ ಆಗಬೇಕು. ಬಿಜಾಪುರ ಜಿಲ್ಲೆಯಲ್ಲಿ ವಿಶ್ವಬ್ಯಾಂಕ್ ನೆರವಿನ ಯೋಜನೆ ಕೆಳಗೆ ೧೦ ಲಕ್ಷ ರೂಪಾಯಿಗಳ ಅಂದಾಜು ವೆಚ್ಚದ ಯೋಜನೆ ಹಾಕಿದ್ದಾರೆ. ಇದು ಬರಗಾಲಪೀಡಿತ ಯೋಜನೆ. ಈ ಕಾರ್ಯಕ್ರಮಕ್ಕೆ ಹೆಚ್ಚಿನ ಹಣವನ್ನು ಒದಗಿಸಿ ರಾಜ್ಯಕ್ಕೆ ಉತ್ಪನ್ನ ಬರತಕ್ಕ ಬಾಬನ್ನು ಹೆಚ್ಚಿಸಿಕೊಳ್ಳಬೇಕೆಂದು ಹೇಳುತ್ತೇನೆ. ಮೀನುಗಾರಿಕೆಯ ವಿಸ್ತೀರ್ಣವನ್ನು ಹೆಚ್ಚಿಸಿಕೊಳ್ಳಬೇಕು.

ರಾಜ್ಯ ಸರ್ಕಾರಕ್ಕೆ ಬಹಳ ಮುಖ್ಯವಾಗಿ ಆದಾಯ ಬರತಕ್ಕ ಬಾಬು ಎಂದರೆ ವಾಣಿಜ್ಯ ತೆರಿಗೆ. ಮನರಂಜನ ತೆರಿಗೆ, ಕೃಷಿ ವರಮಾನ ತೆರಿಗೆ, ಉದ್ಯೋಗಗಳ ಮೇಲಿನ ತೆರಿಗೆ, ಸರಕುಗಳ ಮೇಲಿನ ತೆರಿಗೆ ಇತ್ಯಾದಿ ತೆರಿಗೆಗಳು ಇರುವುದರಿಂದ ಇಲ್ಲಿ ಅನೇಕ ಲೈಸೆನ್ಸ್‌ಗಳನ್ನು ಒಬ್ಬ ವ್ಯಾಪಾರಿ ಹೊಂದಬೇಕಾಗುತ್ತದೆ. ಮುಖ್ಯವಾಗಿ ಒಬ್ಬ ವ್ಯಾಪಾರಿ ತನ್ನ ವ್ಯಾಪಾರನ್ನು ಪ್ರಾರಂಭ ಮಾಡಬೇಕಾಗಿದ್ದರೆ ಸೇಲ್ಸ್ ಟ್ಯಾಕ್ಸ್ ರಿಜಿಸ್ಟ್ರೇಷನ್ ಅನ್ನು ಪಡೆಯಬೇಕಾಗುತ್ತದೆ. ತೂಕ ಮತ್ತು ಅಳತೆಯ ರಿಜಿಸ್ಟ್ರೇಷನ್ ಅನ್ನು ಪಡೆಯಬೇಕಾಗುತ್ತದೆ. ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಲ್ಲಿ ಹೋಲ್‌ಸೇಲ್ ಮತ್ತು ರೀಟೈಲ್ ಲೈಸೆನ್ಸನ್ನು ಪಡೆಯಬೇಕಾಗುತ್ತದೆ. ಷಾಪ್ ಅಂಡ್ ಎಸ್ಟಾಬ್ಲಿಷ್‌ಮೆಂಟ್ ರಿಜಿಸ್ಟ್ರೇಷನ್, ಹಾಗೂ ಲೋಕಲ್ ಅಥಾರಿಟೀಸ್ ರಿಜಿಸ್ಟ್ರೇಷನ್ ಇತ್ಯಾದಿಗಳನ್ನು ಪಡೆಯಬೇಕಾಗುತ್ತದೆ. ಇಷ್ಟೆಲ್ಲ ಮಾಡಿದಾಗ್ಯೂ ಯಾವುದೇ ಒಂದು ಸರ್ಟಿಫಿಕೇಟ್ ಅನ್ನು ತೂಗು ಹಾಕದೆ ಹೋದರೂ ಅವರಿಗೆ ಅಧಿಕಾರಿಗಳಿಂದ ಕಿರಿಕಿರಿ. ಏಕೆಂದರೆ ಚಿಕ್ಕದಾದ ಅಂಗಡಿಯಲ್ಲಿ ಇಷ್ಟೊಂದು ಸರ್ಟಿಫಿಕೇಟುಗಳನ್ನು ಹಾಕುವುದರಿಂದ ದೇವರ ಫೋಟೋ ಕೂಡ ಇಡುವುದಕ್ಕಾಗುವುದಿಲ್ಲ. ರಿಜಿಸ್ಟ್ರೇಷನ್ ಸರ್ಟಿಫಿಕೇಟುಗಳು ಕಾಣುವಂತೆ ಇರಬೇಕಾಗುತ್ತದೆ. ವ್ಯಾಪಾರ ಚಿಕ್ಕದಾಗಿದ್ದರೂ ಇಷ್ಟೆಲ್ಲಾ ಸರ್ಟಿಫಿಕೇಟುಗಳನ್ನು ಪಡೆದು ತೂಗು ಹಾಕಬೇಕಾಗುತ್ತದೆ. ಕಾಯಿದೆಯಲ್ಲಿ ಅದನ್ನು ಸಿಂಪ್ಲಿಫೈ ಮಾಡುತ್ತೇವೆಂದು ಹೇಳಿದ್ದಾರೆ. ಅದನ್ನು ಜಾಗ್ರತೆ ಮಾಡಬೇಕೆಂದು ಹೇಳುತ್ತೇನೆ. ಪ್ರತಿಯೊಬ್ಬ ವ್ಯಾಪಾರಿಯೂ ಖರೀದಿ ಬಿಲ್, ರೇಟ್ ಬೋರ್ಡ್, ಸ್ಟಾಕ್ ಬೋರ್ಡ್‌ಗಳನ್ನು ಇಡಬೇಕಾಗಿದೆ. ಅವನಿಗೆ ಈ ಉದ್ಯೋಗವನ್ನು ಪ್ರಾರಂಭ ಮಾಡಬೇಕಾದರೆ ಇಷ್ಟೆಲ್ಲಾ ತೊಂದರೆಗಳು ಇರಬೇಕಾದರೆ ಅವನು ವ್ಯಾಪಾರ ಮಾಡಿ ಸರ್ಕಾರಕ್ಕೆ ಟ್ಯಾಕ್ಸ್ ಕೊಡುವುದಾದರೂ ಹೇಗೆ? ಈ ಸಂದರ್ಭದಲ್ಲಿ ಸರ್ಕಾರಕ್ಕೆ ನನ್ನ ಒಂದು ಮನವಿ ಏನೆಂದರೆ, ಜನಸಾಮಾನ್ಯರಿಗೆ ಇದು ಅರ್ಥವಾಗುವ ಹಾಗೆ ಕಾಯಿದೆ ಕಾನೂನುಗಳನ್ನು ಕನ್ನಡದಲ್ಲಿ ಮುದ್ರಿಸಿ ಸರಳ ರೀತಿಯಲ್ಲಿ ಕಾಯಿದೆಗಳು ಇರುವಂತೆ ಮಾಡಿದರೆ ಮಾತ್ರ ನಮ್ಮ ರಾಜ್ಯದ ಯಾವುದೇ ಪ್ರಜೆಗೆ ಕಾಯಿದೆಗಳು ಅರ್ಥವಾಗುತ್ತವೆ. ಆಗ ಅವನು ಯಾವುದೇ ರೀತಿಯ ತಪ್ಪನ್ನು ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಬೊಮ್ಮಾಯಿಯವರು ವಿರೋಧ ಪಕ್ಷದ ನಾಯಕರಾಗಿದ್ದಾಗ ಮಾರಾಟ ದರವನ್ನು ಸರಳೀಕರಣ ಮಾಡುವ ಸಲುವಾಗಿ ಮಂಡಲ್ ಆಯೋಗದ ವರದಿಯನ್ನು ಮತ್ತು ಪ್ರೊಫೆಸರ್ ಗುಲಾಟಿಯವರ ವರದಿಯನ್ನು ಅದಷ್ಟು ಜಾಗ್ರತೆ ಜಾರಿಗೆ ತರಬೇಕೆಂದು ಒತ್ತಾಯಿಸಿದ್ದರು. ಅದು ಇದುವರೆಗೆ ಕಾರ್ಯಗತವಾಗಿಲ್ಲ. ಅದರ ಕಡೆ ಸರ್ಕಾರ ತೀವ್ರ ಗಮನ ಹರಿಸಬೇಕು. ಇಲ್ಲಿ ೫೨ ಕೋಟಿ ರೂಪಾಯಿಗಳ ಬಾಕಿ ಹಣವನ್ನು ವಸೂಲ್ಮಾಡಬೇಕಾಗಿದೆ ಎಂದು ಹೇಳಿದ್ದಾರೆ. ಅದರ ಬಗ್ಗೆ ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಅನೇಕ ಚೆಕ್‌ಪೋಸ್ಟ್‌ಗಳಲ್ಲಿರತಕ್ಕವರು ಅವರೇ ಹಣ ಪಡೆದುಕೊಂಡು ಸರ್ಕಾರಕ್ಕೆ

ಬರತಕ್ಕ ಉತ್ಪನ್ನ ಕಡಿಮೆ ಆಗುತ್ತಿದೆ. ಇದರಲ್ಲಿ ಅಧಿಕಾರಿಗಳ ಶಾಮೀಲು ನಡೆಯುತ್ತಿದೆ. ರಾಜ್ಯ ಸಲಹಾ ಸಮಿತಿ ವರ್ಷಕ್ಕೊಮ್ಮೆ ಕೂಡುತ್ತಿದೆ. ೩ ತಿಂಗಳಿಗೊಮ್ಮೆಯಾದರೂ ಕೂಡಿ ಕಾರ್ಯ ಮಾಡಿದರೆ ಸರ್ಕಾರಕ್ಕೆ ಹೆಚ್ಚಿನ ಸಹಾಯವಾಗುತ್ತದೆ. ಆಡಳಿತದಲ್ಲಿ ಅಧಿಕಾರಿಗಳು ಸಾಕಷ್ಟು ಇದ್ದಾರೆ, ಆದರೆ ಅವರಲ್ಲಿ ದಕ್ಷತೆ ಮತ್ತು ಪ್ರಾಮಾಣಿಕತೆ ಕಡಿಮೆಯಾಗಿದೆ. ನಾನು ಸೇಲ್ಸ್ ಟ್ಯಾಕ್ಸ್ ಅನ್ನು ಪ್ರ್ಯಾಕ್ಟೀಸ್ ಮಾಡುವಾಗ ಪ್ರಾರಂಭದಲ್ಲಿ ಸೇಲ್ಸ್ ಟ್ಯಾಕ್ಸ ವಸೂಲಿಯ ವಾತಾವರಣವನ್ನು ನೋಡಿದಾಗ ನಾನು ಬಿಟ್ಟು ಕೊನೆಯ ಪಕ್ಷ ಸೇಲ್ಸ್ ಟ್ಯಾಕ್ಸ್ ವಸೂಲಿಯ ಸಿಪಾಯಿ ಆದರೆ ಒಳ್ಳೆಯ ದಾಗುತ್ತಿತ್ತೆಂದು ನನಗನ್ನಿಸುತ್ತಿತ್ತು. ಏಕೆಂದರೆ ಅವರಿಗೆ ಸಾಕಷ್ಟು ಉತ್ಪನ್ನ ಬರುತ್ತಿದೆ. ಸಂಬಳಕ್ಕಿಂತ ಗಿಂಬಳವೇ ಜಾಸ್ತಿ ಸಿಗುತ್ತದೆ. ಒಬ್ಬ ವ್ಯಾಪಾರಿ ಬಿಲ್ ಹರಿಯುವಾಗ ಅವನ ಬಿಲ್ಲಿನಲ್ಲಿ ಒಂದು ಕಲಂ ಅಡ್ಡಬರುತ್ತದೆ. ಅವನು ಟರ್ನ್ ಓವರ್ ಟ್ಯಾಕ್ಸ್, ಸರ್‌ಚಾರ್ಜ್ ಹಾಗೂ ಇನ್ನೂ ಅನೇಕ ಕರಗಳ ಬಾಧೆಯಿಂದ ಬಳಲುವುದರಿಂದ ಅವನಿಗೆ ಒಂದು ಪರ್ಸೆಂಟ್ ಟ್ಯಾಕ್ಸನ್ನು ಜಾಸ್ತಿ ಮಾಡಿ ಸರ್‌ಚಾರ್ಜ್ ಮತ್ತು ಅಡಿಷನಲ್ ಟ್ಯಾಕ್ಸ್ ಹಾಕುವುದನ್ನು ಕಡಿಮೆ ಮಾಡಿದರೆ ಬಿಲ್ ಹರಿಯುವುದಕ್ಕೆ ಅನುಕೂಲವಾಗುತ್ತದೆ. ಯಾವುದೇ ಕಾಯಿದೆಯಾಗಲಿ, ಅದನ್ನು ಜಾರಿಗೆ ಕೊಡುವಾಗ ಸ್ವಲ್ಪ ಯೋಚನೆ ಮಾಡಿ ಕೊಡಬೇಕಾಗುತ್ತದೆ. ಅವನು ಬಿಲ್ ಹರಿದ ಮೇಲೆ ಆಯಾಯ ತಾರೀಖಿನ ಲೆಕ್ಕವನ್ನು ಬರೆದಿಡುವಂತೆ ಮಾಡಬೇಕು. ಆಗ ಮಾತ್ರ ಸರ್ಕಾರಕ್ಕೆ ಸರಿಯಾದ ಲೆಕ್ಕ ಸಿಗುತ್ತದೆ ಮತ್ತು ಬರಬೇಕಾದ ಆದಾಯ ತೆರಿಗೆ ಮೂಲಕ ಸರಿಯಾಗಿ ಬರುತ್ತದೆ. ಆದ್ದರಿಂದ, ಈ ಒಂದು ವ್ಯವಸ್ಥೆಯನ್ನು ಏಪ್ರಿಲ್ ಒಂದರಿಂದಲೇ ಜಾರಿಗೆ ತರಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯಪೂರ್ವಕವಾಗಿ ಮನವಿ ಮಾಡಿಕೊಳ್ಳುತ್ತೇನೆ. ಕಳೆದ ಆಯವ್ಯಯ ಅಧಿವೇಶನದಲ್ಲಿ ಕೂಡ ಕಲಂ ಐದರಲ್ಲಿರತಕ್ಕ ನೇಕಾರ ಎನ್ನುವುದಕ್ಕೆ ಅರ್ಥ ವಿವರಣೆ ಮಾಡಿದ್ದೇನೆ. ಇಲ್ಲಿ ಅಧಿಕಾರಿಗಳು ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು ನೇಕಾರರ ವ್ಯಾಪ್ತಿಯನ್ನು ಬಿಟ್ಟು ಅವರಿಗೆ ಹೆರಾಸ್‌ಮೆಂಟ್ ಮಾಡುತ್ತಿದ್ದಾರೆ. ನೇಕಾರ ಕೈಮಗ್ಗದಿಂದ ತಯಾರಿಸಿದ ಬಟ್ಟೆಯೇ ಇರಲಿ ಯಾವುದೇ ಇರಲಿ ಅದು ಎಷ್ಟೇ ಅಳತೆಯದಾಗಿರಲಿ ಅದಕ್ಕೆ ತೆರಿಗೆ ಮಾಫಿ ಮಾಡುವಂತೆ ಆಗಬೇಕು. ಕರ್ನಾಟಕದಲ್ಲಿರತಕ್ಕ ೪೦ ಲಕ್ಷ ನೇಕಾರರ ಪರವಾಗಿ ಮತ್ತು ನಾನು ಒಬ್ಬ ನೇಕಾರರ ಮಗನಾಗಿ ಕಳಕಳಿಯಿಂದ ಸರ್ಕಾರಕ್ಕೆ ಈ ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಈಗಿನ ವಿರೋಧ ಪಕ್ಷದ ನಾಯಕರಾದ ವೀರಪ್ಪ ಮೊಯಿಲಿಯವರು ಕೂಡ ಅರ್ಥ ಸಚಿವರಾಗಿದ್ದ ಸಂದರ್ಭದಲ್ಲಿ ಅವರು ಗುಳೇದಗುಡ್ಡದಿಂದ ನೇಕಾರರ ಕೇಂದ್ರಗಳಿಗೆ ಬಂದಾಗ ರೇಷ್ಮೆ ಕೈಮಗ್ಗದ ಉತ್ಪಾದನೆ ಮೇಲೆ ಯಾವುದೇ ತೆರಿಗೆ ಹಾಕಬಾರದೆಂದು ಹೇಳಿದಾಗ ರೇಷ್ಮೆ ಬಟ್ಟೆ ಮೇಲೆ ಒಂದೂವರೆ ಪರ್ಸೆಂಟ್ ಟ್ಯಾಕ್ಸ್ ಹಾಕಿದ್ದರು. ಅದನ್ನು ಈ ಸರ್ಕಾರದವರು ಬಂದಮೇಲೆ ೨ ಪರ್ಸೆಂಟ್ ಮಾಡಿದ್ದಾರೆ. ಅದೂ ಕೂಡ ಕೈಮಗ್ಗದ ಅರಿವೆ ಉತ್ಪನ್ನದ ಮೇಲೆ ಕರ ವಿಧಿಸುವ ಕ್ರಮವನ್ನು ಕೈಬಿಡಬೇಕೆಂದು ಹೇಳುತ್ತೇನೆ. ಆದರಿಂದ ಬಡ ನೇಕಾರರಿಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಬೇಕೆಂದು ಹೇಳುತ್ತೇನೆ. ಇನ್ನು ಮನರಂಜನಾ ತೆರಿಗೆ ಬಗ್ಗೆ ಹೇಳುವುದಾದರೆ, ಚಲನಚಿತ್ರ ಮಂದಿರದ ಮಾಲೀಕರಿಗೆ ಬೇಕಾಗುವ ಟಿಕೆಟ್‌ಗಳನ್ನು ಸರ್ಕಾರದವರೇ ಮುದ್ರಣ ಮಾಡಿ ಕೊಟ್ಟಾಗ ಮಾತ್ರ ಅಲ್ಲಿ ನಡೆಯತಕ್ಕ ಹೆರಾಸ್‌ಮೆಂಟ್ ನಿಲ್ಲುತ್ತದೆಂದು ಹೇಳುತ್ತೇನೆ. ಅಲ್ಲಿ ಸೋರಿಹೋಗತಕ್ಕದ್ದು ನಿಲ್ಲುತ್ತದೆ, ಸರ್ಕಾರದವರೇ ಚಲನಚಿತ್ರ ಮಂದಿರದ ಮಾಲೀಕರಿಗೆ ಬೇಕಾಗುವ ಟಿಕೆಟ್‌ಗಳನ್ನು ಮುದ್ರಣ ಮಾಡಿಕೊಟ್ಟರೆ ವರ್ಷಕ್ಕೆ ೭೫ ರಿಂದ ೮೦ ಕೋಟಿ ರೂಪಾಯಿಗಳ ಆದಾಯ ಸರ್ಕಾರಕ್ಕೆ ಬರುತ್ತದೆಂದು ಹೇಳಬಯಸುತ್ತೇನೆ. ಈ ರಾಜ್ಯದಲ್ಲಿ ಉಪ ಖಜಾನೆಗಳ ಸಂಖ್ಯೆ ಬಹಳ ಕಡಿಮೆ ಇದೆ. ಅವುಗಳು ವೃದ್ಧಾಪ್ಯ ವೇತನ, ವಿಶ್ರಾಂತಿ ವೇತನ, ಅಂಗವಿಕಲರ ಶಾಶ್ವತ ವಿಶ್ರಾಂತಿ ವೇತನ ಇಷ್ಟಕ್ಕೆ ಸೀಮಿತವಾಗಿದೆ. ಪ್ರತಿಯೊಂದು ಉಪ ಖಜಾನೆಗಳು ಬ್ಯಾಂಕಿನ ಮೂಲಕ ವ್ಯವಹಾರವನ್ನು ಮಾಡಬೇಕಾಗಿದೆ. ಆದ್ದರಿಂದ ಅವುಗಳ ಸಂಖ್ಯೆಯನ್ನು ಹೆಚ್ಚಿಸುವುದು ಸೂಕ್ತ.

೬.೦೦ಪಿ.ಎಂ.

ಕೊನೆಯದಾಗಿ, ಜೈಲುಗಳ ಬಗ್ಗೆ ಮಾತನಾಡಿದರೆ ಕೆಲವು ಶಾಸಕಮಿತ್ರರಿಗೆ ಕಸಿವಿಸಿ ಆಗಬಹುದು. ತುರ್ತು ಪರಿಸ್ಥಿತಿಯಲ್ಲಿ ಮತ್ತು ಬೇರೆ ಸಂದರ್ಭಗಳಲ್ಲಿ ವಿನಾಕಾರಣ ಜೈಲುಗಳಿಗೆ ಹಾಕಿದ ಪ್ರಸಂಗಗಳು ಉಂಟು. ಈ ವಿಷಯದಲ್ಲಿ ಸುಧಾರಣಾ ಕ್ರಮಗಳನ್ನು ಜಾರಿಗೆ ತಂದಿಲ್ಲದಿರುವುದು ವಿಷಾದದ ಸಂಗತಿಯಾಗಿದೆ. ಒಬ್ಬ ಕೈದಿ ಜೈಲಿನಿಂದ ಹೊರಗೆ ಬಂದಾಗ ಸಮಾಜ ಅವನನ್ನು

ಸರಿಯಾಗಿ ನೋಡಿಕೊಳ್ಳುವಂತೆ ಸರ್ಕಾರವೇ ಜವಾಬ್ದಾರಿ ತೆಗೆದುಕೊಳ್ಳಬೇಕು. ಅವನ ಜೀವನ ಸಹಜವಾಗಿ ಸಾಗುವಂತೆ ನೋಡಿಕೊಳ್ಳಬೇಕು. ಜೊತೆಗೆ ಆಧುನಿಕ ರೀತಿಯಲ್ಲಿ ಶಿಕ್ಷೆ ಕೊಡುವ ವ್ಯವಸ್ಥೆಯನ್ನು ಜಾರಿಗೆ ತರಬೇಕು. ಸೇಲ್ಸ್ ಟ್ಯಾಕ್ ಬಗ್ಗೆ ಇರುವ ತೊಂದರೆಗಳನ್ನು ಹೇಳಬೇಕೆಂದು ಇದ್ದೇನೆ.

ಅಧ್ಯಕ್ಷರು.—೧೫ ನಿಮಿಷ ಮಾತನಾಡಿದ್ದೀರಿ.

ಶ್ರೀ ಮಲ್ಲಿಕಾರ್ಜುನದಿಬನ್ನಿ.—ಇನ್ನು ಐದು ನಿಮಿಷ ಕೊಡಿ. ಮಾರಾಟ ತೆರಿಗೆ ಆಹಾರಧಾನ್ಯದ ಮೇಲೆ ೪ ಪರ್ಸೆಂಟ್ ಇರುವುದನ್ನು ೨ ಪರ್ಸೆಂಟ್ ಮಾಡಿದ್ದಾರೆ. ಇದನ್ನು ನಾನು ಸ್ವಾಗತ ಮಾಡುತ್ತೇನೆ. ಆಹಾರ ಧಾನ್ಯ ಎಂದರೆ ಅಕ್ಕಿ ಗೋಧಿ ಬೇಳೆಗಳ ಮೇಲೆ ಪ್ರತಿ ಶತ ೪ ರಂತೆ ಮಾರಾಟ ತೆರಿಗೆ ಇದ್ದು ಇದರಿಂದಾಗಿ ವ್ಯಾಪಾರಸ್ಥರು ಟ್ಯಾಕ್ಸ್ ಉಳಿಸಿಕೊಳ್ಳುವ ಮಾರ್ಗ ಹುಡುಕುತ್ತಾರೆ. ಮಾರಾಟ ತೆರಿಗೆ ಅಲ್ಲದೆ ೨ ಪರ್ಸೆಂಟ್ ಸೆಸ್ ಬೇರೆ ಕೊಡಬೇಕಾಗುತ್ತದೆ. ಎಂದರೆ ಒಂದು ಚೀಲ ಅಕ್ಕಿಯ ಬೆಲೆ ೪೦೦ ರೂಪಾಯಿಗಳು ಎಂದು ತಿಳಿದರೆ ೧೬ ರೂಪಾಯಿಗಳು ಮಾರಾಟ ತೆರಿಗೆ ೮ ರೂಪಾಯಿಗಳ ಸೆಸ್ ಒಟ್ಟು ೨೪ ರೂಪಾಯಿಗಳನ್ನು ಕರಗಳ ರೂಪದಲ್ಲಿ ಸಲ್ಲಿಸಬೇಕಾಗುತ್ತದೆ. ಈ ೨೪ ರೂಪಾಯಿಗಳ ತೆರಿಗೆ ಉಳಿಸಿಕೊಳ್ಳಲು ವ್ಯಾಪಾರಸ್ಥರು ಬೇರೆ ಮಾರ್ಗ ಹುಡುಕುತ್ತಾರೆ. ಆದ್ದರಿಂದ ಆಹಾರಧಾನ್ಯದ ಮೇಲೆ ಇದ್ದ ತೆರಿಗೆ ಕಡಿಮೆ ಮಾಡಬೇಕು. ಕರ್ನಾಟಕ ಮಾರಾಟ ತೆರಿಗೆ ಕಾಯಿದೆ ೧೯೫೭ ರೂಲ್ ೨೫-ಎ ಪ್ರಕಾರ ನೊಂದಾದ ರಿಜಿಸ್ಟರ್ಡ್ ಸಂಸ್ಥೆಗಳು ಹಾಗೂ ಖಾದಿ ಬೋರ್ಡ್‌ನಿಂದ ಸಾಲ ಸಹಾಯ ಪಡೆದ ಸಂಸ್ಥೆಗಳು ತಯಾರಿಸಿದ ವಸ್ತುಗಳ ಮೇಲೆ ದಿನಾಂಕ ೩೦-೧-೮೧ರ ವರೆಗೆ ತೆರಿಗೆ ಮಾಫಿ ಇತ್ತು. ೧-೨-೮೧ರಿಂದ ಈ ಆಜ್ಞೆಯನ್ನು ಹಿಂತೆಗೆದುಕೊಂಡಿದ್ದಾರೆ. ಇದರಿಂದಾಗಿ ಬಡಗಿತನ ಉದ್ಯಮಿಗಳಿಗೆ ಬಾರದಾನ ಉದ್ಯಮಿಗಳಿಗೆ ತೊಂದರೆ ಆಗುತ್ತಿದ್ದು ಅಂತವರಿಗೆ ಮೊದಲಿದ್ದ ಕಾನೂನನ್ನು ಜಾರಿಗೆ ತಂದು ತೆರಿಗೆ ಮಾಫಿ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಕರ ಸಲಹೆಗಾರರು ಸಹಾಯಕ ವಾಣಿಜ್ಯ ತೆರಿಗೆ ಅಧಿಕಾರಿಗಳಾಗಿ ಮತ್ತು ವಾಣಿಜ್ಯ ತೆರಿಗೆ ಅಧಿಕಾರಿಗಳಾಗಿ ಸೇವೆ ಸಲ್ಲಿಸಲು ಅವಕಾಶ ಮಾಡಿಕೊಡಬೇಕು. ಕಾನೂನು ಪದವೀಧರರು ಹಲವು ವರ್ಷಗಳ ನಂತರ ನ್ಯಾಯಾಧೀಶರಾಗಿ ಮತ್ತು ಸರ್ಕಾರಿ ನ್ಯಾಯವಾದಿಗಳಾಗಿ ಸೇವೆ ಸಲ್ಲಿಸುವುದಕ್ಕೆ ಹೇಗೆ ಅವಕಾಶವಿದೆಯೋ ಅದೇ ರೀತಿ ಕರ ಸಲಹೆಗಾರರಿಗೂ ಅಧಿಕಾರಿಗಳಾಗಿ ಸೇವೆ ಸಲ್ಲಿಸುವ ಅವಕಾಶವನ್ನು ಮಾಡಿಕೊಟ್ಟರೆ ನಡೆಯುತ್ತಿರುವ ಅನ್ಯಾಯವನ್ನು ತಪ್ಪಿಸಿ ಸರ್ಕಾರಕ್ಕೆ ಹೆಚ್ಚು ಟ್ಯಾಕ್ಸ್ ಬರುವಂತೆ ಮಾಡಬಹುದು. ಕರ್ನಾಟಕ ಎಂಟ್ರಿ ಟ್ಯಾಕ್ಸ್ ಕಾಯಿದೆಯಲ್ಲಿ ಸೇಲ್ಸ್‌ಟ್ಯಾಕ್ಸ್ ಪ್ರ್ಯಾಕ್ಟೀಷನರ್ಸ್ ಹಾಜರಾಗುವುದಕ್ಕೆ ಅವಕಾಶವಿಲ್ಲ ಆದ್ದರಿಂದ ೧೯೭೯ರ ಕಾಯಿದೆಯಲ್ಲಿ ತಿದ್ದುಪಡಿ ಮಾಡಿ ಎಸ್.ಟಿ.ಪಿ. ಗಳಿಗೂ ಹಾಜರಾಗುವ ಅವಕಾಶವನ್ನು ಕಲ್ಪಿಸಿಕೊಡಬೇಕು. ಸಧ್ಯದ ಕಾಯಿದೆಯಲ್ಲಿ ಅವಕಾಶವಿಲ್ಲದಿರುವುದರಿಂದ ತೆರಿಗೆ ಅಧಿಕಾರಿಗಳು ಮಾತ್ರ ವಾದಿಸಬಹುದಾಗಿದೆ. ಆದ್ದರಿಂದ ಎಸ್.ಟಿ.ಪಿ.ಗಳಿಗೂ ಹಾಜರಾಗುವುದಕ್ಕೆ ಅವಕಾಶವಾಗುವಂತೆ ತಿದ್ದುಪಡಿ ಮಾಡುವುದು ಅವಶ್ಯವಿದೆ. ಸೇಲ್ಸ್ ಟಾಕ್ಸ್ ಮತ್ತು ಅಗ್ರಿಕಲ್ಚರ್ ಇನ್‌ಕಂ ಟ್ಯಾಕ್ಸ್ ಕಾಯಿದೆಯಲ್ಲಿ ಸೇಲ್ಸ್ ಟ್ಯಾಕ್ಸ್ ಪ್ರ್ಯಾಕ್ಟೀಷನರ್‌ಗಳು ಹಾಜರಾಗುವಂತೆ ಮನರಂಜನಾ ತೆರಿಗೆ ಕಾಯಿದೆಯಲ್ಲಿಯೂ ಹಾಜರಾಗುವಂತೆ ಅವಕಾಶ ಕಲ್ಪಿಸಿಕೊಡಬೇಕು. ಇತ್ತೀಚೆಗೆ ಮನರಂಜನಾ ತೆರಿಗೆ ಜಟಿಲವಾಗುತ್ತಿದ್ದು ಕೇಸ್‌ಗಳು ಬಹಳಷ್ಟು ಬರುತ್ತಿವೆ. ಆದ್ದರಿಂದ ಕರ್ನಾಟಕ ಮನರಂಜನಾ ತೆರಿಗೆ ಕಾಯಿದೆಯಲ್ಲಿ ತಿದ್ದುಪಡಿ ಮಾಡಿ ಎಸ್.ಟಿ.ಪಿ.ಗಳಿಗೂ ಅದರಲ್ಲಿ ಹಾಜರಾಗುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

MR SPEAKER : Now House stand adjourned to meet tomorrow at 9 A.M.

(The House adjourned at 4 minutes Past 6 of the clock to meet again at 9 of the clock on 21st September 1983)

WD 2067